ಕರ್ನಾಟಕ ಸಾಹಿತ್ಯ ಅಕಾಡೆಮಿ

# ಬಹಮನಿ ಸಾಮ್ರಾಜ್ಯ

## ದೇವು ಪತ್ತಾರ



2010–11ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ
ಫೆಲೋಷಿಪ್ ಸಂಪ್ರಬಂಧ

# ಬಹಮನಿ ಸಾಮ್ರಾಜ್ಯ

## ಪರ್ಷಿಯಾದ ಪ್ರಭಾವ ಪ್ರೇರಣೆ

ದೇವು ಪತ್ತಾರ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.
ದೂರವಾಣಿ:080–22211730/22106460
www.karnatakasahithyaacademy.org
Email: sahithya.academy@gmail.com

**BAHAMANI SAMRAJYA**
**MATHU PARSHIYADA PRABHAVA-PRERANE**
Fellowship thesis by
**Devu Pattara**

Published by
**C.H.Bhagya**
Registrar
Karnataka Sahithya Academy
Kannada Bhavana
J.C.Road, Bengaluru-560 002.

© ಕರ್ನಾಟಕ ಸಾಹಿತ್ಯ ಅಕಾಡೆಮಿ

| | | |
|---|---|---|
| ಪುಟಗಳು | : | viii+೧೯೮ |
| ಬೆಲೆ | : | ₹೧೮೫/– |
| ಮೊದಲ ಮುದ್ರಣ | : | ೨೦೧೫ |
| ಪ್ರತಿಗಳು | : | ೫೦೦ |

| | | |
|---|---|---|
| Pages | : | viii+198 |
| Price | : | ₹ 185/- |
| First impression | : | 2015 |
| Copies | : | 500 |

**ಪ್ರಕಾಶಕರು:**
**ಸಿ.ಎಚ್.ಭಾಗ್ಯ**
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.

**ಮುದ್ರಕರು:**
ಸರ್ಕಾರಿ ಕೇಂದ್ರ ಮುದ್ರಣಾಲಯ
ಆರ್.ವಿ.ಕಾಲೇಜ್ ಅಂಚೆ
8ನೇ ಮೈಲಿ, ಮುತ್ತುರಾಯನಗರ
ಜ್ಞಾನಭಾರತಿ, ಮೈಸೂರು ರಸ್ತೆ
ಬೆಂಗಳೂರು–560 059.
080– 28483133 / 28484518



# ಅಧ್ಯಕ್ಷರ ನುಡಿ

ಶ್ರೀ ದೇವು ಪತ್ತಾರ ಅವರು ರಚಿಸಿದ 'ಬಹಮನಿ ಸಾಮ್ರಾಜ್ಯ ಮತ್ತು ಪರ್ಷಿಯಾದ ಪ್ರಭಾವ, ಪ್ರೇರಣೆ' ಸಂಪ್ರಬಂಧವು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಫೆಲೋಶಿಪ್ ಸಂಪ್ರಬಂಧ 2010–11ರ ಯೋಜನೆಯಡಿ ರಚಿತವಾದ ಮೌಲಿಕ ಸಂಶೋಧನೆಗಳನ್ನೊಳ– ಗೊಂಡದ್ದರಿಂದ ಇದೊಂದು ಪ್ರಶಂಸನೀಯವಾದ ಕೃತಿ. ಅದಕ್ಕಾಗಿ ಸಂಪ್ರಬಂಧಕಾರರಾದ ಶ್ರೀ ದೇವು ಪತ್ತಾರ ಅವರನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪರವಾಗಿ ಅಭಿನಂದಿಸುತ್ತೇನೆ. ಈ ಫೆಲೋಶಿಪ್ ಯೋಜನೆಯನ್ನು ಕಲ್ಪಿಸಿ, ರೂಪಿಸಿದ ಹಿಂದಿನ ಅವಧಿಯ ಅಧ್ಯಕ್ಷರಾದ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರನ್ನೂ ಈ ಸಂದರ್ಭದಲ್ಲಿ ಮನಃಪೂರ್ವಕವಾಗಿ ನೆನೆಯುತ್ತೇನೆ.

ಗುಲಬರ್ಗಾ, ಬೀದರ ನಗರಗಳನ್ನು ರಾಜಧಾನಿಯಾಗಿಸಿಕೊಂಡು ಆಳಿದ ಬಹಮನಿ ಅರಸರ ಕಾಲದಲ್ಲಿ ಪಾರಸಿ ಭಾಷೆ, ಕಲೆ ಸಂಸ್ಕೃತಿಗಳು ಗಾಢವಾದ ಪ್ರಭಾವವನ್ನು ಕರ್ನಾಟಕದಲ್ಲಿ ಬೀರಿದ್ದವು. ಬಹಮನಿ ಅರಸು ಫಿರೋಜ್‌ಶಾಹ್‌ನು ವಿಜಯನಗರದ ಅರಸು ಪ್ರೌಢರಾಯರ ಮಗಳನ್ನು ಮದುವೆಯಾದ ಸಂಗತಿ ಬಹಮನಿ ಮತ್ತು ಕರ್ನಾಟಕದ ಈಶಾನ್ಯ ಭಾಗದಲ್ಲಿ ಪಾರ್ಸಿ ಮತ್ತು ಭಾರತೀಯ ಸಂಸ್ಕೃತಿಗಳ ಕೊಡು–ಕೊಳೆ ಸಹಜವಾಗಿ ಸ್ಥಾಪಿಸಲ್ಪಟ್ಟಿತ್ತು. ಉರ್ದು ಭಾಷೆಯ ಮೊದಲ ಗದ್ಯ ಲೇಖಕ ಸೂಫೀ ಸಂತ ಖ್ವಾಜಾ ಬಂದೇ ನವಾಜ್‌ರು ಗುಲಬರ್ಗಾಕ್ಕೆ ಬಂದು ನೆಲೆನಿಂತದ್ದರಿಂದ ಅವರ ಅನುಭಾವದ ಸಂಪತ್ತಿನೊಂದಿಗೆ, ರಾಜ್ಯಾಡಳಿತದ ಅಪಾರ ಜ್ಞಾನ ಸಂಪತ್ತೂ ಈಶಾನ್ಯಭಾಗದ ಕರ್ನಾಟಕಕ್ಕೆ ಲಭಿಸಿತ್ತು ಎಂಬುದು ಗಮನಾರ್ಹ ಸಂಗತಿ.

ಭಾರತದಲ್ಲಿ ಮುಸ್ಲಿಂ ದೊರೆಗಳ ಸಾಮ್ರಾಜ್ಯ ಸ್ಥಾಪನೆಯಲ್ಲಿ ಪರ್ಶಿಯಾದ್ದು ಪ್ರಮುಖ ಪಾತ್ರವಾಗಿತ್ತು. ರಾಜ ದರ್ಬಾರದಲ್ಲಿ ಆಡಳಿತಕ್ಕೆ ಸಂಬಂಧಿಸಿದ ಎಲ್ಲ ವ್ಯವಹಾರಗಳಲ್ಲಿ ಪರ್ಶಿಯನ್ ಭಾಷಾಬಳಕೆ ಆಗುತ್ತಿತ್ತು. ಪಾರ್ಸಿ ಭಾಷೆ ಮತ್ತು ಸಂಸ್ಕೃತಿಗಳು ಮೊಗಲರ ಆಗಮನಕ್ಕಿಂತ ಮೊದಲೇ ತಳವೂರಿದ್ದವು. ದಕ್ಷಿಣದ ಬಹಮನಿ ರಾಜ್ಯವು ಪರ್ಶಿಯಾದ ಜೊತೆ

ನೇರವಾಗಿ ಸಾಂಸ್ಕೃತಿಕ ಸಂಬಂಧ ಬೆಳೆಸಿದ್ದರಿಂದ ಬಹಮನಿ ಸಾಮ್ರಾಜ್ಯವು ಮೊಗಲರಿಗಿಂತ ಭಿನ್ನವಾಗಿತ್ತು. ಬಹಮನಿ ಅರಸರ ಕಾಲದಲ್ಲಿ ಪ್ರಧಾನಿಯಾಗಿದ್ದ ಮಹಮೂದ್ ಗವಾನನು ನೀಡಿದ ಸಾಂಸ್ಕೃತಿಕ , ಶೈಕ್ಷಣಿಕ ಕೊಡುಗೆಗಳನ್ನು ಶ್ರೀ ದೇವು ಪತ್ತಾರ ಅವರ ಹತ್ತು ಹಲವು ಸಾಕ್ಷ್ಯಾಧಾರಗಳ ಸಂಶೋಧನೆಯ ಅಪರೂಪದ ಸತ್ಯಗಳನ್ನು ತಮ್ಮ ಸಂಪ್ರಬಂಧದಲ್ಲಿ ಮಂಡಿಸಿ ಕರ್ನಾಟಕದ ಇತಿಹಾಸಕ್ಕೆ ಉತ್ತಮ ಕೊಡುಗೆ ನೀಡಿದ್ದನ್ನು ಸ್ಮರಿಸಲೇಬೇಕು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಉಳಿದೆಲ್ಲ ಪ್ರಕಾರಗಳು ಸಮೃದ್ಧವಾಗಿ ಬೆಳೆದಿದ್ದು ಸಂಶೋಧನಾತ್ಮಕ ಕೃತಿಗಳ ಕೊರತೆ ಸಮಗ್ರ ಸಾಹಿತ್ಯದ ಬೆಳವಣಿಗೆಯನ್ನು ಕುಂಠಿತಗೊಳಿಸಿದೆ. ಇದನ್ನು ಅನುಲಕ್ಷಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ತಜ್ಞರಿಂದ ಸಂಶೋಧನ ಸಂಪ್ರಬಂಧಗಳ ಬರವಣಿಗೆಯನ್ನು ಮಾಡಿಸಬೇಕೆಂದು ವಿಶೇಷ ಕಾಳಜಿ ವಹಿಸಿದ್ದರ ಫಲವೇ ಈ ಸರಣಿ ಸಂಪ್ರಬಂಧಗಳ ಪ್ರಕಟಣೆ. ಮುಂಬರುವ ದಿನಗಳಲ್ಲೂ ಇಂಥ ಹೊಸ ಹೊಸ ಯೋಜನೆ ರೂಪಿಸಿ ಸಂಶೋಧನಾತ್ಮಕ ಕೃತಿ ರಚನೆಗೆ ಅನುವು ಮಾಡಿಕೊಡಲು ಸಾಹಿತ್ಯ ಅಕಾಡೆಮಿಯು ಬದ್ಧವಾಗಿದೆ ಎಂದು ತಿಳಿಸಲು ನನಗೆ ಸಂತೋಷವೆನಿಸುತ್ತದೆ.

**2015**

**ಮಾಲತಿ ಪಟ್ಟಣಶೆಟ್ಟಿ**
**ಅಧ್ಯಕ್ಷರು**



## ಅರಿಕೆ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಫೆಲೋಶಿಪ್‌ಗಾಗಿ ನಡೆಸಿದ ಅಧ್ಯಯನ ಬರಹ ರೂಪದಲ್ಲಿ ತಂದಿರುವುದು ನನಗೆ ತೃಪ್ತಿ ತಂದಿಲ್ಲ. ಅದಕ್ಕೆ ಕಾರಣಗಳು ಇಲ್ಲದಿಲ್ಲ. ಆದರೆ, ಕಾರಣ ಹೇಳಿ ಸಮರ್ಥಿಸಿಕೊಳ್ಳುವ ಅಗತ್ಯವಿಲ್ಲ. ಎಲ್ಲ ಒತ್ತಡ ಮತ್ತು ಅಸಹಾಯಕತೆಯ ನಡುವೆ ಇಷ್ಟನ್ನು ಮಾತ್ರ ಬರೆಯಲು ಸಾಧ್ಯವಾಯಿತು. ಅದನ್ನು ತಿದ್ದಿ ಮತ್ತೊಮ್ಮೆ ಬರೆಯಬೇಕೆಂಬ ಆಸೆ ಇತ್ತು. ಆದರೆ, ಅದು ಕೂಡ ಸಾಧ್ಯವಾಗಲಿಲ್ಲ. ಪ್ರತಿಯೊಂದು ಬರೆವಣಿಗೆ ಆಯಾ ಕಾಲದ ಪ್ರಾಡೆಕ್ಟ್. ಅದಕ್ಕೆ ಅದರದೇ ಆದ ವೈಶಿಷ್ಟ್ಯ ಮತ್ತು ಮಿತಿಗಳು ಇರುತ್ತವೆ. ಕಾಲ ಬದಲಾದಂತೆ ಅದು ಕಡಿಮೆ ಅಥವಾ ಹೆಚ್ಚು ಅನ್ನಿಸತೊಡಗುತ್ತವೆ. ಮೂರು ವರ್ಷಗಳ ಹಿಂದೆ ಬರೆದದ್ದನ್ನು ಮತ್ತೆ ತಿದ್ದಲು ಹೊರಟಾಗ ವಿಚಿತ್ರ ಬಗೆಗೆ ಸಂಕಟ ಅನುಭವಿಸಿದೆ. ಬರೆದದ್ದು ಎಷ್ಟೂ ಚೆನ್ನಾಗಿಲ್ಲ ಅನ್ನಿಸತೊಡಗಿತು. ರಿಪೇರಿ ಮಾಡಲು ಹೊರಟಾಗ ಮೊದಲ ಸಲ ಬರೆದ ನಂತರ ಓದಿದ ಎಷ್ಟೋ ವಿವರಗಳು ಬಂದು ಕಾಡತೊಡಗಿದವು. ಅವನ್ನು ಸೇರಿಸ ಹೊರಟರೆ ಮೊದಲು ಬರೆದದ್ದರ ಸ್ವರೂಪವೇ ಬದಲಾಗತೊಡಗಿತು. ಈ ಜಂಜಾಟ– ತೊಳಲಾಟದಿಂದ ಹೊರ ಬರುವ ದಾರಿ ಕಾಣದೇ ಕಂಗಾಲಾಗಿ ಕುಳಿತೆ. ಕೆಲವು ದಿನ ಏನು ಮಾಡಬೇಕು ಎಂಬುದೇ ತೋಚಲಿಲ್ಲ. ಕೊನೆಗೆ ಇದೇ ವಿಷಯದ ಮೇಲೆ ಮತ್ತಷ್ಟು ವಿವರವಾಗಿ ಬರೆಯಬಹುದು ಮತ್ತು ಹಾಗೆ ಬರೆಯುವುದಕ್ಕೆ ಅವಕಾಶ ಎಂದು ಸಮಾಧಾನಿಸಿಕೊಂಡೆ. 2011ರ ಜನವರಿಯಿಂದ ಮಾರ್ಚ್ ವರೆಗೆ ಬರೆದ ಬರವಣಿಗೆಯನ್ನೇ ಯಥಾವತ್ತಾಗಿ ಉಳಿಸಿಕೊಂಡಿದ್ದೇನೆ. ಸ್ಖಾಲಿತ್ಯ ದೋಷ ಮತ್ತು ಪುನರಾವರ್ತನೆ ಅನ್ನಿಸಿದ ವಾಕ್ಯಗಳನ್ನು ಕತ್ತರಿಸಿದ್ದೇನೆ. ಹೊಸದೇನನ್ನೂ ಸೇರಿಸಿಲ್ಲ. ಹೀಗಾಗಿ ಈ ಪುಸ್ತಕದಲ್ಲಿ ಇರುವ ಎಲ್ಲ ಮಿತಿಗಳೂ ನನ್ನವು ಎಂದು ವಿನಯದಿಂದ ಸೂಚಿಸುತ್ತೇನೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯು 2010–11ನೇ ಸಾಲಿನ ಫೆಲೋಶಿಪ್‌ಗೆ ನನ್ನನ್ನು ಆಯ್ಕೆ ಮಾಡಿದ ಸಂಗತಿ ತಿಳಿದಾಗ ನನಗೆ ಸಂತಸಕ್ಕಿಂತ ಹೆಚ್ಚು ಆಶ್ಚರ್ಯವಾಗಿತ್ತು. ಅನಿರೀಕ್ಷಿತ ಆಗಿದ್ದರಿಂದ ಆಶ್ಚರ್ಯಕ್ಕೆ ಕಾರಣವಾಯಿತು. ಪಿಯುಸಿಯಲ್ಲಿ ನನಗೆ ಕನ್ನಡ ಕಲಿಸಿದ ಗುರುಗಳಾದ ಡಾ. ಮೃತ್ಯುಂಜಯ ರುಮಾಲೆ ಹಾಗೂ ಅಕಾಡೆಮಿಯ ಅಧ್ಯಕ್ಷರಾಗಿದ್ದ

ಪ್ರೊ. ಎಂ.ಎಚ್.ಕೃಷ್ಣಯ್ಯ ಅವರ ಪ್ರೀತಿ–ವಿಶ್ವಾಸದ ಕಾರಣದಿಂದಾಗಿ ಅದು ಬೆಂಗಳೂರಿನಿಂದ ಸಾಕಷ್ಟು ದೂರದ ಬೀದರ್‌ನಲ್ಲಿ ಇದ್ದ ನನ್ನ ವರೆಗೂ ಹುಡುಕಿ ಬಂದಿತ್ತು ಅಂದುಕೊಂಡಿದ್ದೇನೆ.

ಒಂದು ವರ್ಷದ ಫೆಲೋಶಿಪ್ ಅವಧಿ ಇದ್ದರೂ ಹಲವಾರು ತಾಂತ್ರಿಕ ಕಾರಣಗಳಿಂದ ನನಗೆ ದೊರಕಿದ್ದು ಕೇವಲ ಆರು ತಿಂಗಳು ಮಾತ್ರ. ಗಾವಾನ್ ಬಗ್ಗೆ ಓದಿಗೆ ತೊಡಗಿದ್ದರಿಂದ ಆ ಯೋಜನೆಯ ಅಂಗವಾಗಿ ಓದಿದ–ಸಂಗ್ರಹಿಸಿದ ಮಾಹಿತಿಯನ್ನು ಈ ಫೆಲೋಶಿಪ್‌ನ ಬರವಣಿಗೆಗಾಗಿ ಬಳಸಿಕೊಂಡಿದ್ದೇನೆ. ಈ ಬರವಣಿಗೆ ನನಗೆ ಸಮಾಧಾನ ತಂದುಕೊಟ್ಟಿಲ್ಲ. ನಿಯಮಿತ ಕಾಲಾವಧಿಯಲ್ಲಿ ಬರೆದದ್ದರಿಂದ ಹಲವು ಮಿತಿಗಳಿವೆ. ಅದನ್ನು ಈ ಮೊದಲೇ ಹೇಳಿದ್ದೇನೆ. ಈ ಪ್ರಬಂಧದ ಪರಿಶೀಲನೆ ನಡೆಸಿದ ಹಿರಿಯ ವಿದ್ವಾಂಸರಾದ ಮನು ಚಕ್ರವರ್ತಿ ಅವರು ಸೂಚಿಸಿದ ಬದಲಾವಣೆಗಳನ್ನು ಅಳವಡಿಸಿಕೊಂಡಿದ್ದೇನೆ. ನನ್ನ ಬರವಣಿಗೆಯ ಮೇಲೆ ಅವರು ತೋರಿದ ಔದಾರ್ಯಕ್ಕಾಗಿ ನಾನು ಕೃತಜ್ಞನಾಗಿದ್ದೇನೆ.

ಈ ಪುಸ್ತಕದಲ್ಲಿ ಬಳಸಲಾದ ಛಾಯಾಚಿತ್ರಗಳನ್ನು ಬೀದರ್‌ನ ಛಾಯಾಗ್ರಾಹಕ ಟಿ.ಗೋಪಿಚಂದ್ ಮತ್ತು ಗುರುಪಾದಪ್ಪ ಸಿರಸಿ ಒದಗಿಸಿದ್ದಾರೆ. ಈ ಅಧ್ಯಯನದ ಸಂದರ್ಭದಲ್ಲಿ ವಿಶೇಷ ನೆರವು ನೀಡಿದ ಬೀದರ್ ಜಿಲ್ಲೆಯ ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕರಾಗಿದ್ದ ಶಫಿ ಸಾದುದ್ದೀನ್ ಹಾಗೂ ವಿವರಗಳನ್ನು ಹಂಚಿಕೊಂಡ ಪ್ರೊ. ಬಿ.ಆರ್.ಕೊಂಡಾ ಮತ್ತು ಕಾಜಿ ಅರ್ಷದ್ ಅಲಿ ಹಾಗೂ ಶಿವಶರಣ ಅರುಣಿ ಅವರ ಒತ್ತಾಸೆ ಇಲ್ಲದಿದ್ದರೆ ಬರೆಯುವುದು ಸಾಧ್ಯವೇ ಆಗುತ್ತಿರಲಿಲ್ಲ. ಭಾರತೀಯ ಪುರಾತತ್ವ ಇಲಾಖೆಯ ಅಧಿಕಾರಿಗಳಾದ ಆನಂದತೀರ್ಥ ಹಾಗೂ ಮೌನೇಶ ಕುರವತ್ತಿ ಐತಿಹಾಸಿಕ ಸ್ಮಾರಕಗಳಲ್ಲಿ ಸಮಯ ಕಳೆಯುವುದಕ್ಕೆ ಅವಕಾಶ ಮಾಡಿಕೊಟ್ಟು ಸಹಾಯ ಮಾಡಿದ್ದಾರೆ. ನಾನು ಪ್ರಜಾವಾಣಿಯಲ್ಲಿ ಇದ್ದಾಗ ಫೆಲೋಶಿಪ್ ಅಧ್ಯಯನಕ್ಕೆ ಅನುವು ಮಾಡಿಕೊಟ್ಟ ಸಂಪಾದಕರಾದ ಕೆ.ಎನ್.ಶಾಂತಕುಮಾರ್ ಹಾಗೂ ಸಹಸಂಪಾದಕ ಪದ್ಮರಾಜ ದಂಡಾವತಿ ಹಾಗು ವಿಜಯ ಕರ್ನಾಟಕದ ಸಂಪಾದಕರಾದ ಸುಗತ ಶ್ರೀನಿವಾಸರಾಜು ಹಾಗೂ ಹಿರಿಯರಾದ ಡಿ.ವಿ.ರಾಜಶೇಖರ್ ಅವರ ಔದಾರ್ಯ ದೊಡ್ಡದು. ಅಕಾಡೆಮಿಯ ರಿಜಿಸ್ಟ್ರಾರ್ ಆಗಿದ್ದ ಮಲ್ಲಿಕಾರ್ಜುನಸ್ವಾಮಿ ಮತ್ತು ಈಗಿನ ರಿಜಿಸ್ಟ್ರಾರ್ ಸಿ.ಎಚ್. ಭಾಗ್ಯ ಅವರು ತೋರಿದ ಸಹಕಾರ ಅವಿಸ್ಮರಣೀಯ. ಊರೆಲ್ಲ ನೆಂಟರು ಕೇರಿಯೆಲ್ಲ



ಬಳಗ... ಯಾರನ್ನು ನೆನೆಯಲಿ ಯಾರನ್ನು ಬಿಡಲಿ. ಹಲವರ ಋಣದ ಭಾರ ನನ್ನ ಮೇಲಿದೆ. ಅದನ್ನು ಹೆಸರಿಸಿಯೇ ತೀರಿಸಬೇಕೆಂದೇನಿಲ್ಲ. ವಿಸ್ತೃತವಾದ ಅಧ್ಯಯನದ ಫಲಿತ ಮತ್ತೊಂದು ರೂಪದಲ್ಲಿ ನೀಡುತ್ತೇನೆ. ಓದಿಗೆ–ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಅಕಾಡೆಮಿಗೆ ನಾನು ಚಿರಋಣಿ.

ದೇವು ಪತ್ತಾರ

ಸಿದ್ದೇಶ್ವರ ನಿಲಯ
ಫ್ಲಾಟ್ ನಂ.7, ರವೀಂದ್ರನಾಥ ಠಾಗೂರ್ ನಗರ,
ರಾಮಮಂದಿರ ರಿಂಗ್ ರೋಡ್, ಕಲಬುರ್ಗಿ–585 102

# 1. ರಕ್ತಸಿಕ್ತ ಅಧ್ಯಾಯದಿಂದ ಒಟ್ಟಂದದ ಬದುಕಿಗೆ

ಹದಿಮೂರನೇ ಶತಮಾನದಲ್ಲಿ ಅಲ್ಲಾವುದ್ದೀನ್ ಖಿಲ್ಜಿಗಿಂತಲೂ ಮುಂಚೆ ದೆಹಲಿ ಪ್ರಭುತ್ವದ ಯಾರೊಬ್ಬರೂ ವಿಂಧ್ಯ ಪರ್ವತವನ್ನು ದಾಟಿ ದಕ್ಷಿಣದ ಕಡೆಗೆ ಬಂದಿರಲಿಲ್ಲ. ಅಲ್ಲಾವುದ್ದೀನ್ ಮತ್ತು ಅವನ ದಂಡನಾಯಕ ದಕ್ಷಿಣದ ಮೇಲೆ ದಾಳಿ ಮಾಡಿದ ಮೊದಲಿಗರು. ಆದರೆ, ಅದಕ್ಕಿಂತ ಬಹಳಷ್ಟು ಮುಂಚೆಯೇ ಧರ್ಮ ಪ್ರಚಾರಕರು, ಸಂತರು ಉತ್ತರದಿಂದ ದಕ್ಷಿಣದ ಕಡೆಗೆ ಬಂದು ಪಾರಸಿ ಮಾತನಾಡುವ ಮುಸ್ಲಿಮ್ ಸಮುದಾಯವನ್ನು ಹುಟ್ಟುಹಾಕಿದ್ದರು. ಧರ್ಮಪ್ರಚಾರಕರು ಆರಂಭಿಸಿದ್ದ ಚಟುವಟಿಕೆಗಳು ಹೊಸ ಸಾಹಿತ್ಯ– ಸಾಂಸ್ಕೃತಿಕ ವಾತಾವರಣಕ್ಕೆ ವೇದಿಕೆ ಸಿದ್ಧಪಡಿಸಿದ್ದವು.

ಆಗ (1296) ದಖನ್ನಿನಲ್ಲಿ ದೇವಗಿರಿಯಲ್ಲಿ ಯಾದವರು, ವಾರಂಗಲ್ಲಿನಲ್ಲಿ ಕಾಕತೀಯರು ಮತ್ತು ದೋರಸಮುದ್ರದಲ್ಲಿ ಹೊಯ್ಸಳರು ಆಳ್ವಿಕೆ ನಡೆಸುತ್ತಿದ್ದರು. ದೆಹಲಿ ಗದ್ದುಗೆಯ ಮೇಲೆ ಕಣ್ಣಿಟ್ಟಿದ್ದ ಅಲ್ಲಾವುದ್ದೀನ್ ತನ್ನ ಚಿಕ್ಕಪ್ಪನನ್ನ ಅರಸೊತ್ತಿಗೆಯಿಂದ ಕೆಳಗಿಳಿಸಲು ಅಪಾರ ಹಣದ ಅಗತ್ಯವಿತ್ತು. ಅದಕ್ಕಾಗಿ ದಖನ್ನಿನ ಕಡೆಗೆ ದಾಳಿ ನಡೆಸಿದ. ಅಪಾಯದ ಮುನ್ಸೂಚನೆ ಅರಿಯದೆ ಮೂರು ರಾಜ ಮನೆತನಗಳ ಅರಸರು ಪರಸ್ಪರ ಕಿತ್ತಾಟದಲ್ಲಿ ನಿರತರಾಗಿದ್ದರು. ದಕ್ಷಿಣದಲ್ಲಿ ಅಧಿಕಾರ ಸ್ಥಾಪನೆ ಮತ್ತು ವಿಸ್ತರಣೆಯ ಯಾವ ಆಸೆಯೂ ಅಲಾವುದ್ದೀನ್‌ನಿಗೆ ಇರಲಿಲ್ಲ. ಆದರೆ, ಕಣ್ಣು ಕೋರೈಸುವಷ್ಟಿದ್ದ ಅಪಾರ ಸಂಪತ್ತು ಅವನನ್ನು ದಾಳಿ ಮಾಡಲು ಪ್ರೇರಣೆ ನೀಡಿತು. ದೇವಗಿರಿಯ ಯುದ್ಧದ ಫಲಿತವಾಗಿ ದೊರೆತ ಐಶ್ವರ್ಯವು ಅವನನ್ನು ಮತ್ತೆ ಮತ್ತೆ ದಖನ್ ಕಡೆಗೆ ನೋಡುವಂತೆ ಮಾಡಿತು. ದೆಹಲಿಯ ಸುಲ್ತಾನನಾದ ಮೇಲೆಯೂ ಅವನ ಸೈನ್ಯಾಧಿಪತಿಯ ಮೂಲಕ ದಕ್ಷಿಣದ ದಂಡಯಾತ್ರೆ ಮುಂದುವರೆಯುವಂತೆ ನೋಡಿಕೊಂಡ.

'ಪ್ರತಿಯೊಂದು ಮನೆಯಲ್ಲಿಯೂ ವಜ್ರಗಳ ರಾಶಿ ಇರುತ್ತಿತ್ತು. ಚಿನ್ನ ಬೆಳ್ಳಿ ತುಂಬಿ ತುಳುಕುತ್ತಿತ್ತು. ಎಲ್ಲ ಕಡೆಯೂ ರೇಷ್ಮೆಯ ಭಾರೀ ಸಂಗ್ರಹವಿರುತ್ತಿತ್ತು.. ಇನ್ನೂ ಹಲವು ಬಗೆಯ ಸಂಪತ್ತುಗಳಿದ್ದವು. ಬಹು ಆಕರ್ಷಕ ಮಾದರಿಯ ಬಟ್ಟೆಗಳಿದ್ದುವು. ಬಟ್ಟೆಗಳ ಇಂತಹ ಅಪೂರ್ವ ವೈವಿಧ್ಯವನ್ನು ದೇವಗಿರಿಯಲ್ಲದೆ ಬೇರೆಲ್ಲಿ ಕಾಣಲಾದೀತು' ಎಂದು ಕವಿ ಅಬ್ದ್ ಮಲಿಕ್ ಇಸಾಮಿಯು 'ಫುತೂಹ್ ಅಸ್ ಸಲಾತಿನ್' ಗ್ರಂಥದಲ್ಲಿ ಬರೆಯುವಂತೆ ದಖನ್ ಪ್ರದೇಶದಲ್ಲಿ ಸಿರಿವಂತಿಕೆಯು ದೆಹಲಿ ದೊರೆಗಳ ಕಣ್ಣು ಕುಕ್ಕುವಂತೆ ಮಾಡಿತ್ತು. ಇದೇ ಕಾರಣಕ್ಕಾಗಿಯೇ ಅಲಾವುದ್ದೀನ್ ಖಿಲ್ಜಿಯ ಸೈನ್ಯವು ವಿಂಧ್ಯಪರ್ವತದಿಂದ ಈಚೆಗಿನ ಪ್ರದೇಶದ ಮೇಲೆ ದಾಳಿ ನಡೆಸಿತು.

ಒಂದೆಡೆ ಸಂಪತ್ತಿನ ಆಸೆಗೆ ಪ್ರಭುತ್ವದ ದಾಳಿ ನಡೆದಿತ್ತು. ಅದೇ ಹೊತ್ತಿಗೆ ಖ್ವಾಜಾ ನಿಜಾಮುದ್ದೀನ್ ಔಲಿಯಾ ಸೂಚನೆಯ ಮೇರೆಗೆ ಏಳುನೂರಕ್ಕೂ ಹೆಚ್ಚು ಜನ ಸೂಫಿ ಸಂತರು ದಕ್ಷಿಣದ ವಿವಿಧ ಕಡೆಗಳಲ್ಲಿ ಉಳಿದುಕೊಂಡಿದ್ದರು. ಜಾತೀಯತೆ ಮತ್ತು ಅಸಮಾನತೆಯ ಕಾರಣದಿಂದಾಗಿ ಕಡೆಗಣನೆಗೆ ಒಳಗಾಗಿದ್ದ ಜನ ಸಮುದಾಯದ ಜನರಿಗೆ ಪ್ರೀತಿ–ವಿಶ್ವಾಸ ಮತ್ತು ಸಮಾನತೆ ಸಾರುವ ಸೂಫಿಗಳು ಅಪ್ಯಾಯಮಾನವಾಗಿ ಕಾಣಿಸಿದ್ದರಲ್ಲಿ ಅಚ್ಚರಿಯಿಲ್ಲ. ಅದು ಇಸ್ಲಾಮ್ ಹರಡುವ ಪ್ರಕ್ರಿಯೆಯನ್ನು ತೀವ್ರಗೊಳಿಸಿತು.

1) ಅಲಾವುದ್ದೀನ್‌ನ ದಾಳಿ ಮತ್ತು ನಂತರ ಸೂಫಿ ಸಂತರ ಆಗಮನವು ದಕ್ಷಿಣದಲ್ಲಿ ಇಸ್ಲಾಮ್ ಧರ್ಮಕ್ಕೆ ಸೇರಿದ ಜನರ ಸಮೂಹ ಕಾಣಿಸಿಕೊಳ್ಳಲು ಆರಂಭವಾಯಿತು ಎಂಬುದು ಬಹುತೇಕ ಜನ ಇತಿಹಾಸಕಾರರ ಅಭಿಪ್ರಾಯ. ಆದರೆ, ಪ್ರವಾದಿ ಮಹಮ್ಮದರು ಬದುಕಿದ್ದ ಕಾಲದಲ್ಲಿಯೇ (ಎಂಟನೇ ಶತಮಾನ) ಅವರ ಸಂದೇಶವು ಧರ್ಮ ಪ್ರಚಾರಕರ ಮೂಲಕ ಮಲಬಾರಿನ ಕರಾವಳಿಯನ್ನು ತಲುಪಿತ್ತು. ಈ ಅಂಶವನ್ನು ಐತಿಹಾಸಿಕ ದಾಖಲೆಗಳು ಧೃಡಪಡಿಸಿವೆ. ಭಾರತದಲ್ಲಿ ಇಸ್ಲಾಮ್ ಕಾಣಿಸಿಕೊಂಡದ್ದು ನೈತಿಕ, ಆಧ್ಯಾತ್ಮಿಕ ನೆಲೆಯಲ್ಲಿ ಅದೂ ಪಶ್ಚಿಮದ ಕರಾವಳಿಗುಂಟ. ಸಿಂಧ್‌ನಲ್ಲಿ ಅರಬ್ಬರು ದಾಳಿ ನಡೆಸುವ ಬಹಳಷ್ಟು ಮುಂಚೆಯೇ ಇಸ್ಲಾಮ್ ಧರ್ಮಕ್ಕೆ ಸೇರಿದ ಸಾಹಸಿಗಳು, ಧರ್ಮ ಪ್ರಚಾರಕರು ದಕ್ಷಿಣ ಭಾರತದಲ್ಲಿ ಇಸ್ಲಾಮ್ ಧರ್ಮವು ನೆಲೆ ಕಲ್ಪಿಸಲು ಕಾರಣರಾಗಿದ್ದರು. ಪ್ರಾಚೀನ ಕಾಲದಿಂದಲೂ ಅರಬ್ಬ ವ್ಯಾಪಾರಿಗಳಿಗೆ ಪಶ್ಚಿಮದ ಕರಾವಳಿಯ ಜೊತೆಗಿನ ಒಡನಾಟ ಇತ್ತು. ವ್ಯಾಪಾರಿಗಳ ಜೊತೆಗೇ ಬಂದ

> ಧಾರ್ಮಿಕರು ಹೊಸಧರ್ಮದ ಬಗೆಗೆ ಅರಿವು ಮೂಡಿಸುವುದರ ಜೊತೆಗೆ ಪ್ರಚಾರ ನಡೆಸಿದರು. ಸಮಾನತೆಯ ಮಾತುಗಳು, ನೈತಿಕತೆಯ ಪ್ರತಿಪಾದನೆ ಮತ್ತು ನಡವಳಿಕೆಗಳು, ಪ್ರಾರ್ಥನೆಯ ವಿಧಾನಗಳು ದಕ್ಷಿಣದ ಜನರು ಕುತೂಹಲದಿಂದ ನೋಡುವುದಕ್ಕೆ ಕಾರಣವಾಗಿದ್ದವು. (ಶೇಕ್ ಮೊಹಮ್ಮದ್ ಇಕ್ಬಾಲ್– ದ ಮಿಷನ್ ಆಫ್ ಇಸ್ಲಾಮ್, 1977)

ಘಿಯಾಸುದ್ದೀನ್ ತುಘಲಕ್‌ನು ಯುವರಾಜನಾಗಿದ್ದ ತನ್ನ ಮಗ ಉಲುಗ್‌ಖಾನ್ (ಮಹಮ್ಮದ್ ಬಿನ್ ತುಘಲಕ್)ನನ್ನು ದಖನ್‌ನ ಉಸ್ತುವಾರಿ ವಹಿಸಿದ್ದನು. ಮಧುರೆಯವರೆಗೂ ಸಾಮ್ರಾಜ್ಯ ವಿಸ್ತರಿಸುವುದು ಸಾಧ್ಯವಾದರೂ ಅದನ್ನು ನಿಭಾಯಿಸುವುದು ಕಷ್ಟದ ಕೆಲಸವಾಗಿತ್ತು. ದಕ್ಷಿಣದ ಕೊನೆಯಿರದ ದಂಗೆಗಳು ದೆಹಲಿ ದೊರೆ ಮಹಮ್ಮದ್‌ನ ತಲೆ ಕೆಡಿಸುವುದಕ್ಕೆ ಕಾರಣವಾಗಿದ್ದವು. ದೂರದ ದೆಹಲಿಯಿಂದ ಅವನ್ನು ನಿಭಾಯಿಸುವುದೂ ಕಷ್ಟದ ಕೆಲಸವಾಗಿತ್ತು. ಒಂದೆಡೆ ತೈಮೂರ್‌ನ ದಾಳಿಯ ಆತಂಕ ಮತ್ತೊಂದೆಡೆ ದಕ್ಷಿಣದ ದಂಗೆಗಳು ಸುಲ್ತಾನ್‌ನನ್ನು ರಾಜಧಾನಿಯ ವರ್ಗಾವಣೆ ಮಾಡುವಂತೆ ಒತ್ತಡ ಹೇರಿದ್ದವು.

ಈ ಹಿನ್ನೆಲೆಯಲ್ಲಿ 1327ರಲ್ಲಿ 'ಅಭ್ಯುದಯದ ತವರು' ದೇವಗಿರಿಯನ್ನು 'ಖುಬ್ಬತುಲ್ ಇಸ್ಲಾಮ್' (ಇಸ್ಲಾಮ್ ಧರ್ಮದ ಗುಮ್ಮಟ) 'ದೌಲತಾಬಾದ್' ಆಗಿಸಿದ. ಮಹಮ್ಮದ್ ಬಿನ್ ತುಘಲಕ್ ರಾಜಧಾನಿಯನ್ನು ದೆಹಲಿಯಿಂದ ದೌಲತಾಬಾದ್‌ಗೆ ವರ್ಗಾಯಿಸಿದ. ವಾಸ್ತವವಾಗಿ ದೆಹಲಿಯಲ್ಲಿದ್ದ ಆಡಳಿತ ವ್ಯವಸ್ಥೆಯನ್ನು ಮಾತ್ರ ಸ್ಥಳಾಂತರ ಮಾಡಬೇಕಿತ್ತು.

ಮಹಮ್ಮದ್ ಇಡೀ ದೆಹಲಿಯ ಜನಸಮುದಾಯವನ್ನು ತನ್ನೊಂದಿಗೆ ಕರೆದೊಯ್ಯುವ ನಿರ್ಧಾರ ಮಾಡಿದ್ದು ದುರಂತಕ್ಕೆ ಮುನ್ನುಡಿ ಬರೆಯಿತು. ಉಭಯ ನಗರಗಳ ನಡುವೆ ಸಂಪರ್ಕ ಕಲ್ಪಿಸುವ ರಸ್ತೆಯ ನಿರ್ಮಾಣ (ಹೆದ್ದಾರಿ) ಆಯಿತು. ರಸ್ತೆಗುಂಟ ಎಲ್ಲ ಸೌಕರ್ಯ, ವ್ಯವಸ್ಥೆ ಕಲ್ಪಿಸಿದ್ದರೂ ದೆಹಲಿಯಿಂದ ಹೊರಟ ಜನರ ಪೈಕಿ ಅರ್ಧದಷ್ಟು ಜನ ಮಾತ್ರ ದೌಲತಾಬಾದ್ ತಲುಪಿದರು. ನಂತರ ನಡೆದ ಎಲ್ಲ ರಾಜಧಾನಿಯ ಸ್ಥಳಾಂತರಗಳಿಗೂ ಇದು ಪಾಠವಾಯಿತು ಎನ್ನುವುದು ಬೇರೆ ಮಾತು. ನೂತನ ರಾಜಧಾನಿಯು ಸಮಸ್ಯೆಯನ್ನು ಬಗೆ ಹರಿಸುವ ಬದಲು ಹೊಸ ಸಮಸ್ಯೆಗಳಿಗೆ ನಾಂದಿ ಹಾಡಿತು.

# ಅಲಾವುದ್ದೀನ್ ಹಸನ್ ಬಹಮನ್ ಶಹಾ

(3 ಆಗಸ್ಟ್ 1347 ರಿಂದ 11 ಫೆಬ್ರವರಿ 1358)

ಮಹಮ್ಮದ್ ಬಿನ್ ತುಘಲಕ್‌ನ ವಿರುದ್ಧದ ಬಂಡಾಯದ ನೇತೃತ್ವವನ್ನು ಅಫ್ಘನ್ ಸಮುದಾಯಕ್ಕೆ ಸೇರಿದ ಇಸ್ಮಾಯಿಲ್ ಮುಲ್ಕ್ ವಹಿಸಿಕೊಂಡಿದ್ದ. ಸುಲ್ತಾನ್‌ನ ಹುಚ್ಚು ಆಡಳಿತದಿಂದ ಬೇಸತ್ತು ದಂಗೆಯೆದ್ದ ಪ್ರಾಂತ್ಯದ ಅಧಿಕಾರಿಗಳನ್ನು ಸೋಲಿಸಲು ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಸುಲ್ತಾನ್ ಕಳುಹಿಸಿದ ಸೈನ್ಯ ಸಂಪೂರ್ಣವಾಗಿ ಸೋತುಹೋಯಿತು. ಬಂಡಾಯದ ನೇತೃತ್ವ ವಹಿಸಿದ್ದ ಇಸ್ಮಾಯಿಲ್ ಮುಲ್ಕ್‌ನ ನಾಯಕತ್ವದಲ್ಲಿ ದಖನ್ ಪ್ರದೇಶ ದೆಹಲಿಯಿಂದ ಸ್ವತಂತ್ರ ಎಂದು ಘೋಷಿಸಲಾಯಿತು. ನಾಸಿರುದ್ದೀನ್ ಇಸ್ಮಾಯಿಲ್ ಶಹಾ ಎಂಬ ಹೆಸರಿನಲ್ಲಿ ಇಸ್ಮಾಯಿಲ್ ಮುಲ್ಕ್‌ನಿಗೆ ಅಧಿಕಾರ ವಹಿಸಲಾಯಿತು. ದೌಲತಾಬಾದಿನ ಎಲ್ಲ ಸಂಪತ್ತನ್ನು ಅಮೀರ್‌ರು ಹಂಚಿಕೊಂಡರು. ದಂಗೆಯಲ್ಲಿ ಮುಂಚೂಣಿಯಲ್ಲಿದ್ದವರ ಪೈಕಿ ಹಸನ್ ಪ್ರಮುಖನಾಗಿದ್ದ. ಎಲ್ಲರಿಗಿಂತ ಮೊದಲು ಹೆಚ್ಚು ಉತ್ಸಾಹದಿಂದ ಮುನ್ನುಗ್ಗಿದ ಹಸನ್ ತಾನೊಬ್ಬ ಸಮರ್ಥ ನಾಯಕ ಎಂದು ಬಿಂಬಿಸಿಕೊಂಡಿದ್ದ. ಸುಲ್ತಾನ್‌ನ ಸೈನ್ಯ ತಲೆಬಾಗುವಂತೆ ಮಾಡುವಲ್ಲಿ ಹಸನ್‌ನ ಸೇನಾಕೌಶಲ್ಯ ಪ್ರಮುಖ ಪಾತ್ರ ವಹಿಸಿತ್ತು. ಹಸನ್‌ನಿಂದ ಪ್ರಭಾವಿತನಾದ ಇಸ್ಮಾಯಿಲ್ ಶಹಾನು ಜಾಫರ್‌ಖಾನ್ ಬಿರುದು ನೀಡಿ ಗೌರವಿಸಿದನು. ಕೆಲವು ದಿನಗಳ ನಂತರ ಇಸ್ಮಾಯಿಲ್ ತನ್ನ ವಯಸ್ಸಿನ ಕಾರಣದಿಂದ ಸಕ್ರಿಯ ರಾಜಕಾರಣದಿಂದ ಹಿಂದೆ ಸರಿಯಲು ಬಯಸಿದಾಗ ಹಸನ್‌ನಿಗೆ ಅಧಿಕಾರ ಬಿಟ್ಟುಕೊಡಲು ನಿರ್ಧರಿಸಿದ. ಅದಕ್ಕೆ ಬಂಡಾಯದ ಸಂದರ್ಭದಲ್ಲಿ ಮುಂಚೂಣಿಯಲ್ಲಿದ್ದ ಎಲ್ಲ 60 ಜನ ಅಮೀರ್‌ರು ಸಮ್ಮತಿಸಿದರು. ಅಮೀರ್‌ರೆಲ್ಲ ಸೇರಿ ಹಸನ್‌ನನ್ನು ತಮ್ಮ ನಾಯಕ ಎಂದು ಆಯ್ಕೆ ಮಾಡಿದ ಚುನಾವಣಾ ಪ್ರಹಸನಕ್ಕೂ ದೌಲತಾಬಾದ್ ಸಾಕ್ಷಿಯಾಯಿತು. ಇದೆಲ್ಲದರ ಫಲವಾಗಿ ಹಸನ್‌ನು 1347ರ ಆಗಸ್ಟ್ 3ರಂದು ಅಬ್ದುಲ್ ಮುಜಫರ್ ಅಲಾವುದ್ದೀನ್ ಬಹಮನ್ ಶಹಾ ಎಂಬ ಹೆಸರಿನೊಂದಿಗೆ ಅಧಿಕಾರಕ್ಕೆ ಬಂದನು. ಹಸನ್ ಅಧಿಕಾರ ಸ್ವೀಕರಿಸುವುದರೊಂದಿಗೆ ದಖನ್‌ನಲ್ಲಿ ಬಹಮನಿ ಸಾಮ್ರಾಜ್ಯ ಸ್ಥಾಪನೆಯಾಯಿತು.

ಹಸನ್ ಅರಸನಾಗುವುದಕ್ಕೆ ಮುನ್ನ ಏನಾಗಿದ್ದ? ಎನ್ನುವುದಕ್ಕೆ ಹಲವು ಕಥೆಗಳಿವೆ. ಅದರಲ್ಲಿ ಹೆಚ್ಚು ಚಾಲ್ತಿಯಲ್ಲಿರುವುದು ಫೆರಿಸ್ತಾನ ಕಥೆ. ದೆಹಲಿಯಲ್ಲಿ ಗಂಗು ಎಂಬ ಬ್ರಾಹ್ಮಣನ ಸೇವೆ ಮಾಡುತ್ತಿದ್ದ ಯುವಕನಿಗೆ ಹೊಲದಲ್ಲಿ ಕೆಲಸ ಮಾಡುತ್ತಿರುವಾಗ ಹೊನ್ನಿನ ಕೊಪ್ಪರಿಗೆ ದೊರೆಯಿತು. ಯುವಕ ಅದನ್ನು ತನ್ನ

ಒಡೆಯನಿಗೆ ಒಪ್ಪಿಸಿದ. ಗಂಗು ಬ್ರಾಹ್ಮಣನು ಯುವಕನ ಪ್ರಾಮಾಣಿಕತೆಯನ್ನು ಕಂಡು ಅಚ್ಚರಿಗೊಂಡನು. ನಂತರ ಯುವಕನು ಮುಂದೊಂದು ದಿನ ಸಾಮ್ರಾಜ್ಯ ಸ್ಥಾಪನೆಗೆ ಕಾರಣನಾಗುತ್ತಾನೆ ಎಂದು ಭವಿಷ್ಯ ನುಡಿದ. ಯುವಕನು ಸುಲ್ತಾನ್‌ನಾದ ಮೇಲೆ ತನ್ನ ಹೆಸರಿನಲ್ಲಿ 'ಗಂಗು ಬ್ರಾಹ್ಮಣ' ಸೇರಿಸಿಕೊಳ್ಳಬೇಕು ಎಂದು ತಿಳಿಸಿದ. ಹಾಗೆಯೇ ಗಂಗು ತನ್ನನ್ನು ಪ್ರಧಾನಿ ಮಾಡಿಕೊಳ್ಳಬೇಕು ಎಂದು ಸೂಚಿಸಿದ್ದ ಎಂದು ಫೆರಿಸ್ತಾನ ಕಥೆ ವಿವರಿಸುತ್ತದೆ. ಆದರೆ, ಈ ಕಥೆ ವಾಸ್ತವಕ್ಕೆ ದೂರ ಎಂಬುದಕ್ಕೆ ಹೆಚ್ಚು ಹೊತ್ತು ಹಿಡಿಯುವುದಿಲ್ಲ. ಫೆರಿಸ್ತಾನ ಸಮಕಾಲೀನನಾಗಿದ್ದ ಅಲಿ ಬಿನ್ ಅಜಿಜುಲ್ಲಾ ತಬಾತಬಾ ರಚಿಸಿದ 'ಬುರ್ಹಾನ್ ಏ ಮಾಸಿರ್' ಗ್ರಂಥವು ಹೆಚ್ಚು ವಿಶ್ವಾಸಾರ್ಹ ಎಂಬ ಅಭಿಪ್ರಾಯವಿದೆ. ಬುರ್ಹಾನ್ ಏ ಮಾಸಿರ್ ಗ್ರಂಥವು ಫೆರಿಸ್ತಾ ರಚಿಸಿದ 'ತಾರೀಖ್ ಏ ಫೆರಿಸ್ತಾ' ಗ್ರಂಥಕ್ಕಿಂತ ಮೊದಲೇ ರಚಿತವಾದದ್ದು. ಬಹಮನಿ ಇತಿಹಾಸ ರಚಿಸುವುದಕ್ಕೆ ಫೆರಿಸ್ತಾ ಮತ್ತು ತಬಾತಬಾ ಬಳಸಿದ ಆಕರಗಳು ಬಹುತೇಕ ಒಂದೇ ಆಗಿದ್ದವು. ಅದೇ ಕಾರಣಕ್ಕಾಗಿಯೇ ವಿವರಗಳಲ್ಲಿ ಇಬ್ಬರಲ್ಲಿಯೂ ಹಲವು ಸಾಮ್ಯಗಳಿವೆ. ಆದರೆ, ಭಿನ್ನ ಅಭಿಪ್ರಾಯದ ಸಂದರ್ಭದಲ್ಲಿ ಹೆಸರು, ಪೂರ್ವಜರ ವಿವರಗಳಿಗೆ ಸಂಬಂಧಿಸಿದಂತೆ ಫೆರಸ್ತಾನ ಇತಿಹಾಸಕ್ಕಿಂತ 'ಬುರ್ಹಾನ್ ಎ ಮಾಸಿರ್' ಹೆಚ್ಚು ವಿಶ್ವಾಸಾರ್ಹ. ಬಹಮನಿ ಅರಸರ ಕಾಲಕ್ಕೆ ಹೊರಡಿಸಲಾದ ನಾಣ್ಯಗಳು 'ಬುರ್ಹಾನ್ ಎ ಮಾಸಿರ್'ದಲ್ಲಿನ ವಿವರಗಳನ್ನು ದೃಢೀಕರಿಸುತ್ತವೆ. ಹಾಗೆಯೇ ನಾಣ್ಯಗಳ ಅಧಿಕೃತತೆಯ ಬೆಂಬಲ ಫೆರಿಸ್ತಾನಿಗೆ ಇಲ್ಲ. 'ಬುರ್ಹಾನ್ ಎ ಮಾಸಿರ್'ದಲ್ಲಿ ದೆಹಲಿ ಗಂಗು ಬ್ರಾಹ್ಮಣನಿಗೆ ಸಂಬಂಧಿಸಿದ ಘಟನೆಯ ಪ್ರಸ್ತಾಪವೇ ಇಲ್ಲ. ಅಷ್ಟೇ ಅಲ್ಲ 'ಗಂಗು ಬಹಮನಿ' ಎಂಬ ಕಿರುನಾಮ ಕೂಡ ಉಲ್ಲೇಖಗೊಂಡಿಲ್ಲ. ತಬಾತಬಾ ಮಾತ್ರವಲ್ಲದೇ ಹಲವು ಪರ್ಶಿಯನ್ ಇತಿಹಾಸಕಾರರು ಕೂಡ 'ಗಂಗು ಬಹಮನಿ'ಯ ಕಥೆಯ ವಿಷಯ ಚರ್ಚಿಸುವುದಿಲ್ಲ. ಆಧುನಿಕ ಇತಿಹಾಸಕಾರರು ಕೂಡ ಈ ಕಥೆಯಲ್ಲಿ ಯಾವುದೇ ಹುರುಳಿಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಆದರೆ, ಚೋದ್ಯದ ಸಂಗತಿ ಎಂದರೆ ಫೆರಿಸ್ತಾನ ವಾದಕ್ಕೆ ಇಂಬು ನೀಡುವ ಕೇವಲ ಒಂದೇ ಪೂರಕ ಅಂಶ ಇದೆ. ಅಲಾವುದ್ದಿನ್‌ನ ಉಂಗುರದ ಮುದ್ರಿಕೆಯಲ್ಲಿ ಮಾತ್ರ 'ಗಂಗು ಬಹಮನಿ' ದಾಖಲಾಗಿದೆ.

ಅಲಾವುದ್ದೀನ್ ಹಸನ್‌ನಿಗೆ ಸೇರಿದ ಚಾಲ್ತಿಯಲ್ಲಿರುವ ಮತ್ತೊಂದು ಕಥೆ ಕೂಡ ದೆಹಲಿಯಲ್ಲಿ ನಡೆದದ್ದು. ಈ ಕಥೆ ಬುರ್ಹಾನ್ ಎ ಮಾಸಿರ್‌ನಲ್ಲಿ ದಾಖಲಾಗಿದೆ. ಸೂಫಿ ಸಂತ ಹಜರತ್ ನಿಜಾಮುದ್ದೀನ್ ಔಲಿಯಾನ ಜೊತೆ ಚರ್ಚೆ ನಡೆಸುವುದಕ್ಕಾಗಿ ಬಾದಶಹಾ ಮಹಮದ್ ಬಿನ್ ತುಘಲಕ್ ಆಗಮಿಸಿದ್ದ.

ಅವರಿಬ್ಬರ ಮಾತುಕತೆಯ ನಂತರ ಬಾದಶಹಾ ನಿರ್ಗಮಿಸಿದ. ಅದಾದ ನಂತರ ಯುವಕ ಹಸನ್ ನಿಜಾಮುದ್ದೀನ್ ಅವರನ್ನು ಕಾಣಲು ಬಂದ. ಆಗ 'ಒಬ್ಬ ಬಾದಶಹಾ ನಿರ್ಗಮಿಸಿದರೆ ಮತ್ತೊಬ್ಬ ಆಗಮಿಸಿದ' ಎಂದು ಭವಿಷ್ಯ ನುಡಿದಿದ್ದರು. ಹಸನ್ ದಖನ್‌ನ ಬಾದಶಹಾ ಆಗುವ ಮೂಲಕ ಅದು ಈಡೇರಿತು ಎಂದು ತಬಾತಬಾ ಬರೆಯುತ್ತಾನೆ.

ಬಿಜಾಪುರದಲ್ಲಿ ವಾಸಿಸುತ್ತಿದ್ದ ರಫಿಯುದ್ದೀನ್ ಶಿರಾಜಿ ತನ್ನ 'ತಧಕಿರತ್ ಅಲ್ ಮುಲ್ಕ್' ಕೃತಿಯಲ್ಲಿ ಮತ್ತೊಬ್ಬ ಸೂಫಿ ಸಂತನ ಕಥೆಯನ್ನು ಪ್ರಸ್ತಾಪಿಸುತ್ತಾನೆ. ಹಸನ್ ಯುವಕನಾಗಿದ್ದಾಗ ಮಿರಜ್‌ನಲ್ಲಿ ವಾಸಿಸುತ್ತಿದ್ದ. ಆಗ ಅಲ್ಲಿದ್ದ ಶೇಕ್ ಶಿರಾಜ್ ಜುನ್ಯೆದಿಯ ಸೇವೆ ಮಾಡುವ ಅವಕಾಶ ಹಸನ್‌ನಿಗೆ ದೊರೆಯಿತು. ಆಗ 'ಮುಂದೊಂದು ದಿನ ಸಿಂಹಾಸನದ ಮೇಲೆ' ಕೂಡುವ ಭವಿಷ್ಯ ನುಡಿದಿದ್ದರು. ಹಸನ್‌ನು ಪರ್ಷಿಯಾದ ಇಸ್ಫಾನ್ ಮತ್ತು ಹಮದಾನ್ ಪ್ರದೇಶಗಳಲ್ಲಿ ಆಡಳಿತ ನಡೆಸಿದ ಕಾಕು ಮನೆತನಕ್ಕೆ ಸೇರಿದವನು ಎಂಬ ಮತ್ತೊಂದು ವಾದವೂ ಇದೆ. ಹಸನ್‌ನ ತಂದೆಯ ಹೆಸರು 'ಕೈಕೌಸ್' ಎಂದಿತ್ತು ಎಂದು. ಅದು ಅಪಭ್ರಂಶಗೊಂಡು 'ಕಾಕೊಯಾ' ಎಂದಾಗಿತ್ತು ಎಂದು ಅಮಿನ್ ಅಹ್ಮದ್ ರಾಜಿಯ 'ಹಪ್ತ್ ಇಲ್ಮ್' ಗ್ರಂಥದಲ್ಲಿ ದಾಖಲಾಗಿದೆ. ಮುಹಮ್ಮದ್ ಅಲಿ ಬುರ್ಹಾನ್‌ಪುರಿಯ 'ಮಿರಾತ್ ಅಸ್ ಸಫಾ'ದಲ್ಲಿ ಅಲಾವುದ್ದೀನ್‌ನು ಕೈಕುಸ್‌ನ ಮಗ. ಕೈಕುಸ್‌ನು ಅಲಿಯ ಪುತ್ರ ಎಂದು ಬರೆಯಲಾಗಿದೆ. ಕೈಕುಸ್ ಎಂಬುದು ಅಕ್ಷರಕ್ಕೆ ಇಳಿಸುವಾಗ ಲಿಪಿ ಮಾಡುತ್ತಿದ್ದವನ ದೋಷದಿಂದಾಗಿ 'ಕಂಕು' ಎಂದು ಬದಲಾವಣೆಗೊಂಡಿತು. ಅದೇ 'ಗಂಗು' ಎಂಬ ತಪ್ಪು ಗ್ರಹಿಕೆಗೆ ಕಾರಣವಾಯಿತು ಎಂಬ ಅಂಶವನ್ನು ಖಾರೆ ಮತ್ತು ಒಟುರ್‌ಕರ್ (ಇಂಡಿಯನ್ ಹಿಸ್ಟಾರಿಕಲ್ ಕಾಂಗ್ರೆಸ್ ಕಲ್ಕತ್ತಾ, 1939) ಅಭಿಪ್ರಾಯಪಟ್ಟಿದ್ದಾರೆ.

ಮಹಮ್ಮದ್ ಘಜ್ನಿ ಆಡಳಿತದ ವ್ಯಾಪ್ತಿಯಲ್ಲಿ ಇದ್ದ ಪ್ರದೇಶದ ನಿವಾಸಿಯಾಗಿದ್ದ ಹಸನ್ ನಂತರ ದೆಹಲಿಯ ಮೂಲಕ ದಖನ್ ಕಡೆಗೆ ಬಂದ ಎಂದು ವಿವರಿಸುವ ಇತಿಹಾಸಕಾರರು ಇದ್ದಾರೆ. ಆಸ್ಥಾನದಲ್ಲಿ ಇದ್ದ ವಂಶಾವಳಿ ರಚಿಸುವ ವಿದ್ವಾಂಸರು ಹಸನ್ ಪರ್ಷಿಯಾ ಮೂಲದ ಇಸ್ಫಾನ್ ಮತ್ತು ಬಹಮನ್ ಮೂಲದವನು ಎಂದು ಎಳೆ ಜೋಡಿಸಲು ಯತ್ನಿಸಿದ್ದರಲ್ಲಿ ಅಚ್ಚರಿಯೇನಿಲ್ಲ. ಸಾಮ್ರಾಜ್ಯಕ್ಕೆ ಸೇರಿದ ಬಾದಶಹನ ಕುಟುಂಬಕ್ಕೆ ಸೇರಿದ ಕುಲೀನ ಅಲ್ಲದಿದ್ದರೂ ಹಸನ್ ಬಹಮನ್ ಪ್ರದೇಶಕ್ಕೆ ಸೇರಿದವನಾಗಿರಬಹುದು. ಅದೇ ಮುಂದೆ 'ಬಹಮನಿ' ಎಂದು ಕರೆದುಕೊಳ್ಳುವುದಕ್ಕೆ ಕಾರಣ ಆಗಿರಬೇಕು ಎಂಬುದು ಸದ್ಯ ಬಹುತೇಕ ವಿದ್ವಾಂಸರು ಒಪ್ಪಿಕೊಂಡ ಅಭಿಪ್ರಾಯ.

ಅಲಾವುದ್ದೀನ್ ಹಸನ್ ಬಹಮನ್ ಶಹಾನದು ಪರ್ಷಿಯಾ ಮೂಲ ಎಂಬ ನಂಬಿಕೆಯು ಬಹಮನಿ ಸಾಮ್ರಾಜ್ಯದ ಎಲ್ಲ ಅರಸರಲ್ಲಿಯೂ ಮುಂದುವರೆಯಿತು. ಆದ್ದರಿಂದಾಗಿಯೇ ದಖನ್‌ನಲ್ಲಿ ಬಹಮನಿ ಅಸ್ತಿತ್ವದಲ್ಲಿ ಇದ್ದಷ್ಟು ಕಾಲವೂ ಇಲ್ಲಿನ ಅರಸರು ಪರ್ಷಿಯಾದ ಕಡೆಗೆ ಮುಖ ಮಾಡುವಂತೆ ಮಾಡಿತು.

## ವಿರೋಧ ಮತ್ತು ಹೊಸ ಆಡಳಿತ

ದಂಗೆಯ ಮೂಲಕ ಬಂದ ಬದಲಾವಣೆಯ ನಂತರ ಅಲಾವುದ್ದೀನ್ ಆಡಳಿತ ನಡೆಸುವುದು ಸುಲಭದ ಸಂಗತಿಯೇನಾಗಿರಲಿಲ್ಲ. ಸುಲ್ತಾನ್‌ನಿಗೆ ಮುಬಾರಕಾಬಾದ್ ಮಿರಜ್, ಹುಕ್ಕೇರಿ, ಬೆಳಗಾವಿ ಪ್ರಾಂತ್ಯಗಳನ್ನು ಒಳಗೊಂಡು ಸಣ್ಣ ಜಹಾಗೀರು ಇತ್ತು. ತುಘಲಕ್‌ನ ಬಗ್ಗೆ ಪ್ರೀತಿ– ವಿಶ್ವಾಸ ಇದ್ದ ಸಣ್ಣ ಪುಟ್ಟ ಪ್ರಾಂತ್ಯಗಳ ಅಧಿಕಾರಿಗಳು ಸ್ವತಂತ್ರರಾಗುವ ಹವಣಿಕೆಯಲ್ಲಿದ್ದರು. ದಂಗೆಯ ದಿನಗಳಲ್ಲಿ ಅವನ ಜೊತೆಗಿದ್ದವರಲ್ಲಿ ಹಲವು ಮಹತ್ವಾಕಾಂಕ್ಷಿಗಳೂ ಆಗಿದ್ದರು. ಇಸ್ಮಾಯಿಲ್ ಸ್ವತಃ ತಾನೇ ಅಧಿಕಾರ ಹಸ್ತಾಂತರ ಮಾಡಿದ್ದ. ಆದರೂ ಒಮ್ಮೆ ನೋಡಿದ ಅಧಿಕಾರದ ರುಚಿ ಅವನನ್ನು ಸುಮ್ಮನೆ ಕೂಡದಿರುವಂತೆ ಮಾಡಿತ್ತು. ಈ ಅಸಮಾಧಾನವನ್ನು ತೊಡೆದು ಹಾಕುವುದಕ್ಕಾಗಿ ಕೆಲವೊಮ್ಮೆ ಒತ್ತಡ ಹಾಕಿ ಮಣಿಸುವ, ಹಲವೊಮ್ಮೆ ಒಲಿಸುವ ರಾಜತಾಂತ್ರಿಕ ಮಾರ್ಗಗಳನ್ನು ಅನುಸರಿಸಬೇಕಾಗುತ್ತಿತ್ತು.

ಸುಲ್ತಾನ್ ಅಲಾವುದ್ದೀನ್ ತನಗಿದ್ದ ಜಫಾರ್‌ಖಾನ್ ಬಿರುದು ಯುವರಾಜ ಮುಹಮ್ಮದ್‌ನಿಗೆ ವರ್ಗಾಯಿಸಿದ. ಹಾಗೆಯೇ ಹಿರಿಯ ಅಮೀರ್‌ರಲ್ಲಿ ಒಬ್ಬನಾಗಿದ್ದ ಮಲಿಕ್ ಸೈಫುದ್ದೀನ್ ಘೋರಿಯ ಮಗಳು ಶಹಾಬೇಗಂಳ ಮದುವೆಯನ್ನು ಯುವರಾಜ ಮುಹಮ್ಮದ್‌ನ ಜೊತೆ ಮಾಡಿದ. ಜೊತೆಗೆ ಮಲಿಕ್ ಸೈಫುದ್ದೀನ್ ಘೋರಿಯು ನೂತನ ಸಾಮ್ರಾಜ್ಯದ ಪ್ರಧಾನಿ (ವಕೀಲ್ ಎ ಮುತ್ಲಾಕ್)ಯ ಹುದ್ದೆ ನೀಡಿದ. ಹಿಂದಿನ ಅರಸ ಶಂಸುದ್ದೀನ್ ಇಸ್ಮಾಯಿಲ್‌ನನ್ನು ಅಮೀರ್ ಉಲ್ ಉಮರಾ ಎಂದು ಘೋಷಿಸಿದ. ಮತ್ತೊಬ್ಬ ಪ್ರಮುಖ ಅಮೀರ್ ಬಹಾವುದ್ದೀನ್‌ನಿಗೆ ಸಿಕಂದರ್‌ಖಾನ್ ಬಿರುದು ನೀಡಿ ಸುಲ್ತಾನ್‌ನ ಖಾಸಗಿ ಕಾರ್ಯದರ್ಶಿಯನ್ನಾಗಿ ನೇಮಿಸಲಾಯಿತು.

ಸುತ್ತಲಿನ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳುತ್ತಿದ್ದಂತೆಯೇ ಅಲಾವುದ್ದೀನ್‌ನಿಗೆ ದೆಹಲಿ ಸಿಂಹಾಸನ ವಶಪಡಿಸಿಕೊಳ್ಳುವ ಮತ್ತು ಆ ಮೂಲಕ ಇಡೀ ಭಾರತವನ್ನು

ಗೆಲ್ಲುವ ಹೆಬ್ಬಯಕೆ ಮೂಡಿತು. ಮೊದಲಿಗೆ ತುಂಗಭದ್ರಾ ನದಿಯನ್ನು ದಾಟಿ ರಾಮೇಶ್ವರದ ವರೆಗೆ ಸಾಮ್ರಾಜ್ಯ ವಿಸ್ತರಿಸುವ ಕನಸು ಕಂಡ. ಮಲಬಾರನ ಕರಾವಳಿಗುಂಟ ಹೊರಟು ಗೋದಾವರಿ ನದಿಯ ಪ್ರದೇಶ ದಾಟಿ, ಗುಜರಾತ, ಮಾಳವಾ, ಗ್ವಾಲಿಯರ್ ವಶ ಪಡಿಸಿಕೊಂಡು ದೆಹಲಿಯನ್ನು ವಶಪಡಿಸಿಕೊಳ್ಳುವ ಯೋಜನೆ ರೂಪಿಸಿದ. ಆಗ ಪ್ರಧಾನಿಯಾಗಿದದ ಸೈಫುದ್ದೀನ್ ಘೋರಿಯು ದಕ್ಷಿಣದಲ್ಲಿನ ದಟ್ಟ ಕಾಡುಗಳು ದಂಡಯಾತ್ರೆ ಕೈಗೊಳ್ಳಲು ಪ್ರಮುಖ ಅಡ್ಡಿ ಎಂಬ ಅಂಶವನ್ನು ಅರಸನ ಗಮನಕ್ಕೆ ತರುವಲ್ಲಿ ಯಶಸ್ವಿಯಾದ. ಹಾಗೆಯೇ ಅಲ್ಲಾವುದ್ದೀನ್ ಖಿಲ್ಜಿ ಮತ್ತು ಮಹಮ್ಮದ್ ಬಿನ್ ತುಘಲಕ್‌ನಂತಹ ಪ್ರಮುಖ ಅರಸರಿಗೂ ದಕ್ಷಿಣ ಭಾಗವು ಸಂಪೂರ್ಣವಾಗಿ ವಶವಾಗದೇ ಇರುವ ಸಂಗತಿಯನ್ನೂ ವಿವರಿಸಿದ ಘೋರಿಯು ಅಲಾವುದ್ದೀನ್‌ನು ದಂಡಯಾತ್ರೆಯ ಯೋಜನೆ ಕೈಬಿಡುವಂತೆ ನೋಡಿಕೊಂಡ. ಹಾಗೆಯೇ ದಖನ್ ಪ್ರಸ್ಥಭೂಮಿಯಲ್ಲಿ ಗಮನ ಕೇಂದ್ರೀಕರಿಸಿ ನಂತರ ಮಾಳವಾ ಮತ್ತು ಗುಜರಾತಗಳನ್ನು ವಶಪಡಿಸಿಕೊಳ್ಳುವ ಬಗ್ಗೆ ಯೋಚಿಸಬಹುದು ಎಂಬ ಸಲಹೆಯು ಅರಸನಿಗೆ ಅಪ್ಯಾಯಮಾನವಾಗಿ ಕಂಡಿದ್ದರಲ್ಲಿ ಅಚ್ಚರಿಯಿಲ್ಲ. ಸುಲ್ತಾನ್‌ನ ತನ್ನ ಸೈನ್ಯದ ಪ್ರಮುಖರಿಗೆ ದಖನ್ನಿನ ವಿವಿಧ ಕಡೆಗಳಿಗೆ ಹೋಗುವಂತೆ ಸೂಚಿಸಿದ.

ಅಹಸನಾಬಾದ್ ಎಂಬ ಹೆಸರಿನೊಂದಿಗೆ ಗುಲ್ಬರ್ಗ ನೂತನ ಸಾಮ್ರಾಜ್ಯದ ರಾಜಧಾನಿಯಾಯಿತು. ದಾಬೋಲ್‌ನಿಂದ ಬಹುತೇಕ ಗೋವಾದವರೆಗೆ ವಿಸ್ತರಿಸಿತು. ಉತ್ತರದಲ್ಲಿ ಮಾಂಡು ವರೆಗೂ ವಿಸ್ತರಣೆಯಾದರೆ ಪೂರ್ವದಲ್ಲಿ ತೆಲಂಗಾಣ ಪ್ರದೇಶವನ್ನು ದಾಟಿ ನೆಲ್ಲೂರು ವರೆಗೆ ವಿಸ್ತರಣೆಯಾಯಿತು. ಗೆಲುವು ಸಾಧಿಸಿದ ಪ್ರದೇಶಗಳನ್ನು ನಾಲ್ಕು ಪ್ರಾಂತ್ಯ (ತರಫ್)ಗಳನ್ನಾಗಿ ವಿಭಾಗಿಸಲಾಯಿತು. ರಾಯಚೂರು ಮತ್ತು ಮುದ್ಗಲ್ ಒಳಗೊಂಡಂತಹ ಗುಲ್ಬರ್ಗ ತರಫ್‌ಗೆ ಪ್ರಧಾನಿ ಸೈಫುದ್ದೀನ್ ಘೋರಿ ತರಫ್‌ದಾರ್ (ಪ್ರಾಂತ್ಯಾಧಿಕಾರಿ) ಮಾಡಲಾಯಿತು. ಹಿಂದೆ ರಾಜಧಾನಿಯಾಗಿದ್ದ ದೌಲತಾಬಾದ್ ಪ್ರದೇಶಕ್ಕೆ ಸುಲ್ತಾನ್‌ನ ಸೋದರಳಿಯ ಮುಹಮ್ಮದ್ ಪ್ರಾಂತ್ಯಾಧಿಕಾರಿಯಾದ. ಬೆರಾರ್ ತರಫ್‌ಗೆ ಸಫ್ದರ್‌ಖಾನ್ ಸಿಸ್ತನಿ ಹಾಗೂ ತೆಲಂಗಾಣದ ಉಸ್ತುವಾರಿಯನ್ನು ಘೋರಿಯ ಮಗ ಹುಮಾಯೂನ್‌ನಿಗೆ ವಹಿಸಲಾಯಿತು. 1351ರಲ್ಲಿ ಯುವರಾಜ 1ನೇ ಮುಹಮ್ಮದ್‌ನ ಮದುವೆಯನ್ನು ಘೋರಿಯ ಮಗಳು ಶಹಾಬೇಗಂ ಜೊತೆ ನಡೆದಾಗ ವಿಜಯನಗರವೂ ಸೇರಿದಂತೆ ನೆರೆಯ ಎಲ್ಲ ಅರಸರಿಗೂ ಆಮಂತ್ರಣ ಕಳುಹಿಸಲಾಗಿತ್ತು. ರಾಜ್ಯದ ಆರಂಭದ ದಿನಗಳಲ್ಲಿಯೇ ಜಾತ್ಯತೀತ ನಿಲುವು ಇರುವ ನೀತಿಯನ್ನು ಅಳವಡಿಸಿಕೊಳ್ಳಲು ಘೋರಿ ಸೂಚಿಸಿದ. ಅದಕ್ಕೆ ಪರ್ಶಿಯಾದ ದೊರೆಗಳ ಮಾದರಿ ಕಾರಣವಾಗಿತ್ತು.

ಸುಲ್ತಾನ್ ಅಲಾವುದ್ದೀನ್‌ನ ರಾಜಕಾರಣದ ಕೌಶಲ, ನ್ಯಾಯಪರ ನೀತಿ ಹಾಗೂ ಜನಕಲ್ಯಾಣ ಯೋಜನೆಗಳನ್ನು ಅಳವಡಿಸಿಕೊಂಡಿದ್ದ. ಅವನ ಕಾಲದಲ್ಲಿ ರಾಜಧಾನಿ ಗುಲ್ಬರ್ಗ ಪ್ರವರ್ಧಮಾನಕ್ಕೆ ಬಂದಿತು. ನಗರದ ಕೋಟೆ ನಿರ್ಮಾಣಕ್ಕೆ ಅಡಿಪಾಯ ಹಾಕಿದ ಸುಲ್ತಾನ್‌ನು ಧಾರ್ಮಿಕ ಮತ್ತು ಧಾರ್ಮಿಕೇತರ ಕಟ್ಟಡಗಳ ನಿರ್ಮಾಣ ಕಾಮಗಾರಿ ಆರಂಭಿಸಿದ. 'ನ್ಯಾಯ ಮತ್ತು ಧರ್ಮಪರತೆ' ಅಲಾವುದ್ದೀನ್‌ನ ಎರಡು ಪ್ರಮುಖ ಗುಣಗಳು ಎಂದು ಇಸಾಮಿ ವಿವರಿಸುತ್ತಾನೆ. ಕೊನೆಯ ದಿನಗಳಲ್ಲಿ ಅಲಾವುದ್ದೀನ್ ತನ್ನ ಮೂವರು ಮಕ್ಕಳನ್ನು ಕರೆಸಿ ಪರಸ್ಪರ ಕಿತ್ತಾಡದಿದ್ದರೆ ಮಾತ್ರ ಎಲ್ಲರಿಗೂ ಒಳಿತಾಗುತ್ತದೆ ಎಂದು ಬುದ್ಧಿಮಾತು ಹೇಳಿದ್ದನು. ಗುಲ್ಬರ್ಗದಲ್ಲಿ ದೊಡ್ಡ ಮಸೀದಿ ಕಟ್ಟಬೇಕು ಮತ್ತು ಅದರಲ್ಲಿ ನಿಂತು ದೀನರಿಗೆ ಸಹಾಯಹಸ್ತ ಚಾಚಬೇಕು ಎಂಬುದು ಸುಲ್ತಾನ್‌ನ ಕನಸಾಗಿತ್ತು. 1358ರಲ್ಲಿ ಅಲಾವುದ್ದೀನ್ ನಿಧನನಾದ ನಂತರ ಯುವರಾಜನಾಗಿದ್ದ ಅವನ ಹಿರಿಯ ಪುತ್ರ ಒಂದನೇ ಮುಹಮ್ಮದ್ ಅಧಿಕಾರಕ್ಕೆ ಬಂದ.

## ಒಂದನೇ ಮುಹಮ್ಮದ್
(11 ಫೆಬ್ರವರಿ 1358 ರಿಂದ 21 ಏಪ್ರಿಲ್ 1375)

ಅಲಾವುದ್ದೀನ್ ಸಿಂಹಾಸನಕ್ಕೆ ಬಂದಾಗ ದಖನ್‌ನಲ್ಲಿ ಹೊಸದಾಗಿ ಸ್ವತಂತ್ರರಾದವರು, ತುಘಲಕ್‌ಪರ ಯೋಚಿಸುತ್ತಿದ್ದ ಹಾಗೂ ಮಹತ್ವಕಾಂಕ್ಷೆಯುಳ್ಳ ಅಮೀರ್‌ರನ್ನು ಎದುರಿಸುವ ಸವಾಲಿತ್ತು. ಎಲ್ಲ ರೀತಿಯ ಪರಸ್ಪರ ವಿರೋಧಾಭಾಸಗಳನ್ನು ನಿಭಾಯಿಸುವ ಛಾತಿ ಅಲಾವುದ್ದೀನ್‌ಗೆ ಇತ್ತು. ಅದನ್ನವನು ಯಶಸ್ವಿಯಾಗಿ ಮಾಡಿದ. ಶಾಂತಿ ನೆಲೆಯೂರಿದ ಕಾಲಘಟ್ಟದಲ್ಲಿ ಒಂದನೇ ಮುಹಮ್ಮದ್ ಅಧಿಕಾರಕ್ಕೆ ಬಂದ. ತೆಲಂಗಾಣ ಮತ್ತು ವಿಜಯನಗರ ಅರಸರ ಜೊತೆ ಬಹುತೇಕ ಒಳ್ಳೆಯ ಸಂಬಂಧವನ್ನು ಇಟ್ಟುಕೊಂಡಿದ್ದ. ತೆಲಂಗಾಣದ ಅರಸು ಯುವರಾಜನ ಮದುವೆಗೆ ಮುಹಮ್ಮದ್‌ನನ್ನು ಆಹ್ವಾನಿಸಿದ್ದ. ಜೊತೆಗೆ ವಜ್ರಖಚಿತ ಹರಳುಗಳಿಂದ ಅಲಂಕರಿಸಿದ ಪಕ್ಷಿಯಂತಹ ಕಲಾಕೃತಿಯನ್ನು ಉಡುಗೊರೆಯಾಗಿ ನೀಡಿದ್ದ. ಮುಹಮ್ಮದ್ ತನ್ನ ಅಧಿಕಾರ ಅವಧಿಯ ಎರಡನೇ ಅವಧಿಯಲ್ಲಿ ಪವಿತ್ರ ಕಾಬಾದ ಒಂದು ಭಾಗದ ಮೇಲೆ ಅಳವಡಿಸಲಾಗಿದ್ದ ಬಟ್ಟೆಯಿಂದ ಮಾಡಿದ ಕೊಡೆಯನ್ನು ಸಿಂಹಾಸನದ ಮೇಲೆ ಅಳವಡಿಸಿದ್ದ. ಮುಹಮ್ಮದ್‌ನ ತಾಯಿ ಮೆಕ್ಕಾದಿಂದ ಅಮೂಲ್ಯ ಬಟ್ಟೆಯನ್ನು ತಂದುಕೊಟ್ಟಿದ್ದಳು. ರಾಜ್ಯದಲ್ಲಿ ಕಳ್ಳಕಾಕರ ಭಯ ಕೊನೆಗೊಂಡಿರಲಿಲ್ಲ. ದರೋಡೆಕೋರರು ತಮ್ಮ

ಕೃತ್ಯ ಮುಂದುವರೆಸಿದ್ದರು. ಮುಹಮ್ಮದ್ ಅದನ್ನು ಮಟ್ಟಹಾಕಲು ನಿರ್ಧರಿಸಿದ. ತರಫ್‌ದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡುವ ಮೂಲಕ ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಿದ. ಬರಿ ಆರು ತಿಂಗಳಲ್ಲಿ ಸೆರೆ ಸಿಕ್ಕ ಸಾವಿರಾರು ಡಕಾಯಿತರು, ಠಕ್ಕರನ್ನು ರಾಜಧಾನಿಗೆ ತಂದು ಜೈಲಿಗೆ ಕಳುಹಿಸಲಾಯಿತು. ಮುಹಮ್ಮದ್ ಸಿಂಹಾಸನದಿಂದ ನಿರ್ಗಮಿಸುವಾಗ ಶಾಂತಿ ಹಾಗೂ ಸುವ್ಯವಸ್ಥೆ ನೆಲೆಸಿತ್ತು.

## ಆಡಳಿತ ವ್ಯವಸ್ಥೆ

ತುಘಲಕ್ ಆಡಳಿತದ ವಿರುದ್ಧ ಬಂಡೆದ್ದು ದಖನ್‌ನಲ್ಲಿ ಸ್ವತಂತ್ರ ರಾಜ್ಯ ಸ್ಥಾಪಿಸಿದ ಹೆಗ್ಗಳಿಕೆ ನಸಿರುದ್ದೀನ್ ಇಸ್ಮಾಯಿಲ್‌ನದಾದರೆ ಬಹಮನಿ ಸಾಮ್ರಾಜ್ಯ ಸ್ಥಾಪಿಸಿದ ಹಿರಿಮೆ ಅಲಾವುದ್ದೀನ್ ಹಸನ್‌ಗೆ ಸಲ್ಲುತ್ತದೆ. ರಾಜ್ಯದಲ್ಲಿ ವ್ಯವಸ್ಥೆ ಜಾರಿಗೆ ತಂದು ಆಡಳಿತ ಯಂತ್ರಕ್ಕೆ ಅಗತ್ಯವಾದ ಸಂಸ್ಥೆಗಳನ್ನು ಆರಂಭಿಸಿದ ಗರಿಮೆ ಒಂದನೇ ಮುಹಮ್ಮದ್‌ನಿಗೆ ಸೇರುತ್ತದೆ. ಕೇಂದ್ರ ಸರ್ಕಾರ ಹಾಗೂ ಉತ್ತಮ ಆಡಳಿತ ವ್ಯವಸ್ಥೆ ರೂಪಿಸುವುದಕ್ಕಾಗಿ ಎಚ್ಚರದಿಂದ ಹೆಜ್ಜೆ ಇಡುವ ಅಗತ್ಯವಿತ್ತು. ಅದಕ್ಕಾಗಿ ಪ್ರತಿದಿನ ತಪ್ಪದೇ ದರ್ಬಾರಿಗೆ ಭೇಟಿ ನೀಡುತ್ತಿದ್ದ ಮುಹಮ್ಮದ್ ಮಧ್ಯಾಹ್ನದ ಪ್ರಾರ್ಥನೆಯ ಸಮಯದವರೆಗೂ ಆಡಳಿತದ ಬಗ್ಗೆ ಗಮನ ಹರಿಸುತ್ತಿದ್ದ. ಆರಂಭದಲ್ಲಿ ಅವನ ತಂದೆ ಆಸೀನನಾಗಿದ್ದ ಬೆಳ್ಳಿಯ ಸಿಂಹಾಸನದಲ್ಲಿ ಕೂಡುತ್ತಿದ್ದ. 1363ರ ಮಾರ್ಚ 23ರಿಂದ 'ತಕ್ತ್ ಎ ಫಿರೋಜ್' ಎಂದು ಕರೆಯಲಾಗುವ ಸಿಂಹಾಸನದ ಮೇಲೆ ಕುಳಿತ ಎಂದು ಫೆರಿಸ್ತಾ ದಾಖಲಿಸಿದ್ದಾನೆ. ತೆಲಂಗಾಣದ ಅರಸು ರಾಯ ಈ ಸಿಂಹಾಸನವನ್ನು ಮುಹಮ್ಮದ್‌ನಿಗೆ ಉಡುಗೊರೆಯಾಗಿ ನೀಡಿದ್ದ. ಮೂರು ಗಜ ಉದ್ದ ಎರಡು ಗಜ ಅಗಲ ಇದ್ದ ಸಿಂಹಾಸನವನ್ನು ಕರಿಮರದಲ್ಲಿ ನಿರ್ಮಿಸಲಾಗಿತ್ತು. ನಸುಹಸಿರು ಅಥವಾ ಆಕಾಶನೀಲಿ ಬಣ್ಣದ, ತಾಮ್ರ ಮತ್ತು ಅಲ್ಯುಮಿನಿಯಂ ಫಾಸ್ಫೆಟ್‌ಗಳ ಸಂಯೋಜನೆಯುಳ್ಳ ಅರೆ ಶಿಲೆಯಂತಹ ವೈಢೂರ್ಯವನ್ನು ಪ್ರಮುಖವಾಗಿ ಅಳವಡಿಸಲಾಗಿತ್ತು. ಮುಹಮ್ಮದ್‌ನ ನಂತರ ಆಡಳಿತ ನಡೆಸಿದ ಎಲ್ಲ ಬಹಮನಿ ಅರಸರು ಅದಕ್ಕೆ ಹೊಸದಾದ ಮಾಣಿಕ್ಯ, ವಜ್ರಗಳನ್ನು ಸೇರಿಸುತ್ತ ಹೋದರು. ಸಿಂಹಾಸನದ ಯಾವ ಭಾಗವೂ ಕಾಣದಂತೆ ಅಮೂಲ್ಯ ವಸ್ತುಗಳು ಆವರಿಸಿದ್ದವು.

ಈ ಸಿಂಹಾಸನವನ್ನು ಐನ್ ಎ ಬಾರಿ ಎ ಆಮ್ ಸಾರ್ವಜನಿಕ ಸಭಾಂಗಣದಲ್ಲಿ ಇರಿಸಲಾಗಿತ್ತು. ಸಿಂಹಾಸನವು ತನ್ನ ತಂದೆಯ ಸಮಕಾಲೀನರು ಕೂಡ ಅಸೂಯೆ ಪಡುವಂತಿತ್ತು.

## ಸೈನ್ಯದ ವ್ಯವಸ್ಥೆ

ಸೈನ್ಯದ ಮುಖ್ಯಸ್ಥನನ್ನು ಅಮಿರ್ ಉಲ್ ಉಮರಾ ಎಂದು ಕರೆಯಲಾಗುತ್ತಿತ್ತು. ಬಾರ್ಬರಾದರನ್ ಎಂಬ ಹೆಸರಿನ ಅಧಿಕಾರಿಗಳ ಸಮೂಹಕ್ಕೆ ಅಗತ್ಯ ಬಿದ್ದಾಗ ಸೇನೆಯನ್ನು ಒಂದೆಡೆ ಸೇರಿಸುವ ಕಾರ್ಯ ವಹಿಸಲಾಗಿತ್ತು. ಎರಡು ನೂರು ಸೈನಿಕರ ಅರಸನ ಖಾಸಗಿ ಬೆಂಗಾವಲು ಪಡೆಗೆ ಎಕ್ಕಾ ಜವಾನ್ ಅಥವಾ ಸಿಲಾಹ್ದರನ್ ಎಂಬ ಹೆಸರಿತ್ತು. ಇದರ ಜೊತೆಗೆ ನಾಲ್ಕು ಸಾವಿರ ಸಶಸ್ತ್ರ ಪಡೆಯಾದ ಖಸಾಖೇಲ್ ಅರಸನ ಬೆಂಗಾವಲಿಗೆ ಇರುತ್ತಿತ್ತು. ಪ್ರತಿದಿನ 50 ಸಿಲಾಹ್ದರ್ ಹಾಗೂ ಒಂದು ಸಾವಿರ ಖಸಾಖೇಲ್‌ರು ಅರಸನನ್ನು ಕಾವಲು ಕಾಯುತ್ತಿದ್ದರು.

ಸರಿ ಸುಮಾರು ಇದೇ ಕಾಲದಲ್ಲಿ ಹೊಸ ಯುದ್ಧ ಸಾಮಗ್ರಿಗಳು ದಖನ್ ಪ್ರದೇಶದ ರಣಾಂಗಣ ಪ್ರವೇಶಿಸಿದವು. 1365–66ರಲ್ಲಿ ಆದೋನಿಯ ಮುತ್ತಿಗೆ ಸಂದರ್ಭದಲ್ಲಿ ತೋಪುಗಳು, ತುಪಾಕಿಗಳು ಕಾಣಿಸಿಕೊಂಡವು. ತುರ್ಕಿಗಳಿಗೆ ತೋಪುಗಳ ನಿರ್ವಹಣೆಯ ಜವಾಬ್ದಾರಿ ವಹಿಸಲಾಗಿತ್ತು. ಸಫ್ದರ್‌ಖಾನ್ ಸಿಸ್ತಾನಿಯ ಪುತ್ರ ಮುಕ್ರಬ್‌ಖಾನ್ ನೇತೃತ್ವದಲ್ಲಿ ತೋಪುಗಳನ್ನು ಬಳಸಲಾಯಿತು. ಇದರ ನಂತರ ಬಹಮನಿ ಮತ್ತು ವಿಜಯನಗರದ ಸೈನ್ಯಗಳು ಮದ್ದು ಬಳಸಲು ಆರಂಭಿಸಿದವು. ಪ್ರವಾಸಿ ಅಬ್ದುಲ್ ರಜಾಕ್ ಉಲ್ಲೇಖಿಸಿದ ವಿಜಯನಗರದಲ್ಲಿ ಬಾಣಬಿರುಸುಗಳ ಪ್ರದರ್ಶನದ ಉಲ್ಲೇಖಕ್ಕಿಂತ ಎಂಟು ದಶಕ ಮೊದಲು. ಚೀನಾ ಪ್ರವಾಸಿ ಮಾ ಹೌನ್ ಬರೆದ 'ಬಂಗಾಲದಲ್ಲಿ ಅಗ್ನಿಯಾಸ್ತ್ರ ಬಳಸುತ್ತಿದ್ದರು' ಎಂಬ (1406) ವಿವರಣೆಗಿಂತ ನಾಲ್ಕು ದಶಕ ಮೊದಲು. ಮದ್ದುಗುಂಡಿನ ಬಳಕೆಯು ರಕ್ಷಣೆಯ ಕುರಿತಾದ ಚಿಂತನ ಕ್ರಮದಲ್ಲಿ ಕ್ರಾಂತಿಕಾರಕ ಬದಲಾವಣೆಗಳಿಗೆ ಕಾರಣವಾಯಿತು. ದಪ್ಪ ಮತ್ತು ಎತ್ತರವಾದ ಕೋಟೆಗೋಡೆಗಳ ನಿರ್ಮಾಣ ಆರಂಭವಾಯಿತು. ದ್ವಾರದ ಮೇಲ್ಭಾಗದಲ್ಲಿ ಮರೆಮಾಡುವ ಗೋಡೆಗಳು, ತುಪಾಕಿ ಇಡುವುದಕ್ಕಾಗಿ ರಂದ್ರಗಳು, ತೋಪುಗಳನ್ನು ಇರಿಸಲು ಬುರುಜುಗಳ ನಿರ್ಮಾಣ ಕ್ರಿಯೆ ಆರಂಭವಾದವು. ಅದಕ್ಕಾಗಿ ಬಹಮನಿ ಸಾಮ್ರಾಜ್ಯದಲ್ಲಿ ತುರ್ಕಿಗಳ ನೇಮಕ ವ್ಯಾಪಕ ಪ್ರಮಾಣದಲ್ಲಿ ನಡೆಯಿತು.

ಮೊದಲನೇ ಮುಹಮ್ಮದ್ ಅಧಿಕಾರಕ್ಕೆ ಬಂದಾಗ ಇದ್ದದ್ದು ಗಾತ್ರದಲ್ಲಿ ಅಷ್ಟೇನೂ ದೊಡ್ಡದಲ್ಲದ ಹಾಗೂ ಆಡಳಿತದ ವ್ಯವಸ್ಥೆ ರೂಪುಗೊಂಡಿರದ ಸಣ್ಣ ಸಾಮ್ರಾಜ್ಯ. ಆದರೆ, ಮುಹಮ್ಮದ್ ಕೊನೆಯುಸಿರು ಎಳೆಯುವಾಗ ಶಕ್ತಿಶಾಲಿಯಾದ ಮತ್ತು ಕೇಂದ್ರ ಹಾಗೂ ಪ್ರಾಂತೀಯ ಆಡಳಿತಗಳೆರಡನ್ನೂ

ತಹಬಂದಿಗೆ ತಂದಿದ್ದ. ಅಧಿಕಾರಕ್ಕೆ ಬರುವುದಕ್ಕೆ ಆಸೆ ಪಡುವಂತಹ ವಾತಾವರಣ ನಿರ್ಮಿಸಿದ್ದ ಅದರ ಫಲವಾಗಿಯೇ ನಂತರದ 22 ವರುಷಗಳ ಕಾಲ ಅಂದರೆ ಫಿರೋಜ್ ಅರಸನಾಗುವವರೆಗೆ ಗುಲ್ಬರ್ಗ ಸರಣಿ ಕೊಲೆಗಳು, ಪದಚ್ಯುತಿಗಳಿಗೆ ಸಾಕ್ಷಿಯಾಗಬೇಕಾಯಿತು. ಅದರಲ್ಲಿ 20 ವರ್ಷ ಅಧಿಕಾರ ನಡೆಸಿದ ಎರಡನೇ ಮುಹಮ್ಮದ್‌ನನ್ನು ಹೊರತು ಪಡಿಸಿದರೆ ಯಾರೊಬ್ಬರೂ ನೆಮ್ಮದಿಯಿಂದ ಸಿಂಹಾಸನದ ಮೇಲೆ ಕುಳಿತುಕೊಳ್ಳಲಿಲ್ಲ.

ಬಹಮನಿ ಅಥವಾ ದಖನಿ ಸಂಸ್ಕೃತಿ ನೆಲೆಗೊಳ್ಳುವುದಕ್ಕೆ ಮುಜಾಹಿದ್ ಅಧಿಕಾರ ಸ್ವೀಕರಿಸಿದಾಗಿನಿಂದ ಫಿರೋಜ್ ಅಧಿಕಾರ ಸ್ವೀಕರಿಸಿದ ನಡುವಿನ ಎರಡುವರೆ ದಶಕದಲ್ಲಿ ಹಲವರ ಪಾತ್ರ ಇದೆ. ತುಘಲಕ್ ಸಾಮ್ರಾಜ್ಯದ ವಿರುದ್ಧ ಬಂಡೆದ್ದು ಹೊಸ ಸಾಮ್ರಾಜ್ಯ ಹುಟ್ಟು ಹಾಕಿದ ಆರಂಭದಿಂದಲೇ ದಖನ್ ದೆಹಲಿಯ ಜೊತೆಗಿನ ಸಂಪರ್ಕ ಕಡಿತಗೊಂಡಿತ್ತು. ಅದಾದ ನಂತರ ಗುಲ್ಬರ್ಗ ಮತ್ತು ದೆಹಲಿಯ ನಡುವೆ ಗುಜರಾತ, ಖಾಂದೇಶ್ ಮತ್ತು ಮಾಳ್ವದಂತಹ ಸ್ವತಂತ್ರ ಮತ್ತು ಶಕ್ತಿಶಾಲಿ ಸಾಮ್ರಾಜ್ಯಗಳು ತಲೆ ಎತ್ತಿದ್ದವು. ಈ ಹಿನ್ನೆಲೆಯಲ್ಲಿ ಖಿಲ್ಜಿ ಮತ್ತು ತುಘಲಕ್ ಅರಸರ ಕಾಲಕ್ಕೆ ದೆಹಲಿಯ ಜೊತೆಗಿನ ದಖನ್‌ನ ಸಂಬಂಧ ನಿಧಾನವಾಗಿ ಮಸುಕಾಗುತ್ತ ಬಹುತೇಕ ಸಂಪೂರ್ಣವಾಗಿ ಕಡಿತಗೊಂಡಿತ್ತು. ತೆಲಂಗಾಣದ ಮತ್ತು ವಿಜಯನಗರದ ಅರಸರು ಫಿರೋಜ್ ತುಘಲಕ್‌ನ ಮೊದಲನೇ ಮುಹಮ್ಮದ್‌ನ ವಿರುದ್ಧ ಸಹಾಯ ಕೇಳುವ ಮೂಲಕ ದೆಹಲಿಯ ಪ್ರೇರಣೆಯನ್ನು ಜೀವಂತವಾಗಿ ಇಟ್ಟದ್ದು ಆಸಕ್ತಿ ಹುಟ್ಟಿಸಿದರೂ ನಿಷ್ಪ್ರಯೋಜಕವಾಗಿತ್ತು. ಮೊಗಲ್‌ರು ಅಧಿಕಾರಕ್ಕೆ ಬರುವ ವರೆಗೆ ದೆಹಲಿಯ 'ಯಜಮಾನಿಕೆ' ಪ್ರಭಾವ ಬೀರುವ ಸಾಧ್ಯತೆಗಳೇ ಇರಲಿಲ್ಲ.

ಉತ್ತರದ ಜೊತೆಗಿನ ಬಹುತೇಕ ಸಂಪರ್ಕ ಕಡಿತದಿಂದಾಗಿ ದಖನ್‌ನಲ್ಲಿ ಇದ್ದ ಕೆಲವೇ ಮುಸ್ಲಿಮ್‌ರು ನೈತಿಕ ಮತ್ತು ಭೌತಿಕ ಬೆಂಬಲಕ್ಕಾಗಿ ಕಡಲಾಚೆ ಮುಖ ಮಾಡಬೇಕಾಯಿತು. ಇದರಿಂದಾಗಿ ಪರ್ಷಿಯಾದ ಕರಾವಳಿ ಮತ್ತು ಕ್ಯಾಸ್ಪಿಯನ್ ಸಮುದ್ರದ ಉತ್ತರ ಕರಾವಳಿಯ ಜನ ದಖನ್‌ನಲ್ಲಿ ವಿಫುಲವಾಗಿ ಕಾಣಿಸಿಕೊಂಡರು. ಇರಾನ್, ಇರಾಕ್ ಮತ್ತು ಅರೇಬಿಯಾದ ಜೊತೆಗಿನ ನೇರ ಸಂಪರ್ಕದಿಂದ 'ಹೊಸಬರು' ವಲಸೆ ಬಂದರು. ಅವರನ್ನು 'ಅಫಾಕಿ'ಗಳು ಎಂದು ಗುರುತಿಸಲಾಗುತ್ತದೆ. ಬಹಮನಿ ಮತ್ತು ದಖನ್ ಸಂಸ್ಕೃತಿ ರೂಪುಗೊಳ್ಳುವಿಕೆಯಲ್ಲಿ ಇವರ ಪಾತ್ರ ತುಂಬಾ ಮಹತ್ವದ್ದು. ಸಮುದ್ರ ಮಾರ್ಗವಾಗಿ ಹೊಸದಾಗಿ ಭಾರತದ ಪಶ್ಚಿಮ ಕರಾವಳಿಗೆ ಬಂದ ಸಾಹಿತಿಗಳು, ಕವಿಗಳು, ಕಲಾವಿದರು, ಸಂತರು, ವ್ಯಾಪಾರಿಗಳು, ಸೈನಿಕರು ಮತ್ತು ಸಾಹಸಿಗಳು ದೆಹಲಿಯ ಮೂಲಕ

ಬಂದ ಸಂಸ್ಕೃತಿಯ ಬದಲಿಗೆ ದಖನ್‌ನಲ್ಲಿ ಹೊಸ ಸಂಸ್ಕೃತಿ, ಜೀವನ ವಿಧಾನ ಹುಟ್ಟಿಕೊಳ್ಳಲು ಕಾರಣರಾದರು. ಬಹಮನಿ ಸುಲ್ತಾನ್‌ರ ಆಹ್ವಾನದ ಮೇರೆಗೆ ಮತ್ತು ಸ್ವಇಚ್ಛೆಯಿಂದ ದಖನ್‌ಗೆ ಹೊಸದಾಗಿ ವಲಸೆ ಬಂದ 'ಹೊಸ ವಿದೇಶಿಗರು' ಪ್ರವರ್ಧಮಾನಕ್ಕೆ ಬಂದರು. ಅವರನ್ನು ಘರಿಬುದ್ದಿಯಾರ್ (ಕಾಸ್ಮೊಪಾಲಿಟನ್ಸ್) ಎಂದು ಗುರುತಿಸಲಾಗುತ್ತದೆ. ಖಿಲ್ಜಿ ಮತ್ತು ತುಘಲಕ್ ಕಾಲದಿಂದ ಉತ್ತರದಿಂದ ಬಂದು ನೆಲೆಸಿದವರು ಕಾಲಾನಂತರ ತಮ್ಮನ್ನು 'ದಖನಿಗಳು' ಎಂದು ಕರೆದುಕೊಳ್ಳಲು ಆರಂಭಿಸಿದರು. ಹೊಸಬರು ಮತ್ತು ದಖನಿಗಳ ನಡುವಿನ ಸಂಘರ್ಷ, ಭಿನ್ನಾಭಿಪ್ರಾಯ ಬಹಮನಿ ಸಾಮ್ರಾಜ್ಯದ ಆಡಳಿತದ ಅವಧಿಯುದ್ದಕ್ಕೂ ಮುಂದುವರೆಯಿತು.

ಇರಾನ್, ಇರಾಕ್ ಮತ್ತು ಮಧ್ಯ ಏಷ್ಯಾದ ಜನರ ವಲಸೆಯು ದಖನ್‌ನಲ್ಲಿ ಹೊಸ ಸಂಸ್ಕೃತಿಯ ಉದಯಕ್ಕೆ ಕಾರಣವಾಯಿತು. ನಾಗರಿಕ ಸೇವೆ ಮತ್ತು ಸೈನ್ಯದ ಆಡಳಿತದಲ್ಲಿ ಹೊಸದಾಗಿ ಬಂದವರು ಪ್ರಮುಖ ಸ್ಥಾನ ಪಡೆಯಲು ಆರಂಭಿಸಿದರು. ಮುಹಮ್ಮದ್ ಶಹಾನ ಆಳ್ವಿಕೆಯ ಕಾಲದಲ್ಲಿಯೇ ಆರಂಭವಾದ ಈ ಪರಿಪಾಠವು ನಂತರದ ದಿನಗಳಲ್ಲಿಯೂ ಬೆಳೆಯುತ್ತ ಹೋಯಿತು. ಆಗ ದಖನ್‌ನಲ್ಲಿ ಚಾಲ್ತಿಯಲ್ಲಿದ್ದ ಉಪನಾಮ (ಅಡ್ಡಹೆಸರು)ಗಳನ್ನು ಗಮನಿಸಿದರೆ ಪ್ರಭಾವ ಎಷ್ಟೊಂದು ವ್ಯಾಪಕವಾಗಿತ್ತು ಎಂದು ಗೊತ್ತಾಗುತ್ತದೆ ತಬ್ರಿಜಿ, ಕಿರ್ಮಾನಿ, ಸಿಸ್ತಾನಿ, ಮಜೇಂದ್ರಾನಿ ಹೀಗೆ ಪಟ್ಟಿ ಬೆಳೆಯುತ್ತದೆ. ಸಮುದ್ರದ ಮಾರ್ಗವಾಗಿ ಇರಾನ್ ಮತ್ತು ಇರಾಕ್‌ನಿಂದ ಬಂದವರನ್ನು ಮೊದಲಿಗೆ ಸಮಾನ ದೃಷ್ಟಿಕೋನದಿಂದ ನೋಡಲಾಗುತ್ತಿತ್ತು. ಪ್ರಧಾನಿ ಸೈಫುದ್ದೀನ್ ಘೋರಿಯು ಕರ್ಬಲಾದಲ್ಲಿ ಮಡಿದ ಸೈಯದ್‌ರು, ಮದಿನಾದ ನಜಾಫ್‌ರಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಸೂಚಿಸಿದ.

ಅರಬ್ಬರ, ಪರ್ಷಿಯನ್ನರ, ತುರ್ಕಿಗಳ ವಲಸೆಯು ದಖನ್‌ನ ಸಂಸ್ಕೃತಿಯ ಮೇಲೆ ಭಾರೀ ಪರಿಣಾಮ ಬೀರಿತು ಮಾತ್ರವಲ್ಲದೆ ಈ ಭಾಗದ ಇತಿಹಾಸದ ಚಲನೆಯ ದಿಕ್ಕನ್ನು ಬದಲಾಯಿಸಿತು. ಮೊದಲನೇ ಮುಹಮ್ಮದ್‌ನ ಕಾಲದಲ್ಲಿಯೇ ವಿದೇಶಿಯರ ಪ್ರಭಾವ ಹೆಚ್ಚುತ್ತಿರುವ ಅಂಶ ಗಮನಕ್ಕೆ ಬರತೊಡಗಿತ್ತು. ಸೈನ್ಯದ ಆಡಳಿತ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಈ ಪ್ರಭಾವ ಹೆಚ್ಚು ದಟ್ಟವಾಗಿತ್ತು. ಬಹಮನಿಯ ಮೊದಲ ಐವರು ಅರಸರಿಗೆ ಪ್ರಧಾನಿಯಾಗಿದ್ದ ಮಲ್ಲಿಕ್ ಸೈಫುದ್ದೀನ್ ಘೋರಿಯು ತಳೆದ ನಿಲುವು ಸಾಮ್ರಾಜ್ಯದ ಅಡಿಪಾಯದಲ್ಲಿ ಗಣನೀಯ ಪಾತ್ರ ನಿರ್ವಹಿಸಿತು.

## ಅಲಾವುದ್ದೀನ್ ಮುಜಾಹೀದ್
(21 ಮಾರ್ಚ್ 1375 ರಿಂದ 16 ಏಪ್ರಿಲ್ 1378)

ಮೊದಲನೇ ಮುಹಮ್ಮದ್‌ನ ನಂತರ ಅವನ ಪುತ್ರ ಅಲಾವುದ್ದೀನ್ ಮುಜಾಹೀದ್ ಅಧಿಕಾರಕ್ಕೆ ಬಂದ. ಸಿಂಹಾಸನದ ಮೇಲೆ ಕುಳಿತಾಗ ಅವನಿಗೆ ಕೇವಲ 19 ವರ್ಷ ವಯಸ್ಸು. ಮೂರು ವರ್ಷಕ್ಕಿಂತ ಕಡಿಮೆ ಅವಧಿಗೆ ಅರಸನಾಗಿದ್ದ ಅಲಾವುದ್ದೀನ್ ಮುಜಾಹೀದ್‌ನ ಆಡಳಿತವು ಅರಸನ ಹತ್ಯೆಯಲ್ಲಿ ಕೊನೆಗೊಂಡಿತು. ಮುಜಾಹೀದ್‌ನ ಸಿಂಹಾಸನ ಆರೋಹಣ ಸಮಾರಂಭಕ್ಕಾಗಿ ಸೂಫಿ ಸಂತ ಶೇಕ್ ಸಿರಾಜುದ್ದೀನ್ ಜುನೈದಿಯು ತನ್ನ ಪೇಟ ಹಾಗೂ ಪೋಷಾಕು ಕಳುಹಿಸಿದ್ದ. ವಿಜಯನಗರದ ವಿರುದ್ಧದ ಸಮರದಲ್ಲಿ ಭಾಗವಹಿಸುವುದಕ್ಕಾಗಿ ತೆರಳಿದ ಸಂದರ್ಭದಲ್ಲಿಯೂ ಅರಸನ ಗೆಲುವಿಗಾಗಿ ಗುರುವೂ ಆಗಿದ್ದ ಸಂತ ವಿಶೇಷ ಪ್ರಾರ್ಥನೆ ಸಲ್ಲಿಸಿದ್ದ. ಅರಸನಿಗೆ ಸಮರ ಕಲೆಗಳಲ್ಲಿ ಮಾತ್ರವಲ್ಲದೇ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತಹ ಕಲಿಕೆಯೂ ದೊರೆತಿತ್ತು. ತುರ್ಕಿ ಮತ್ತು ಫಾರಸಿ ಭಾಷೆಗಳಲ್ಲಿ ನಿಷ್ಣಾತನಾಗಿದ್ದ ಅರಸನು ಕತ್ತಿವರಸೆ ಮತ್ತು ಬಿಲ್ವಿದ್ಯೆ ಪ್ರದರ್ಶನದಲ್ಲಿಯೂ ಮುಂಚೂಣಿಯಲ್ಲಿದ್ದ.

ಯುವರಾಜನಾಗಿದ್ದ ದಿನಗಳಲ್ಲಿ ನಡೆದ ಕತ್ತಿವರಸೆಯ ಸಂದರ್ಭದಲ್ಲಿ ಎಲೆಯಡಿಕೆ ತಂದು ಕೊಡುವ ಕೆಲಸ ಮಾಡುತ್ತಿದ್ದ ಎದುರಾಳಿ ಮುಬಾರಕ್‌ಖಾನ್‌ನ ಕತ್ತಿನೆಲುಬು ಮುರಿದಿದ್ದ. ವಿಜಯನಗರದ ವಿರುದ್ಧ ಸಮರಕ್ಕೆ ಹೋದ ಸಂದರ್ಭದಲ್ಲಿ ಕೆರಳಿದ ಸಿಂಹವೊಂದು ಶಿಬಿರಗಳ ಮೇಲೆ ದಾಳಿ ಮಾಡಿದ ಸಂಗತಿ ತಿಳಿದಾಗ ಕೇವಲ ಏಳುಜನ ಸಹಚರರ ಜೊತೆ ಅದನ್ನು ಕೊಲ್ಲಲು ಮುಂದಾಗಿದ್ದ. ಸಿಂಹವು ಹತ್ತಿರದಿಂದ ದಾಳಿ ನಡೆಸುವವರೆಗೂ ಕಾದು ಕುಳಿತಿದ್ದ ಮುಜಾಹಿದ್‌ನು ಅದು ಸಮೀಪದ ಬಂದ ತಕ್ಷಣದ ಬಾಣದಿಂದ ಅದರ ಎದೆ ಸೀಳಿದ್ದ. ಬಾಣ ತಪ್ಪಿದ್ದರೂ ಕತ್ತಿಯಿಂದ ಅದರ ಎದೆ ಸೀಳುವಷ್ಟು ಸಮೀಪದಲ್ಲಿದ್ದ.

ತನ್ನ ತಾಯಿಯ ತಂದೆ (ಅಜ್ಜ) ಸೈಫುದ್ದೀನ್ ಘೋರಿಯನ್ನು ಪ್ರಧಾನಿಯಾಗಿ ಮುಂದುವರೆಸಿದ ಮುಜಾಹೀದ್‌ನು ಕೆಲವು ಬದಲಾವಣೆ ಮಾಡಿದ. ದೌಲತಾಬಾದ್ ಪ್ರಾಂತ್ಯದ ಆಡಳಿತಾಧಿಕಾರಿಯಾಗಿದ್ದ ಮುಸ್ನಾದ್ ಅಲಿ ಖಾನ್‌ನ ಬದಲಿಗೆ ಆಜಂ ಏ ಹುಮಾಯೂನ್‌ನನ್ನು ನಿಯಮಿಸಿದ. ಈ ಬದಲಾವಣೆಯು ಸಾಮ್ರಾಜ್ಯದ ಭವಿಷ್ಯದ ಮೇಲೆ ಪರಿಣಾಮ ಬೀರಿತು.

ಮುಜಾಹೀದ್ ಪಟ್ಟಕ್ಕೆ ಬಂದ ಸಂದರ್ಭದಲ್ಲಿ ವಿಜಯನಗರದಲ್ಲಿ ಬುಕ್ಕನ ಆಡಳಿತ ಇತ್ತು. 1377ರ ಜನವರಿ ಅಥವಾ ಫೆಬ್ರವರಿಯಲ್ಲಿ ಬುಕ್ಕನ ಮಗ

ಎರಡನೇ ಹರಿಹರ ಸಿಂಹಾಸನ ಆರೋಹಣ ಮಾಡಿದ. ಮುಜಾಹಿದ್‌ನು ಬುಕ್ಕನಿಗೆ ಪತ್ರ ಬರೆದು ರಾಯಚೂರು ಎಡದೊರೆ ನಾಡನ್ನು ಬಿಟ್ಟುಕೊಡುವಂತೆ ಸೂಚಿಸಿದ. ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವಿನ 'ರಾಯಚೂರು ದೋಆಬ್' ಪ್ರದೇಶವು ವಿಜಯನಗರ ಮತ್ತು ಬಹಮನಿ ಅರಸರ ನಡುವಿನ ಕಾದಾಟಕ್ಕೆ ಕಾರಣವಾಗಿತ್ತು. ತುಂಗಭದ್ರಾ ನದಿಯನ್ನು ಗಡಿಯಾಗಿ ಒಪ್ಪುವಂತೆ ಮುಜಾಹಿದ್ ಪತ್ರದಲ್ಲಿ ತಿಳಿಸಿದ್ದ. ಅದಕ್ಕೆ ಒಪ್ಪದ ಬುಕ್ಕ ರಾಯಚೂರು ಮತ್ತು ಮುದುಗಲ್ ಕೋಟೆಗಳೆರಡೂ ಮೊದಲಿನಿಂದ ವಿಜಯನಗರ ಅರಸರಿಗೆ ಸೇರಿದ್ದವು ಎಂದು ತಿಳಿಸಿ ಒಂದನೇ ಮುಹಮ್ಮದ್‌ನ ಕಾಲದಲ್ಲಿ ವಶಪಡಿಸಿಕೊಂಡಿದ್ದ ಆನೆಗಳನ್ನು ಮರಳಿಸುವಂತೆ ಮಾರೋಲೆ ಬರೆದ. ಆಗ ಮುಜಾಹಿದ್‌ನು ಸಾಮ್ರಾಜ್ಯದ ಸಂಪೂರ್ಣ ಉಸ್ತುವಾರಿಯನ್ನು ಸೈಫುದ್ದೀನ್ ಘೋರಿಗೆ ವಹಿಸಿ ಸೈನ್ಯದೊಂದಿಗೆ ದಕ್ಷಿಣದ ಕಡೆಗೆ ಪ್ರಯಾಣ ಬೆಳೆಸಿದ. ಬೆರಾರ್, ಬೀದರ್ ಮತ್ತು ದೌಲತಾಬಾದ್‌ನಿಂದ ಬಂದ 500 ಆನೆಗಳ ಪಡೆ ಜೊತೆಗೆ ತುಂಗಭದ್ರಾ ನದಿಯನ್ನು ದಾಟಿದ. ವಿಜಯನಗರವನ್ನು ಸುತ್ತುವರೆದು ಮುತ್ತಿಗೆ ಹಾಕಿ ಅದಕ್ಕೆ ಯಾವುದೇ ರೀತಿಯ ನೆರವು ದೊರೆಯದಂತೆ ಎಲ್ಲ ಸಂಪರ್ಕಗಳನ್ನು ಕಡಿದು ಹಾಕುವ ಮಹತ್ವಾಕಾಂಕ್ಷೆಯನ್ನು ಮುಜಾಹಿದ್ ಹೊಂದಿದ್ದ.

ಆದೋನಿ ತಲುಪುತ್ತಿದ್ದಂತೆಯೇ ಸಫ್ದರ್‌ಖಾನ್ ಸಿಸ್ತಾನಿಗೆ ವಿಜಯನಗರ ಮುತ್ತಿಗೆ ಹಾಕುವಂತೆ ಸೂಚನೆ ಕಳುಹಿಸಿದ. ಹಾಗೆಯೇ ಅಮೀರ್‌ಉಲ್ ಉಮ್ರಾ ಬಹದ್ದೂರ್‌ಖಾನ್‌ನಿಗೆ ವಿಜಯನಗರದ ಕಡೆಗೆ ಸೈನ್ಯದ ಸಮೇತ ಹೋಗುವಂತೆ ತಿಳಿಸಿ ತಾನು ಕೂಡ ಗಂಗಾವತಿಯ ಕಡೆಗೆ ಪ್ರಯಾಣ ಬೆಳೆಸಿದ. ಬುಕ್ಕನು ಗೆರಿಲ್ಲಾ ಮಾದರಿಯ ಉತ್ತರ ನೀಡಲು ಉದ್ದೇಶಿಸಿದ ಬುಕ್ಕನು ರಾಜಧಾನಿಯ ಉಸ್ತುವಾರಿಯನ್ನು ಗಣ್ಯರು, ಪ್ರಮುಖರಿಗೆ ವಹಿಸಿ ತನ್ನ ಸೈನ್ಯದೊಂದಿಗೆ ಕಾಡಿನಲ್ಲಿ ಅಡಗಿ ಕುಳಿತ. ಮುಜಾಹಿದ್ ವಿಜಯನಗರದ ಹೊರವಲಯ ತಲುಪಿ ಬೃಹತ್ ಪ್ರಮಾಣದ ಕೋಟೆ ಗೋಡೆಗಳನ್ನು ನೋಡಿದ. ಹಾಗೆಯೇ ಅರಸ ರಾಜಧಾನಿಯಲ್ಲಿ ಇಲ್ಲದ ಸಂಗತಿ ತಿಳಿದು ರಾಮೇಶ್ವರದ ಕಡೆಗೆ ಪ್ರಯಾಣ ಬೆಳೆಸಿದ. ಈ ಮಧ್ಯೆ ಬುಕ್ಕನು ಅನಾರೋಗ್ಯದಿಂದಾಗಿ ರಾಜಧಾನಿಗೆ ಮರಳಿದ. ಆರು ತಿಂಗಳ ಕಾಲ ಗೊತ್ತುಗುರಿಯಿಲ್ಲದಂತೆ ಅಲೆದ ಮುಜಾಹಿದ್‌ನು ನಂತರ ವಿಜಯನಗರದ ಹೊರವಲಯಕ್ಕೆ ಬಂದು ಮುತ್ತಿಗೆ ಮುಂದುವರೆಸಿದ. ಎಡಗಡೆ ಆಜಂ ಹುಮಾಯೂನ್‌ನ ಸೈನ್ಯ ಮತ್ತು ಬಲಗಡೆ ಬಹದ್ದೂರ್‌ಖಾನ್‌ನ ಸೈನ್ಯ ಇತ್ತು. ಸಫ್ದರ್‌ಖಾನ್ ಸಿಸ್ತಾನಿಯ ಮಗ ಮುಕ್ರರಬ್‌ಖಾನ್ ಸಿಡಿಮದ್ದಿನ ಪಡೆಯ ನೇತೃತ್ವ ವಹಿಸಿದ್ದ. ಆರು ಲಕ್ಷ ಪದಾತಿದಳ ಮತ್ತು ಎಂಟು ಸಾವಿರ ಕುದುರೆದಳದೊಂದಿಗೆ

ವಿಜಯನಗರದ ಅರಸ ಮರುದಾಳಿ ನಡೆಸಿದ. ಎರಡೂ ಕಡೆಗಳಲ್ಲಿ ಅಪಾರ ಪ್ರಮಾಣದ ಸೈನ್ಯ ನಾಶವಾಯಿತು. ಮುಕ್ರರಬ್‌ಖಾನ್ ಅಸುನೀಗಿದ.

ವಿಜಯನಗರ ವಶಪಡಿಸಿಕೊಳ್ಳುವುದು ಸುಲಭದ ಮಾತಲ್ಲ ಎಂದು ಅರಿತ ಮುಜಾಹೀದ್ ತನ್ನ ಸೈನ್ಯದೊಂದಿಗೆ ಆದೋನಿಯತ್ತ ಹಿಂದೆ ಸರಿದ. ವಿಜಯನಗರದ ಜೊತೆಗೆ ರಾಜಿ ಒಪ್ಪಂದ ಮಾಡಿಕೊಳ್ಳಬೇಕಾಯಿತು. ತನ್ನ ಆಪ್ತರ ಜೊತೆ ತುಂಗಭದ್ರಾ ನದಿ ದಾಟಿ ಮುದುಗಲ್‌ನತ್ತ ಬಂದ ಮುಜಾಹೀದ್ ನಾಲ್ಕು ನೂರು ಜನ ನಂಬಿಗಸ್ತ ಖಾಸಾ ಸಹಚರರ ಜೊತೆಗೆ ಮೃಗಯಾವಿಹಾರದಲ್ಲಿ ತೊಡಗಿದ. ಅವನ ಸಹೋದರ ಸಂಬಂಧಿ ದಾವುದ್‌ಖಾನ್ ಕೂಡ ಜೊತೆಗಿದ್ದ. ಬೆರಾರ್, ಬೀದರ್ ಮತ್ತು ದೌಲತಾಬಾದ್‌ನ ಸೈನ್ಯಕ್ಕೆ ತೆರಳುವಂತೆ ಸೂಚಿಸಿ ಕೃಷ್ಣಾ ನದಿ ದಾಟಿ ಮೀನು ಬೇಟೆ ಆರಂಭಿಸಿದ. ಮುಜಾಹೀದ್ ಯುವರಾಜನಾಗಿದ್ದಾಗ ಕತ್ತಿನ ಎಲುಬು ಮುರಿದುಕೊಂಡಿದ್ದ ಮುಬಾರಕ್‌ಖಾನ್‌ನ ಮಗ ಮಾಸೂದ್‌ಖಾನ್ ಹಾಗೂ ದಾವುದ್‌ಖಾನ್ ಇಬ್ಬರೂ ಪಿತೂರಿ ನಡೆಸಿದರು. ಮುಜಾಹಿದ್ ಶಿಬಿರದಲ್ಲಿ ಮಲಗಿದ್ದ ಸಂದರ್ಭದಲ್ಲಿ ಇರಿದುಕೊಲ್ಲಲಾಯಿತು. ಇತಿಹಾಸಕಾರ ನಿಜಾಮುದ್ದೀನ್ ಅಹ್ಮದ್ ಬೇರೆಯದೇ ವಿವರ ನೀಡುತ್ತಾನೆ. ತದಕಿರುತ್ ಉಲ್ ಮುಲ್ಕ್ ಗ್ರಂಥದ ಪ್ರಕಾರ ಮುಜಾಹೀದ್‌ನು ಗುಲ್ಬರ್ಗ ನಗರದ ಹೊರವಲಯಕ್ಕೆ ಬಂದು ತಲುಪಿದ. ರಾಜಧಾನಿ ಪ್ರವೇಶಿಸುವ ಶುಭ ಮುಹೂರ್ತಕ್ಕಾಗಿ ಕಾದು ಶಿಬಿರದಲ್ಲಿ ತಂಗಿದ್ದ. ಆಗ ಅಬಿಸೀನಿಯಾದ ಗುಲಾಮ್‌ನೊಬ್ಬನ ಜೊತೆಗೆ ಕಿತ್ತಾಟ ನಡೆಯಿತು. ಸಿಂಹಾಸನದ ಬಳಿ ರುಂಡವಿಲ್ಲದ ಮುಜಾಹಿದ್‌ನ ಮುಂಡ ಬಿದ್ದಿತ್ತು ಎಂದು ನಿಜಾಮುದ್ದೀನ್ ದಾಖಲಿಸುತ್ತಾನೆ.

## ಒಂದನೇ ದಾವುದ್

(16 ಏಪ್ರಿಲ್ 1378 ರಿಂದ 21 ಮೇ 1378)

ಮುಜಾಹೀದ್‌ನ ಹತ್ಯೆಯ ನಂತರ ದಾವುದ್ ತನ್ನನ್ನು ಅರಸನೆಂದು ಘೋಷಿಸಿಕೊಂಡ. ಅರಸು ಬದಲಾದ ಸುದ್ದಿ ಕೇಳಿದ ಸಫ್ದರ್‌ಖಾನ್ ಸಿಸ್ತಾನಿ ಮತ್ತು ಆಜಂ ಎ ಹುಮಾಯೂನ್ ಗೌರವ ಸಲ್ಲಿಸಲು ರಾಜಧಾನಿಗೆ ಬರದೇ ಪ್ರಯಾಣ ಮುಂದುವರೆಸಿದರು. ರಾಜಧಾನಿಯಲ್ಲೆಲ್ಲ ಗೊಂದಲದ ವಾತಾವರಣ. ಪಿತೂರಿ, ಒಳಜಗಳಗಳಿಂದ ಗುಲ್ಬರ್ಗದ ಸ್ಥಿತಿ ಹದಗೆಟ್ಟು ಹೋಗಿತ್ತು. ಮೃತ ದೊರೆ ಮುಜಾಹೀದ್‌ನ ಸಹೋದರಿ ರೂಹ್ ಪರ್ವಾರ್ ಆಘಾಳ ನೇತೃತ್ವದ

ಗುಂಪು ಒಂದೆಡೆ ಇದ್ದರೆ ಹೊಸದಾಗಿ ಅಧಿಕಾರಕ್ಕೆ ಬಂದ ಅರಸನ ಪರವಾಗಿ ಇರುವವರ ಗುಂಪು ಮತ್ತೊಂದೆಡೆ ಇತ್ತು. ಎರಡೂ ಗುಂಪಿನವರೂ ಪರಸ್ಪರ ಕತ್ತಿ ಮಸೆಯುತ್ತಿದ್ದರು. ಪ್ರಧಾನಿ ಸೈಫುದ್ದೀನ್ ಘೋರಿಯು ಸಾಮ್ರಾಜ್ಯದ ಹಿತದ ದೃಷ್ಟಿಯಿಂದ ಹೊಸದಾಗಿ ಅರಸನಾದ ದಾವುದ್‌ನನ್ನೇ ಬೆಂಬಲಿಸಿದ. ಈ ಬೆಳವಣಿಗೆಯ ನಡುವೆಯೂ ಆಘಾ ಮಾತ್ರ ಆಪ್ತರಿಗೆ ಉಡುಗೋರೆ ನೀಡುತ್ತ ಪ್ರಾಬಲ್ಯ ಉಳಿಸಿಕೊಂಡಳು. ತನ್ನ ಸಹೋದರ ಹತ್ಯೆಗೆ ಸೇಡು ತೀರಿಸಿಕೊಳ್ಳುವ ಅವಕಾಶಕ್ಕಾಗಿ ಕಾದು ಕುಳಿತಳು. ದಾವುದ್‌ನ ಮೇಲೆ ಮುಜಾಹೀದ್‌ನ ಸಾವಿನ ಸೇಡು ತೀರಿಸಿಕೊಳ್ಳಲು ಹೆಚ್ಚು ಹೊತ್ತು ಹಿಡಿಯಲಿಲ್ಲ. ಬಕಾ ಎಂಬ ಗುಲಾಮನಿಗೆ ಹಣ ನೀಡಿ ದಾವುದ್‌ನ ಹತ್ಯೆ ನಡೆಸಲು ಸಂಚು ರೂಪಿಸಲಾಯಿತು. ಗುಲ್ಬರ್ಗದ ಬೃಹತ್ ಮಸೀದಿಯಲ್ಲಿ ದಾವುದ್ ಶುಕ್ರವಾರದ ಪ್ರಾರ್ಥನೆ ಸಲ್ಲಿಸುತ್ತಿರುವಾಗ ಹಿಂದಿನಿಂದ ಬಂದ ಬಕಾ ಇರಿದು ತೀವ್ರವಾಗಿ ಗಾಯಗೊಳಿಸಿದ. ಮಾರಣಾಂತಿಕವಾಗಿ ಗಾಯಗೊಂಡಿದ್ದ ದಾವುದ್‌ನನ್ನು ಅರಮನೆಗೆ ಸಾಗಿಸಲಾಯಿತು. ಇರಿತದ ಸುದ್ದಿ ಹರಡುತ್ತಿದ್ದಂತೆಯೇ ಎರಡೂ ಗುಂಪುಗಳ ನಡುವಿನ ಕಿತ್ತಾಟ ಆರಂಭವಾಯಿತು. ಆಘಾಳ ತಂಡದ ಕೈ ಮೇಲಾಗಿದ್ದನ್ನು ಕೇಳಿಸಿಕೊಂಡ ದಾವುದ್ ಹತಾಶನಾಗಿ ಕೊನೆಯುಸಿರೆಳೆದ.

## ಎರಡನೇ ಮುಹಮ್ಮದ್

(21 ಮೇ 1378ರಿಂದ 20 ಏಪ್ರಿಲ್ 1397)

ರೂಹ್ ಪರ್ವಾರ್ ಆಘಾ ತಾನು ಅಂದುಕೊಂಡದ್ದನ್ನು ಸಾಧಿಸುವಲ್ಲಿ ಯಶಸ್ವಿಯಾದಳು. ತನ್ನ ಸಹೋದರನ ಹತ್ಯೆಯ ಸೇಡು ತೀರಿಸಿಕೊಂಡಿದ್ದಳು. ದಾವುದ್‌ನ ನಂತರ ಅರಸೊತ್ತಿಗೆ ಯಾರ ಪಾಲಾಗಬೇಕು? ಎಂಬ ಪ್ರಶ್ನೆ ಉದ್ಭವಿಸಿತ್ತು. ದಾವುದ್‌ನ ಒಂಬತ್ತು ವರ್ಷದ ಮಗ ಸಂಜಾರ್‌ನ್ನು ಸಿಂಹಾಸನದ ಮೇಲೆ ಕೂಡಿಸಲು ಖಾನ್ ಮುಹಮ್ಮದ್ ಬಯಸುತ್ತಿದ್ದ. ಆದರೆ, ಆಘಾಳು ಯಾರೂ ಅರಮನೆಯೊಳಕ್ಕೆ ಪ್ರವೇಶಿಸುವುದು ಸಾಧ್ಯವಾಗದಂತೆ ಬಾಗಿಲುಗಳಿಗೆ ಬೀಗ ಹಾಕಿಸಿದ್ದಳು. ಪಿತೂರಿ ಮಾಡಿ ಅರಸನನ್ನು ಕೊಂದು ಅಧಿಕಾರಕ್ಕೆ ಬಂದವನ ಪುತ್ರನಿಗೆ ಸಿಂಹಾಸನ ಸಿಗಬಾರದು ಎಂಬುದು ಆಘಾಳ ಅನಿಸಿಕೆಯಾಗಿತ್ತು. ಮುಹಮ್ಮದ್ ಖಾನ್‌ನು ತಕ್ಷಣ ಪ್ರಧಾನಿಯಾಗಿದ್ದ ಸೈಫುದ್ದೀನ್ ಘೋರಿಯ ಮನೆಗೆ ತೆರಳಿದನು. ಆಗ, ನೇತೃತ್ವ ವಹಿಸಲು ಘೋರಿಯು ಒಪ್ಪಿಕೊಂಡನಾದರೂ ಸಂಜಾರ್ ಅರಮನೆಯಲ್ಲಿಯೇ ಇರುವವರೆಗೆ ಏನನ್ನೂ ಮಾಡಲು ಆಗುವುದಿಲ್ಲ

ಎಂದು ಕೈ ಚೆಲ್ಲಿ ಕುಳಿತನು. ಈ ಮಧ್ಯೆ ರೂಹ್ ಪರ್ವಾರ್ ಆಘಾಳು ಸಂಜಾರ್‌ನ ಕಣ್ಣು ಕೀಳಿಸಿದಳು. ಬಹಮನ್ ಶಹಾನ ಮೊಮ್ಮಗ, ದಾವುದ್‌ನ ಸಹೋದರ ಎರಡನೇ ಮುಹಮ್ಮದ್‌ನನ್ನು ಸಿಂಹಾಸನದ ಮೇಲೆ ಕೂಡಿಸಲಾಯಿತು. ಸಂಜಾರ್‌ನ ಕಣ್ಣು ಕೀಳಿಸಿದ ಘಟನೆಯು ದಖನ್‌ನ ಇತಿಹಾಸದಲ್ಲಿಯೇ ಮೊದಲನೆಯದಾಗಿತ್ತು. ನಂತರ ಎರಡನೇ ಮುಹಮ್ಮದ್ ಇಬ್ಬರು ಪುತ್ರರ ಕಣ್ಣು ಕೀಳಿಸುವ ಘಟನೆಗೂ ಪ್ರೇರಣೆಯಾಯಿತು.

ಎರಡನೇ ಮುಹಮ್ಮದ್‌ನು ಸಾಕಷ್ಟು ಕಾಲಾವಧಿಗೆ ಅಂದರೆ 19 ವರ್ಷಗಳ ಕಾಲ ಅರಸನಾಗಿದ್ದನು. ಬಹಮನಿ ಇತಿಹಾಸದಲ್ಲಿಯೇ ಶಾಂತಿ ನೆಮ್ಮದಿಯಿಂದ ಕಾಲ ಕಳೆದ ಅದಾಗಿತ್ತು. ಸಾಂಸ್ಕೃತಿಕ, ಸಾಹಿತ್ಯಕ ಸಂಗತಿಗಳಲ್ಲಿ ಆಸಕ್ತನಾಗಿದ್ದ ದೊರೆಯು ಶಾಂತಿಪ್ರಿಯನಾಗಿದ್ದ. ಪಟ್ಟಕ್ಕೆ ಬಂದ ತಕ್ಷಣ ಮುಜಾಹೀದ್‌ನ ಸಾವಿಗೆ ಕಾರಣನಾಗಿದ್ದ ದಾವುದ್‌ನ ಸಹಚರ ಖಾನ್ ಮುಹಮ್ಮದ್‌ನನ್ನು ಜೈಲಿಗೆ ಕಳುಹಿಸಿದ. ಸೈಫುದ್ದೀನ್ ಘೋರಿಯನ್ನು ಮತ್ತೆ ಪ್ರಧಾನಿಯನ್ನಾಗಿ ಮಾಡಿದ.

ಸ್ವತಃ ವಿದ್ವಾಂಸ, ಕವಿಯಾಗಿದ್ದ ಎರಡನೇ ಮುಹಮ್ಮದ್‌ನ ಕಾಲದಲ್ಲಿ ಅರಬ್ಬಿ ಮತ್ತು ಪರ್ಷಿಯಾದ ವಿದ್ವಾಂಸರು, ಕವಿಗಳು ಆಗಮಿಸಿ ದಖನ್ ಪ್ರದೇಶದ ಸಾಂಸ್ಕೃತಿಕ ಮಹತ್ವ ಹೆಚ್ಚುವಂತೆ ಮಾಡಿದರು. ಕವಿಗಳಿಗೆ ಅವರವರ ಯೋಗ್ಯತಾನುಸಾರ ಬೃಹತ್ ಪ್ರಮಾಣದ ಪ್ರೋತ್ಸಾಹ ದೊರೆಯಿತು. ಅರಬ್ಬಿಯ ಪ್ರಖ್ಯಾತ ವಿದ್ವಾಂಸ ಮುಲ್ಲಾ ಸೈಫುದ್ದೀನ್ ತಫ್ತಜಾನಿಯ ಶಿಷ್ಯ ಮೀರ್ ಫಜ್ಲುಲ್ಲಾ ಇಂಜುನ ಮೂಲಕ ಶಿರಾಜ್‌ನ ಕವಿ ಖ್ವಾಜಾ ಶಂಸುದ್ದೀನ್ ಹಫೀಜ್‌ನನ್ನು ಆಹ್ವಾನಿಸಲಾಯಿತು. ಪ್ರಯಾಣದ ವೆಚ್ಚಕ್ಕಾಗಿ ದಖನ್‌ನಿಂದ ಅಪಾರ ಪ್ರಮಾಣದ ಹಣ ಕಳುಹಿಸಲಾಯಿತು. ಸುಲ್ತಾನ್ ಕಳುಹಿಸಿದ ಹಣದಿಂದ ತನ್ನ ಹಳೆಯ ಸಾಲವನ್ನೆಲ್ಲ ತೀರಿಸಿದ ಹಫೀಜ್ ಪ್ರಯಾಣವೆಚ್ಚಕ್ಕಾಗಿ ಸ್ವಲ್ಪ ಹಣ ಉಳಿಸಿಕೊಂಡು ಬಾಕಿ ಹಣವನ್ನು ತನ್ನ ಬಡಬಂಧುಗಳಿಗೂ, ಮಿತ್ರರಿಗೂ ಹಂಚಿದ. ತನಗೆ ಯಾವುದೇ ರೀತಿಯ ಸಂಬಂಧ ಇಲ್ಲದವರಿಗೂ ಹಣ ಹಂಚಿದ ಹಫೀಜ್‌ನಿಗೆ ಮಾರ್ಗಮಧ್ಯದಲ್ಲಿ ಭಾರತದ ಜೊತೆ ವ್ಯಾಪಾರ ವಹಿವಾಟು ಇಟ್ಟುಕೊಂಡಿದ್ದ ಇಬ್ಬರ ಪರಿಚಯವಾಯಿತು.

ಖ್ವಾಜ ಜೈನುದ್ದೀನ್ ಹಮದಾನಿ ಮತ್ತು ಖ್ವಾಜಾ ಮುಹಮ್ಮದ್ ಗರ್‍ಜುನಿ ಒರ್ಮುಜ್‌ವರೆಗೆ ಕರೆತಂದರು. ಅಲ್ಲಿ ಬಹಮನಿ ಸಾಮ್ರಾಜ್ಯದ ದಾಬೋಲ್ ಬಂದರಿಗೆ ಕರೆದೊಯ್ಯುವುದಕ್ಕಾಗಿ ವಿಶೇಷ ದೋಣಿ ಸಿದ್ಧವಾಗಿತ್ತು. ದೋಣಿಯಲ್ಲಿ ಹಫೀಜ್ ಕಾಲಿಡುತ್ತಿದ್ದಂತೆಯೇ ಆರಂಭವಾದ ಬಿರುಗಾಳಿಯಿಂದಾಗಿ ದೋಣಿ

ಹೊಯ್ದಾಡತೊಡಗಿತು. ವಾತಾವರಣ ಸುಧಾರಿಸುವ ಲಕ್ಷಣ ಕಾಣಿಸದೆ ಹಫೀಜ್ ಭಾರತಕ್ಕೆ ಬರುವ ವಿಚಾರವನ್ನೇ ಕೈ ಬಿಡಬೇಕಾಯಿತು. ಸುಂದರವಾದ ಗಜಲ್ ರಚಿಸಿ ಅದನ್ನು ಉಡುಗೊರೆಯಾಗಿ ಅರಸನಿಗೆ ನೀಡುವಂತೆ ತಿಳಿಸಿ ಇಂಜುವಿಗೆ ಕೊಟ್ಟ. ಈ ಕಥೆ ಕೇಳಿದ ಅರಸ ಎರಡನೇ ಮುಹಮ್ಮದ್ ಶಹಾನು ಖ್ವಾಜಾನಿಗೆ ತಲುಪಿಸುವಂತೆ ತಿಳಿಸಿ ಸಾವಿರ ಚಿನ್ನದ ನಾಣ್ಯಗಳನ್ನು ಮುಲ್ಲಾ ಖಾಸಿಂ ಮಷಾದಿಯ ಮೂಲಕ ಶಿರಾಜ್‌ಗೆ ಕಳುಹಿಸಿದ. ಸ್ವತಃ ಕವಿಯಾಗಿದ್ದ ಮುಹಮ್ಮದ್‌ನ ಕವಿತೆಯ ಸಾಲುಗಳನ್ನು ಫೆರಿಸ್ತಾ ಉಲ್ಲೇಖಿಸಿದ್ದಾನೆ. ಅವುಗಳಲ್ಲಿನ ಸೊಗಸಾದ ಮತ್ತು ಗಮನಾರ್ಹ ಶೈಲಿಯು ಗಮನ ಸೆಳೆಯದೇ ಇರದು. ಅರೇಬಿಕ್ ಮತ್ತು ಪರ್ಷಿಯನ್ ಭಾಷೆಯನ್ನು ಸೊಗಸಾಗಿ ಮಾತನಾಡುತ್ತಿದ್ದ ಅರಸನು ಸಾಮ್ರಾಜ್ಯದ ವಿವಿಧ ಕಡೆಗಳಲ್ಲಿ ಅಂದರೆ, ಗುಲ್ಬರ್ಗ, ಬೀದರ್, ಎಲಿಚಿಪುರ್, ದೌಲತಾಬಾದ್, ಜುನ್ನಾರ್ ಚೌಲ್, ದಾಬೂಲ್ ಹಾಗೂ ಇತರ ನಗರ, ಪಟ್ಟಣಗಳಲ್ಲಿ ಮಕ್ಕಳಿಗೆ ಕಲಿಸಲು ಶಿಕ್ಷಕರನ್ನು ನಿಯಮಿಸಿದ. ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ವಿದ್ಯಾರ್ಥಿ ವೇತನ ನೀಡಲು ಆರಂಭಿಸಿದ.

ಮುಹಮ್ಮದ್ ತನ್ನ ವಾರಸುದಾರಿಕೆಯ ಸಮಸ್ಯೆ ಇಲ್ಲದಂತೆ ಮಾಡಲು ಪ್ರಯತ್ನಿಸಿದ. ಅರಮನೆಯಲ್ಲಿ ಕೆಟ್ಟ ಭಾವನೆ ಮೂಡದಂತೆ ನೋಡಿಕೊಂಡ. ಬಹಳಷ್ಟು ಕಾಲ ಅರಸನಿಗೆ ಗಂಡು ಸಂತಾನ ಇರಲಿಲ್ಲ. ಆದ್ದರಿಂದ ತನ್ನ ಚಿಕ್ಕಪ್ಪ ಬಹಮನ್‌ಶಹಾನ ಇಬ್ಬರು ಪುತ್ರರಾದ ಫಿರೋಜ್‌ಖಾನ್ ಮತ್ತು ಅಹ್ಮದ್‌ಖಾನ್‌ರನ್ನು ದತ್ತು ತೆಗೆದುಕೊಂಡು ಸ್ವಂತ ಮಕ್ಕಳಂತೆ ಬೆಳೆಸಿದ. ಅವರಿಗೆ ಸಾಹಿತ್ಯ, ಸಂಸ್ಕೃತಿ, ಪೋಲೊ ಮತ್ತು ಬಿಲ್ವಿದ್ಯೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯುವಂತೆ ನೋಡಿಕೊಂಡ. ಉನ್ನತ ಸ್ಥಾನಕ್ಕೆ ಹೋಗುವುದಕ್ಕೆ ಅನುಕೂಲ ಆಗುವಂತೆ ಅವರನ್ನು ರೂಪಿಸಿದ. ಅದಕ್ಕಾಗಿ ಮೀರ್ ಫಜ್ಲುಲ್ ಇಂಜುವನ್ನು ತರಬೇತುದಾರನನ್ನಾಗಿ ನಿಯಮಿಸಿದ. ಫಿರೋಜ್‌ನನ್ನು ತನ್ನ ವಾರಸುದಾರ ಎಂದು ಕರೆಯುತ್ತಿದ್ದ ಮತ್ತು ಸಿಂಸಾನದ ಮೇಲೆ ತನ್ನ ಪಕ್ಕದಲ್ಲಿಯೇ ಕುಳ್ಳಿರಿಸಿಕೊಳ್ಳುತ್ತಿದ್ದ. ಹಾಗೆಯೇ ಫಿರೋಜ್ ಹಾಗೂ ಅಹ್ಮದ್‌ನಿಗೆ ತನ್ನ ಇಬ್ಬರು ಪುತ್ರಿಯರನ್ನು ಕೊಟ್ಟು ಮದುವೆ ಮಾಡಿದ.

ಆದರೆ, ಅರಸನಿಗೆ ಪುತ್ರ ಸಂತಾನ ಆಗಿ ಅವನಿಗೆ ಘಿಯಾಸುದ್ದೀನ್ ಎಂದು ನಾಮಕರಣ ಮಾಡಲಾಯಿತು. ಎಲ್ಲ ಸಂಗತಿಗಳು ಬದಲಾದವು. ಅರಸನಿಗೆ ತನ್ನ ಸ್ವಂತ ಪುತ್ರನನ್ನೇ ಸಿಂಹಾಸನದ ಮೇಲೆ ಕೂಡಿಸಬೇಕು ಎಂಬ ಆಸೆ ಚಿಗುರಿತು. ಮರಣಶಯ್ಯೆಯಲ್ಲಿದ್ದಾಗ ಘಿಯಾಸುದ್ದೀನ್‌ನೇ ಮುಂದಿನ ಅರಸ ಆಗಬೇಕು, ಫಿರೋಜ್ ಹಾಗೂ ಅಹ್ಮದ್ ಅವನಿಗೆ ಗೌರವ ಸಲ್ಲಿಸಬೇಕು ಎಂದು ಸೂಚಿಸಿದ್ದ.

ವಿಷಮಶೀತ ಜ್ವರದಿಂದ ಬಳಲುತ್ತಿದ್ದ ದೊರೆ ಎರಡನೇ ಅಹ್ಮದ್ ಅಸು ನೀಗಿದ. ಅದಾದ ಮರುದಿನವೇ ನಾಲ್ವರು ಅರಸರಿಗೆ ಪ್ರಧಾನಿಯಾಗಿದ್ದ ಸೈಫುದ್ದೀನ್ ಘೋರಿಯೂ ಕೊನೆಯುಸಿರೆಳೆದ.

## ಘಿಯಾಸುದ್ದೀನ್ ತಹಮ್ತನ್
### (20 ಏಪ್ರಿಲ್ 1397 ರಿಂದ 14 ಜೂನ್ 1397)

ಎರಡನೇ ಮುಹಮ್ಮದ್‌ನ ಹಿರಿಯ ಪುತ್ರ ಘಿಯಾಸುದ್ದೀನ್ ಸಿಂಹಾಸನದ ಮೇಲೆ ಕುಳಿತುಕೊಂಡ. ಹಿರಿಯ ಅರಸನ ಆಸೆಯಂತೆ ಫಿರೋಜ್ ಮತ್ತು ಅಹ್ಮದ್ ಇಬ್ಬರೂ ನೂತನ ಅರಸನಿಗೆ ಗೌರವ ಸಲ್ಲಿಸಿದರು. ಎಲ್ಲರೂ ದೊರೆಗೆ ಗೌರವ ಸಲ್ಲಿಸುವಂತೆ ನೋಡಿಕೊಂಡರು. ಉತ್ತಮ ರೀತಿಯಿಂದ ಆಡಳಿತ ನಡೆಸಲು ಆರಂಭಿಸಿದ. ಈ ಮಧ್ಯೆ ಎಲಿಚಿಪುರದ ಪ್ರಾಂತ್ಯಾಧಿಕಾರಿಯ ಸಫ್ದರ್‌ಖಾನ್ ಸಿಸ್ತಾನಿ ಮೃತನಾದ ಸುದ್ದಿ ಬಂತು. ಸಿಸ್ತಾನಿಯ ಪುತ್ರ ಸಲಾಬತ್‌ಖಾನ್‌ನನ್ನು ಮೂಸ್ನಾದ್‌ಅಲಿ ಎಂಬ ಬಿರುದಿನೊಂದಿಗೆ ಬೆರಾರ್ ಪ್ರಾಂತ್ಯದ ಆಡಳಿತಾಧಿಕಾರಿಯನ್ನಾಗಿ ನಿಯಮಿಸಿದ. ಹಾಗೆಯೇ ಆಜಂ ಎ ಹುಮಾಯೂನ್‌ನ ಪುತ್ರ ಮುಹಮ್ಮದ್‌ಖಾನ್‌ನನ್ನು ಸರ್‌ನೌಬತ್ ಮತ್ತು ಅಹ್ಮದ್ ಖಜ್ವಿನಿ ಪೇಶ್ವೆಯನ್ನಾಗಿ ಮಾಡಿದ. ಈ ಎರಡು ಉನ್ನತ ಹುದ್ದೆಗಳನ್ನು ಹೊಸಬರ (ಅಫಾಕಿ) ಗುಂಪಿಗೆ ನೀಡಿದ್ದು ಗುಲ್ಬರ್ಗದಲ್ಲಿ ಅಸಹನೆ ಹುಟ್ಟುವುದಕ್ಕೆ ಕಾರಣವಾಯಿತು. ತುರ್ಕಿ ಮೂಲದ ತಘಲ್ಚಿನ್ ಸ್ವತಃ ಪ್ರಧಾನಿಯಾಗಲು ಬಯಸುತ್ತಿದ್ದ. ಆದರೆ, ಅನನುಭವಿಯಾಗಿದ್ದ ಹೊಸ ಅರಸನಿಗೆ ಸಮಸ್ಯೆ ಆಗದಂತೆ ಬಗೆ ಹರಿಸುವುದು ಸಾಧ್ಯವಾಗಲಿಲ್ಲ. ಹಿಂದೆ ಗುಲಾಮನಾಗಿದ್ದವನಿಗೆ ಪ್ರಧಾನಿಯಂತಹ ಗೌರವದ ಹುದ್ದೆ ನೀಡಲು ಸಾಧ್ಯವಿಲ್ಲ ಎಂದು ಅರಸು ನೇರವಾಗಿಯೇ ತಘಲ್ಚಿನ್‌ನಿಗೆ ಹೇಳಿದ. ದೊಡ್ಡ ಹುದ್ದೆ ತಪ್ಪಿದ ಅವಮಾನದ ಜೊತೆಗೆ ಅಸ್ತಿತ್ವಕ್ಕೆ ಸಂಚಕಾರ ಬಂದೀತು ಎಂದು ಭಾವಿಸಿದ ತಘಲ್ಚಿನ್ ಅರಸನ ವಿರುದ್ಧ ಸಂಚು ರೂಪಿಸಿದ.

ತಘಲ್ಚಿನ್‌ನಿಗೆ ಸಂಗೀತ ಮತ್ತಿತರ ಕಲೆಗಳಲ್ಲಿ ನಿಷ್ಣಾತಳಾಗಿದ್ದ ಸುಂದರ ಪುತ್ರಿಯಿದ್ದಳು. ಅವಳ ಚೆಲುವು ಮತ್ತು ವಿದ್ಯೆಯ ಬಗ್ಗೆ ಅರಸನಿಗೆ ಮಾಹಿತಿ ತಲುಪುವಂತೆ ತಘಲ್ಚಿನ್ ನೋಡಿಕೊಂಡ. ಅರಸನು ಕೂಡ ಅವಳ ಬಗ್ಗೆ ಮಾಹಿತಿ ತರಿಸಿಕೊಳ್ಳುವಂತೆ ಸಂಚು ರೂಪಿಸಲಾಗಿತ್ತು. ತಘಲ್ಚಿನ್ ಬೃಹತ್ ಪ್ರಮಾಣದ

ಮೋಜುಮಸ್ತಿ ಇರುವ ಔತಣಕೂಟ ಏರ್ಪಡಿಸಿ ಅರಸನನ್ನು ಆಹ್ವಾನಿಸಿದ. ಘಿಯಾಸುದ್ದೀನ್ ಕಾಮವಾಂಛೆ ಹೆಚ್ಚುವಂತಹ ವಸ್ತುಗಳನ್ನು ಮದ್ಯದಲ್ಲಿ ಬೆರೆಸುವಂತೆ ತನ್ನ ಗುಲಾಮ ತರಾಬ್‌ನಿಗೆ ಸೂಚಿಸಿದ್ದ. ಅರಸ ಕೇಳಿದಷ್ಟೂ ಮದ್ಯ ಸರಬರಾಜು ಮಾಡುವಂತೆ ನಿರ್ದೇಶನ ನೀಡಲಾಗಿತ್ತು. ಮೈಮೇಲೆ ಪ್ರಜ್ಞೆಯೂ ಇಲ್ಲದಷ್ಟು ಪಾನಮತ್ತನಾಗಿದ್ದ ದೊರೆ ಘಿಯಾಸುದ್ದೀನ್‌ನು ತಘಲ್ಚಿನ್‌ನಿಗೆ ಅವನ ಮಗಳನ್ನು ಕರೆತರುವಂತೆ ಸೂಚಿಸಿದ. ಮೊದಲ ಮಹಡಿಗೆ ಹೋದ ತಘಲ್ಚಿನ್ ಮರಳಿದ್ದು ಮಗಳೊಂದಿಗೆ ಅಲ್ಲ ಕಠಾರಿಯೊಂದಿಗೆ. ಅಸಹಾಯಕನಾಗಿದ್ದ ಘಿಯಾಸುದ್ದೀನ್‌ನ ಕೈಗಳನ್ನು ತರಾಬ್ ಹಿಂದಿನಿಂದ ಹಿಡಿದುಕೊಂಡಿದ್ದ. ಅರಸನು ಕಠಾರಿಯ ಇರಿತದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಹೆಣಗಾಡಿದ ಅರಸು ತಘಲ್ಚಿನ್‌ನ ಕೂದಲು ಹಿಡಿದ ಎಳೆದ. ಆಗ ತಘಲ್ಚಿನ್‌ನು ಕಠಾರಿಯಿಂದ ಘಿಯಾಸುದ್ದೀನ್ ಕಣ್ಣುಗಳಿಗೆ ಇರಿದ. ನಂತರ ಅರಸನ ಭೇಟಿಯ ನೆಪ ಹೇಳಿ ಬೆಂಗಾವಲು ಪಡೆಯ ಒಬ್ಬೊಬ್ಬರನ್ನೇ ಕರೆಸಿಕೊಲ್ಲಲಾಯಿತು. ಆಗ ಸತ್ತವರ ಸಂಖ್ಯೆ 24. ಈ ಘಟನೆಯ ನಂತರ ಕಣ್ಣು ಕೀಳಿಸಲಾದ ಘಿಯಾಸುದ್ದೀನ್‌ನನ್ನು ಸೆರೆಯಾಳಾಗಿಸಿ ಸಗರ ಕೋಟೆಗೆ ಕಳುಹಿಸಲಾಯಿತು. ಘಿಯಾಸುದ್ದೀನ್‌ನ ಮಲ ಸಹೋದರ ಶಂಸುದ್ದೀನ್‌ನನ್ನು ಸಿಂಹಾಸನದ ಮೇಲೆ ಕೂಡಿಸಲಾಯಿತು.

## ಶಂಸುದ್ದೀನ್ ಎರಡನೇ ದಾವುದ್

(14 ಜೂನ್ 1397ರಿಂದ 15 ನವೆಂಬರ್ 1397)

ಎರಡನೇ ಮುಹಮ್ಮದ್‌ನ ಗುಲಾಮ ಪತ್ನಿಯ ಪುತ್ರ ಶಂಸುದ್ದೀನ್‌ನು ದೊರೆಯಾದ. ತಘಲ್ಚಿನ್ ತಾನು ಅಂದುಕೊಂಡದ್ದನ್ನು ಸಾಧಿಸಿದ. ನೂತನ ದೊರೆಯು ತನ್ನನ್ನು ಮಲಿಕ್ ನಾಯಿಬ್ ಮತ್ತು ಸಾಮ್ರಾಜ್ಯದ ಮೀರ್ ಜುಮ್ಲಾ ಎಂದು ಘೋಷಿಸುವಂತೆ ನೋಡಿಕೊಂಡ. ಗುಲಾಮಿ ಯುವತಿಯಾಗಿದ್ದ ಶಂಸುದ್ದೀನ್‌ನ ತಾಯಿಗೆ ಮಖ್ದುಮ್ ಎ ಜಹಾನ್ ಗೌರವ ದೊರೆಯುವಂತೆ ನೋಡಿಕೊಂಡ. ನೂತನ ಮಲಿಕ್ ನಾಯಬ್‌ನಿಂದಾಗಿ ಹೊಸ ಗೌರವ ದೊರೆತಿದ್ದರಿಂದ ಪ್ರಧಾನಿ ಹೇಳಿದಂತೆ ಕೇಳುವಂತೆ ಮಗನಿಗೆ ಸೂಚನೆ ನೀಡಿದಳು.

ಆದರೂ ಬಹಮನಿ ಸಾಮ್ರಾಜ್ಯವು ಹೊಸ ಸ್ವರೂಪ ಪಡೆದುಕೊಳ್ಳಲು ಹೆಚ್ಚು ಕಾಲಾವಕಾಶ ಬೇಕಾಗಲಿಲ್ಲ. ಫಿರೋಜ್‌ಖಾನ್ ಮತ್ತು ಅಹ್ಮದ್‌ಖಾನ್‌ರಿಬ್ಬರೂ ತನ್ನ ಮಾವ ಎರಡನೇ ಮುಹಮ್ಮದ್‌ನ ಬಯಕೆಯಂತೆ ನಡೆದುಕೊಂಡಿದ್ದರು.

ಘಿಯಾಸುದ್ದೀನ್ ಅರಸನಾದಾಗ ಗೌರವ ಸಲ್ಲಿಸಿದ್ದರು. ಆದರೆ, ಘಿಯಾಸುದ್ದೀನ್ ಕಣ್ಣು ಕಳೆದುಕೊಂಡು ಸಿಂಹಾಸನ ತೊರೆಯಬೇಕಾಗಿ ಬಂದ ನಂತರ ಫಿರೋಜ್ ಮತ್ತು ಅಹ್ಮದ್‌ನ ಪತ್ನಿಯರು ಸುಮ್ಮನೆ ಕುಳಿತುಕೊಳ್ಳಲಿಲ್ಲ. ತಮ್ಮ ಸ್ವಂತ ಸಹೋದರನಿಗೆ ಆದ ಅನ್ಯಾಯ ಸರಿ ಪಡಿಸುವಂತೆ ದುಂಬಾಲು ಬಿದ್ದರು. ಈ ಮಧ್ಯೆ ತಘಲ್ಚಿನ್‌ನು ಫಿರೋಜ್ ಮತ್ತು ಅಹ್ಮದ್‌ರನ್ನು ಜೈಲಿಗೆ ಕಳುಹಿಸಲು ಅನುವು ಮಾಡುವಂತೆ ರಾಣಿಯ ಬಳಿ ಹೋಗಿ ಕೋರಿದ.

ತಮ್ಮ ವಿರುದ್ಧ ನಡೆಯುತ್ತಿರುವ ಪಿತೂರಿಯ ವಿಷಯ ಗೊತ್ತಾಗುತ್ತಿದ್ದಂತೆಯೇ ಫಿರೋಜ್ ಮತ್ತು ಅಹ್ಮದರ್ ಸಗರಕ್ಕೆ ಓಡಿ ಹೋದರು. ಅಲ್ಲಿಂದ ಗುಲ್ಬರ್ಗಕ್ಕೆ ಸಂದೇಶ ಕಳುಹಿಸಿ 'ಸಿಂಹಾಸನಕ್ಕೆ ನಿಷ್ಠರಾಗಿರುತ್ತೇವೆ. ಆದರೆ, ಎಲ್ಲ ದುರಾಡಳಿತ, ಸಮಸ್ಯೆಗೂ ಮೂಲ ಆಗಿರುವ ತಘಲ್ಚಿನ್‌ನನ್ನು ಕೈ ಬಿಡಬೇಕು' ಎಂದು ತಿಳಿಸಿದರು. ಆದರೆ, ತಘಲ್ಚಿನ್ ಬದಲಾಗುವ ಸೂಚನೆಗಳು ಕಾಣಿಸದೇ ಅವನೇ ಪ್ರಭಾವಶಾಲಿಯಾಗಿ ಮುಂದುವರೆಯುವ ಸಾಧ್ಯತೆ ಕಂಡು ಬಂದವು. ಮೂರು ಸಾವಿರ ಅಶ್ವದಳದೊಂದಿಗೆ ಗುಲ್ಬರ್ಗ ವಿರುದ್ಧ ದಾಳಿ ನಡೆಸಲು ಫಿರೋಜ್ ಮತ್ತು ಅಹ್ಮದ್ ಮುಂದಾದರು. ತಘಲ್ಚಿನ್‌ನ ನಡವಳಿಕೆಯಿಂದ ಬಹುತೇಕ ಎಲ್ಲರೂ ಬೇಸತ್ತಿದ್ದರು.

ಅದರ ಲಾಭ ತಮಗೆ ದೊರೆಯಬಹುದು ಎಂಬ ವಿಚಾರ ಫಿರೋಜ್ ಮತ್ತು ಅಹ್ಮದ್ ಅವರದಾಗಿತ್ತು. ಬೆಣ್ಣೆತೊರೆಯ ಹತ್ತಿರ ಬರುತ್ತಿದ್ದಂತೆಯೇ ಫಿರೋಜ್‌ನು ತನ್ನನ್ನು ರಾಜ ಎಂದು ಘೋಷಿಸಿಕೊಂಡ. ಹಾಗೆಯೇ ಅಹ್ಮದ್‌ನನ್ನು ಅಮೀರ್ ಅಲ್ ಉಮ್ರಾ ಆಗಿ, ಮೀರ್ ಫಜ್ಲುಲ್ಲಾಹ್ ಇಂಜುವನ್ನು ಪ್ರಧಾನಿಯಾಗಿ ನೇಮಿಸಿದ. ಇದೆಲ್ಲ ನಡೆಯುವಾಗ ಅಂಧ ಬಾಲಕ ಘಿಯಾಸುದ್ದೀನ್ ಅವರ ಜೊತೆಗಿದ್ದ. ಅವರು ಅಂದುಕೊಂಡಂತೆ ಏನೂ ನಡೆಯಲಿಲ್ಲ. ತಘಲ್ಚಿನ್ ಕಳುಹಿಸಿದ ಸೈನ್ಯದ ಕೈ ಮೇಲಾಯಿತು. ಫಿರೋಜ್ ತನ್ನ ಪಡೆಯೊಂದಿಗೆ ಸಗರಕ್ಕೆ ಮರಳಬೇಕಾಯಿತು.

ಫಿರೋಜ್ ಮತ್ತು ಅಹ್ಮದ್ ಸಗರದಿಂದ ಗುಲ್ಬರ್ಗಕ್ಕೆ ಒಂದು ನಿಯೋಗ ಕಳುಹಿಸಿದರು. ಘಿಯಾಸುದ್ದೀನ್, ಮೀರ್‌ಫಜ್ಲುಲ್ ಇಂಜುವಿನ ಪುತ್ರ, ಸೈಯದ್ ಕಮಾಲುದ್ದೀನ್ ಹಾಗೂ ಸೈಯದ್‌ರು ಮತ್ತು ವಿದ್ವಾಂಸರು ನಿಯೋಗದಲ್ಲಿದ್ದರು. ತಘಲ್ಚಿನ್ ಮತ್ತು ಮಖ್ದುಮ್ ಏ ಜಹಾನ್‌ಗೆ ಕಳುಹಿಸಿದ ಸಂದೇಶದಲ್ಲಿ 'ಪಶ್ಚಾತ್ತಾಪ ಆಗಿದೆ. ಗುಲ್ಬರ್ಗಕ್ಕೆ ಮರಳಲು ಅವಕಾಶ ನೀಡಬೇಕು' ಎಂದು ಕೋರಿದ್ದರು. ಅವರ ಮನವಿಯನ್ನು ಒಪ್ಪಿ ಇಬ್ಬರಿಗೂ ಯಾವುದೇ ರೀತಿಯ ತೊಂದರೆ

ಆಗದಂತೆ ಗುಲ್ಬರ್ಗಕ್ಕೆ ಕರೆಸಿಕೊಳ್ಳುವ ಭರವಸೆ ದೊರೆಯಿತು. ರಾಜಧಾನಿಗೆ ಹೋಗುವುದಕ್ಕೆ ಸಿದ್ಧರಾಗುತ್ತಿದ್ದಾಗ. ಅಲ್ಲಿಂದ ಬಂದ ಕಾಶ್ಮೀರದ ಅರೆಹುಚ್ಚನೊಬ್ಬ ಇವರಿಬ್ಬರಿನ್ನು ನೋಡಿ 'ಒಳ್ಳೆಯ ದಿನಗಳು' ಬಂದಿವೆ ಎಂದು ಕೂಗುತ್ತ ಬಂದ. ಫಿರೋಜ್‌ನನ್ನು ನೋಡಿ ನಿನ್ನನ್ನು ಸಿಂಹಾಸನದ ಮೇಲೆ ಕೂಡಿಸುವುದಕ್ಕಾಗಿ ಬಂದಿದ್ದೇನೆ ಎಂದು ಹೇಳುತ್ತ ಓಡಿ ಹೋದ. ಇದೊಂದು ಶುಭಸೂಚನೆ ಎಂದು ಭಾವಿಸಿದ ಸಹೋದರರು ಸಡಗರದಿಂದಲೇ ಗುಲ್ಬರ್ಗ ಪ್ರವೇಶಿಸಿದರು. ಅರಸನ ಮಲಸಹೋದರಿಯೂ ಆದ ಫಿರೋಜ್‌ನ ಪತ್ನಿಯ ಮೂಲಕ ಉಭಯರ ಜೀವಕ್ಕೆ ಅಪಾಯ ಇರುವ ಸೂಚನೆ ದೊರೆಯಿತು. ಅರಮನೆಯಲ್ಲಿನ ಬೆಳವಣಿಗೆಗಳಿಂದಾಗಿ ವಿರೋಧಿಗಳಾಗಿದ್ದ ಅಜ್ದರ್‌ಖಾನ್, ಮಲಿಕ್ ಶಿತಾಬ್, ಸೈಯದ್ ತಾಜುದ್ದೀನ್ ಜಕಾಜಾಟ್, ಕುತುಬ್ ಉಲ್ ಮುಲ್ಕ್ ಮುಂತಾದವರ ಜೊತೆ ಸೇರಿ ದರ್ಬಾರ್ ಕಡೆಗೆ ಬಂದ. 300 ಜನರ ಬೆಂಗಾವಲು ಪಡೆಯು ಅವರ ಜೊತೆಗಿತ್ತು. ಅವರೆಲ್ಲ ಒಬ್ಬಿಬ್ಬರಂತೆ ದರ್ಬಾರಿನೊಳಗೆ ಬಂದರು. ದರ್ಬಾರ್‌ದ ಹೊರಗಡೆ ಕಾವಲುಗಾರರಿಗೂ ಅಹ್ಮದ್‌ಖಾನ್‌ನ ಕಡೆಯವರಿಗೂ ಕಿತ್ತಾಟ ಆರಂಭವಾಯಿತು. ಅದನ್ನು ನಿಭಾಯಿಸುತ್ತಲೇ ತಘಲ್ಚಿನ್‌ನ ಮಕ್ಕಳನ್ನು ಕೊಂದ ಅಹ್ಮದ್‌ಖಾನ್ ದರ್ಬಾರ್ ಪ್ರವೇಶಿಸಿದ.

ಎಲ್ಲೆಡೆ ಗೊಂದಲದ ವಾತಾವರಣ ಇತ್ತು. ಅರಸ ನೆಲಮಾಳಿಗೆಗೆ ಓಡಿಹೋಗಿದ್ದ. ಆಗ ಸಿಂಹಾಸನದ ಮೇಲೆ ಕುಳಿತುಕೊಂಡ ಫಿರೋಜ್‌ನು ತಘಲ್ಚಿನ್ ಮತ್ತು ಶಂಸುದ್ದೀನ್‌ರನ್ನು ಬಂಧಿಸುವಂತೆ ಆದೇಶಿಸಿದ. ಘಿಯಾಸುದ್ದೀನ್‌ನು ತನ್ನ ಖಡ್ಗದಿಂದ ತಘಲ್ಚಿನ್‌ನನ್ನು ಕೊಂದ. ಆದರೆ, ಶಂಸುದ್ದೀನ್‌ನ ಕಣ್ಣು ಕೀಳಿಸಿ ಅವನ ತಾಯಿಯೊಂದಿಗೆ ಮೆಕ್ಕಾಯಾತ್ರೆಗೆ ಅನುವು ಮಾಡಿಕೊಟ್ಟ ಹಾಗೆಯೇ ಅವರಿಗೆ ಐದು ಸಾವಿರ ಚಿನ್ನದ ನಾಣ್ಯಗಳ ವಾರ್ಷಿಕ ಭತ್ಯೆ ನೀಡಲು ನಿರ್ಧರಿಸಿದ. 1414ರ ವರೆಗೆ ಬದುಕಿದ್ದ ಶಂಸುದ್ದೀನ್ ಮದೀನಾದಲ್ಲಿ ಕೊನೆಯುಸಿರೆಳೆದ.

ಬಹಮನಿ ಸಾಮ್ರಾಜ್ಯದ ಈ ನಾಲ್ವರು ಅರಸರ 22 ವರ್ಷದ ಅವಧಿಯು ಗೊಂದಲ, ಅಶಾಂತಿಯಿಂದ ಕೂಡಿತ್ತು. ಆದರೆ, ಎರಡನೇ ಮುಹಮ್ಮದ್‌ನ ಆಳ್ವಿಕೆಯ ಕಾಲ ಶಾಂತಿ, ಸುವ್ಯವಸ್ಥೆಯಿಂದ ಇತ್ತು. ಸಾಮ್ರಾಜ್ಯವನ್ನು 'ಸಾಹಿತ್ಯ, ಸಂಸ್ಕೃತಿಯ ನೆಲೆ' ಮಾಡುವುದಕ್ಕೆ ಅರಸ ಪ್ರಯತ್ನಿಸಿದ. ತಘಲ್ಚಿನ್‌ನ ಮಹತ್ವಕಾಂಕ್ಷೆ ಮತ್ತು ಪಿತೂರಿ ಇಲ್ಲದೇ ಹೋಗಿದ್ದರೆ ಅದರ ಕತೆ ಬೇರೆಯದೇ ಆಗಿರುತ್ತಿತ್ತು.

## ತಾಜುದ್ದೀನ್ ಫಿರೋಜ್
(16 ನವೆಂಬರ್ 1397 ರಿಂದ 22 ಸೆಪ್ಟೆಂಬರ್ 1422)

ಫಿರೋಜ್ ಅಧಿಕಾರಕ್ಕೆ ಬರುತ್ತಿದ್ದಂತೆಯೇ ತನ್ನ ಸಹೋದರ ಅಹ್ಮದ್‌ಖಾನ್‌ನಿಗೆ 'ಖಾನ್ –ಎ–ಖಾನನ್' ಬಿರುದು ನೀಡಿ ಗೌರವಿಸಿದ. ಹಾಗೆಯೇ ತನಗೆ ಗುರು, ಮಾರ್ಗದರ್ಶಕನಾಗಿದ್ದ ಮೀರ್ ಫಜ್ಲುಲ್ಲಾಹ್ ಇಂಜುವನ್ನು ಮಲಿಕ್ ನಾಯಬ್ ಮತ್ತು ವಕೀಲ್ (ಪ್ರಧಾನಿ) ಎಂದು ನೇಮಕ ಮಾಡಿದ. ಹೊಸ ವಿದೇಶಿಯರ ಅದರಲ್ಲೂ ಇರಾನ್‌ನ ಪ್ರಭಾವ ಕಡಿಮೆ ಮಾಡುವ ಉದ್ದೇಶದಿಂದ ಸ್ಥಳೀಯ ಹಿಂದು ಪ್ರಮುಖರನ್ನು ಆಡಳಿತದ ವಿವಿಧ ಹಂತಗಳಲ್ಲಿ ನೇಮಿಸಿದ. ಬ್ರಾಹ್ಮಣರಿಗೆ ಗೌರವಾನ್ವಿತ ಸ್ಥಾನ ಹಾಗೂ ಜವಾಬ್ದಾರಿಯುತ ಹುದ್ದೆಗಳನ್ನು ನೀಡಿದ.

ಫಿರೋಜ್‌ನ ಸುದೀರ್ಘ ಆಡಳಿತದ ಅವಧಿಯಲ್ಲಿ ನೆರೆಯ ವಿಜಯನಗರದ ಅರಸರ ಜೊತೆಗಿನ ಭಿನ್ನಾಭಿಪ್ರಾಯ ಮುಂದುವರೆದಿತ್ತು. ಬಹಮನಿ ರಾಜಧಾನಿಯಲ್ಲಿನ ಗೊಂದಲದ ಲಾಭ ಪಡೆಯಲು ಬಯಸಿದ ಸಗರದ ಜಮೀನ್ದಾರರು 1398ರಲ್ಲಿಯೇ ದಂಗೆ ಎದ್ದರು. ಉತ್ತರದಲ್ಲಿ ಖೇರ್ಲಾದ ನರಸಿಂಗ ಬಹಮನಿ ಪ್ರಭುತ್ವದ ವಿರುದ್ಧ ಸಿಡಿದು ನಿಂತಿದ್ದ. ಅವನಿಗೆ ಮಾಂಡು ಮತ್ತು ಆಸಿರ್ ಸೈನ್ಯದ ಬೆಂಬಲವೂ ಇತ್ತು. ಇದೇ ಸಮಯದಲ್ಲಿ ವಿಜಯನಗರದ ರಾಯ ಮಾಹುರ್ ವರೆಗೂ ವಿಸ್ತರಿಸಿಕೊಂಡ. ಈ ಗೊಂದಲದ ಸಮಯದಲ್ಲಿ ಫಿರೋಜ್ ಮೊದಲು ಸಗರದ ಬಂಡಾಯದ ಕಡೆಗೆ ಗಮನ ಹರಿಸಿದ. ಅದನ್ನು ಹತೋಟಿಗೆ ತಂದ.

ಉತ್ತರದ ದಂಡಯಾತ್ರೆಯನ್ನು ಫಿರೋಜ್ ಮುಂದೂಡಿದ. ವಿಜಯನಗರದ ಜೊತೆಗಿನ ವ್ಯವಹಾರ ಬಗೆ ಹರಿಸಿಕೊಂಡ ನಂತರವೇ ಉತ್ತರದತ್ತ ತೆರಳಬೇಕು ಎಂಬ ಯೋಚನೆ ಫಿರೋಜ್‌ನದಾಗಿತ್ತು. ಈ ಮಧ್ಯೆ ವಿಜಯನಗರದ ಯುವರಾಜ ಬುಕ್ಕನು ಎಂಟು ಸಾವಿರ ಬಿಲ್ವಿದ್ಯೆ ಪ್ರವೀಣರ ಪಡೆಯೊಂದಿಗೆ ತುಂಗಭದ್ರಾ ನದಿ ದಾಟಿ ರಾಯಚೂರು, ಮುದಗಲ್ ಹಾಗೂ ಬಹಮನಿ ವಶದಲ್ಲಿದ್ದ ದೋಆಬ್ ಪ್ರದೇಶವನ್ನು ವಶಕ್ಕೆ ತೆಗೆದುಕೊಂಡ. ಅಷ್ಟಕ್ಕೇ ನಿಲ್ಲದೆ ತೆಲಂಗಾಣದ ಕಡೆಗೆ ಮುಂದುವರೆಯುವ ಯೋಚನೆ ಬುಕ್ಕನಿಗೆ ಇತ್ತು. ಒಂದನೇ ಮುಹಮ್ಮದ್‌ನ ಕಾಲದಿಂದಲೂ ತೆಲಂಗಾಣ ಮತ್ತು ಬಹಮನಿ ನಡುವೆ ಸ್ನೇಹಮಯ ಸಂಬಂಧ ಇತ್ತು. ರಾಜಮಹೇಂದ್ರಿಯ ಕಟಾಯ ವೇಮನ ಸಹಾಯದೊಂದಿಗೆ ಬುಕ್ಕನು ದೋಆಬ್ ಪ್ರದೇಶದ ಮೇಲೆ ದಾಳಿ ನಡೆಸಿದ. ಫಿರೋಜ್‌ನಿಗೆ ಈ ಸೈನ್ಯ

ಎದುರಿಸಿ ದೋಆಬ್ ಪ್ರದೇಶ ಕೈಬಿಟ್ಟು ಹೋಗದಂತೆ ನೋಡಿಕೊಳ್ಳುವುದು ಅಷ್ಟೇನು ಕಷ್ಟವಿರಲಿಲ್ಲ. ಆದರೆ, ಅದೇ ಹೊತ್ತಿಗೆ ಉತ್ತರದ ಖೇರ್ಲಾದ ದಾಳಿಯು ಫಿರೋಜ್ ಗಲಿಬಿಲಿಗೊಳ್ಳುವಂತೆ ಮಾಡಿತ್ತು. ಬೆರಾರ್ ಮತ್ತು ದೌಲತಾಬಾದ್‌ನಲ್ಲಿದ್ದ ಸೇನೆಯನ್ನು ಆ ಕಡೆಗೆ ಕಳುಹಿಸಲು ಯೋಚಿಸಿದ. ಮಳೆಗಾಲ ಆರಂಭವಾದದ್ದರಿಂದ ಕೃಷ್ಣಾ ನದಿಯು ತುಂಬಿ ಹರಿಯುತ್ತಿತ್ತು. ಆದ್ದರಿಂದ ಸೈನ್ಯಕ್ಕೆ ನದಿ ದಾಟುವದು ಸಾಧ್ಯವಾಗಲಿಲ್ಲ. ಈ ಸಂಕಟದಿಂದ ಹೇಗೆ ಹೊರಬರುವುದು ಎಂದು ಫಿರೋಜ್‌ನಿಗೆ ಹೊಳೆಯಲಿಲ್ಲ.

ಆಗ ಫಿರೋಜ್‌ನ ಆಸ್ಥಾನದಲ್ಲಿ ಇದ್ದ ಕಾಜಿ ಸಿರಾಜ್‌ನು ಕಾಳರಾತ್ರಿಯಲ್ಲಿ ವಿಜಯನಗರದ ಶಿಬಿರದ ಮೇಲೆ ದಾಳಿ ನಡೆಸಿ ಅರಸು ಕುಮಾರನನ್ನು ಕೊಲ್ಲುವ ಸಂಚು ರೂಪಿಸಿ ಅದನ್ನು ಅರಸನಿಗೆ ವಿವರಿಸಿದ. ನದಿಯಾಚೆಯಿಂದ ಆಕ್ರಂದನ, ಗಲಾಟೆ ಕೇಳಿ ಬಂದ ನಂತರ ತನ್ನ ಸಹಾಯಕ್ಕಾಗಿ ನಾಲ್ಕೈದು ಸಾವಿರ ಸೈನಿಕರನ್ನು ಕಳುಹಿಸಬೇಕಾಗುತ್ತದೆ ಎಂದು ಸಿರಾಜ್ ಮನವರಿಕೆ ಮಾಡಿದ. ಸಿರಾಜ್ ತನ್ನ ಏಳು ಜನ ಸಹಚರರೊಂದಿಗೆ ಭಿಕ್ಷುಕರ, ಹುಚ್ಚರ ಹಾಗೆ ವೇಷ ಧರಿಸಿ ವಿಜಯನಗರದ ಶಿಬಿರದ ಕಡೆಗೆ ತೆರಳಿದ. ಶಿಬಿರದಲ್ಲಿ ನರ್ತಕಿಯರು ಹಾಗೂ ವೇಶ್ಯೆಯರಿಗಾಗಿ ಮೀಸಲಾಗಿ ಇರಿಸಿದ್ದ ಬಿಡಾರದ ರಿಪೇರಿ ಮಾಡಿ ಮುಗಿಸಿ, ಅಲ್ಲಿಯೇ ಅಡಗಿಕೊಂಡರು. ನಂತರ ಸಂಜೆಯ ನರ್ತನಕ್ಕೆ ಸಿದ್ಧಳಾಗುತ್ತಿದ್ದ ಯುವತಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು 'ನಾವೆಂದೂ ಅರಸರ ಶಿಬಿರ ನೋಡಿಲ್ಲ' ಎಂದು ತಿಳಿಸಿದ ಸಿರಾಜ್ ಮತ್ತು ಸಂಗಡಿಗರು 'ನಮ್ಮನ್ನೂ ಜೊತೆಗೆ ಕರೆದೊಯ್ಯುವಂತೆ' ಪುಸಲಾಯಿಸಿದರು. ಆಕೆಯು ಸಾಥ್ ನೀಡುವ ಸಂಗೀತಗಾರರು ಮತ್ತು ನರ್ತಕಿಯರನ್ನು ಹೊರತುಪಡಿಸಿ ಬೇರೆಯವರಿಗೆ ಪ್ರವೇಶ ಇರುವುದಿಲ್ಲ ಎಂದು ಮನವರಿಕೆ ಮಾಡಲು ಯತ್ನಿಸಿದಳು. ಆಗ ಸಿರಾಜ್‌ನು ತನ್ನನ್ನೇ ಸಾಥಿದಾರ ಎಂದು ಕರೆದೊಯ್ಯುವಂತೆ ಮನ ಒಲಿಸಿದ. ಸಿರಾಜ್ ಮಾತ್ರವಲ್ಲದೆ ಅವನ ಸಂಗಡಿಗರೆಲ್ಲರನ್ನು ಸಂಗೀತಗಾರರ ವೇಷದಲ್ಲಿ ಕರೆದೊಯ್ಯಲು ಆಕೆಯು ಒಪ್ಪಿದಳು. ನೃತ್ಯ ಪ್ರದರ್ಶನ ಆರಂಭವಾಯಿತು. ಮಧ್ಯಂತರದಲ್ಲಿ ಸಿರಾಜ್ ಮತ್ತು ಸಂಗಡಿಗರ ಹಾಸ್ಯ ಪ್ರಹಸನ ಪ್ರಸ್ತುತ ಪಡಿಸಬೇಕಿತ್ತು. ಶಿಬಿರದಲ್ಲಿ ಇದ್ದ ಎಲ್ಲರೂ ಮೈಮರೆತು ಸಂಗೀತ–ನೃತ್ಯದಲ್ಲಿ ತಲ್ಲೀನರಾಗಿದ್ದರು. ಮದಿರೆಯ ಅಮಲು ಕೂಡ ತಲೆಗೇರಿತ್ತು. ಸಿರಾಜ್‌ನ ಇಬ್ಬರು ಸಹಚರರು ಮುನ್ನುಗ್ಗಿ ಹೋಗಿ ರಾಜಕುಮಾರನನ್ನು ಕತ್ತಿಯಿಂದ ಇರಿಯುವಲ್ಲಿ ಯಶಸ್ವಿಯಾದರು. ಯುವರಾಜನ ಸಾವಿನ ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು. ಎಲ್ಲೆಡೆ ಗಲಿಬಿಲಿ, ಗೊಂದಲ ಮನೆ ಮಾಡಿತ್ತು. ಕತ್ತಲೆಯಲ್ಲಿ ಸಿರಾಜ್

ಮತ್ತವನ ಸಂಗಡಿಗರು ತಲೆ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಈ ನಡುವೆ ಫಿರೋಜ್ ತನ್ನ ನಾಲ್ಕೈದು ಸಾವಿರ ಸೈನ್ಯದೊಂದಿಗೆ ಬೆಳಗಿನ ಜಾವ ನದಿದಾಟಿ ಹತಾಶೆಯಿಂದ ಕಂಗಾಲಾಗಿದ್ದ ವಿಜಯನಗರದ ಸೈನ್ಯದ ಮೇಲೆ ಮುಗಿಬಿದ್ದ. ವಿಜಯನಗರದ ರಾಜಧಾನಿಯ ವರೆಗೆ ಬೆನ್ನಟ್ಟಿ ಹೋಗಲಾಯಿತು. ಅದಕ್ಕೂ ಮುನ್ನ ಖಾನ್ ಎ ಖಾನನ್ ಮತ್ತು ಮೀರ್ ಫಜ್ಲುಲ್ಲಾ ಇಂಜುವಿನ ನೇತೃತ್ವದ ಸೈನ್ಯವನ್ನು ಸಾಮ್ರಾಜಯ್ದ ದಕ್ಷಿಣ ಪ್ರಾಂತ್ಯಗಳ ಕಡೆಗೆ ಕಳುಹಿಸಲಾಗಿತ್ತು.

ದಕ್ಷಿಣದ ಕಡೆಯಿಂದ ಬಂದ ಇಂಜುವಿನ ನೇತೃತ್ವ ದಾಳಿ ಆರಂಭವಾಯಿತು. ಕಂಗಾಲಾದ ಎರಡನೇ ಹರಿಹರನು ಸೋಲೊಪ್ಪಿಕೊಂಡು ಮಲಿಕ್ ನಾಯಬ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಮುಂದಾದ. ಬಹಮನಿ ಸೈನ್ಯದ ವಶದಲ್ಲಿದ್ದ ಬಂಧಿತರ ಬಿಡುಗಡೆ ಮಾಡಬೇಕು ಮತ್ತು ಹರಿಹರ ಹತ್ತು ಲಕ್ಷ ಚಿನ್ನದ ನಾಣ್ಯಗಳನ್ನು ನೀಡಬೇಕು ಎಂದು ಒಪ್ಪಂದವಾಯಿತು. ಸಫ್ದರ್‌ಖಾನ್ ಸಿಸ್ತಾನಿಯ ಪುತ್ರ ಫೌಲಾದ್‌ಖಾನ್‌ನನ್ನು ರಾಯಚೂರು ದೋಆಬ್ ಪ್ರಾಂತ್ಯದ ಆಡಳಿತ ಅಧಿಕಾರಿ ಎಂದು ನೇಮಿಸಲಾಯಿತು. ವಿಜಯನಗರದ ಜೊತೆಗಿನ ಗೆಲುವಿನ ಸ್ಮರಣಾರ್ಥ ಸಗರಕ್ಕೆ ನಸ್ರತಾಬಾದ್ '(ಗೆಲುವಿನ ನಗರ) ಎಂದು ನಾಮಕರಣ ಮಾಡಿದ. ಭೀಮಾನದಿಯ ದಡದ ಮೇಲೆ ನೂತನ ನಗರ ಫಿರೋಜಾಬಾದ್ ನಿರ್ಮಾಣಕ್ಕೆ ಅಡಿಪಾಯ ಹಾಕಿದ.

ನಾಲ್ಕಾರು ತಿಂಗಳು ರಾಜಧಾನಿ ಗುಲ್ಬರ್ಗದಲ್ಲಿಯೇ ಕಳೆದ ಸುಲ್ತಾನ್‌ನು ಸೈನ್ಯದೊಂದಿಗೆ ಖೇರ್ಲಾದ ಕಡೆಗೆ ನಡೆದ. ಮಾಹುರ್ ತಲುಪುತ್ತಿದ್ದಂತೆಯೇ ಖೇರ್ಲಾದ ನರಸಿಂಗ್‌ನ ಸಹಚರನಾಗಿದ್ದ ಸ್ಥಳೀಯ ಅಧಿಕಾರಿಯು ಫಿರೋಜ್‌ನಿಗೆ ಶರಣು ಬಂದ. ಕಪ್ಪಕಾಣಿಕೆ ಸಲ್ಲಿಸಲು ಅನುವು ಮಾಡಬೇಕು ಎಂದು ಮನವಿ ಮಾಡಿದ. ಅದಕ್ಕೆ ಒಪ್ಪಿಕೊಂಡ ಫಿರೋಜ್‌ನು ಮಾಹುರ್‌ದ ಅರಮನೆಯಲ್ಲಿಯೇ ಸುಮಾರು ಒಂದು ತಿಂಗಳಿಗೂ ಹೆಚ್ಚು ಕಾಲ ವಾಸ್ತವ್ಯ ಮಾಡಿದ. ಖೇರ್ಲಾದ ನರಸಿಂಗ್‌ನಿಗೆ ಸಹಾಯಹಸ್ತ ಚಾಚಲು ಗೊಂಡ್ವಾನದ ಮುಖ್ಯಸ್ಥ ಕೂಡ ನಿರಾಕರಿಸಿದ. ಅಂತಿಮ ಎಚ್ಚರಿಕೆಗೂ ನರಸಿಂಗ್ ಮಣಿಯದಾದಾಗ ಯುದ್ಧ ನಡೆಸುವುದು ಫಿರೋಜ್‌ನಿಗೆ ಅನಿವಾರ್ಯವಾಯಿತು. ಸುಲ್ತಾನ್‌ನು ಮಾಹುರ್‌ನಿಂದ ಎಲಿಚಿಪುರಕ್ಕೆ ಬರುವ ಮುನ್ನವೇ ಯುದ್ಧ ಆರಂಭವಾಗಿತ್ತು. ಎಡಗಡೆಯಿಂದ ಫಜ್ಲುಲ್ ಇಂಜು ಹಾಗೂ ಬಲಗಡೆಯಿಂದ ಖಾನ್ ಎ ಖಾನನ್ ದಾಳಿ ಆರಂಭಿಸಿದ್ದರು. ಯುದ್ಧದಲ್ಲಿ ಬಹಮನಿಯ ಪ್ರಮುಖ ಅಮೀರರಾದ ಶುಜಾತ್‌ಖಾನ್, ಬಹದ್ದೂರಖಾನ್, ದಿಲಾವರ್‌ಖಾನ್, ರುಸ್ತುಂಖಾನ್ ಅಸುನೀಗಿದರು. ಸೈನ್ಯಕ್ಕೆ ಹಿನ್ನಡೆ ಆಗಬಾರದು ಎಂಬ ಕಾರಣದಿಂದ ಬಹಮನಿ

ಅಮೀರ್‌ರ ಮರಣದ ಸುದ್ದಿಯನ್ನು ಗುಟ್ಟಾಗಿ ಇಡಲಾಯಿತು. ಅಷ್ಟೊತ್ತಿಗಾಗಲೇ ಫಿರೋಜ್‌ನ ಸೈನ್ಯವು ಎಲಿಚಪುರ ತಲುಪಿತು.ಖಾನ್ ಎ ಖಾನನ್ ಮತ್ತು ಇಂಜು ಇಬ್ಬರೂ ಸೇರಿ ನರಸಿಂಗ್‌ನ ಪುತ್ರ ಕೌಶಲ್‌ಸಿಂಗ್ ಖೇರ್ಲಾದ ಅರಮನೆಯಿಂದ ಹೊರಗೆ ಬರದಂತೆ ಮುತ್ತಿಗೆ ಹಾಕಿದರು. ಎರಡು ತಿಂಗಳ ಕಾಲ ಮುತ್ತಿಗೆ ಮುಂದುವರೆಯಿತು. ಕೊನೆಗೆ ನರಸಿಂಗ್ ಶಸ್ತ್ರಾಸ್ತ್ರ ಕೆಳಗಿಡಬೇಕಾಯಿತು. ಕಪ್ಪ ಕಾಣಿಕೆ ನೀಡುವುದಕ್ಕಾಗಿ ಸ್ವತಃ ನರಸಿಂಗ್‌ನೆ ಎಲಿಚಪುರಕ್ಕೆ ಬರಬೇಕಾಯಿತು. ತನ್ನ ಪುತ್ರಿಯನ್ನು 'ಅರಸನ ದಾಸಿ'ಯಾಗಿ ಒಪ್ಪಿಕೊಳ್ಳುವಂತೆ ಮನವಿ ಮಾಡಿದ ನರಸಿಂಗ್ ನಲವತ್ತು ಆನೆ, ಅಪಾರ ಪ್ರಮಾಣದ ಚಿನ್ನ-ಬೆಳ್ಳಿ ಉಡುಗೊರೆಯಾಗಿ ನೀಡಿದ. ಅದಕ್ಕೆ ಪ್ರತಿಯಾಗಿ ಫಿರೋಜ್‌ನು ಖೇರ್ಲಾದ ಅಮೀರ್‌ನನ್ನಾಗಿ ಮುಂದುವರೆಸಿದ.

ಖೇರ್ಲಾದ ನಂತರ ಫಿರೋಜ್‌ನು ತೆಲಂಗಾಣದತ್ತ ದಂಡಯಾತ್ರೆ ಆರಂಭಿಸಿದ. ತೆಲಂಗಾಣದಲ್ಲಿ ವೇಲಾಸ್ ಮತ್ತು ವೆಲಮಾಸ್ ನಡುವೆ ಕಿತ್ತಾಟ ಆರಂಭವಾಗಿತ್ತು. ಬಹಮನಿ ಸುಲ್ತಾನ್‌ನು ವೆಲಮಾಸ್‌ರನ್ನು ಬೆಂಬಲಿಸಿದರೆ ವಿಜಯನಗರದ ಅರಸರು ವೇಲಾಸ್‌ರ ಪರವಾಗಿದ್ದರು. ಈ ದಂಡಯಾತ್ರೆಯ ನಂತರ ತೆಲಂಗಾಣವು ಫಿರೋಜ್‌ನ ಆಳ್ವಿಕೆಗೆ ಸೇರಿಕೊಂಡಿತು.

## ತೈಮೂರ್‌ನ ಜೊತೆ ಸಂಪರ್ಕ

ದಖನ್ ಜೊತೆಗೆ ಅಂತರರಾಷ್ಟ್ರೀಯ ಸಂಬಂಧದ ಕುರಿತು ವಿಶೇಷ ಬೆಳಕು ಚೆಲ್ಲುವ ಅಗತ್ಯವಿದೆ. ಬಹಮನಿ ಅರಸ ಫಿರೋಜ್‌ನು ತೈಮೂರ್‌ನ ಜೊತೆಗೆ ಸಂಪರ್ಕ ಸಾಧಿಸಿದ್ದ ಸಂಗತಿ ದಾಖಲಾಗಿದೆ. ಮೊಗಲ್ ಅರಸರ ಪೂರ್ವಜನಾದ ತೈಮೂರ್‌ನು ಭಾರತದ ಮೇಲೆ ದಾಳಿ ನಡೆಸಲಿದ್ದಾನೆ ಮತ್ತು ತನ್ನ ಒಬ್ಬ ಮಗನನ್ನು ದೆಹಲಿಯ ಸಿಂಹಾಸನದ ಮೇಲೆ ಕೂಡಿಸಲಿದ್ದಾನೆ ಎಂಬ ಸಂಗತಿ ಫಿರೋಜ್‌ನಿಗೆ ಗೊತ್ತಾಯಿತು. ನಡೆಯಬಹುದಾದ ಘಟನೆಯ ಮಹತ್ವ ಅರಿತ ಫಿರೋಜ್‌ನು ತನ್ನ ಸಂದೇಶವನ್ನು ಮೀರ್ ಫಜ್ಲುಲ್ ಇಂಜುವಿನ ಅಳಿಯ ಅಮೀರ್ ನಖಿಯುದ್ದೀನ್ ಮುಹಮ್ಮದ್ ಮತ್ತು ಮೌಲಾನಾ ಫಜ್ಲುಲ್ ಸಬ್ಜವಾರಿಯನ್ನು ಸಮುದ್ರದ ಮಾರ್ಗವಾಗಿ ತೈಮೂರ್‌ನ ರಾಜಧಾನಿ ಸಮರಖಂಡ್‌ಗೆ ಕಳುಹಿಸಿದ. ಆರು ತಿಂಗಳ ಕಾಲ ಕಾಯ್ದು ಫಿರೋಜ್‌ನ ಸಂದೇಶವನ್ನು ತೈಮೂರ್‌ನಿಗೆ ತಲುಪಿಸಿದರು. ಅದಕ್ಕೆ ಪ್ರತಿಯಾಗಿ ತೈಮೂರ್‌ನು ಫಿರೋಜ್‌ನಿಗೆ ಒಂದು ಫರ್ಮಾನು ಕಳುಹಿಸಿದ. ಫಿರೋಜ್‌ನನ್ನೇ ತನ್ನ ಮಗನೆಂದು ಭಾವಿಸುವುದಾಗಿ

ತಿಳಿಸಿದ ತೈಮೂರ್‌ನು ಫಿರೋಜ್‌ನು ತನ್ನ ಪ್ರಭುತ್ವವನ್ನು ಬಳಸಬಹುದು ಎಂದು ಸೂಚಿಸಿದನು. ಅಮೂಲ್ಯ ಉಡುಗೊರೆಗಳ ಜೊತೆಗೆ ದಖನ್‌ನ ಸಾಮ್ರಾಟ ಎಂದು ಮಾನ್ಯ ಮಾಡಿ ಗುಜರಾತ್ ಮತ್ತು ಮಾಳವ, ಖಾಂದೇಶ್‌ಗಳು ಅದರ ವ್ಯಾಪ್ತಿಗೆ ಬರುತ್ತವೆ ತಿಳಿಸಿದ. ವಾಸ್ತವವಾಗಿ ಈ ಮೂರು ರಾಜ್ಯಗಳು ತೈಮೂರ್‌ನ ಅಥವಾ ಫಿರೋಜ್‌ನ ಆಡಳಿತದ ವ್ಯಾಪ್ತಿಯಲ್ಲಿ ಬಂದಿರಲಿಲ್ಲ. ತೈಮೂರ್‌ನ ಫರ್ಮಾನ್‌ನ ಮಾಹಿತಿ ತಿಳಿದ ಖಾಂದೇಶ್ ಮತ್ತು ಮಾಳವಾದ ಅರಸರು ಮುಂದೇನಾಗಬಹುದೋ ಎಂಬ ಆತಂಕದಿಂದ ತೈಮೂರ್‌ನಿಗೆ 'ದಖನ್‌ನಲ್ಲಿ ಸಹೋದರರಂತೆ ಬಾಳುತ್ತಿರುವುದಾಗಿ' ತಿಳಿಸಿದರು. ಅದೇ ಕಾಲಕ್ಕೆ ವಿಜಯನಗರದ ಅರಸನಿಗೂ 'ದಖನ್ ವಿರುದ್ಧ ಅಗತ್ಯವಿರುವ ಸಹಾಯ' ಮಾಡುವ ಭರವಸೆ ನೀಡುವ ಸಂದೇಶವನ್ನು ಕಳುಹಿಸಿದರು. ಇದರ ಫಲವಾಗಿಯೇ ವಿಜಯನಗರದ ಅರಸ ಫಿರೋಜ್‌ನಿಗೆ ನೀಡುವ ವಾರ್ಷಿಕ ಕಪ್ಪ ನೀಡಲು ನಿರಾಕರಿಸಿದ. ಆದರೂ ಫಿರೋಜ್ ವಿಜಯನಗರದ ಮೇಲೆ ದಾಳಿ ನಡೆಸಲಿಲ್ಲ. ಆದರೆ, ಒಂದು ಅನಪೇಕ್ಷಿತ, ಅನಿರೀಕ್ಷಿತ ಕಾರಣದಿಂದ ವಿಜಯನಗರ ಮತ್ತು ಬಹಮನಿಗಳ ನಡುವೆ ಯುದ್ಧ ನಡೆಯಿತು.

ವಿಜಯನಗರದ ಅರಸನಾಗಿ ಹರಿಹರನ ಪುತ್ರ ಬುಕ್ಕನ ಸಹೋದರ ಒಂದನೇ ದೇವರಾಯ ಅಧಿಕಾರ ಸ್ವೀಕರಿಸಿದ. 1406ರ ಕೊನೆಯಲ್ಲಿ ದೇವರಾಯನಿಗೆ ಅಂಕುರಿಸಿದ ಪ್ರೇಮವು ದಖನ್‌ನ ಇತಿಹಾಸದಲ್ಲಿ ಹಿಂದು-ಮುಸ್ಲಿಮ್ ಮೈತ್ರಿಯ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿತು. ಮುಲ್ಲಾ ದಾವುದ್ ಬಿದರಿಯ ಮಾಹಿತಿಯ ಮೇರೆಗೆ ಫೆರಿಸ್ತಾ ಈ ಘಟನೆಯ ವಿವರಗಳನ್ನು ನೀಡುತ್ತಾನೆ. ಬಹಮನಿ ಸಾಮ್ರಜ್ಯದ ವ್ಯಾಪ್ತಿಯಲ್ಲಿ ಬರುವ ಮುದಗಲ್‌ನಲ್ಲಿ ಅರ್ಕಸಾಲಿಯ ಅತಿಲೋಕ ಸುಂದರಿ ಪುತ್ರಿಯ ಮಾಹಿತಿಯು ವಿಜಯನಗರದ ಅರಸನಿಗೆ ದೊರೆಯಿತು. ಸಂಗೀತ, ನೃತ್ಯ ಕಲೆಗಳಲ್ಲಿಯೂ ನಿಷ್ಣಾತಳಾಗಿದ್ದ ಪಾರ್ಥಳ್‌ನ್ನು ವಶಪಡಿಸಿಕೊಳ್ಳಲು ನಿರ್ಧರಿಸಿ ಅದಕ್ಕಾಗಿ ಕೆಲವರ ಒಂದು ನಿಯೋಗ ಕಳುಹಿಸಿದ. ನಿಯೋಗದಲ್ಲಿದ್ದ ಬ್ರಾಹ್ಮಣನು ಅರ್ಕಸಾಲಿಗೆ ಅವನ ಮಗಳನ್ನು ವಿಜಯನಗರಕ್ಕೆ ಕಳುಹಿಸಿದರೆ ರಾಣಿವಾಸಕ್ಕೆ ಸೇರಿಸುವುದಾಗಿ ತಿಳಿಸಿದ. ಅದಕ್ಕೆ ಪ್ರತಿಕ್ರಿಯಿಸಿದ ಪಾರ್ಥಳ್ ವಿಜಯನಗರದ ರಾಣಿವಾಸ ಸೇರಿದ ಯಾರೊಬ್ಬರೂ ಮರಳಿ ಬಂದ ಉದಾಹರಣೆ ಇಲ್ಲ ಎಂದು ತಿಳಿಸಿ ವಿಜಯನಗರಕ್ಕೆ ಹೋಗಲು ನಿರಾಕರಿಸಿದಳು. ಇದನ್ನು ಕೇಳಿದ ದೇವರಾಯ ಸ್ನೇಹಿತರ ಸಲಹೆಗೆ ವಿರುದ್ಧವಾಗಿ ಮೂವತ್ತು ಸಾವಿರ ಸೈನ್ಯದೊಂದಿಗೆ ದಂಡೆತ್ತಿ ಬಂದ. ತುಂಗಭದ್ರಾ ನದಿ ದಾಟಿ ಮುದುಗಲ್ ಕಡೆಗೆ ಪ್ರಯಾಣ ಬೆಳೆಸಿದ. ಅರ್ಕಸಾಲಿಯ ಪುತ್ರಿಯನ್ನು ವಿಜಯನಗರಕ್ಕೆ

ಕೊಂಡೊಯ್ಯುವುದೇ ದಾಳಿಯ ಪ್ರಮುಖ ಉದ್ದೇಶ ಆಗಿತ್ತು. ಅದಕ್ಕಾಗಿ ಬಹಮನಿ ಅರಸರ ಜೊತೆಗಿನ ಒಪ್ಪಂದವನ್ನು ಕೂಡ ಮುರಿಯಬೇಕಾಯಿತು. ವಿಜಯನಗರದ ಅರಸರ ದಾಳಿಯ ಸುದ್ದಿ ತಿಳಿಯುತ್ತಲೇ ಅರ್ಕಸಾಲಿ ಮತ್ತವನ ಪುತ್ರಿಯು ಕಾಡಿಗೆ ಹೋಗಿ ತಲೆ ಮರೆಸಿಕೊಂಡರು. ದೋಆಬ್‌ನ ಆಡಳಿತಾಧಿಕಾರಿ ಫೌಲುದ್‌ಖಾನ್ ಅವರಿಗೆ ರಕ್ಷಣೆ ನೀಡಿ ಫಿರೋಜಾಬಾದ್‌ನಲ್ಲಿ ಇದ್ದ ಸುಲ್ತಾನ್‌ನಿಗೆ ವಿವರವಾದ ಮಾಹಿತಿ ಕಳುಹಿಸಿದ.

1407ರಲ್ಲಿ ಸುಲ್ತಾನ್‌ನು ಬೃಹತ್ ಪ್ರಮಾಣದ ಸೈನ್ಯದೊಂದಿಗೆ ದಕ್ಷಿಣದ ಕಡೆಗೆ ನಡೆದ. ಅವನ ಜೊತೆಗೆ ಖಾನ್ ಏ ಖಾನನ್ ಮತ್ತು ಇಂಜು ಕೂಡ ಇದ್ದರು. ಎರಡೂ ನದಿಗಳನ್ನು ದಾಟಿ ವಿಜಯನಗರದ ಹೊರವಲಯ ತಲುಪಿದರು. ಆಗ ನೇರವಾಗಿ ಫಿರೋಜ್‌ನಿಗೆ ಬಾಣ ಬಂದು ತಲುಪಿತು. ಗಾಯಗೊಂಡಿದ್ದ ಅರಸನೇ ಸ್ವತಃ ತನಗೆ ತಗುಲಿದ್ದ ಬಾಣವನ್ನು ಕಿತ್ತು ಎಸೆದ. ಉತ್ತಮ ಕಾವಲು ಇದ್ದ ವಿಜಯನಗರವನ್ನು ವಶಕ್ಕೆ ತೆಗೆದುಕೊಳ್ಳುವುದು ಸುಲಭದ ಕೆಲಸವಲ್ಲ ಎಂದು ಅರಿತ ಫಿರೋಜ್ ತನ್ನ ಸೈನ್ಯವನ್ನು ಎರಡು ಭಾಗ ಮಾಡಿದ. ಖಾನ್ ಏ ಖಾನನ್ ಮತ್ತು ಸರ್‌ನೌಬತ್ ಸಿದು ನೇತೃತ್ವದ ಸೈನ್ಯವನ್ನು ಬಂಕಾಪುರ ಮುತ್ತಿಗೆ ಹಾಕಲು ಕಳುಹಿಸಿದ. ಮತ್ತೊಂದು ಪಡೆಯ ನೇತೃತ್ವದ ವಹಿಸಿದ ಅರಸ ವಿಜಯನಗರದ ಮುತ್ತಿಗೆಯನ್ನು ಮುಂದುವರೆಸಿದ. ಆಗ ವಿಜಯನಗರದ ಅರಸು ಸಹಾಯ ಹಸ್ತಚಾಚಿ ಖಾಂದೇಶ್, ಗುಜರಾತ್ ಮತ್ತು ಮಾಳವಾ ಅರಸರಿಗೆ ಪತ್ರ ಬರೆದ. ಆದರೆ, ಅವರಿಂದ ಯಾವುದೇ ರೀತಿಯ ಸಹಾಯ ದೊರೆಯಲಿಲ್ಲ. ಈ ಮಧ್ಯೆ ಬಂಕಾಪುರವು ಖಾನ್ ಏ ಖಾನನ್ ಮತ್ತು ಸಿಧುನ ವಶವಾಯಿತು. ಬೃಹತ್ ಪ್ರಮಾಣದ ಸೆರೆಯಾಳುಗಳೊಂದಿಗೆ ಖಾನ್ ಏ ಖಾನನ್ ಮರಳಿದ. ಸುಲ್ತಾನ್‌ನ ಪಾಳಯದಲ್ಲಿ ಸಡಗರ ಸಂಭ್ರಮ ಮನೆಮಾಡಿತ್ತು.

ಆದರೂ ವಿಜಯನಗರ ವಶಪಡಿಸಿಕೊಳ್ಳುವುದು ಕಷ್ಟ ಎಂದು ಅರಿತ ಫಿರೋಜ್‌ನು ಆದೋನಿಯ ಮೇಲೆ ದಾಳಿ ನಡೆಸಲು ಯೋಚಿಸಿದ. ಖಾನ್ ಏ ಖಾನನ್ ಆದೋನಿಯ ಕಡೆಗೆ ತನ್ನ ಸೈನ್ಯದೊಂದಿಗೆ ಹೊರಟು ಅಲ್ಲಿನ ವಿಜಯನಗರದ ಸೈನ್ಯಕ್ಕೆ ಸೋಲಿನ ರುಚಿ ಉಣಿಸಿದ. ಸುಲ್ತಾನ್ ಬೃಹತ್ ಸೈನ್ಯದೊಂದಿಗೆ ದಾಳಿ ನಡೆಸಲಿರುವ ಮಾಹಿತಿ ಪಡೆದ ವಿಜಯನಗರದ ದೊರೆಯು ಒಪ್ಪಂದ ಮಾಡಿಕೊಳ್ಳುವುದಕ್ಕೆ ಮನಸ್ಸು ಮಾಡಿ ಸಂದೇಶ ಕಳುಹಿಸಿಕೊಟ್ಟ. ಪ್ರಧಾನಿ ಇಂಜುವಿನ ಮೂಲಕ ಫಿರೋಜ್‌ನನ್ನು ತಲುಪಿದ ಒಪ್ಪಂದದಲ್ಲಿ ದೇವರಾಯನು ತನ್ನ ಮಗಳನ್ನು ಸುಲ್ತಾನ್‌ನಿಗೆ ಮದುವೆ ಮಾಡಿಕೊಡಬೇಕು. ಮತ್ತು ಹತ್ತು ಲಕ್ಷ ಚಿನ್ನದ ನಾಣ್ಯ, ಐದು ಮಣ ಮುತ್ತು ಹಾಗೂ 50 ಆನೆ, ಎರಡು ಸಾವಿರ ಸಂಗೀತ,

ನೃತ್ಯದಲ್ಲಿ ಪರಿಣಿತರಾದ ಪುರುಷ ಮತ್ತು ಮಹಿಳಾ ಗುಲಾಮರನ್ನು ನೀಡಬೇಕು. ಈಗಾಗಲೇ ಸುಲ್ತಾನ್‌ನ ವಶದಲ್ಲಿದ್ದ ಬಂಕಾಪುರವನ್ನು ವರದಕ್ಷಿಣೆಯಾಗಿ ಸುಲ್ತಾನ್‌ನಿಗೆ ಬಿಟ್ಟುಕೊಡಬೇಕು ಎಂಬ ಒಪ್ಪಂದಕ್ಕೆ ಬರಲಾಯಿತು.

ಈ ಒಪ್ಪಂದದೊಂದಿಗೆ ದಖನ್‌ನ ಇತಿಹಾಸದಲ್ಲಿ ಮೊದಲ ಬಾರಿಗೆ ಮುಸ್ಲಿಮ್ ಅರಸನೊಬ್ಬ ಹಿಂದು ರಾಜಕುಮಾರಿಯನ್ನು ಮದುವೆಯಾದ ಘಟನೆ ದಾಖಲಾಯಿತು. ಸುಲ್ತಾನ್‌ನು ವಿಜಯನಗರದಿಂದ 21 ಕಿ.ಮೀ. ದೂರದಲ್ಲಿ ಬಿಡಾರ ಹೂಡಿದ್ದ. ಹಳೆಯ ದ್ವೇಷ ಮರೆಯಲಾಯಿತು. ವಿಜಯನಗರದ ರಾಜಧಾನಿಯನ್ನು ಸಡಗರದಿಂದ ಸಿಂಗರಿಸಲಾಯಿತು. ಬಿಡಾರ ಹೂಡಿದ್ದ ಪ್ರದೇಶದಿಂದ ಅರಮನೆಯವರೆಗೆ ರಸ್ತೆಯ ಇಕ್ಕೆಲಗಳಲ್ಲಿ ಹಿಂದು-ಮುಸ್ಲಿಮ್ ಸಮುದಾಯಕ್ಕೆ ಸೇರಿದ ಜನ ಕಾದು ನಿಂತಿದ್ದರು. ಕನ್ಯೆಯನ್ನು ಕರೆತರಲು ಫಿರೋಜ್‌ನ ಸಹೋದರ ಖಾನ್ ಏ ಖಾನನ್ ಮತ್ತು ಪ್ರಧಾನಿ ಇಂಜುವನ್ನು ಕಳುಹಿಸಲಾಗಿತ್ತು. ವಿಜಯನಗರದಿಂದ ಕನ್ಯೆಯು ಆಗಮಿಸುತ್ತಿದ್ದಂತೆಯೇ ಸ್ವತಃ ಫಿರೋಜ್‌ನೇ ಕುದುರೆಯ ಮೇಲೆ ಕುಳಿತು ಮಾವನಿಗೆ ಗೌರವ ಸಲ್ಲಿಸಲು ಹೊರಟ. ನಗರದ ಹೊರವಲಯದಲ್ಲಿಯೇ ಕಾದು ನಿಂತಿದ್ದ ರಾಯ ಫಿರೋಜ್‌ನಿಗೆ ಕೆಂಪು ಹಾಸಿನ ಸ್ವಾಗತ ಕೋರಿದ, ಅಮೂಲ್ಯ ಉಡುಗೊರೆಗಳನ್ನು ನೀಡಿದ. ಇಬ್ಬರು ಸಾಮ್ರಾಟರು ಜೊತೆಯಾಗಿ ನಡೆದು ಬರುತ್ತಿರುವುದನ್ನು ನೋಡಿ ಜನತೆ ಪುಷ್ಪವೃಷ್ಟಿ ಮಾಡಿದರು. ಹಿಂದು-ಮುಸ್ಲಿಮ್ ಮೈತ್ರಿಯ ಹೊಸ ಅಧ್ಯಾಯ ಆರಂಭ ಆಗಿರುವುದನ್ನು ನೋಡಿ ಜನ ಸಂಭ್ರಮಿಸಿದರು. ಮೂರು ದಿನಗಳ ಕಾಲ ವಿಜಯನಗರದ ಅರಮನೆಯಲ್ಲಿದ್ದ ಫಿರೋಜ್ ತನ್ನ ಶಿಬಿರಕ್ಕೆ ಮರಳಿದಾಗ ಜೊತೆಯಲ್ಲಿ ಅಪಾರ ಪ್ರಮಾಣದ ಉಡುಗೊರೆಗಳಿದ್ದವು. ಶಿಬಿರದಲ್ಲಿಯೇ ಹಲವು ಕಾಲ ಉಳಿದಿದ್ದ ಫಿರೋಜ್ ಅರ್ಕಸಾಲಿ ಮತ್ತು ಅವನ ಪುತ್ರಿಯನ್ನು ಕರೆಸಿದ. ಅರ್ಕಸಾಲಿಯ ಪುತ್ರಿಯ ಮದುವೆಯನ್ನು ತನ್ನ ಪುತ್ರ ಹಸನ್‌ನ ಜೊತೆ ಮಾಡಿದ ಫಿರೋಜ್‌ನು ಅರ್ಕಸಾಲಿಗೆ ಬೆಲೆ ಬಾಳುವ ಉಡುಗೊರೆಗಳನ್ನು ನೀಡಿ ಕಳುಹಿಸಿದ.

ಎರಡು ಸಾಮ್ರಾಜ್ಯಗಳ ನಡುವೆ ಶಾಂತಿ- ಸೌಹಾರ್ದದ ಸಂಬಂಧ ಆರಂಭವಾಯಿತಾದರೂ ದುರ್ದೈವವಶಾತ್ ಅದು ಹೆಚ್ಚು ಕಾಲ ಮುಂದುವರೆಯಲಿಲ್ಲ. 1417ರಲ್ಲಿ ಫಿರೋಜ್ ಪೂರ್ವ ಕರಾವಳಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಬಯಸಿದ. ಕೊಂಡವಿಡುವಿನ ವೇಮ ಫಿರೋಜ್‌ನ ಸೈನ್ಯವನ್ನು ಎದುರಿಸಲು ಸಿದ್ಧನಾಗಿದ್ದ. ಅವನಿಗೆ ಓರಿಸ್ಸಾದ ಗಂಗದೊರೆಯ ಬೆಂಬಲ ಇತ್ತು. ಇದೇ ಹೊತ್ತಿಗೆ ವಿಜಯನಗರದ ಅರಸು

ತೆಲಂಗಾಣದ ಮೇಲೆ ದಾಳಿ ನಡೆಸಿದ. ವಿಜಯನಗರದ ದೊರೆ ವಾರ್ಷಿಕ ಕಪ್ಪ ಕೊಡುವುದನ್ನ ನಿಲ್ಲಿಸಿದ್ದ ಜಗಳ ಕಾಯಲು ಫಿರೋಜ್‌ನಿಗೆ ಅಷ್ಟು ಸಾಕಾಗಿತ್ತು. ವಿಜಯನಗರದ ಅರಸರಿಗೂ ತಮ್ಮ ಶಕ್ತಿ ಪ್ರದರ್ಶನ ಮಾಡುವ ಬಯಕೆ ಉಂಟಾಗಿತ್ತು. ಅದಕ್ಕಾಗಿ ಪನಗಲ್ ಕೋಟೆಗೆ ವಿಜಯನಗರ ಮುತ್ತಿಗೆ ಹಾಕಿ ವಶಪಡಿಸಿಕೊಂಡಿದೆ ಎಂಬ ಸುದ್ದಿ ಹರಡಿತು. ಆದರೆ, ವಾಸ್ತವವಾಗಿ ಅದು ವೇಲಮರ ವ್ಯಾಪ್ತಿಯಲ್ಲಿಯೇ ಇತ್ತು. ಇದನ್ನು ಅರಿಯದ ಫಿರೋಜ್‌ನು ಪನಗಲ್ ಕೋಟೆಗೆ ಮುತ್ತಿಗೆ ಹಾಕಿದನು. ಎರಡು ವರ್ಷಗಳ ಕಾಲ ಮುಂದುವರೆದ ಮುತ್ತಿಗೆಯಿಂದಾಗಿ ಪನಗಲ್‌ಗೆ ಯಾವುದೇ ರೀತಿಯ ಸಂಪರ್ಕ, ಸೌಲಭ್ಯ ದೊರಕದಂತೆ ಫಿರೋಜ್ ನೋಡಿಕೊಂಡ. ಇದರ ಫಲವಾಗಿ ವಿಜಯನಗರದ ಅರಸರು ವೇಲಮರನ್ನು ತಮ್ಮ ಕಡೆಗೆ ಸೇರಿಸಿಕೊಳ್ಳುವಲ್ಲಿ ಯಶಸ್ವಿಯಾದರು. ವಿಜಯನಗರದ ಬೃಹತ್ ಸೈನ್ಯವು ಪನಗಲ್ ಬಿಡಿಸಿಕೊಳ್ಳುವುದಕ್ಕಾಗಿ ವೇಲಮರ ಜೊತೆ ಹೊರಟಿತು. ವೇಲಮರು ಮೊದಲ ಬಾರಿಗೆ ವಿಜಯನಗರದ ಅರಸರ ಜೊತೆ ಸೇರಿದ್ದರಿಂದ ಅದರ ಫಲಿತಾಂಶ ಬಹುತೇಕ ನಿರ್ಧಾರವಾದಂತಿತ್ತು. ಈ ಯುದ್ಧದಲ್ಲಿ ಖಾನ್ ಏ ಖಾನನ್ ತೀವ್ರವಾಗಿ ಗಾಯಗೊಂಡ. ಬಹಮನಿ ಸೈನ್ಯ ಭಾರಿ ಹಿನ್ನಡೆ ಅನುಭವಿಸಬೇಕಾಯಿತು. ಫಿರೋಜ್‌ನ ಮಾರ್ಗದರ್ಶಕ, ಸ್ನೇಹಿತನಾಗಿದ್ದ ಇಂಜುವನ್ನು ಅವನ ಬೆಂಗಾವಲು ಪಡೆಯವರೇ ಕೊಲೆಗೈದರು. ದೇವರಾಯನ ಸೈನ್ಯವು ಫಿರೋಜ್‌ನ ಸೈನ್ಯವನ್ನು ಬೆನ್ನಟ್ಟಿತು. ಮೇದಕ್‌ವರೆಗೂ ತಪ್ಪಿಸಿಕೊಂಡು ಬರಬೇಕಾದರೆ ಸಾಕು ಬೇಕಾಯಿತು. ಹತಾಶನಾದ ಫಿರೋಜ್‌ನು ಇಂಜುವಿನ ಪುತ್ರ ಘಿಯಾಸುದ್ದೀನ್‌ನ ನೇತೃತ್ವದ ಸೈನ್ಯವನ್ನು ಗುಜರಾತಿಗೆ ಕಳುಹಿಸಿದ. ಆದರೆ, ಅಲ್ಲಿಯೂ ಯಶಸಿಗದೆ ಮರಳಬೇಕಾಯಿತು. ವಿಜಯನಗರದ ಅರಸರಿಂದ ದೋಆಬ್ ಪ್ರದೇಶ ಮರಳಿ ಪಡೆಯಲು ಖಾನ್ ಏ ಖಾನನ್ ಬಹಳಷ್ಟು ಕಷ್ಟಪಡಬೇಕಾಯಿತು.

1422ರ ಕೊನೆಯ ತಿಂಗಳು ವಿಜಯನಗರದ ದೇವರಾಯ ಮತ್ತು ಫಿರೋಜ್ ಇಬ್ಬರ ಅಂತ್ಯ ಕಂಡಿತು. ಫಿರೋಜ್‌ನು 1415ರಲ್ಲಿಯೇ ತನ್ನ ಪುತ್ರ ಹಸನ್‌ಖಾನ್‌ನನ್ನು ಯುವರಾಜನನ್ನಾಗಿ ಘೋಷಿಸಿದ್ದ. ಪ್ರಭುತ್ವದ ಸಂಕೇತಗಳನ್ನು ಬಳಸಲು ಅನುವು ಮಾಡಿಕೊಟ್ಟಿದ್ದ. ಹಸನ್‌ಶಹಾ ಎಂಬ ಹೆಸರಿನೊಂದಿಗೆ ಸಿಂಹಾಸನ ಏರಬೇಕು ಎಂದು ಕೂಡ ನಿರ್ಧರಿಸಿದ್ದ. ಯಾವುದೇ ರೀತಿಯ ವಾರಸುದಾರಿಕೆಯ ಗೊಂದಲ ಉಂಟಾಗದಂತೆ ವ್ಯವಸ್ಥೆ ಮಾಡಿದ್ದ.

ಇದಾಗುವ ಕೆಲವು ದಿನಗಳ ಮೊದಲು. ಹಜರತ್ ಸೈಯದ್ ಮುಹಮ್ಮದ್ ಗೇಸು ದರಾಜ್ ಗುಲ್ಬರ್ಗಕ್ಕೆ ಆಗಮಿಸಿದ್ದರು. ಸಂತ ಮತ್ತು ಸುಲ್ತಾನ್‌ನ ನಡುವಿನ

ಭಿನ್ನಾಭಿಪ್ರಾಯದಿಂದಾಗಿ ಬಂದೇ ನವಾಜ್‌ರು ಅರಮನೆಯಿಂದ ದೂರ ಇರುವ ಪ್ರದೇಶಕ್ಕೆ ತೆರಳಬೇಕಾಯಿತು. ಫಿರೋಜ್‌ನ ಸಹೋದರ ಅಹ್ಮದ್ ಖಾನ್ ಏ ಖಾನನ್‌ನು ದಖನ್‌ನಲ್ಲಿ ಆಧ್ಯಾತ್ಮಿಕ ಮತ್ತು ನೈತಿಕ ಪ್ರಭಾವದ ಮಹತ್ವ ಅರಿತಿದ್ದ. ಅದಕ್ಕಾಗಿಯೇ ಮೇಲಿಂದ ಮೇಲೆ ಖಾನ್‌ಕಾಗೆ ಭೇಟಿ ನೀಡುತ್ತಿದ್ದ. ಭಿನ್ನಾಭಿಪ್ರಾಯವು ಕೇವಲ ಸಂತ ಮತ್ತು ಸುಲ್ತಾನ್‌ರ ನಡುವಿನ ಸಂಗತಿಗೆ ಮಾತ್ರ ಸೀಮಿತವಾಗಿರಲಿಲ್ಲ. ಹಸನ್‌ಖಾನ್‌ನನ್ನು ಯುವರಾಜನನ್ನಾಗಿ ನೇಮಿಸಿದ್ದು ಸುಲ್ತಾನ್ ಮತ್ತು ಖಾನ್ ಏ ಖಾನನ್ ನಡುವಿನ ಅಂತರ ಹೆಚ್ಚುವುದಕ್ಕೆ ಕಾರಣವಾಗಿತ್ತು. ಯುವರಾಜನನ್ನಾಗಿ ಘೋಷಿಸಿದ ನಂತರ ನಡೆದ ವಿಧಿವಿಧಾನಗಳು, ಗಣ್ಯರ ಗೌರವ ಸಮರ್ಪಣೆ ಕೂಡ ಮುಗಿಯಿತು. ಆಗ ಅರಸನು ಯುವರಾಜನನ್ನು ಹರಸುವಂತೆ ಸಂತನ ಬಳಿ ಕೋರಿದ. ಅರಸೊತ್ತಿಗೆಯ ಎಲ್ಲ ಪದವಿಗಳನ್ನು ಪ್ರದಾನ ಮಾಡಿರುವುದರಿಂದ ಪ್ರಾರ್ಥನೆಯಲ್ಲಿ ಹುರುಳಿಲ್ಲ ಎಂದು ಉತ್ತರಿಸಿದ. ಅರಸ ಮತ್ತೆ ಒತ್ತಾಯಿಸಿದಾಗ 'ದೇವರು ಅಹ್ಮದ್‌ನನ್ನು ಅರಸನನ್ನಾಗಿ ಆಯ್ಕೆ ಮಾಡಿದ್ದಾನೆ' ಎಂದು ಪ್ರತಿಕ್ರಿಯಿಸಿದರು. ಅದರಿಂದ ಕೋಪಗೊಂಡ ದೊರೆಯು ಖಾನ್‌ಖಾ ಅರಮನೆಗೆ ಹತ್ತಿರದಲ್ಲಿ ಇರುವುದರಿಂದ ತನಗೆ ಶಾಂತಿ ನೆಮ್ಮದಿ ದೊರಕುತ್ತಿಲ್ಲ. ಆದ್ದರಿಂದ ಅದನ್ನು ಬೇರೆಡೆಗೆ ಸ್ಥಳಾಂತರ ಮಾಡುವಂತೆ ಆದೇಶಿಸಿದ. ಸದ್ಯ ಸಮಾಧಿ ಇರುವ ಸ್ಥಳಕ್ಕೆ ವರ್ಗಾಯಿಸಲಾಯಿತು. ಅಹ್ಮದ್ ಅರಸನಾದ ಕೆಲವು ವಾರಗಳ ನಂತರ 105ನೇ ವರ್ಷದ ವರೆಗೆ ಅಲ್ಲಿಯೇ ಜೀವಿಸಿದ್ದರು.

ಫಿರೋಜ್‌ನಿಗೆ ವೃದ್ಧಾಪ್ಯ ಕಾಡುತ್ತಿತ್ತು. 70 ವರ್ಷ ದಾಟಿದ್ದರಿಂದ ಯೋಚನಾಶಕ್ತಿ ಕೈ ಕೊಡುತ್ತಿತ್ತು. ಮಾಹುರ್‌ನಿಂದ ಮರಳಿದ ನಂತರ ಫಿರೋಜ್ ತನಗೆ ಪ್ರಿಯರಾದ ಹೋಷಿಯಾರ್ ಮತ್ತು ಬೇಡರ್ ಎಂಬ ಗುಲಾಮರನ್ನು ಐನ್‌ಉಲ್ ಮುಲ್ಕ್ ಮತ್ತು ನಿಜಾಮ್ ಉಲ್ ಮುಲ್ಕ್ ಎಂದು ನಿಯಮಿಸಿಕೊಂಡಿದ್ದ. ಮತ್ತು ಸದಾ ಅವರ ಸಲಹೆ–ಸೂಚನೆ ಪಡೆಯುತ್ತಿದ್ದ. ಅಹ್ಮದ್‌ನ ಹೆಚ್ಚುತ್ತಿರುವ ಜನಪ್ರಿಯತೆ ಹಾಗೂ ಗೇಸುದರಾಜ್‌ರ ಆಶೀರ್ವಾದವು ಯುವರಾಜ ಹಸನ್ ರಾಜನಾಗುವುದಕ್ಕೆ ಅಡ್ಡಿಯಾಗಲಿದೆ ಎಂಬ ಅಂಶವನ್ನು ಅರಸನಿಗೆ ತಿಳಿಸಿದರು. ಅಹ್ಮದ್ ಬದುಕಿರುವ ವರೆಗೆ ಹಸನ್ ನೆಮ್ಮದಿಯಿಂದ ಆಡಳಿತ ನಡೆಸಲಾರ ಎಂದು ಹೇಳಿ ಅಹ್ಮದ್‌ನ ಸಾವು ಮಾತ್ರ ಹಸನ್‌ನನ್ನು ಅರಸನನ್ನಾಗಿ ಮಾಡಬಲ್ಲದು ಎಂಬ ಅಭಿಪ್ರಾಯ ನೀಡಿದರು. ತನ್ನ ರಾಜಕೀಯ ಜೀವನದ ಆರಂಭದ ದಿನಗಳಲ್ಲಿ ಮತ್ತು ನಂತರದ ಆಡಳಿತ ನಡೆಸುವ ಸಂದರ್ಭದಲ್ಲಿ ಹೆಗಲೆಣೆಯಾಗಿ ನಿಂತ ಪ್ರಿಯ ಸಹೋದರನನ್ನು ಕೊಲ್ಲಿಸಲು ಫಿರೋಜ್‌ನಿಗೆ ಮನಸ್ಸು ಬರಲಿಲ್ಲ.

ಸಲಹೆಯನ್ನು ತಳ್ಳಿಹಾಕಿದ. ಆಗ ಐನ್ ಉಲ್ ಮುಲ್ಕ್ ಮತ್ತು ನಿಜಾಮ್ ಉಲ್ ಮುಲ್ಕ್‌ರು ಅಹ್ಮದ್‌ನ ಕಣ್ಣು ಕೀಳಿಸುವಂತೆ ಸಲಹೆ ನೀಡಿದರು. ಈ ಸಂಗತಿಯು ಅಹ್ಮದ್‌ನ ಸೋದರ ಸಂಬಂಧಿ ಶೇರ್‌ಖಾನ್‌ಗೆ ತಿಳಿಯಿತು. ಅರಮನೆಯಲ್ಲಿನ ಬೆಳವಣಿಗೆಯನ್ನು ಅಹ್ಮದ್‌ನಿಗೆ ಹೇಳಿ 'ಅಪಾಯದ ಮುನ್ನೆಚ್ಚರಿಕೆ' ನೀಡಿದ. ಖಾನ್ ಏ ಖಾನನ್ ಪುತ್ರ ಜಾಫರ್‌ಖಾನ್‌ನೊಂದಿಗೆ ತನಗೆ ಪ್ರಿಯರಾಗಿದ್ದ ಗೇಸು ದರಾಜ್‌ರ ಬಳಿಗೆ ತೆರಳಿದ. ಆಗ ಗೇಸು ದರಾಜ್ ಅವರು ತನ್ನ ತಲೆಯ ಮೇಲಿನ ರುಮಾಲು ತೆಗೆದು ಎರಡು ತುಂಡು ಮಾಡಿ ಒಂದನ್ನು ಸುತ್ತಿ ಅಹ್ಮದ್‌ನ ತಲೆಯ ಮೇಲೂ ಮತ್ತೊಂದನ್ನು ಜಾಫರ್‌ಖಾನ್‌ನ ತಲೆಯ ಮೇಲೂ ಇಟ್ಟು ಶುಭ ಕೋರಿದರು.

ಅಹ್ಮದ್ ಮನೆಗೆ ಮರಳಿದಾಗ ಬಾಸ್ರಾದಿಂದ ಬಂದಿದ್ದ ಕುದುರೆ ವ್ಯಾಪಾರಿ ಖಲಾಫ್ ಹಸನ್ ಕಾಯುತ್ತಿದ್ದ. ಅಹ್ಮದ್ ತನಗೆ ಎದುರಾಗಿರುವ ಆಪತ್ತು ವಿವರಿಸಿ ಅಲ್ಲಿಂದ ತೆರಳುವಂತೆ ಖಲಾಫ್ ಹಸನ್‌ನಿಗೆ ತಿಳಿಸಿದ. ಆದರೆ, ಖಲಾಫ್ ಹಸನ್ ಅದಕ್ಕೆ ಒಪ್ಪಲಿಲ್ಲ. ಸಿರಿವಂತಿಕೆಯ ದಿನಗಳಲ್ಲಿ ಜೊತೆಗಿದ್ದು ಕಷ್ಟ ಬಂದಾಗ ತಪ್ಪಿಸಿಕೊಂಡು ಹೋಗುವುದು ಸರಿಯಲ್ಲ. ಅಹ್ಮದ್ ಎಲ್ಲಿಗೆ ಹೋಗುತ್ತಾನೆಯೋ ಅಲ್ಲಿಗೆ ಅವನ ಜೊತೆಯಲ್ಲಿಯೇ ಬರುವುದಾಗಿ ಖಲಾಫ್ ಹಸನ್ ತಿಳಿಸಿದ. ಇಬ್ಬರೂ ನಾಲ್ಕು ನೂರು ಜನರ ಬೆಂಗಾವಲು ಪಡೆಯೊಂದಿಗೆ ಖಾನಾಪುರದ ಕಡೆಗೆ ಪ್ರಯಾಣ ಬೆಳೆಸಿದರು. ಅಹ್ಮದ್ ಒಂದು ವೇಳೆ ತಾನು ಅರಸನಾದರೆ ಆ ಪ್ರದೇಶವನ್ನು ರಸೂಲಾಬಾದ್ ಎಂದು ಕರೆದು ಅದನ್ನು ಮೆಕ್ಕಾ, ಮದೀನಾ ಮತ್ತು ಕರ್ಬಲಾದ ಸೈಯದ್‌ರಿಗೆ ಉಂಬಳಿಯಾಗಿ ನೀಡುವುದಾಗಿ ನಿರ್ಧರಿಸಿದ.

ಅಹ್ಮದ್ ತಪ್ಪಿಸಿಕೊಂಡು ಹೋದದ್ದರಿಂದ ಹತಾಶರಾದ ಐನ್ ಉಲ್ ಮುಲ್ಕ್ ಮತ್ತು ನಿಜಾಂ ಉಲ್ ಮುಲ್ಕ್‌ರು ಅರಸನ ಬಳಿ ತೆರಳಿ ಅಹ್ಮದ್‌ನ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿದರು. ಅರಸ ಅಸಹಾಯಕನಾಗಿದ್ದ. 30 ಆನೆಗಳು ಹಾಗೂ 20 ಸಾವಿರ ಪದಾತಿದಳ ಕಲೆ ಹಾಕಿದರು. ತನ್ನ ಸುತ್ತ ನೆರೆದಿದ್ದ ಸೈನ್ಯ ನೋಡಿ ಅಹ್ಮದ್ ತಲೆ ತಪ್ಪಿಸಿಕೊಳ್ಳಲು ಯೋಚಿಸಿದ. ಆಗ ಖಲಾಫ್ ಹಸನ್‌ನು 'ಯುದ್ಧಕ್ಕೆ ಬೆನ್ನು ತೋರಿಸಿ ಹೋಗುವುದು ಹೇಡಿಯ ಲಕ್ಷಣ. ಹೋರಾಟ ಮಾಡಿಯೇ ತೀರಬೇಕು' ಎಂದು ಹೇಳಿದ. ಇದೇ ಸಮಯಕ್ಕೆ ಲಂಬಾಣಿಗಳು ಕಲ್ಯಾಣದಿಂದ ಬೆರಾರ್‌ಗೆ ನೂರಾರು ದನಗಳನ್ನು ಹೊಡೆದುಕೊಂಡು ಹೊರಟಿದ್ದರು. ಕಲ್ಯಾಣಕ್ಕೆ ಹೋದ ಖಲಾಫ್ ಹಸನ್ ಅವುಗಳನ್ನು ಖರೀದಿಸಿದ. ಅವುಗಳ ಕೋಡುಗಳಿಗೆ ಬಟ್ಟೆ ಕಟ್ಟಿ ದೂರದಿಂದ ನೋಡಿದರೆ ಅಶ್ವದಳದಂತೆ ಕಾಣಿಸುವ ಹಾಗೆ ಮಾಡಿದ. ಮುಂದಿನ ಸಾಲುಗಳಲ್ಲಿ

ಮಾತ್ರ ನಿಜವಾದ ಪದಾತಿದಳ ನಿಲ್ಲಿಸಿದ. ತನ್ನ ಬಳಿ ಇದ್ದ ಕೆಲ ಕ್ಷಿಪಣಿಗಳನ್ನು ಗಜದಳದ ಮೇಲೆ ಎಸೆಯುಂತೆ ನೋಡಿಕೊಂಡ. ಇದರಿಂದ ದಿಕ್ಕೆಟ್ಟ ಆನೆಗಳು ತಮ್ಮ ಸೈನಿಕರನ್ನು ತುಳಿಯುತ್ತ ಓಡತೊಡಗಿದವು. ರಣಾಂಗಣದಲ್ಲಿ ಗೊಂದಲದ ವಾತಾವರಣ ಉಂಟಾಯಿತು. ಐನ್ ಉಲ್ ಮುಲ್ಕ್ ಮತ್ತು ನಿಜಾಮ್ ಉಲ್ ಮುಲ್ಕ್ ಇಬ್ಬರೂ ಅಸು ನೀಗಿದರು. ಯುದ್ಧಭೂಮಿಯಲ್ಲಿಯೇ ಅಹ್ಮದ್ ತನ್ನನ್ನು ಅರಸ ಎಂದು ಘೋಷಿಸಿಕೊಂಡ. ವಿಜೇತ ಸೈನ್ಯವು ರಾಜಧಾನಿಗೆ ಮರಳಿತು. ಫಿರೋಜ್‌ನ ಪರವಾಗಿ ಹೋಗಿದ್ದ ಏಳು ಸಾವಿರ ಸೈನಿಕರ ಪರವಾಗಿ ನಾಲ್ಕು ಸಾವಿರ ಜನ ಅಹ್ಮದ್‌ನ ಕಡೆಗೆ ತಿರುಗಿದ್ದರು. ಎಲ್ಲೆಡೆ ಅಹ್ಮದ್‌ನಿಗೆ ಅದ್ದೂರಿ ಸ್ವಾಗತ ದೊರೆಯಿತು. ಹೆಚ್ಚಿನ ಪ್ರತಿರೋಧ ಇಲ್ಲದೇ ಸುಲ್ತಾನ್ ಸುಮ್ಮನಾಗಬೇಕಾಯಿತು. 1422ರ ಸೆಪ್ಟೆಂಬರ್ 22ರಂದು ಗುಲ್ಬರ್ಗದ ದ್ವಾರಗಳು ತೆರೆದುಕೊಂಡವು. ಕೊನೆಗಾಲದಲ್ಲಿದ್ದ ಫಿರೋಜ್‌ನ ಬಳಿಗೆ ತೆರಳಿದ ಅಹ್ಮದ್ ಅವನನ್ನು ಅಪ್ಪಿಕೊಂಡು 'ನನ್ನ ಜೀವ ಉಳಿಸಿಕೊಳ್ಳುವುದಕ್ಕಾಗಿ ಇದನ್ನೆಲ್ಲ ಮಾಡುವುದು ಅನಿವಾರ್ಯ ಆಯಿತು' ಎಂದು ವಿವರಿಸಿದ. ಅದಕ್ಕೆ ಫಿರೋಜ್‌ನು 'ದೇವರು ಸೂಕ್ತ ವ್ಯಕ್ತಿಗೆ ಸಿಂಹಾಸನ ನೀಡಿದ್ದಾನೆ. ನಿನ್ನಂತಹ ಸಬಲ ಸಹೋದರ ಇದ್ದರೂ ಮಗನಿಗೆ ಹಸ್ತಾಂತರ ಮಾಡಲು ಯೋಚಿಸಿದ್ದು ನನ್ನ ತಪ್ಪು. ನಾನು ನಿನ್ನನ್ನು ನೋಡಿಕೊಂಡಂತೆ ಹಸನ್‌ಖಾನ್‌ನನ್ನು ಪ್ರೀತಿ-ಕರುಣೆಯಿಂದ ನೋಡಿಕೊ ಇದೇ ನನ್ನ ಕೊನೆಯ ಆಸೆ' ಎಂದು ಹೇಳಿದ ಫಿರೋಜ್ ತನ್ನ ಸೊಂಟಕ್ಕೆ ಕಟ್ಟಿದ್ದ ಖಡ್ಗ ಬಿಚ್ಚಿ ಅಹ್ಮದ್‌ನ ಕೈಗಿತ್ತ. ಕೈ ಹಿಡಿದು ಕರೆದುಕೊಂಡು ಹೋಗಿ ವೈಢೂರ್ಯಖಚಿತ ಸಿಂಹಾಸನದ ಮೇಲೆ ಅಹ್ಮದ್‌ನನ್ನು ಕೂಡಿಸಿದ. ಅದಾದ ಒಂದು ವಾರದ ನಂತರ ಸೆಪ್ಟೆಂಬರ್ 22ರಂದು ಫಿರೋಜ್ ಕೊನೆಯುಸಿರೆಳೆದ. ಫಿರೋಜ್ ಬಹಮನಿ ಸಾಮ್ರಾಜ್ಯದ ಗುಲ್ಬರ್ಗ ಅವಧಿಯಲ್ಲಿ ಅತ್ಯಂತ ಯಶಸ್ವಿ ಅರಸ. ವಿಜಯನಗರದ ಜೊತೆಗಿನ ಪೈಪೋಟಿಯಲ್ಲಿ ಮೇಲುಗೈ ಸಾಧಿಸಿದ್ದ ಫಿರೋಜ್ ರಾಜಮಹೇಂದ್ರಿ ವರೆಗೆ ಸಾಮ್ರಾಜ್ಯ ವಿಸ್ತರಿಸಿದ್ದ. ಸಂತ ಗೇಸು ದರಾಜ್ ಜೊತೆಗಿನ ವೈಮನಸ್ಸು ಫಿರೋಜ್‌ನ ದೂರದೃಷ್ಟಿಯ ಕೊರತೆಯನ್ನು ಸೂಚಿಸುತ್ತದೆ.

## ಸಾಂಸ್ಕೃತಿಕ ವ್ಯಕ್ತಿತ್ವ

ಇರಾನ್- ಇರಾಕ್ ಸೇರಿದಂತೆ ಮಧ್ಯಪ್ರಾಚ್ಯದ ದೇಶಗಳೊಂದಿಗೆ ವ್ಯಾಪಾರ ವಹಿವಾಟಿನ ಜೊತೆಗೆ ಸಾಂಸ್ಕೃತಿಕ- ಸಾಹಿತ್ಯಕ ಸಂಪರ್ಕ ಬೆಳೆಸಿದ ಹಿರಿಮೆ ಫಿರೋಜನಿಗೆ ಸಲ್ಲಬೇಕು. ವಿಜಯನಗರದ ಅರಸ ಪ್ರೌಢದೇವರಾಯನ ಸಮಕಾಲೀನನಾಗಿದ್ದ ಫಿರೋಜ್‌ನದು ಅಕ್ಷರಶಃ ವರ್ಣರಂಜಿತ ವ್ಯಕ್ತಿತ್ವ.

ಪ್ರೌಢದೇವರಾಯನ ಮಗಳನ್ನು ಮದುವೆಯಾಗುವ ಮೂಲಕ ವಿಜಯನಗರದ ಅರಸರ ಜೊತೆಗಿನ ಜಗಳವನ್ನು ಇಲ್ಲವಾಗಿಸಿದ್ದ.

ಭೀಮಾನದಿಯ ದಂಡೆಯ ಮೇಲೆ ಫಿರೋಜಾಬಾದ್ ನಗರವನ್ನು ನಿರ್ಮಿಸಿದ ಹಿರಿಮೆ ಅವನದು. ಫತೇಪುರ್‌ಸಿಕ್ರಿಯಲ್ಲಿ ಖಗೋಳ ವಿಜ್ಞಾನ ಆಧರಿಸಿದ ಕಟ್ಟಡಗಳು ನಿರ್ಮಾಣವಾಗುವ ಸುಮಾರು 150 ವರ್ಷಗಳ ಮೊದಲೇ ಫಿರೋಜ್ ರೇಖಾಗಣಿತದ ಲೆಕ್ಕಾಚಾರ ಆಧರಿಸಿ ಹೊಸನಗರ ನಿರ್ಮಿಸಿದ್ದ.

ಭಾರತದಲ್ಲಿ ಆಗಿ ಹೋದ ಅರಸರ ಪೈಕಿ ಫಿರೋಜ್‌ನಷ್ಟು ಕಲಿಕೆಯಲ್ಲಿ ಆಸಕ್ತಿ ಇಟ್ಟುಕೊಂಡಿದ್ದವರು ಅಪರೂಪ. ಗಣಿತ, ರೇಖಾಗಣಿತ, ವಿಜ್ಞಾನ, ಸಾಹಿತ್ಯ, ಸೂಫಿ ಪರಂಪರೆ, ನ್ಯಾಯಶಾಸ್ತ್ರ ಸೇರಿದಂತೆ ವಿವಿಧ ಜ್ಞಾನಶಾಖೆಗಳಲ್ಲಿ ಆಸಕ್ತಿ ಹೊಂದಿದ್ದ ಫಿರೋಜ್ ಅವುಗಳಲ್ಲಿ ಪರಿಣಿತನೂ ಆಗಿದ್ದ. ಸ್ವತಃ ಕವಿಯಾಗಿದ್ದ ಫಿರೋಜ್ 'ಉರುಜಿ', 'ಫಿರೋಜಿ' ಎಂಬ ಕಾವ್ಯನಾಮಗಳನ್ನು ಇಟ್ಟುಕೊಂಡಿದ್ದ. ಫಿರೋಜ್‌ನಿಗೆ ಹೊಸ ಹೊಸ ಭಾಷೆ ಕಲಿಯುವುದು ಎಂದರೆ ಆಸಕ್ತಿ. ಸುಮಾರು 50ಕ್ಕೂ ಹೆಚ್ಚು ಭಾಷೆಗಳನ್ನು ಆಡಬಲ್ಲವನಾಗಿದ್ದ ಫಿರೋಜ್ ಅದಕ್ಕಾಗಿ ಪ್ರತಿಯೊಂದು ಭಾಷೆ ಮಾತನಾಡುವ ರಾಣಿಯೊಬ್ಬಳನ್ನು ಕಟ್ಟಿಕೊಂಡಿದ್ದ. ಫಾರಸಿ, ಅರಬ್ಬಿ, ಟರ್ಕಿಗಳಲ್ಲದೇ ಮರಾಠಿ, ಕನ್ನಡ, ತೆಲುಗು, ಗುಜರಾತಿ, ಬೆಂಗಾಲಿ ಸೇರಿದಂತೆ ಹಲವು ಭಾಷೆಗಳನ್ನಾಡುವ ರಾಣಿಯರು ಇದ್ದ ಅರಮನೆ ಅವನದಾಗಿತ್ತು. ಪ್ರತಿಯೊಬ್ಬ ರಾಣಿಯ ಜೊತೆಗೂ ಅವಳದೇ ಭಾಷೆಯಲ್ಲಿ ಮಾತನಾಡುವ ಪರಿಪಾಠ ಇಟ್ಟುಕೊಂಡಿದ್ದ.

ಫಿರೋಜ್‌ನ ಆಡಳಿತದ ಕಾಲ ಸಮೃದ್ಧಿಯ ಕಾಲ. ಎಲ್ಲೆಡೆ ಕಾವ್ಯ, ಕಲೆ, ಸಂಸ್ಕೃತಿ ಹರಡಿ ಬೆಳೆದು ನಿಂತಿತು. ಪರ್ಷಿಯಾದಿಂದ ವಿದ್ವಾಂಸರು, ಕವಿಗಳು ದಖನ್ನಿನ ಕಡೆಗೆ ಮುಖ ಮಾಡುವುದಕ್ಕೆ ಫಿರೋಜ್ ಕಾರಣನಾಗಿದ್ದ.

## ಶಂಸುದ್ದೀನ್ ಒಂದನೇ ಅಹ್ಮದ್

(20 ಸೆಪ್ಟೆಂಬರ್ 1422 ರಿಂದ 17 ಏಪ್ರಿಲ್ 1436)

ಅಣ್ಣ ಫಿರೋಜ್‌ನ ಸಾವು ಅಹ್ಮದ್‌ನ ಆತಂಕಗಳನ್ನು ಕಡಿಮೆ ಮಾಡಿ ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಮಾಡಿತು. ಅಷ್ಟು ಮಾತ್ರವಲ್ಲದೆ ಅದಾದ ಕೆಲವೇ ವಾರಗಳಲ್ಲಿ ಮಾರ್ಗದರ್ಶಕರಾಗಿದ್ದ ಗೇಸು ದರಾಜ್ ಕೂಡ ಅಸು

ನೀಗಿದರು. ಗುಲ್ಬರ್ಗಕ್ಕೆ ಬಂದಾಗಿನಿಂದಲೂ ಅಹ್ಮದ್‌ನ ಪರವಾಗಿ ಇದ್ದ ಹಜರತ್‌ರ ಸಾವು ಆಘಾತವನ್ನು ಉಂಟು ಮಾಡಿತು. ಅಹ್ಮದ್ ರಾಜಧಾನಿಯನ್ನು ಗುಲ್ಬರ್ಗದಿಂದ ಬೀದರ್‌ಗೆ ಸ್ಥಳಾಂತರಕ್ಕೆ ಮಾಡಲು ಗೇಸು ದರಾಜ್‌ರ ಸಾವು ಕೂಡ ಕಾರಣವಾಗಿತ್ತು ಎಂಬ ಅಭಿಪ್ರಾಯ ಇದೆ. ಗುಲ್ಬರ್ಗ ಬಿಡುವ ಮುನ್ನವೇ ಗೇಸು ದರಾಜ್‌ರ ಬೃಹತ್ ಸಮಾಧಿ ನಿರ್ಮಾಣ ಕಾಮಗಾರಿ ಆರಂಭಿಸಲು ಸೂಚನೆ ನೀಡಿದ.

ರಾಜಧಾನಿಯ ಬದಲಾವಣೆಯ ಅಹ್ಮದ್‌ನ ನಿರ್ಧಾರ ಕ್ರಾಂತಿಕಾರಕ ನಿಲುವಾಗಿತ್ತು. ಅಲಾವುದ್ದೀನ್ ಬಹಮನ್ ಶಹಾ ಹುಟ್ಟುಹಾಕಿದ, ಒಂದನೇ ಮುಹಮ್ಮದ್ ಕಟ್ಟಿ ಬೆಳೆಸಿದ ಬಹಮನಿ ಸಾಮ್ರಾಜ್ಯವು ಒಳಗಡೆಯಿಂದ ಶಿಥಿಲಗೊಂಡಿತ್ತು. ಮುಜಾಹೀದ್‌ನ ನಂತರ ಎರಡನೇ ಮುಹಮ್ಮದ್‌ನನ್ನು ಹೊರತುಪಡಿಸಿ ಎಲ್ಲ ಅರಸರು ದಾರುಣ ಅಂತ್ಯ ಕಂಡಿದ್ದರು. 75 ವರ್ಷಗಳ ಆಡಳಿತದ ಅವಧಿಯಲ್ಲಿ ಕಂಡ ರಕ್ತಸಿಕ್ತ ಅಧ್ಯಾಯದ ಮುಂದುವರಿಕೆಯನ್ನು ಮುರಿಯುವ ಬಯಕೆ ಅಹ್ಮದ್‌ನದಾಗಿತ್ತು. ಏಳುವರೆ ದಶಕಗಳ ಅವಧಿಯ ಪಿತೂರಿ, ಶಂಕೆ, ಅನುಮಾನ, ಅಪ್ರಾಮಾಣಿಕತೆಯ ಋಣಾತ್ಮಕ ಚಿಂತನೆಗೆ ಕೊನೆ ಹಾಡಲು ಅಹ್ಮದ್ ಬಯಸುತ್ತಿದ್ದ. ಸಿಂಹಾಸನಕ್ಕೆ ಬರುವ ಮುಂಚೆ ನಡೆದ ಬೆಳವಣಿಗೆಗಳಿಂದ ಅಹ್ಮದ್ ಕೂಡ ಅರಸೊತ್ತಿಗೆಗಾಗಿ 'ಪಿತೂರಿ' ಮಾಡಿದ್ದ ಎಂದು ನಂಬುವ ಜನರ ಒಂದು ವರ್ಗ ಗುಲ್ಬರ್ಗದಲ್ಲಿ ಇತ್ತು. ನೂತನ ರಾಜಧಾನಿ ಬೀದರ್‌ನಲ್ಲಿ ವಾರಸುದಾರಿಕೆಗಾಗಿನ ದಾಯಾದಿಗಳ ಕದನ ಅಂತ್ಯ ಕಂಡಿತು. ಗುಲ್ಬರ್ಗದಲ್ಲಿ ಅದೇ ಪ್ರಮುಖವಾಗಿತ್ತು. ಗುಲ್ಬರ್ಗ ಅಥವಾ ಕಲ್ಬುರ್ಗಿ ಎಂದರೆ 'ಕಲ್ಲುಗಳ ಪ್ರದೇಶ' ಎಂದರ್ಥ. ದಖನ್‌ನಲ್ಲಿಯೇ ಅತಿ ಕಡಿಮೆ ಬೀಳುವ ಒಣಪ್ರದೇಶ ಆಗಿತ್ತು. ಅದಕ್ಕೆ ಪ್ರತಿಯಾಗಿ ಸಮುದ್ರ ಮಟ್ಟದಿಂದ 2330 ಅಡಿ ಎತ್ತರದಲ್ಲಿ ಇರುವ ಬೀದರ್‌ನ ನೀರು-ನೆಲ ಸಮೃದ್ಧವಾಗಿತ್ತು. ತೆಲಂಗಾಣ ಪ್ರದೇಶದಲ್ಲಿ ಬಹಮನಿ ಸಾಮ್ರಾಜ್ಯ ವಿಸ್ತರಣೆಯ ನಂತರ ಕೇಂದ್ರದಲ್ಲಿ ರಾಜಧಾನಿ ಇರಲಿ ಎಂಬ ಯೋಚನೆಯೂ ಅಹ್ಮದ್‌ನಿಗಿತ್ತು. ರಾಜಧಾನಿಯ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಅಹ್ಮದ್ ಕೂಡ ಮಹಮ್ಮದ್ ಬಿನ್ ತುಘಲಕ್‌ನ ಮಾದರಿಯಲ್ಲಿಯೇ ಯೋಚಿಸಿದ್ದು ಗಮನಕ್ಕೆ ಬರುತ್ತದೆ. ದಖನ್ ಪ್ರಸ್ಥಭೂಮಿಯ ಅಂಚಿನಲ್ಲಿರುವ ಕಾರಣಕ್ಕಾಗಿ ಬೀದರ್ ಸುರಕ್ಷಿತವಾದ ಪ್ರದೇಶವಾಗಿತ್ತು. ಹಾಗೆಯೇ ಮಧ್ಯದಲ್ಲಿ ಇರುವುದರಿಂದ ಆಡಳಿತ ವ್ಯವಸ್ಥೆ ನೋಡಿಕೊಳ್ಳುವುದು ಸರಳ, ಸುಲಭ ಆಗುತ್ತಿತ್ತು. ಬಹುತೇಕ ಈ ಎಲ್ಲ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡೇ ರಾಜಧಾನಿಯನ್ನು ಗುಲ್ಬರ್ಗದಿಂದ ಬೀದರ್‌ಗೆ ಸ್ಥಳಾಂತರ ಮಾಡಿರಬೇಕು.

ರಾಜಧಾನಿಯ ವರ್ಗಾವಣೆಯ ದಿನಾಂಕಕ್ಕೆ ಸಂಬಂಧಿಸಿದಂತೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಅಹ್ಮದ್ ಅಧಿಕಾರಕ್ಕೆ ಬಂದ ತಕ್ಷಣ ರಾಜಧಾನಿ ಬದಲಾಯಿಸಿದ ಎಂಬ ಅಭಿಪ್ರಾಯ ಬುರ್ಹಾನ್ ಎ ಮಾಸಿರ್ ಮತ್ತು ತಧಿಕಿರುತ್ ಉಲ್ ಮುಲ್ಕ್ ಗ್ರಂಥಗಳಲ್ಲಿ ದಾಖಲಾಗಿದೆ. ಸೋಲಹ ಕಂಭ ಮಸೀದಿಯಲ್ಲಿ ದೊರೆತ 1424ರ ಶಾಸನವು ಈ ಅಭಿಪ್ರಾಯವನ್ನು ಧೃಡಪಡಿಸುತ್ತದೆ. ಎರಡು ವರ್ಷದೊಳಗೆ ಬೀದರ್‌ನ್ನು ಮುಹಮ್ಮದಾಬಾದ್ ಎಂದು ನಾಮಕರಣ ಮಾಡಿ ಸ್ಥಳಾಂತರ ಮಾಡಿರುವ ಸಾಧ್ಯತೆಗಳು ದಟ್ಟವಾಗಿವೆ.

ಫಿರೋಜ್‌ನ ಕಾಲದಲ್ಲಿ ಇರಾನ್, ಇರಾಕ್ ಮತ್ತು ಮಧ್ಯಏಷ್ಯಾದ ದೇಶಗಳ ಜನರನ್ನು ಕರೆಯಿಸಿಕೊಳ್ಳುವ ಪ್ರಕ್ರಿಯೆ ತೀವ್ರಗೊಂಡಿತ್ತು. ಅಹ್ಮದ್‌ನ ಕಾಲದಲ್ಲಿಯೂ ಅದು ಮತ್ತಷ್ಟು ಚುರುಕುಗೊಂಡಿತು. ಸಮುದ್ರಯಾನ ಮಾಡಿ ಬಯಸುವ ಸಾಹಸಿಗಳಿಗೆ ದಖನ್ 'ನೆಲೆ'ಯಾಗಿ ಪರಿಣಮಿಸಿತು. ಅಹ್ಮದ್‌ನಿಗೆ ಪ್ರಿಯನಾಗಿದ್ದ ಖಲಾಫ್ ಹಸನ್ ಬಾಸ್ರಿಯನ್ನು ವಕೀಲ್ ಎ ಸಲ್ತಾನತ್ ಅಥವಾ ಪ್ರಧಾನಿಯಾಗಿ ನಿಯಮಿಸಲಾಯಿತು. ಮಲಿಕುತ್ ತುಜಾರ್ (ವ್ಯಾಪಾರಿಗಳ ಮುಖ್ಯಸ್ಥ) ಎಂಬ ಪ್ರತಿಷ್ಠಿತ ಸ್ಥಾನ ಸೃಷ್ಟಿಸಿ ಅದನ್ನು ಕೂಡ ಖಲಾಫ್ ಹಸನ್‌ನಿಗೆ ನೀಡಲಾಯಿತು. ಅವನಿಗೆ ದೊರೆಯುತ್ತಿದ್ದ ಮನ್ನಣೆ ಮತ್ತು ಗೌರವಗಳು ಸ್ಥಳೀಯ ದಖನ್ನಿಗಳ ಅಸಮಾಧಾನ, ಅಸೂಹೆಗೆ ಕಾರಣವಾದವು. ಮೇಲಿಂದ ಮೇಲೆ ಅಫಾಕಿಗಳ ಪ್ರಾಮಾಣಿಕತೆಯ ಪರೀಕ್ಷೆ ಮಾಡಿದ ಅಹ್ಮದ್ ಅವರಿಗೆ ಹೆಚ್ಚಿನ ಆದ್ಯತೆ ನೀಡಲು ಆರಂಭಿಸಿದ. ವಿಜಯನಗರದ ವಿರುದ್ಧದ ಯುದ್ಧದ ಸಂದರ್ಭದಲ್ಲಿ ಕೂದಲೆಳೆಯ ಅಂತರದಲ್ಲಿ ಸುಲ್ತಾನ್ ಪಾರಾಗುವುದಕ್ಕೆ ಅಫಾಕಿಗಳೇ ಕಾರಣರಾಗಿದ್ದರು. ಸೈಯದ್ ಹುಸೇನ್ ಬದಾಕ್ಷಿ, ಮೀರ್ ಅಲಿ ಸಿಸ್ತಾನಿ, ಅಬ್ದುಲ್ ಕುರ್ದ್‌ರ ನೆರವು ಬದುಕಿ ಉಳಿಯಲು ಕಾರಣವಾಗಿತ್ತು. ಅದಾದ ನಂತರ ಅಹ್ಮದ್‌ನು ಇರಾಕ್, ಇರಾನ್, ತುರ್ಕಿ, ಅರೇಬಿಯಾ ಮತ್ತು ಮಧ್ಯಏಷ್ಯಾದಿಂದ ಬಂದ ಮೂರು ಸಾವಿರ ಬಿಲ್ವಿದ್ಯೆ ಪ್ರವೀಣರ ಪ್ರತ್ಯೇಕ ಸೈನ್ಯ ರಚಿಸಲು ಸೂಚನೆ ನೀಡಿದ. ರಾಜಕುಮಾರರಿಗೆ ಬಿಲ್ವಿದ್ಯೆ ಕಲಿಸುವುದಕ್ಕಾಗಿ ಖ್ವಾಜಾ ಹುಸೇನ್ ಅರ್ದಿಸ್ತಾನಿ ಎಂಬ ಅಫಾಕಿಯನ್ನು ನೇಮಿಸಲಾಯತು. 1430ರಲ್ಲಿ ಕೊಂಕಣ ಪ್ರದೇಶದಲ್ಲಿ ಗೆಲುವು ಸಾಧಿಸಿ ಬಂದ್ ಮಲಿಕುತ್ ತುಜಾರ್‌ನ ನೇತೃತ್ವದ ತಂಡಕ್ಕೆ ರಾಜಮರ್ಯಾದೆ ಮಾಡಿ ಗೌರವಿಸಲಾಯಿತು. ಅಮೂಲ್ಯ ಉಡುಗೊರೆ ನೀಡಲಾಯಿತು. ಅಂತಹ ಉಡುಗೊರೆಗಳನ್ನು ಹಿಂದಿನ ಯಾವ ದೊರೆಯೂ ತನ್ನ ಪ್ರಜೆಗಳಿಗೆ ನೀಡಿರಲಿಲ್ಲ.

ಅಫಾಕಿಗಳಿಗೆ ಸಿಗುತ್ತಿದ್ದ ಮನ್ನಣೆಯ ಕಾರಣದಿಂದ ದಖನಿಗಳ ಅಸಮಾಧಾನ ಹೆಚ್ಚುತ್ತಲೇ ಹೋಯಿತು. ಅದು ಫಲಿತವಾಗಿ ಪರಿಣಾಮ ಬೀರಲು ಹೆಚ್ಚು ಕಾಲ

ಬೇಕಾಗಲಿಲ್ಲ. ಗುಜರಾತಿನ ವಿರುದ್ಧದ ಯುದ್ಧದಲ್ಲಿ ದಖನಿಗಳು ಅಸಹಕಾರ ತೋರಿಸಿದ್ದರಿಂದ ಮಲಿಕುತ್ ತುಜಾರ್‌ನ ಸೈನ್ಯ ಸೋಲೊಪ್ಪಬೇಕಾಯಿತು. ಅವನ ಸಹೋದರ ವಿರೋಧಿ ಪಡೆಯ ಸೆರೆಯಾಳಾಗಬೇಕಾಯಿತು.

## ನಿಯಾಮತ್ ಮತ್ತವರ ಪ್ರಭಾವ

ಶಹಾ ನಿಯಾಮತ್ ಅಲ್ಲಾ ಕಿರ್ಮಾನಿಯ ಪುತ್ರ ಖಲೀಲ್ ಅಲ್ಲಾ ಕಿರ್ಮಾನಿಯ ಆಗಮನದ ನಂತರ ಅಫಾಕಿಗಳ ಸೇರ್ಪಡೆಯ ಪ್ರಮಾಣ ಮತ್ತಷ್ಟು ಹೆಚ್ಚಿತು. ಮೊದಲಿನಿಂದಲೂ ಜ್ಞಾನ, ವಿದ್ವತ್ತು ಮತ್ತು ಸೂಫಿ, ಸಂತರನ್ನು ಗೌರವಿಸುವ ಪರಿಪಾಠ ಇಟ್ಟುಕೊಂಡಿದ್ದ ಬಹಮನಿ ಅರಸರ ಪರಂಪರೆಯನ್ನು ಅಹ್ಮದ್ ಕೂಡ ಮುಂದುವರೆಸಿದ. ಹಜರತ್ ಗೇಸು ದರಾಜ್ ಅವರ ನಿಧನದ ನಂತರ ಧಾರ್ಮಿಕ ನೇತೃತ್ವ ಇಲ್ಲದ ಸ್ಥಿತಿಯು ಅಹ್ಮದ್‌ನನ್ನು ಚಿಂತೆಗೀಡು ಮಾಡಿತ್ತು. ದಿವಾನ್‌ಗಳ ಮೂಲಕ ಹೆಸರುವಾಸಿಯಾಗಿದ್ದ ಕಿರ್ಮಾನ್‌ನ ನಿಯಾಮತ್ ಅಲ್ಲಾನನ್ನು ಆಹ್ವಾನಿಸಲು ಅಹ್ಮದ್ ಯೋಚಿಸಿದ. ಅದಕ್ಕಾಗಿ ಶೇಕ್ ಹಬೀಬ್ ಅಲ್ಲಾ ಜುನೈದಿ ಮತ್ತು ಮೀರ್ ಶಂಸುದ್ದೀನ್ ಕುಮ್ಮಿ ಅವರನ್ನು ಒಳಗೊಂಡ ನಿಯೋಗವನ್ನು ನಿಯಾಮತ್‌ರು ವಾಸಿಸುತ್ತಿದ್ದ ಮಹಾನ್‌ಗೆ ಕಳುಹಿಸಿದ. ಅಮೂಲ್ಯ ಉಡುಗೊರೆಗಳೊಂದಿಗೆ ತೆರಳಿದ್ದ ನಿಯೋಗವು ನಿಯಾಮತ್‌ರು ದಖನ್‌ನಲ್ಲಿ ಬಂದು ನೆಲೆಸುವ ಮೂಲಕ ಆಶೀರ್ವಾದ ಮಾಡುವಂತೆ ಕೋರಿತು. ಅದಕ್ಕೆ ಪ್ರತಿಯಾಗಿ ನಿಯಾಮತ್‌ರು ತನ್ನ ಖಾಸಾ ಶಿಷ್ಯರಲ್ಲಿ ಒಬ್ಬನಾದ ಮುಲ್ಲಾ ಕುತುಬುದ್ದೀನ್ ಕಿರ್ಮಾನಿಯನ್ನು ಕಳುಹಿಸಲು ನಿರ್ಧರಿಸಿದರು. ಕಿರ್ಮಾನಿಯ ಜೊತೆಗೆ 12 ಅಂಚಿನ ಸುಂದರ ಕಿರೀಟ ನೀಡಿ ಅದನ್ನು ಅಹ್ಮದ್‌ನಿಗೆ ಕೊಡುವಂತೆ ಸೂಚಿಸಿದರು. ಅಣ್ಣ ಫಿರೋಜ್‌ನ ಜೊತೆಗೆ ಯುದ್ಧ ನಡೆಯುತ್ತಿರುವ ದಿನಗಳಲ್ಲಿ 'ಕನಸಿನಲ್ಲಿ ಕಾಣಿಸಿಕೊಂಡ ಸಂತ ಮತ್ತು ಕಿರೀಟ'ದ ಹೋಲಿಕೆ ನೋಡಿ ಅಹ್ಮದ್‌ನಿಗೆ ಅಚ್ಚರಿಯಾಯಿತು. ನಿಯಾಮತ್‌ರು ತಾವು ಆಗಮಿಸಲು ಸಾಧ್ಯವಾಗದಿದ್ದರೆ ತಮ್ಮ ಪುತ್ರನನ್ನಾದರೂ ಕಳುಹಿಸುವಂತೆ ಕೋರಿ ಖ್ವಾಜಾ ಇಮಾದುದ್ದೀನ್ ಸಮ್ನಾನಿ ಹಾಗೂ ಸೈಫುಲ್ಲಾ ಹಸನಾಬಾದಿಯವರ ಮತ್ತೊಂದು ನಿಯೋಗವನ್ನು ಅಹ್ಮದ್ ಕಳುಹಿಸಿದ. ಅದಕ್ಕೆ ನಿಯಾಮತ್‌ರು ತಮಗಿರುವ ಒಬ್ಬನೇ ಮಗನನ್ನು ಅಗಲಿ ಇರುವುದು ಸಾಧ್ಯವಿಲ್ಲ ಎಂದು ತಿಳಿಸಿ ಮೊಮ್ಮಗ ಶಹಾ ನೂರ್‌ಅಲ್ಲಾನನ್ನು ಕಳುಹಿಸಲು ತೀರ್ಮಾನಿಸಿದರು. ಈ ಸಂದೇಶ ದೊರೆತ ತಕ್ಷಣ ಅರಸು ಅಹ್ಮದ್ ತನ್ನ ಪಲ್ಲಕ್ಕಿಯನ್ನೇ ಚೌಲ್ ಬಂದರಿಗೆ ಕಳುಹಿಸಿದ. ಸ್ವಾಗತಿಸುವುದಕ್ಕಾಗಿ ಚೌಲ್‌ಗೆ ಹೋದ ತಂಡದಲ್ಲಿ ಸೈಯದ್ ಮುಹಮ್ಮದ್ ಸದ್ರ್ ಮತ್ತು ಮೀರ್ ಅಬ್ದುಲ್ಲ

ಖಾಸಿಂ ಜುರ್ಜಾನಿ ಇದ್ದರು. ತಂಡವು ಬೀದರ್ ಸಮೀಪಿಸುತ್ತಿದ್ದಂತೆಯೇ ನೂರ್ ಅಲ್ಲಾನನ್ನು ಸ್ವಾಗತಿಸಿ ಕರೆತರುವುದಕ್ಕಾಗಿ ಸ್ವತಃ ಅರಸನೇ ಹೊರಟು ನಿಂತ. ರೈಂತೂರುವರೆಗೆ ಹೋಗಿ ಅಲ್ಲಿಯೇ ಸಂತನನ್ನು ಭೇಟಿ ಮಾಡಿದ. ಆ ಪ್ರದೇಶವನ್ನು ನಿಯಾಮತಾಬಾದ್ ಎಂದು ಕರೆಯಲಾಗುತ್ತದೆ. ಶಹಾ ನೂರ್‌ಅಲ್ಲಾನಿಗಾಗಿಯೇ ಮಾಲಿಕ್ ಉಲ್ ಮಾಶೇಕ್ ಹುದ್ದೆ ಸೃಷ್ಟಿಸಿದ ಅಹ್ಮದ್‌ನು ಹಜರತ್ ಗೇಸು ದರಾಜ್ ಅವರಿಗೆ ಸಲ್ಲುತ್ತಿದ್ದ ಎಲ್ಲ ಆದ್ಯತೆಯನ್ನು ನೀಡಿದ. ಅಷ್ಟೇ ಅಲ್ಲದೆ ಅಹ್ಮದ್ ತನ್ನ ಪುತ್ರಿಯನ್ನು ನೂರ್‌ಅಲ್ಲಾನಿಗೆ ಕೊಟ್ಟು ಮದುವೆ ಮಾಡಿದ. ಶಹಾ ನಿಯಾಮತ್ ಅಲ್ಲಾನ ನಿಧನದ ನಂತರ (5ನೇ ಮೇ 1431) ಅವರ ಇಡೀ ಕುಟುಂಬ ಬೀದರ್‌ಗೆ ವಲಸೆ ಬಂತು. ಘಾಜಿ ಬಿರುದು ಪಡೆದ ಶಹಾ ಹಬೀಬ್ ಅಲ್ಲಾನಿಗೆ ಅಹ್ಮದ್‌ನ ಪುತ್ರಿಯನ್ನು ನೀಡಿ ಮದುವೆ ಮಾಡಲಾಯಿತು. ಹಾಗೆಯೇ ಹಬೀಬ್‌ಅಲ್ಲಾನಿಗೆ ಬೀಡ್ ಪ್ರದೇಶದ ಜಹಾಗೀರ್‌ನ್ನು ನೀಡಲಾಯಿತು. ಶಹಾ ಮುಹಿಬ್ ಅಲ್ಲಾನಿಗೆ ಯುವರಾಜ ಅಲಾವುದ್ದೀನ್‌ನ ಪುತ್ರಿಯನ್ನು ಕೊಟ್ಟು ಮದುವೆ ಮಾಡಲಾಯಿತು. ಸುಲ್ತಾನ್‌ನು ಕಿರ್ಮಾನಿಯ ಕುಟುಂಬ ಮತ್ತು ಒಟ್ಟಾರೆಯಾಗಿ ಸೈಯದ್‌ರ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿದ್ದ. ನಿಯಾಮತ್‌ನ ಮೊದಲ ಮರಣ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅರಸು ಸ್ವತಃ ಮಾಶೇಕ್‌ನ ಹಸ್ತಗಳನ್ನು ತೊಳೆಯುವ ಪ್ರಕ್ರಿಯೆಯಲ್ಲಿ ಭಾಗವಹಿಸಿದ.

ಅಹ್ಮದ್‌ನಿಗೆ ಶಿಯಾ ಪಂಗಡದತ್ತ ಒಲವು ತೋರಿಸಿದ ಎರಡು ಘಟನೆಗಳು ನಡೆದವು. ಕರ್ಬಲಾದಲ್ಲಿನ ಸೈಯದ್‌ರಿಗೆ 30 ಸಾವಿರ ಬೆಳ್ಳಿ ನಾಣ್ಯಗಳನ್ನು ಕಳುಹಿಸಿದ. ಹಾಗೆಯೇ ದಖನ್‌ನ ಸರ್ದಾರ ಶೇರ್ ಮುಲ್ಕ್ ಎಂಬವನು ಸೈಯದ್ ನೂರುದ್ದೀನ್ ಕರ್ಬಲಾಯಿಯನ್ನು ಅವಮಾನಿಸಿದ ಸಂಗತಿ ಅಹ್ಮದ್‌ನ ಗಮನಕ್ಕೆ ಬಂತು. ತಕ್ಷಣ ಅಹ್ಮದ್ ಶೇರ್‌ಮುಲ್ಕ್‌ನನ್ನು ಕರೆಸಿ ಅವನ ಸ್ಥಾನದ ಗೌರವವನ್ನೂ ಗಮನಿಸದೆ ಆನೆಯ ಕಾಲಿನಲ್ಲಿ ತುಳಿಸಿ ಕೊಲ್ಲಿಸಿದ. ಅಹ್ಮದ್‌ನ ಆಡಳಿತದ ಕೊನೆಯಲ್ಲಿ ಸ್ಥಳೀಯ ದಖನಿಗಳು ತೀವ್ರವಾಗಿ ಕಡೆಗಣನೆಗೆ ಒಳಗಾದಂತೆ ಭಾವಿಸುವುದಕ್ಕೆ ಕಾರಣವಾಯಿತು.

## ರಾಜಕೀಯ ಸಾಧನೆ

ಅಧಿಕಾರಕ್ಕೆ ಬರುತ್ತಿದ್ದಂತೆಯೇ ವಿಜಯನಗರದ ಜೊತೆಗಿನ ಸಂಬಂಧಗಳನ್ನು ನವೀಕರಿಸಲು ಅಹ್ಮದ್ ಪ್ರಯತ್ನಿಸಿದ. ಫಿರೋಜ್ ಮತ್ತು ದೇವರಾಯ ಇಬ್ಬರು ಏಕಕಾಲಕ್ಕೆ ಮೃತಪಟ್ಟಿದ್ದರು. ವಿಜಯನಗರದ ಜೊತೆಗಿನ ಫಿರೋಜ್‌ನ ಕೊನೆ

ಸಮರಗಳಲ್ಲಿ ಅನುಭವಿಸಿದ್ದ ಸೋಲಿನ ಪ್ರತೀಕಾರ ತೀರಿಸಿಕೊಳ್ಳಬೇಕಿತ್ತು. ಅದಕ್ಕಾಗಿ 40 ಸಾವಿರ ಕುದುರೆಗಳ ಬೃಹತ್ ಪಡೆಯೊಂದಿಗೆ ದಕ್ಷಿಣದತ್ತ ಪ್ರಯಾಣ ಬೆಳೆಸಿದ. ವಿಜಯನಗರದಲ್ಲಿ ಮೊದಲನೇ ವಿಜಯ ಅಧಿಕಾರದಲ್ಲಿದ್ದ. ಬಹಮನಿ ಮತ್ತು ವಿಜಯನಗರದ ಸೈನ್ಯಗಳು ತುಂಗಭದ್ರಾ ನದಿಯ ದಡದ ಮೇಲೆ ಪರಸ್ಪರ ಮುಖಾಮುಖಿಯಾದವು. ವಿಜಯನಗರದ ಬಳಿ ಎರಡು ಲಕ್ಷ ಸೈನ್ಯ ಇತ್ತು. ಅದರಲ್ಲಿ ಪದಾತಿ, ಬಿಲ್ವಿದ್ಯೆ ಪ್ರವೀಣರು, ತೋಪು ಹಾರಿಸುವವರು ಸೇರಿದ್ದರು. ಬೃಹತ್ ಪ್ರಮಾಣದಲ್ಲಿದ್ದರೂ ವಿಜಯನಗರದ ಸೈನ್ಯ ಗೆರಿಲ್ಲಾ ಮಾದರಿಯ ಯುದ್ಧತಂತ್ರ ಅಳವಡಿಸಿಕೊಂಡಿತ್ತು. ರಾತ್ರಿಯ ವೇಳೆ ಬಹಮನಿ ಸೈನ್ಯದ ಮೇಲೆ ದಾಳಿ ನಡೆಸಿ ಸಾವು–ನೋವು ಉಂಟು ಮಾಡುತ್ತಿತ್ತು.

ಬಹಮನಿ ಸೈನ್ಯದ ಆಡಳಿತವು ತುಂಗಭದ್ರಾ ನದಿ ದಾಟಿ ಇಡೀಯಾಗಿ ಸೈನ್ಯವನ್ನು ರಣರಂಗಕ್ಕೆ ಇಳಿಸಲು ನಿರ್ಧರಿಸಿತು. ವೇಲಮರು ತೆಲಂಗಾಣದ ಕಡೆಗೆ ಮರುಪ್ರಯಣ ಆರಂಭಿಸಿದ್ದರು. ಆಲಂಖಾನ್, ಲೋದಿಖಾನ್ ಮತ್ತು ದಿಲಾವರ್‌ಖಾನ್ ಅವರನ್ನು ಒಳಗೊಂಡು 10 ಸಾವಿರ ಆಫ್ಘನ್ ಸೈನಿಕರು ತುಂಗಭದ್ರಾ ನದಿ ದಾಟಿ ವಿಜಯನಗರದ ಕಡೆಗೆ ಹೋಗುತ್ತಿದ್ದನ್ನು ಕಬ್ಬಿನ ಗದ್ದೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ವಿಜಯನಗರದ ಅರಸ ಗಮನಿಸಿದ. ಅವನನ್ನು ಬಹಮನಿಯ ಸೈನಿಕರೊಬ್ಬರು ಗುರುತಿಸಲಿಲ್ಲ ಕೂಡ. ಈ ಮಧ್ಯೆ ಬಹಮನಿ ಸೈನ್ಯ ನದಿ ದಾಟಿ ಬಂದಿರುವ ಹೊತ್ತಿನಲ್ಲಿಯೇ ಅರಸು ಕಾಣೆಯಾಗಿರುವ ಸಂಗತಿಯು ವಿಜಯನಗರದ ಸೈನ್ಯದಲ್ಲಿ ಗೊಂದಲಕ್ಕೆ ಕಾರಣವಾಯಿತು. ವಿಜಯನಗರದ ಅರಸ ಕಷ್ಟಪಟ್ಟು ತನ್ನ ಸೈರಿ ರಾಜಧಾನಿಯತ್ತ ಪಲಾಯನಗೈದ. ಬಹಮನಿ ಸೈನ್ಯ ಕೋಟೆ ಕಾಯುತ್ತ ದೌರ್ಜನ್ಯ ಮುಂದುವರೆಸಿತು.

ಈಗ ಸುಲ್ತಾನ್‌ನ ಸರದಿ. ಸೈನ್ಯದ ಮುಖ್ಯ ಬಿಡಾರರಿಂದ ಅನತಿ ದೂರದಲ್ಲಿ ಸರೋವರದ ದಡದ ಮೇಲೆ ಸುಲ್ತಾನ್‌ನ ಬಿಡಾರ ಹೂಡಲಾಗಿತ್ತು. ಪರ್ಷಿಯನ್ ಹೊಸ ವರುಷ ಆಚರಣೆಯ ಹಿಂದಿನ ದಿನ. ಅರಸು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ. ಸುಮಾರು ಐದಾರು ಸಾವಿರ ವೈರಿಪಡೆಯ ಪದಾತಿ ದಳದ ಸೈನಿಕರು ದಾಳಿ ನಡೆಸಿದರು. ಕಣಜದ ಅಂಚು ಪ್ರವೇಶಿಸುವ ಮುನ್ನವೇ ವೈರಿ ಪಡೆಯವರು ಸುಲ್ತಾನ್‌ನ ಬೆಂಗಾವಲು ಪಡೆಯೊಂದಿಗೆ ಕದನಕ್ಕೆ ಇಳಿದಿದ್ದರು. ಅಹ್ಮದ್ ಕಷ್ಟಪಟ್ಟು ಜೀವ ಉಳಿಸಿಕೊಂಡು ಓಡಿ ಬರಬೇಕಾಯಿತು. ಆಗ ಸುಲ್ತಾನ್‌ನ ನೆರವಿಗೆ ಬಂದವರೆಲ್ಲರೂ ಅಫಾಕಿಗಳಾಗಿದ್ದರು. ಅವರೆಲ್ಲರಿಗೂ ದೊರೆ ಸೂಕ್ತ ಮನ್ನಣೆ ಸಲ್ಲಿಸಿದ. ಅಬ್ದುಲ್ ಖದೀರ್‌ನಿಗೆ ಖಾನ್ ಎಖಾನನ್ ಹುದ್ದೆ ನೀಡುವುದರೊಂದಿಗೆ ಬೇರಾರ್‌ನ ಆಡಳಿತಾಧಿಕಾರಿಯಾಗಿ ಘೋಷಿಸಿ, ಎರಡು ಸಾವಿರ ಪಡೆಯ

ಮನ್ಸಬ್‌ದಾರರನ್ನಾಗಿ ಮಾಡಿದ. ಧೈರ್ಯದಿಂದ ಹೋರಾಡಿ ಅರಸನ ಪ್ರಾಣ ಉಳಿಸಿದ ಅಬ್ದುಲ್ ಲತೀಫ್‌ನಿಗೆ ಖಾನ್ ಎ ಆಜಂ ಬಿರುದು ನೀಡಿದ. ಮತ್ತು ಅವನಿಗೆ ತೆಲಂಗಾಣದ ಆಡಳಿತಾಧಿಕಾರಿಯಾಗಿ ಘೋಷಿಸಿದ. ಅಫಾಕಿಗಳಾದ ಸೈಯದ್ ಹಸನ ಬದಾಕ್ಷಿ, ಮೀರ್ ಅಲಿ ಸಿಸ್ತಾನಿಯನ್ನು 300ರ ಪಡೆಯ ಮನ್ಸಬ್‌ದಾರ್‌ನನ್ನಾಗಿ ಘೋಷಿಸಿದ. ಖಾಸಿಂ ಬೇಗ್ ಸಫ್ಶಿಖಾನ್‌ನಿಗೆ ಕಲ್ಹಾರ್‌ದ ಜಹಾಗೀರು ನೀಡಿ 500 ಪಡೆಯ ಮನ್ಸಬ್‌ದಾರನನ್ನಾಗಿ ಮಾಡಿದ. ಮೀರ್ ಅಲಿ ಖುರ್ದ್‌ಗೆ ಹಜಾರಿಯನ್ನಾಗಿ ಪ್ರಕಟಿಸಿದ. ಖ್ವಾಜಾ ಹಸನ್ ಅರ್ದಿಸ್ತಾನಿ ಮತ್ತು ಖುಸ್ರು ಬೇಗ್ ಅವರಿಗೆ ಅರಸುಕುಮಾರರಿಗೆ ಬಿಲ್ವಿದ್ಯೆ ಕಲಿಸುವ ಕೆಲಸ ವಹಿಸಿದ.

ಕೂದಲೆಳೆಯ ಅಂತರದಿಂದ ಜೀವ ಉಳಿಸಿಕೊಂಡು ಬಂದ ಸುಲ್ತಾನ್‌ನು ವಿಜಯನಗರದ ಮೇಲೆ ದಾಳಿ ನಡೆಸಿದ. ವಿಜಯನಗರದ ಕಡೆಯಿಂದ ಬಂದ ಶಾಂತಿ ಸಂದೇಶ ಒಪ್ಪಿಕೊಂಡ ಅಹ್ಮದ್ ಅಲ್ಲಿಂದ ಉಡುಗೊರೆಯಾಗಿ ಬಂದ ಆನೆ, ಕುದುರೆಗಳನ್ನು ಸ್ವೀಕರಿಸಿದ.

ಪೂರ್ವ ಮತ್ತು ದಕ್ಷಿಣದ ದಂಡಯಾತ್ರೆಯ ನಂತರ ಸುಲ್ತಾನ್ ಹೆಚ್ಚು ಕಾಲ ಸುಮ್ಮನೆ ಕುಳಿತುಕೊಳ್ಳಲಿಲ್ಲ. 1425–26ರಲ್ಲಿ ಮಾಹುರ್‌ನ್ನು ಸ್ಥಳೀಯ ಅರಸನಿಂದ ಮರುವಶಪಡಿಸಿಕೊಳ್ಳುವುದಕ್ಕಾಗಿ ದಾಳಿ ನಡೆಸಿದ. ಮಾಹುರ್ ದಾಳಿಯ ಕುರಿತು ಖಚಿತ ವಿವರಗಳು ಇಲ್ಲ. ಅದಕ್ಕೆ ಮಾಹುರ್ ವಿರುದ್ಧ ಹಲವು ಬಾರಿ ದಾಳಿ ನಡೆಸಿದ್ದು ಪ್ರಮುಖ ಕಾರಣ. ಮೊದಲ ಬಾರಿಗೆ ಮಾಹುರ್ ಮೇಲೆ ದಂಡೆತ್ತಿ ಹೋದಾಗ ಅಲ್ಲಿನ ಸೈನ್ಯ ಕಾಡಿಗೆ ಪಲಾಯನಗೈದು ಗೆರಿಲ್ಲಾ ಮಾದರಿಯ ಯುದ್ಧದಲ್ಲಿ ತೊಡಗಿಕೊಂಡಿತು.

ಆಗ ಸುಲ್ತಾನ್ ಮಾಹುರ್ ಮಾತ್ರವಲ್ಲದೆ ಗೊಂಡ್ವಾನ್ ಪ್ರದೇಶವನ್ನು ಕೂಡ ವಶಕ್ಕೆ ತೆಗೆದುಕೊಂಡ. ಇದರಿಂದಾಗಿ ವಜ್ರದ ಗಣಿಗಳು ಇರುವ ಪ್ರದೇಶವು ಬಹಮನಿ ಸಾಮ್ರಾಜ್ಯದ ವ್ಯಾಪ್ತಿಗೆ ಬಂತು. ಇಡೀ ಒಂದು ವರ್ಷ ಎಲಿಚ್‌ಪುರದಲ್ಲಿ ಕಳೆದ ಸುಲ್ತಾನ್‌ನು ಗಾವಿಲ್ ಪ್ರದೇಶವನ್ನು ವಶಪಡಿಸಿಕೊಂಡು ನಾರ್ನಲ್ ಕೋಟೆಯ ರಿಪೇರಿ ಕಾರ್ಯ ಕೈಗೊಂಡ. 1427ರಲ್ಲಿ ಮತ್ತೆ ಮಾಹುರ್ ಮೇಲೆ ನಡೆಸಿದ ದಾಳಿಯು ಸುಲ್ತಾನ್‌ನಿಗೆ ಲಾಭದಾಯಕವಾಗಿರಲಿಲ್ಲ. ಮೂರನೇ ಬಾರಿಗೆ ನಡೆಸಿದ ದಾಳಿಯ ಸಂದರ್ಭದಲ್ಲಿ ಅರಸನ ವಿರುದ್ಧ ಕಟುವಾಗಿಯೂ ಪ್ರಜೆಗಳ ಜೊತೆ ಪ್ರೀತಿ–ವಿಶ್ವಾಸದಿಂದಲೂ ವರ್ತಿಸಿದ.

ಅಹ್ಮದ್‌ನ ಸಹೋದರ ಫಿರೋಜ್‌ನಿಗೆ ನೀಡಿರುವುದಾಗಿ ತೈಮೂರ್ ಘೋಷಿಸಿದ್ದ ಖಾಂದೇಶ್, ಮಾಳ್ವ, ಗುಜರಾತ್‌ಗಳು ವಾಸ್ತವವಾಗಿ ಸ್ವತಂತ್ರ

ರಾಜ್ಯಗಳಾಗಿದ್ದವು. ಅವುಗಳನ್ನು ವಶಪಡಿಸಿಕೊಳ್ಳಬೇಕು ಎನ್ನುವ ಕನಸು ಅಹ್ಮದ್‌ನದಾಗಿತ್ತು. ಅದಕ್ಕಿಂತ ಮೊದಲು ಬಹಮನಿ ವಿರುದ್ಧ ಮಹತ್ವದ ಯುದ್ಧ ನಡೆಸಲು ಅಹ್ಮದ್ ಯೋಚಿಸಿದ. ಸಾಮ್ರಾಜ್ಯ ಸ್ಥಾಪಕ ಬಹಮನ್ ಶಹಾನ ಕನಸನ್ನು ನನಸು ಮಾಡಲು ಪ್ರಯತ್ನಿಸಿದ ಮೊದಲ ಅರಸು ಅಹ್ಮದ್. ಮಾಳ್ವ ಮತ್ತು ದಖನ್ ನಡುವೆ ಇದ್ದ ಖೇರ್ಲಾ ವಶಕ್ಕೆ ತೆಗೆದುಕೊಳ್ಳುವುದು ಮಹತ್ವದ ಅಂಶ ಆಗಿತ್ತು.

ಮಾಳ್ವದ ಹೊಷಾಂಗ್‌ನಿಂದ ಭೀತನಾಗಿದ್ದ ಖೇರ್ಲಾದ ನರಸಿಂಗ್‌ನು ದಖನ್ ಸುಲ್ತಾನ್‌ನಿಗೆ ಪತ್ರ ಬರೆದು 'ಖೇರ್ಲಾವನ್ನು ಬಹಮನಿ ಸಾಮ್ರಾಜ್ಯದ ಭಾಗ' ಎಂದು ಘೋಷಿಸುವಂತೆ ಕೋರಿದ್ದ. ಅಹ್ಮದ್‌ನು ಬೇರಾರ್‌ನ ರಾಜ್ಯಪಾಲನಾದ ಖಾನ್ ಎ ಖಾನನ್ ಅಬ್ದುಲ್ ಖದೀರ್‌ನನ್ನು ನರಸಿಂಗ್‌ನ ಸಹಾಯಕ್ಕೆ ತೆರಳುವಂತೆ ಸೂಚಿಸಿ 1429ರಲ್ಲಿ ಆರು ಸಾವಿರ ಪದಾತಿದಳದೊಂದಿಗೆ ಎಲಿಚ್‌ಪುರ ತಲುಪಿದ. ಅಲ್ಲಿಂದ ಖೇರ್ಲಾ ಕಡೆಗೆ ಪ್ರಯಣ ಬೆಳೆಸಿದ. ಈ ಮಧ್ಯೆ ನರಸಿಂಗ್‌ನು ತನ್ನ ನಿಷ್ಠೆಯನ್ನು ಬದಲಿಸಿ ಮಾಳ್ವದ ಹೋಷಾಂಗ್‌ನ ಜೊತೆ ಸೇರಿಕೊಂಡಿದ್ದಾನೆ ಎಂಬ ವದಂತಿಗಳು ಕೇಳಿಬಂದವು. ಮಾಳ್ವದ ಅರಸನಿಗೆ ಖೇರ್ಲಾದ ಕಡೆಗೆ ಪ್ರಯಾಣ ಬೆಳೆಸುವುದಕ್ಕಾಗಿ ಪ್ರತಿದಿನ ಒಂದು ಲಕ್ಷ ನಾಣ್ಯಗಳನ್ನು ನೀಡುವ ಭರವಸೆ ನೀಡಿದ್ದಾನೆ ಎಂಬ ಅಂಶ ಅಹ್ಮದ್‌ನ ಗಮನಕ್ಕೆ ಬಂತರು.

30 ಸಾವಿರ ಸೈನಿಕರ ಬೃಹತ್ ಪಡೆಯೊಂದಿಗೆ ಮಾಳ್ವದ ಸೈನ್ಯ ಖೇರ್ಲಾ ಸಮೀಪಿಸಿತು. ಅದರ ಅರ್ಧಕ್ಕಿಂತ ಕಡಿಮೆ ಸೈನ್ಯ ಇದ್ದ ಅಹ್ಮದ್ ಕಷ್ಟಕ್ಕೆ ಸಿಲುಕಬೇಕಾಗುತ್ತದೆ ಎಂದು ಅಂದಾಜು ಮಾಡಿದ. ಹೋಷಾಂಗ್‌ನಿಗೆ ಮಾಳ್ವಕ್ಕೆ ಮರಳುವ ಅಥವಾ ದಖನ್ ಸೈನ್ಯದ ಮೇಲೆ ಯುದ್ಧ ಮಾಡುವ ಆಯ್ಕೆಗಳಿದ್ದವು. ತನ್ನ ಪ್ರದೇಶವನ್ನು ರಕ್ಷಿಸಿಕೊಳ್ಳುತ್ತಲೇ ನಡೆಸುವ ಎರಡನೇ ಆಯ್ಕೆಯಲ್ಲಿಯೇ ಹೆಚ್ಚು ಲಾಭ ಇದೆ ಎಂದು ಹೋಷಾಂಗ್ ಭಾವಿಸಿದ. ಆದರೆ, ಮಾಳ್ವದ ಗಣ್ಯರು ಮತ್ತು ಅಧಿಕಾರಿಗಳು ಮತ್ತೊಬ್ಬ ತಮ್ಮದೇ ಸಮುದಾಯದ ವ್ಯಕ್ತಿಯ ಜೊತೆಗೆ ಕದನ ಮಾಡುವುದು ಬೇಡ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಅದೇ ಅಹ್ಮದ್ ಹೊತ್ತಿಗೆ 'ಪರಸ್ಪರರ ರಕ್ತ ಹರಿಸುವುದರಲ್ಲಿ ಯಾವುದೇ ಅರ್ಥ ಇಲ್ಲ, ಆದ್ದರಿಂದ ಯುದ್ಧಭೂಮಿಯಿಂದ ಹಿಂದೆ ಸರಿಯುವ' ಇಂಗಿತ ವ್ಯಕ್ತಪಡಿಸಿದ ಸಂದೇಶ ಕಳುಹಿಸಿದ. ಮಾರುತ್ತರಕ್ಕೆ ಕಾಯದೇ ತನ್ನ ಸೈನ್ಯದ ಶಿಬಿರವನ್ನು ಹಿಂತೆಗೆದುಕೊಂಡ. ಮಾಳ್ವದ ಸೈನ್ಯವು ಅಹ್ಮದ್‌ನ ಸೈನ್ಯ ಬಿಡಾರ ಹೂಡಿದ್ದ ಪ್ರದೇಶದಲ್ಲಿ ಶಿಬಿರ ಸ್ಥಾಪಿಸಿತು.

ಇಂತಹ ಸಂದಿಗ್ದ ಸ್ಥಿತಿಯಲ್ಲಿ ತನ್ನ ಅಧಿಕಾರಿಗಳ ಸಮ್ಮುಖದಲ್ಲಿ ರಣರಂಗದಿಂದ ಹಿಂದೆ ಸರಿದಿದ್ದ ತನ್ನ ಕ್ರಮವನ್ನು ಸಮರ್ಥಿಸಿಕೊಂಡ ಅಹ್ಮದ್ ಈಗ ಮಾಳ್ವದ ಸೈನ್ಯವು ತಮ್ಮ ಪ್ರದೇಶದಲ್ಲಿ ಪ್ರವೇಶಿಸಿರುವುದರಿಂದ ಯುದ್ಧ ಮಾಡುವುದು ಅನಿವಾರ್ಯ ಎಂದು ತಿಳಿಸಿದ. ಯುದ್ಧದಲ್ಲಿ ಸೈನ್ಯದ ಬಲಭಾಗದಲ್ಲಿ ಖಾನ್ ಎ ಖಾನನ್ ಅಬ್ದುಲ್ ಖದೀರ್ ಹಾಗೂ ಎಡಭಾಗದಲ್ಲಿ ಇಸ್ಮಾಯಿಲ್ ಮುಖ್‌ನ ಮೊಮ್ಮಗ ಅಬ್ದುಲ್, ಮಧ್ಯದಲ್ಲಿ ಯುವರಾಜ ಅಲಾವುದ್ದೀನ್ ಸಮರ ನಿರತರಾಗಿದ್ದರು. ಎರಡೂ ಕಡೆಗಳಲ್ಲಿ ಅಪಾರ ಪ್ರಮಾಣದ ಹಾನಿ ಸಂಭವಿಸಿತು. ಮಧ್ಯಾಹ್ನದ ಪ್ರಾರ್ಥನೆಯ ಸಂದರ್ಭದಲ್ಲಿ ನೆಲಕ್ಕೆ ಹಣೆ ತಾಗಿಸಿದ ಸುಲ್ತಾನ್‌ನು ಯುದ್ಧದಲ್ಲಿ ಜಯ ಸಿಗುವಂತಾಗಲಿ ಎಂದು ಪ್ರಾರ್ಥಿಸಿದ. 10 ಸಾವಿರ ಸೈನಿಕರು ಮತ್ತು 12 ಆನೆಗಳೊಂದಿಗೆ ಸುಲ್ತಾನ್‌ನು ಮಾಳ್ವದ ಸೈನ್ಯದ ಮೇಲೆ ಮುಗಿಬಿದ್ದನು. ಸಮರಾಂಗಣದಿಂದ ಮಾಳ್ವದ ಅರಸ ಓಡಿ ಹೋಗಬೇಕಾಯಿತು. ಹಾಗೆ ತನ್ನ ರಾಜಧಾನಿಗೆ ಪಲಾಯನ ಮಾಡುವಾಗ ತನ್ನ ಕುಟುಂಬದ ಸದಸ್ಯರು, ರಾಜಕುಮಾರ, ರಾಜಕುಮಾರಿರನ್ನು ಬಿಟ್ಟು ಹೋಗಿದ್ದ. ಅವರ ಜೊತೆ ಕರುಣೆ-ವಿಶ್ವಾಸದಿಂದ ವರ್ತಿಸಿದ ಅಹ್ಮದ್‌ನು ಮಾಳ್ವದ ರಾಜಕುಮಾರಿಗೆ ಅಮೂಲ್ಯ ಉಡುಗೊರೆ ನೀಡಿದನು. ತನ್ನ ಸೈನ್ಯದ ರಕ್ಷಣೆಯಲ್ಲಿ ಅವರನ್ನು ಮಾಳ್ವದ ಗಡಿಯವರೆಗೆ ತಲುಪಿಸಿದನು.

ಸುಲ್ತಾನ್‌ನ ಕ್ಷಮೆ ಯಾಚಿಸಿದ ನರಸಿಂಗ್‌ನು ತನ್ನ ರಾಜಧಾನಿಗೆ ಆಗಮಿಸುವಂತೆ ಮನವಿ ಮಾಡಿದ. ಅಲ್ಲಿಗೆ ಹೋದ ಸುಲ್ತಾನ್‌ನು ಖೇರ್ಲಾ ಬಹಮನಿಯ ವ್ಯಾಪ್ತಿಗೆ ಸೇರಿದ ಪ್ರದೇಶ ಎಂದು ಪ್ರಕಟಿಸಿದ. ಮಾಹುರ್ ಜೊತೆಗಿನ ಕದನದಲ್ಲಿ ಜೊತೆಗಿದ್ದ ನರಸಿಂಗ್‌ನಿಗೆ ಕೃತಜ್ಞತೆಯಿಂದ ಗೌರವ ಸಲ್ಲಿಸಿದ. ಅಲ್ಲಿಂದ ಮಾಹುರ್ ದಖನ್‌ನ ಉತ್ತರದ ಗಡಿಯಾಯಿತು. ಅಹ್ಮದ್ ತನ್ನ ಎರಡನೇ ಮಗ ಮಹಮೂದ್‌ಖಾನ್‌ನನ್ನು ರಾಜ್ಯಪಾಲನಾಗಿ ನಿಯಮಿಸಿದ.

ಮಾಳ್ವ ಮತ್ತು ಗುಜರಾತ್‌ಗಳು ಬಹಮನಿಯ ಪ್ರಬಲ ವೈರಿ ರಾಜ್ಯಗಳಾಗಿದ್ದವು. ಆದ್ದರಿಂದ ಸುಲ್ತಾನ್ ಅಹ್ಮದ್‌ನು ಖಾಂದೇಶ್‌ದ ನಾಸೀರ್‌ಖಾನ್ ಫಾರೂಕಿಯೊಂದಿಗೆ ಸ್ನೇಹ ಸಂಬಂಧ ಬೆಳೆಸಲು ನಿರ್ಧರಿಸಿದ. ಫಾರೂಕಿ ಕೂಡ ಹೆಚ್ಚುತ್ತಿದ್ದ ಗುಜರಾತಿನ ಪ್ರಾಬಲ್ಯದಿಂದ ಆತಂಕ್ಕೆ ಒಳಗಾಗಿದ್ದ. ಈ ಸಂದರ್ಭದಲ್ಲಿ ಅಹ್ಮದ್‌ನು ಅಜೀಜ್‌ಖಾನ್‌ನನ್ನು ಖಾಂದೇಶ್‌ಕ್ಕೆ ಕಳುಹಿಸಿ ರಾಜಕುಮಾರಿ ಅಘಾ ಜೈನಾಬ್‌ಳನ್ನು ರಾಜಕುಮಾರ ಅಲಾವುದ್ದೀನ್‌ನಿಗೆ ಕೊಟ್ಟು ಮದುವೆ ಮಾಡುವ ಪ್ರಸ್ತಾಪ ಮುಂದಿಟ್ಟ. ರಾಜಕುಮಾರಿಯನ್ನು ಬೀದರ್ ಕಳುಹಿಸಲಾಯಿತು. ರಾಜಧಾನಿಯಲ್ಲಿ ಮದುವೆಯ ಸಡಗರ-ಸಂಭ್ರಮ

ಹಲವು ವಾರಗಳ ಕಾಲಗಳಷ್ಟು ಕಾಲ ನಡೆಯಿತು. ಜ್ಯೋತಿಷಿಗಳು ಕೈ ತುಂಬಾ ಸಂಪಾದನೆ ಮಾಡಿಕೊಂಡರು. ಅವರಿಗೆ ಮುತ್ತು, ರತ್ನ ಮತ್ತು ಆಭರಣಗಳನ್ನು ಉಡುಗೊರೆಯಾಗಿ ನೀಡಲಾಯಿತು.

1426–27ರಲ್ಲಿ ಎರಡು ಸಾವಿರ ಸೈನಿಕರ ಮನ್ಸಬ್‌ದಾರನಾಗಿದ್ದ ದೌಲತಾಬಾದ್‌ನ ರಾಜ್ಯಪಾಲ ಮಲಿಕ್‌ತುಜಾರ್ ಖಲಾಫ್ ಹಸನ್ ಬಾಸ್ರಿಗೆ ಕೊಂಕಣ ಪ್ರದೇಶದಲ್ಲಿ ಹೆಚ್ಚಿದ್ದ ಡಕಾಯಿತರ ಉಪಟಳ ಕಡಿಮೆ ಮಾಡುವಂತೆ ಅಹ್ಮದ್ ಸೂಚಿಸಿದ. ಕೊಂಕಣ ಪ್ರದೇಶದಲ್ಲಿ ನಿರೀಕ್ಷೆಗಿಂತ ಹೆಚ್ಚಿನ ಪ್ರಮಾಣದ ಯಶ ಪಡೆದ ಬಾಸ್ರಿಯು ಆನೆ ಮತ್ತು ಸಮರದಲ್ಲಿ ದೊರೆತ ಅಮೂಲ್ಯ ಧನಕನಕವನ್ನು ಸುಲ್ತಾನ್‌ನಿಗೆ ಕಳುಹಿಸಿದ. ರಾಜಧಾನಿಗೆ ಮರಳಿದ ಖಲಾಫ್ ಹಸನ್‌ನ ದೊರೆತ ಅದ್ದೂರಿ ಸ್ವಾಗತವು ದಖನ್ನಿಗಳ ಅಸಮಾಧಾನ ಹೆಚ್ಚುವುದಕ್ಕೆ ಕಾರಣವಾಯಿತು. ಗುಜರಾತಿನ ಅತ್ಯಂತ ಪ್ರಬಲ ದೊರೆ ಮೊದಲನೇ ಅಹ್ಮದ್ ಹಾಗೂ ಮಾಳ್ವದ ಹೋಷಾಂಗ್‌ನ ನಡುವೆ ಜಾಲ್ವರ್‌ನ ರಾಜಾ ಕನ್ಹನ ವಿಷಯಕ್ಕೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯ ಉಂಟಾಗಿತ್ತು. ಹೋಷಾಂಗ್‌ನ ವ್ಯಾಪ್ತಿಯಲ್ಲಿದ್ದ ಕನ್ಹನು ಬಹಮನಿ ಅರಸನ ಬಳಿ ರಕ್ಷಣೆ ಕೋರಿ ಬಂದಿದ್ದ. ಅದಕ್ಕೆ ಪ್ರತಿಯಾಗಿ ಅಹ್ಮದ್‌ನು ನಂದೂರಬಾರ್ ಮತ್ತು ಸುಲ್ತಾನ್‌ಪುರಗಳಿಗೆ ಬಹಮನಿ ಸೈನ್ಯ ಕಳುಹಿಸಿದ್ದ. ಗುಜರಾತಿನ ಅಹ್ಮದ್‌ನು ಸೈನ್ಯದ ಮುಖ್ಯಸ್ಥ ಮುಕಾರಬ್ ಉಲ್ ಮುಲ್ಕ್ ಸೈಯದ್ ಅಬ್ದುಲ್ ಖಾಸಿಮ್ ಮತ್ತು ಸೈಯದ್ ಆಲಂ ಹಾಗೂ ರಾಜಕುಮಾರ ಮುಹಮ್ಮದ್ ಅವರನ್ನು ಒಳಗೊಂಡ ಸೈನ್ಯ ಕಳುಹಿಸಿದ್ದನು. ಈ ಯುದ್ಧದಲ್ಲಿ ಸೋಲು ಅನುಭವಿಸಿದ ದಖನ್‌ನ ಸೈನ್ಯ ದೌಲತಾಬಾದ್‌ಗೆ ಪಲಾಯನಗೈಯಬೇಕಾಯಿತು. ಸ

ೋಲಿನ ಸುದ್ದಿ ಕೇಳಿದ ಯುವರಾಜ ಅಲಾವುದ್ದೀನ್‌ನು ದೌಲತಾಬಾದ್‌ನಲ್ಲಿ ಖಾಂದೇಶ್‌ದ ನಾಸಿರಖಾನ್ ಫಾರೂಕಿ ಹಾಗೂ ಜಾಲ್ವರ್‌ನ ರಾಜನೊಂದಿಗೆ ಸಮಾಲೋಚನೆ ನಡೆಸಿ ಗುಜರಾತಿನ ವಿರುದ್ಧ ಮತ್ತೊಂದು ಕದನಕ್ಕೆ ಸಿದ್ಧತೆ ನಡೆಸಿದ. ಮಾನೆಕ್ ಬಳಿ ನಡೆದ ಕದನದಲ್ಲಿ ದಖನ್ ಸೈನ್ಯ ಮತ್ತೆ ಸೋಲು ಅನುಭವಿಸಬೇಕಾಯಿತು. ಸೋಲಿನಿಂದ ಹತಾಶನಾಗಿದ್ದ ಬಹಮನಿ ದೊರೆ ಅಹ್ಮದ್‌ನಿಗೆ ಗುಜರಾತಿನ ವಶದಲ್ಲಿ ಮಾಹೈಮ್‌ನ ರಾಜ್ಯಪಾಲ ಅಸುನೀಗಿದ ಸುದ್ದಿ ತಿಳಿಯಿತು. ಕೊಂಕಣ ಪ್ರದೇಶದಲ್ಲಿ ಸಮರನಿರತನಾಗಿದ್ದ ಮಲಿಕ್‌ತುಜಾರ್ ಖಲಾಫ್ ಹಸನ್‌ನಿಗೆ ಸಂದೇಶ ಕಳುಹಿಸಿದ ಅಹ್ಮದ್‌ನು ದ್ವೀಪವನ್ನು ವಶಕ್ಕೆ ತೆಗೆದುಕೊಳ್ಳುವಂತೆ ಸೂಚಿಸಿದ. ಈ ಮಾಹಿತಿ ದೊರೆತ ಗುಜರಾತಿನ ದೊರೆಯು ತನ್ನ ಪುತ್ರ ಜಾಫರ್‌ಖಾನ್‌ನನ್ನು ಕಳುಹಿಸಿಕೊಟ್ಟ. ಕೊಂಕಣದಲ್ಲಿ ವೇರವಾಲ್,

ಗೋಘಾ, ಕ್ಯಾಂಬೆ, ದಿಯುಗಳನ್ನು ವಶಕ್ಕೆ ತೆಗೆದುಕೊಂಡ ಜಾಫರ್‌ಖಾನ್‌ನು ಬಹಮನಿ ಅರಸರ ಪ್ರಮುಖ ನೆಲೆಯಾಗಿದ್ದ ಥಾಂಬಾ ಮುತ್ತಿಗೆ ಹಾಕಿದ. ಥಾಂಬಾದ ಕಿಲ್ಲೇದಾರ ಓಡಿ ಹೋಗುವಂತೆ ನೋಡಿಕೊಂಡ. ವಿಜಯದ ಸಂಭ್ರಮದಲ್ಲಿ ಜಾಫರ್‌ಖಾನ್ ಮಾಹೈಮ್ ಕಡೆಗೆ ಮುನ್ನಡೆದ. ಅಲ್ಲಿ ಗುಜರಾತ್ ಮತ್ತು ದಖನ್ ಸೈನ್ಯ ಪರಸ್ಪರ ಮುಖಾಮುಖಿಯಾದವು. ಇಡೀ ದಿನ ಘೋರ ಕಾಳಗ ನಡೆಯಿತು. ದಿನದ ಅಂತ್ಯದ ವೇಳೆಗೆ ಖಲಾಫ್ ಹಸನ್‌ನು ಬಾಂಬೆ ಸಮೀಪದ ದ್ವೀಪವೊಂದಕ್ಕೆ ತೆರಳಬೇಕಾಯಿತು. ಅದಕ್ಕೂ ಮುನ್ನ ಬಹಮನಿ ಅರಸನಿಗೆ ಸಂದೇಶ ಕಳುಹಿಸಿ 10 ಸಾವಿರ ಸೈನಿಕರ ಸೈನ್ಯ ಹಾಗೂ 60 ಆನೆಗಳನ್ನು ಕಳುಹಿಸುವಂತೆ ಕೋರಿದ.

ಯುವರಾಜ ಮುಹಮ್ಮದ್‌ನ ನೇತೃತ್ವದಲ್ಲಿ ಪಶ್ಚಿಮದ ಕಡೆಗೆ ಹೊರಟ ಸೈನ್ಯವು ಯುವರಾಜ ಅಲಾವುದ್ದೀನ್‌ನ ಸೈನ್ಯದ ಜೊತೆ ಸೇರಿಕೊಂಡಿತು. ದುರ್ದೈವವಶಾತ್ ಯುವರಾಜ ಅಲಾವುದ್ದೀನ್ ಅನಾರೋಗ್ಯಕ್ಕೆ ಈಡಾದ. ಅದರಿಂದಾಗಿ ಸಮರಾಂಗಣದಿಂದ ದೂರ ಉಳಿಯಬೇಕಾಯಿತು. ಇದೇ ಹೊತ್ತಿಗೆ ಬಹಮನಿ ಸೈನ್ಯದ ದಖನಿಗಳು ಅಫಾಕಿಗಳ ವಿರುದ್ಧ ತಿರುಗಿ ಬಿದ್ದರು. ದಖನಿಗಳು ಅಲಾವುದ್ದೀನ್ ಬಳಿ ಅಫಾಕಿಗಳ ಬಗ್ಗೆ ಇಲ್ಲ ಸಲ್ಲದ ಮಾತುಗಳನ್ನು ಹೇಳಿ ಯುವರಾಜನ ತಲೆ ಕೆಡಿಸಿದರು. ಮಾತ್ರವಲ್ಲದೇ ಖಲಾಫ್ ಹಸನ್‌ನ ಸಹಾಯಕ್ಕೆ ಹೋಗದಿರಲು ನಿರ್ಧರಿಸಿರುವುದಾಗಿ ತಿಳಿಸಿದರು. ಬಹಮನಿ ಸೈನ್ಯದ ಒಳಗಿನ ಭಿನ್ನಾಭಿಪ್ರಾಯದ ಲಾಭ ಪಡೆಯಲು ನಿರ್ಧರಿಸಿದ ಗುಜರಾತಿನ ಸೈನ್ಯವು ಸಮರ ಆರಂಭಿಸಿತು. ಬಹಮನಿ ಸೈನ್ಯದ ಮೇಲೆ ಮುಗಿಬಿದ್ದು ತರಿದು ಹಾಕಿತು. ಮಲಿಕ್‌ತುಜಾರ್‌ನ ಸಹೋದರ ಖುಮಾರಿಸ್ ಹಸನ್‌ನನ್ನು ವಶಕ್ಕೆ ತೆಗೆದುಕೊಂಡಿತು. ಅಪಾರ ಸಂಖ್ಯೆ ಕುದುರೆ, ಆನೆ ಗುಜರಾತ್ ಸೈನ್ಯದ ಪಾಲಾದವು.

ಬಹಮನಿ ಸೈನ್ಯದ ಸೋಲಿನ ಸುದ್ದಿ ಕೇಳಿದ ಸುಲ್ತಾನ್‌ನು ರಾಜಧಾನಿಯಲ್ಲಿ ಉಳಿದಿದ್ದ ಸೈನ್ಯದ ಜೊತೆಗೆ ಗುಜರಾತಿನ ಗಡಿಯತ್ತ ಧಾವಿಸಿದ. ಬೇವುಲ್ ಬಳಿ ಶಿಬಿರ ಹೂಡಿದ. ಬೇವುಲ್‌ನ ಮರಾಠ ಮುಖ್ಯಸ್ಥನು ಗುಜರಾತಿನ ದೊರೆಗೆ ಸಂದೇಶ ಕಳುಹಿಸಿ ದಖನ್ ಸೈನ್ಯದಿಂದ ರಕ್ಷಿಸಿದರೆ ಕಪ್ಪಕಾಣಿಕೆ ನೀಡುವುದಾಗಿ ತಿಳಿಸಿದ. ಬೃಹತ್ ಸೈನ್ಯದೊಂದಿಗೆ ಅಹ್ಮದ್‌ನು ಮರಾಠ ಮುಖ್ಯಸ್ಥನ ಸಹಾಯಕ್ಕೆ ಬಂದ. ಬಹಮನಿ ಸೈನ್ಯ ಸ್ವಲ್ಪ ಹಿಂದಕ್ಕೆ ಸರಿಯಿತು. ಗುಜರಾತಿನ ಸೈನ್ಯ ಮುಂದಡಿ ಇಟ್ಟಿತು. ಕೊನೆಗೆ ತಪ್ತಿ ನದಿಯ ಎರಡೂ ದಡಗಳಲ್ಲಿ ಸೈನ್ಯಗಳು ಬಿಡಾರ ಹೂಡಿದವು. ಸಣ್ಣಪುಟ್ಟ ಚಕಮಕಿಗಳು ಸಂಭವಿಸಿದರೂ ಯುದ್ಧ ನಡೆಯಲಿಲ್ಲ.

ಉಭಯ ಸೈನ್ಯದ ಮುಖಂಡರು ರಕ್ತ ಚೆಲ್ಲದಿರುವ ನಿಲುವು ತಳೆದರು. ಒಪ್ಪಂದ ಮಾಡಿಕೊಳ್ಳಲಾಯಿತು. ಬೇವುಲ್ ಪಟ್ಟಣವನ್ನು ಗುಜರಾತಿಗೆ ಮರಳಿಸಲಾಯಿತು. ಬೇವುಲ್‌ನ ಈ ಒಪ್ಪಂದವು ಗುಜರಾತ್ ಮತ್ತು ಬಹಮನಿ ಸಾಮ್ರಾಜ್ಯದ ನಡುವಿನ ಸ್ನೇಹ ಸಂಬಂಧವು ಅವಿರತವಾಗಿ ಮುಂದುವರೆಯಿತು. ಬಹಮನಿ ಸಾಮ್ರಾಜ್ಯ ಹೋಳಾಗುವವರೆಗೂ ಇತ್ತು.

ಗುಜರಾತಿನ ಜೊತೆಗಿನ ಕದನದಲ್ಲಿ ಬಹಮನಿ ಸೈನ್ಯ ತೊಡಗಿದ್ದ ಸಂದರ್ಭದಲ್ಲಿ ಮಾಳ್ವದ ಹೋಷಾಂಗ್‌ನು ಖೇರ್ಲಾದ ಮೇಲೆ 1434ರಲ್ಲಿ ದಾಳಿ ನಡೆಸಿದಾಗ ನರಸಿಂಗ್ ಮೃತಪಟ್ಟ. ಇದರಿಂದ ಕುಪಿತನಾಗ ಅಹ್ಮದ್‌ನು ಉತ್ತರ ಕಡೆಗೆ ತನ್ನ ಸೈನ್ಯದೊಂದಿಗೆ ಮುನ್ನಡೆದ. ಸುಲ್ತಾನ್‌ನ ಬಂಧುವಾಗಿದ್ದ ಖಾಂದೇಶ್‌ದ ನಾಸಿರ್‌ಖಾನ್ ಮಧ್ಯೆಪ್ರವೇಶಿಸಿ ಒಪ್ಪಂದ ಏರ್ಪಡುವಂತೆ ನೋಡಿಕೊಂಡ. ಅದರ ಪ್ರಕಾರ ಬೇರಾರ್ ದಖನ್‌ಗೂ ಖೇರ್ಲಾ ಮಾಳ್ವಕ್ಕೂ ಸೇರಿದವು.

ಈ ಸಂದರ್ಭದ ಲಾಭ ಪಡೆಯುವುದಕ್ಕಾಗಿ ತೆಲಂಗಾಣದಲ್ಲಿ ದಂಗೆ ಉಂಟಾಯಿತು. ರಾಜಮಹೇಂದ್ರಿಯ ವೇಲಮರು ಸ್ವಾತಂತ್ರ್ಯ ಘೋಷಿಸಿಕೊಂಡರು. ರಾಜ್ಯಪಾಲನಾಗಿದ್ದ ಆಜಂಖಾನ್‌ನನ್ನು ಅಲ್ಲಿಂದ ಓಡಿಸಿದರು. ವಯಸ್ಸಾಗಿದ್ದ ಅಹ್ಮದ್‌ನು ಬೃಹತ್ ಸೈನ್ಯದೊಂದಿಗೆ ತೆಲಂಗಾಣದತ್ತ ಪ್ರಯಾಣ ಬೆಳೆಸಿದ. ಮಾರ್ಗದುದ್ದಕ್ಕು ಬಂದ ಕೋಟೆಗಳನ್ನು ವಶಕ್ಕೆ ತೆಗೆದುಕೊಂಡ. ವಾರಂಗಲ್‌ನ ಮೂರನೇ ಸಿನ್ನಾ ಶಸ್ತ್ರಾಸ್ತ್ರ ಕೆಳಗಿಟ್ಟು ಶರಣಾಗತನಾದ. ಕೊನೆಯಲ್ಲಿ ತೆಲಂಗಾಣದ ಬಹುತೇಕ ಎಲ್ಲ ಕೋಟೆಗಳನ್ನು ಮರಳಿ ಪಡೆಯಲಾಯಿತು. ಇಬ್ರಾಹಿಂ ಸಂಜಾರ್‌ಖಾನ್‌ನನ್ನು ರಾಜ್ಯಪಾಲನನ್ನಾಗಿ ನೇಮಿಸಲಾಯಿತು.

ಸಾರ್ವಜನಿಕ ಜೀವನದಿಂದ ನಿವೃತ್ತನಾದ ಅಹ್ಮದ್‌ನು ತನ್ನ ಸಮಕಾಲೀನರಲ್ಲಿಯೇ ಹೆಚ್ಚು ತಿಳುವಳಿಕೆಯುಳ್ಳ ಬುದ್ಧಿವಂತನಾದ ಮಹಮೂದ್ ನಿಜಾಮ್ ಉಲ್ ಮುಲ್ಕ್‌ನಿಗೆ ಆಡಳಿತದ ಜವಾಬ್ದಾರಿ ವಹಿಸಿದ. ಮಲಿಕ್‌ತುಜಾರ್‌ನಿಗೆ ದಾಬೋಲ್ ಮತ್ತು ಪಶ್ಚಿಮ ಕರಾವಳಿಯ ಹೊಣೆಗಾರಿಕೆ ಒಪ್ಪಿಸಿದ. ಕೊನೆಯ ದಿನಗಳಲ್ಲಿ ಹಿರಿಯ ಪುತ್ರ ಅಲಾವುದ್ದೀನ್ ಜಾಫರ್‌ಖಾನ್‌ನಿಗೆ ಸಾಮ್ರಾಜ್ಯದ ಹೊಣೆಗಾರಿಕೆ ಒಪ್ಪಿಸಿ ಕಿರಿಯ ಪುತ್ರ ಮುಹಮ್ಮದ್‌ನಿಗೆ ಜೊತೆಯಾಗಿ ಸಹಕಾರ ನೀಡುವಂತೆ ಸೂಚಿಸಿದ. ಉಳಿದ ಪುತ್ರರಿಗೆ ಬೇರೆ ಬೇರೆ ಪ್ರಾಂತ್ಯಗಳ ಜವಾಬ್ದಾರಿ ಒಪ್ಪಿಸಿದ. ರಾಜಕುಮಾರ ಮಹಮೂದ್‌ನನ್ನು ಮಾಹೂರ, ಕುಲೂರು ಮತ್ತು ರಾಮಗೀರ್ ಹಾಗೂ ಬೇರಾರ್ ಕೆಲವು ಭಾಗಕ್ಕೆ ರಾಜ್ಯಪಾಲನನ್ನಾಗಿ ಮಾಡಿದ.

ರಾಜಕುಮಾರ್ ದಾವುದ್‌ನಿಗೆ ತೆಲಂಗಾಣದ ಹೊಣೆಗಾರಿಕೆ ನೀಡಿದ. ಬಹಮನಿ ಸಾಮ್ರಾಜ್ಯದ ಸಹೋದರರ ಪೈಕಿ ಅಧಿಕಾರಕ್ಕಾಗಿ ನಡೆದ ಕಿತ್ತಾಟದ ಅರಿವಿದ್ದ ಅಹ್ಮದ್ ತನ್ನ ಮಕ್ಕಳು ಪುನರಾವರ್ತನೆ ಮಾಡದಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದ. ಯಾವುದೇ ಸಂದರ್ಭದಲ್ಲಿಯೂ ಪರಸ್ಪರ ಕಿತ್ತಾಡದಂತೆ ಪ್ರಮಾಣ ಮಾಡಿಸಿಕೊಂಡಿದ್ದ. ಕೆಲಕಾಲದ ಅನಾರೋಗ್ಯದ ನಂತರ 17–4–1436ರಲ್ಲಿ ಅಹ್ಮದ್ ಅಸುನೀಗಿದ.

ಶಿಹಾಬುದ್ದೀನ್ ಅಹ್ಮದ್‌ನ ಆಡಳಿತವು ಬಹಮನಿ ಸಾಮ್ರಾಜ್ಯದಲ್ಲಿ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿತು. ವಾರಸುದಾರಿಕೆಗೆ ಸಂಬಂಧಿಸಿದಂತೆ ಈ ಅವಧಿಯಲ್ಲಿ ಹಿಂದೆಂದಿಗಿಂತ ಹೆಚ್ಚು ಸಬಲವಾದ 'ನೆಲೆ' ಕಾಣಿಸಿಕೊಂಡಿತು. ಅಹ್ಮದ್‌ನ ಮೂರನೇ ಪುತ್ರ ಮುಹಮ್ಮದ್‌ನ ಹೆಸರನ್ನೇ ಬೀದರ್‌ಗೆ ಇರಿಸಲಾಗಿತ್ತು ಮತ್ತು ಅವನೇ ಅರಸನಿಗೆ ಹೆಚ್ಚು ಪ್ರಿಯನಾಗಿದ್ದ. ಆದರೂ ಮೊದಲ ಪುತ್ರ ಅಲಾವುದ್ದೀನ್‌ನನ್ನು ಉತ್ತರಾಧಿಕಾರಿಯನ್ನಾಗಿ ಮಾಡಲಾಯಿತು. ಅಹ್ಮದ್‌ನ ಆಡಳಿತವು ನ್ಯಾಯನಿಷ್ಠುರತೆಗೆ ಹೆಸರುವಾಸಿಯಾಗಿತ್ತು. ದೇವರ ಬಗ್ಗೆ ಭಯ ಮತ್ತು ಗೌರವ ಉಳ್ಳವನಾಗಿದ್ದ ಅಹ್ಮದ್ ಬುದ್ಧಿವಂತ, ಸೂಕ್ಷ್ಮಮತಿಯಾಗಿದ್ದ. ದಖನ್‌ನ ಬಹಳಷ್ಟು ಅವನನ್ನು ಸಂತ (ವಲಿ) ಎಂದು ಗುರುತಿಸುತ್ತಾರೆ. ಅಹ್ಮದ್‌ನ ಕಾಲದಲ್ಲಿ ಮುಹಮ್ಮದಾಬಾದ್–ಬೀದರ್‌ನಲ್ಲಿ ಇರಾನ್, ಇರಾಕ್ ಮತ್ತು ಅರೇಬಿಯಾದ ವಿದ್ವಾಂಸರು ನೆಲೆಸಿದ್ದರು. ಮೀರ್ ಫಜ್ಲುಲ್ ಇಂಜುವಿನಿಂದ ಸಂಗೀತ ಮತ್ತು ಗಾಯನದಲ್ಲಿ ತರಬೇತಿ ಪಡೆದಿದ್ದ ಅಹ್ಮದ್ ತನ್ನ ಪ್ರಜೆಗಳು ನೆಮ್ಮದಿಯ ಜೀವನ ನಡೆಸುವಂತೆ ಅವಕಾಶ ಕಲ್ಪಿಸಿದ್ದ. ದಖನ್‌ನಲ್ಲಿ ಭೀಕರ ಬರ ಸಂದರ್ಭದಲ್ಲಿ ಆಹಾರ ಧಾನ್ಯ ಖರೀದಿಸಿ ಉಚಿತವಾಗಿ ವಿತರಣೆ ಮಾಡುವ ವ್ಯವಸ್ಥೆ ಮಾಡಿದ್ದ. ಸೂಫಿ ಸಂತರ ಬಗ್ಗೆ ಗೌರವ ಭಾವನೆ ಹೊಂದಿದ್ದ ಅಹ್ಮದ್‌ನಿಗೆ ಶಿಯಾ ಪಂಗಡದ ಕಡೆಗೆ ಒಲವು ಇತ್ತು. ಹೊಸದಾಗಿ ಇರಾನ್, ಇರಾಕ್‌ನಿಗೆ ಜನ ದಖನ್ ಆಗಮಿಸುವುದಕ್ಕೆ ಪ್ರೇರಣೆ ನೀಡಿದ. ಇದು ಸ್ಥಳೀಯ ದಖನ್ನಿಗಳ ಅಸಮಾಧಾನಕ್ಕೆ ಕಾರಣವಾಯಿತು. ಅಹ್ಮದ್‌ನ ಕಾಲದಲ್ಲಿನ ವಾಸ್ತುಶಿಲ್ಪ, ಕಲೆ ಮತ್ತು ಸಾಮಾಜಿಕ ಜೀವನದಲ್ಲಿ ಹಿಂದು ಪ್ರಭಾವ ದಟ್ಟವಾಯಿತು. ಅರಸರ ನಡುವೆಯೇ ನಡೆಸಿದ ಅಂತರ್ಜಾತೀಯ ಮದುವೆಗಳು ಪ್ರಜೆಗಳ ಮೇಲೂ ಪರಿಣಾಮ ಬೀರಿದವು.

ಶಿಹಾಬುದ್ದೀನ್ ಅಹ್ಮದ್‌ನ ಆಡಳಿತದ ಅವಧಿಯಲ್ಲಿ ದಖನ್‌ಗೆ ಭೇಟಿ ನೀಡಿದ ಈಜಿಪ್ಟಿನ ವೈಯಾಕರಣಿ ಅಲ್ ಮಖ್‌ಜುಮಿ ಅದ್ದಾಮಾಮಿನಿಯ ಅಭಿಪ್ರಾಯವು ಗಮನಾರ್ಹವಾದದ್ದು. 936 ಪುಟಗಳಷ್ಟು ಇರುವ ಅರಬ್ಬಿ

ವ್ಯಾಕರಣದ ರಚನೆಯನ್ನು (1422ರ ಸೆಪ್ಟೆಂಬರ್) ರಂಜಾನ್ ತಿಂಗಳಿನಲ್ಲಿ ಮಾಹೈಮ್‌ನಲ್ಲಿ ಇದ್ದಾಗ ಆರಂಭಿಸಿದ ವೈಯಾಕರಣಿಯು ಅದನ್ನು 6ನೇ ಡಿಸೆಂಬರ್ 1422ರಂದು ಪೂರ್ಣಗೊಳಿಸಿದ. ಅಲ್ಲಿಂದ ಗುಜರಾತ್ ಮತ್ತು ರಾಜಧಾನಿಯಾಗಿದ್ದ ಹಸನಾಬಾದ್– ಗುಲ್ಬರ್ಗಕ್ಕೆ ಭೇಟಿ ನೀಡಿದ್ದ. 5ನೇ ಫೆಬ್ರವರಿ 1423ರಿಂದ 19ನೇ ಏಪ್ರಿಲ್ 1423ರ ಅವಧಿಯಲ್ಲಿ ವ್ಯಾಕರಣ ಗ್ರಂಥದ ಮರುಪ್ರತಿ ಮಾಡಿದ್ದ. ಗುಲ್ಬರ್ಗಕ್ಕೆ ಹಿಂದೆ ಕೇಳಿದ್ದ ಸಂಗತಿಗಳ ಬಗ್ಗೆ ಪರಿಶೀಲನೆ ನಡೆಸಿ ಅಲ್ ಮಖ್‌ಜುಮಿಯು ಸುಲ್ತಾನ್‌ನ ಆಡಳಿತ ಇರುವ ಪ್ರದೇಶದಲ್ಲಿ ಮಾತ್ರವಲ್ಲ ನೆರೆಯ ರಾಜ್ಯಗಳಲ್ಲಿಯೂ ಒಳ್ಳೆಯ ಅಭಿಪ್ರಾಯ ಇದೆ. ಜನ ಅರಸನ ಆಡಳಿತದ ಒಳ್ಳೆಯತನದ ಬಗ್ಗೆ ಚರ್ಚಿಸುತ್ತಾರೆ. ರಾಜ ಅತ್ಯಂತ ಜನಪ್ರಿಯ ವ್ಯಕ್ತಿಯಾಗಿದ್ದಾನೆ. ದೊರೆಯ ಸಮೀಪಕ್ಕೆ ಹೋದವರ ಪೈಕಿ ಯಾರೊಬ್ಬರು ನಿರಾಶರಾಗಿ ಮರಳಿದ್ದಿಲ್ಲ. ಧೈರ್ಯಶಾಲಿಯಾದ, ಗೌರವದಿಂದ ನಡೆದುಕೊಳ್ಳುವ ಸಹಾಯಹಸ್ತ ಚಾಚುವ ದೊರೆ ಎಂದು ಬರೆಯುವ ಮಖ್‌ಜುಮಿಯು 'ವಿದ್ವಾಂಸರ ಪೈಕಿ ಒಬ್ಬನಾದ ದೊರೆ'ಗೆ ತನ್ನ ಗ್ರಂಥವನ್ನು ಅರ್ಪಣೆ ಮಾಡಿದ್ದಾನೆ. ಅಹ್ಮದ್‌ನ ಆಡಳಿತವು ಬಹಮನಿ ಸಾಮ್ರಾಜ್ಯದ ಬಗ್ಗೆ ಗೌರವ ಹೆಚ್ಚುವಂತೆ ಮಾಡಿತು. ನೆರೆಯ ಸಾಮ್ರಾಜ್ಯಗಳ ಜೊತೆಗಿನ ಸಂಬಂಧವು ಸೌಹಾರ್ದಯುತವಾಗಿತ್ತು. ಅಫಾಕಿ–ದಖನಿಗಳ ಭಿನ್ನಾಭಿಪ್ರಾಯದ ಬೀಜ ಮೊಳೆತದ್ದು ಮಾತ್ರ ಸಮೃದ್ಧ ದಖನ್‌ನ ಹಿನ್ನಡೆಗೆ ಕಾರಣವಾಯಿತು.

## ಎರಡನೇ ಅಲಾವುದ್ದೀನ್ ಅಹ್ಮದ್

(17 ಏಪ್ರಿಲ್ 1436 ರಿಂದ 6 ಮೇ 1458)

ಮೊದಲನೇ ಅಹ್ಮದ್ ಅತ್ಯಂತ ಯಶಸ್ವಿ ದೊರೆಯಾಗಿದ್ದ. ಅಹ್ಮದ್ ಮೃತಪಟ್ಟಾಗ ಪ್ರಜೆಗಳಲ್ಲಿ ಮಾತ್ರವಲ್ಲದೆ ನೆರೆಯ ರಾಜ್ಯಗಳಲ್ಲಿಯೂ ಜನಪ್ರಿಯನಾಗಿದ್ದ. ಅವನನ್ನು 'ಸಂತ' ಎಂದು ಕರೆದು ಗೌರವಿಸಲಾಯಿತು. ಅಹ್ಮದ್‌ನ ನಂತರ ಅಧಿಕಾರಕ್ಕೆ ಬಂದ ಜಾಫರ್‌ಖಾನ್ ಭಿನ್ನ ವ್ಯಕ್ತಿತ್ವದ ಅರಸ. ಬಹಮನಿ ಸಾಮ್ರಾಜ್ಯವು ಶಕ್ತಿಶಾಲಿಯಾದ ದೊರೆಯ ನಿರೀಕ್ಷೆಯಲ್ಲಿತ್ತು. ಆದರೆ, ದುರ್ಬಲ ಇಚ್ಛಾಶಕ್ತಿಯ ಅಲಾವುದ್ದೀನ್‌ನಿಂದ ಸಾಮ್ರಾಜ್ಯದ ಒಳಗಿನ ಒಳಜಗಳ ಉತ್ತುಂಗಕ್ಕೆ ಏರಿತು. ಅಫಾಕಿಗಳು ಮತ್ತು ಸ್ಥಳೀಯ ದಖನಿಗಳ ನಡುವಿನ ಕಿತ್ತಾಟ ಉತ್ತುಂಗಕ್ಕೆ ಏರಿತು. ನಂತರದ ದಿನಗಳಲ್ಲಿ ಅದು ಸಾಮ್ರಾಜ್ಯದ ಕುಸಿತಕ್ಕೇ ಕಾರಣವಾಯಿತು.

ಅಹ್ಮದ್‌ನ ಸಾವಿನ ನಂತರ ದಖನ್‌ನಲ್ಲಿ ಅಧಿಕಾರಕ್ಕೆ ಬಂದ ಅಲಾವುದ್ದೀನ್ ಜಾಫರ್‌ಖಾನ್‌ನು 'ಅಲಾವುದ್ದೀನ್ ಅಹ್ಮದ್' ಎಂದು ಚಿರಪರಿಚಿತ. ತನ್ನ ತಂದೆಯ ಮೂರನೇ ದಿನದ ಕ್ರಿಯಾವಿಧಿಗಳನ್ನು ಪೂರ್ಣಗೊಳಿಸಿದ ತಕ್ಷಣ ಅಲಾವುದ್ದೀನ್ ಸಿಂಹಾಸನ ಆರೋಹಣ ಮಾಡಿದ. ಶಹಾ ಖಲೀಲ್ ಅಲ್ಲಾ ಅವರ ಬಲಭಾಗದಲ್ಲಿಯೂ ಸೈಯದ್ ಹನೀಫ್ ಅವನ ಎಡಭಾಗದಲ್ಲಿಯೂ ಉಪಸ್ಥಿತರಿದ್ದರು. ಬಹಮನಿ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಇದೊಂದು ಐತಿಹಾಸಿಕ ಬೆಳವಣಿಗೆಯಾಗಿತ್ತು. ಮೊದಲನೇ ಮುಹಮ್ಮದ್‌ನ ಕಾಲದಲ್ಲಿ ಅವನ ಮಾವನಿಗೆ ಕೂಡ ಕುಳಿತುಕೊಳ್ಳಲು ಅವಕಾಶ ಇರಲಿಲ್ಲ. ಆದರೆ, ಎರಡನೇ ಮುಹಮ್ಮದ್‌ನ ಕಾಲದಲ್ಲಿ ಬೆಂಬಲಿಸುವ ಇಬ್ಬರು ಧಾರ್ಮಿಕ ವ್ಯಕ್ತಿಗಳು ಹಾಗೂ ಸೈಯದ್‌ರಿಗೆ ಮಾತ್ರವಲ್ಲದೆ ವಿದ್ವಾಂಸರಿಗೆ ಕೂಡ ಕೂಡಲು ಅವಕಾಶ ಕಲ್ಪಿಸಲಾಗಿತ್ತು. ಆಗ ಕಾಜಿ ಖುಬುಲ್ ಅಹ್ಮದ್ ಸದ್ರ ಜಹಾನ್ ಮತ್ತು ಇತರರಿಗೆ ಸಮಾನ ಸ್ಥಾನ ನೀಡಲಾಗಿತ್ತು. ಸಿಂಹಾಸನ ಆರೋಹಣದ ಪ್ರಶಸ್ತ ಗಳಿಗೆಯ ಸಂದರ್ಭದಲ್ಲಿ ವಿಶೇಷ ಪ್ರಾರ್ಥನೆ ನಡೆದವು. ಅಫ್ಘನ್ ಮೂಲದ ದಿಲಾವರ್‌ಖಾನ್‌ನಿಗೆ ವಕೀಲ್ ಹುದ್ದೆ (ಪ್ರಧಾನಿ) ಹಾಗೂ ಖ್ವಾಜಾ ಜಹಾನ್ ಅಸ್ತ್ರಾಬಾದಿಗೆ ವಜೀರ್ ಹುದ್ದೆಯನ್ನು ಇಮಾದ್ ಉಲ್ ಮುಲ್ಕ್ ಘೋರಿಗೆ ಅಮೀರ್ ಉಲ್ ಉಮ್ರಾ ಸ್ಥಾನ ನೀಡಿದನು. ತನ್ನ ತಂದೆಗೆ ಪ್ರಿಯನಾಗಿದ್ದ ಕಿರಿಯ ಸಹೋದರ ಮುಹಮ್ಮದ್‌ನಿಗೆ ಹಲವಾರು ಆನೆಗಳೊಂದಿಗೆ ಜಹಾಗೀರು ನೀಡಿದನು.

ಅಲಾವುದ್ದೀನ್‌ನು ಹಿಂದು ಸಾಮ್ರಾಜ್ಯಗಳಾದ ವಿಜಯನಗರ ಮತ್ತು ತೆಲಂಗಾಣ ವಿರುದ್ಧ ಮಾತ್ರವಲ್ಲದೇ ಮುಸ್ಲಿಮ್ ಸಾಮ್ರಾಜ್ಯಗಳಾದ ಗುಜರಾತ್, ಖಾಂದೇಶ್, ಮಾಳ್ವ ವಿರುದ್ಧವೂ ಹಲವಾರು ದಂಡಯಾತ್ರೆಗಳನ್ನು ಕೈಗೊಂಡ. ವಿಜಯನಗರದ ಜೊತೆಗಿನ ಮೊದಲ ಯುದ್ಧ ನಡೆದದ್ದು 1436ರಲ್ಲಿ. ಅದಕ್ಕೆ ಹಿಂದಿನ ಐದು ವರ್ಷಗಳಿಂದ ಕಪ್ಪ ಸಲ್ಲಿಸುವುದನ್ನು ನಿಲ್ಲಿಸಿದ್ದು ಪ್ರಮುಖ ಕಾರಣವಾಗಿತ್ತು. ಅಲಾವುದ್ದೀನ್‌ನು ತನ್ನ ಸಹೋದರ ಮುಹಮ್ಮದ್ ಹಾಗೂ ಅಮೀರ್ ಉಲ್ ಉಮ್ರಾ ಇಮಾದ್ ಉಲ್ ಮುಲ್ಕ್‌ನನ್ನು ಬಾಕಿ ಇರುವ ಕಪ್ಪ ವಸೂಲಿಗೆ ಕಳುಹಿಸಿದನು. ಅದಕ್ಕೆ ತಕ್ಷಣ ಪ್ರತಿಕ್ರಿಯಿಸಿದ ದೇವರಾಯನು ಎಂದು ಲಕ್ಷ ನಾಣ್ಯ ಹಾಗೂ 20 ಆನೆಗಳನ್ನು ಹಾಗೂ ನೃತ್ಯ ಮತ್ತು ಸಂಗೀತದಲ್ಲಿ ಪರಿಣಿತರಾದ 200ಕ್ಕೂ ಹೆಚ್ಚು ಯುವತಿಯರನ್ನು ಕಳುಹಿಸಿದನು.

ಈ ಸಣ್ಣ ಯಶಸ್ಸು ಅಲಾವುದ್ದೀನ್‌ನ ಸಹೋದರ ಮುಹಮ್ಮದ್ ದಂಗೆ ಏಳುವ ದುರದೃಷ್ಟಕರ ಬೆಳವಣಿಗೆಯೊಂದಿಗೆ ಕೊನೆಗೊಂಡಿತು. ವಿಜಯನಗರದಿಂದ

ಮರಳುವ ವೇಳೆಯಲ್ಲಿಯೇ ಮುಹಮ್ಮದ್‌ಖಾನ್‌ನು ಕೆಲಕಾಲ ಮುದಗಲ್‌ನಲ್ಲಿ ತಂಗಿದನು. ಅವನ ಜೊತೆಗೆ ಸಿಂಹಾಸನದ ಮೇಲೆ ಹಗೆತನವುಳ್ಳ ಕೆಲವರು ಉಳಿದುಕೊಂಡಿದ್ದರು. ಅವನ ತಂದೆ ಅಹ್ಮದ್‌ನಿಗೆ ಅಲಾವುದ್ದೀನ್‌ನ ಜೊತೆಯಲ್ಲಿ ಮುಹಮ್ಮದ್‌ನನ್ನು ಜಂಟಿಯಾಗಿ ದೊರೆಯನ್ನಾಗಿ ಮಾಡುವ ಆಸೆ ಇತ್ತು. ಆದರೆ, ಅಲಾವುದ್ದೀನ್‌ನು ಅದನ್ನು ಕಡೆಗಣಿಸಿ ಎರಡನೇ ದರ್ಜೆಯ ಸ್ಥಾನ ನೀಡಿದ್ದಾನೆ. ಅದಕ್ಕಾಗಿ ಈಗ ಸಾಮ್ರಾಜ್ಯವನ್ನು ವಿಭಾಗಿಸಿ ಅರ್ಧ ಪಾಲನ್ನು ಪಡೆಯಬೇಕು. ವೈಢೂರ್ಯಖಚಿತ ಸಿಂಹಾಸನದ ಪಕ್ಕದಲ್ಲಿಯೇ ಮತ್ತೊಂದು ಅದ್ಧೂರಿ ಸಿಂಹಾಸನ ಇರಿಸಬೇಕು ಎಂದು ಮುಹಮ್ಮದ್‌ನ ಕಿವಿಯಲ್ಲಿ ಕೆಲವು ಅಧಿಕಾರಿಗಳು ಕೆಟ್ಟ ಯೋಚನೆಯ ಬೀಜ ಬಿತ್ತಿದರು. ಅದು ಮೊಳಕೆಯೊಡೆಯಲು ಹೆಚ್ಚು ಕಾಲ ಬೇಕಾಗಲಿಲ್ಲ. ಜೊತೆಗೆ ಬಂದಿದ್ದ ಹಿರಿಯನಾದ ಇಮಾದ್ ಉಲ್ ಮುಲ್ಕ್‌ನನ್ನು ಹತ್ಯೆಗೈದು ವಿಜಯನಗರದ ದೊರೆ ದೇವರಾಯನ ಹತ್ತಿರ ಸಹಾಯಹಸ್ತ ಚಾಚಿದ. ಮುಹಮ್ಮದ್ ಕಲ್ಪಿಸಿಕೊಟ್ಟ ಅವಕಾಶವನ್ನು ಬಿಟ್ಟುಕೊಡಲು ದೇವರಾಯನು ಬಯಸಲಿಲ್ಲ. ಸಮರಾಂಗಣದಲ್ಲಿ ದೊರೆಯದ ಯಶಸ್ಸು ದೇವರಾಯನಿಗೆ ಆಯಾಚಿತವಾಗಿ ಮುಹಮ್ಮದ್‌ನ ಮೂಲಕ ದೊರಕಿದಂತಾಯಿತು. ದೇವರಾಯನ ಸಹಾಯದೊಂದಿಗೆ ರಾಜಕುಮಾರನು ಮುದಗಲ್, ರಾಯಚೂರು, ಸೋಲಾಪುರ ಮತ್ತು ನಳದುರ್ಗ ಕೋಟೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಅಷ್ಟು ಸಾಲದೆಂಬಂತೆ ಕೃಷ್ಣಾ ನದಿಯ ದಡದ ಮೇಲೆ ಕಿರೀಟಧಾರಣೆ ಮಾಡಿದನು. ಇದರಿಂದ ಬೇಸತ್ತ ದೊರೆ ಅಲಾವುದ್ದೀನ್‌ನು ತನ್ನ ಸಹೋದರನನ್ನು ಎದುರಿಸಿಲು ಸ್ವತಃ ರಾಜಧಾನಿಯಿಂದ ಪ್ರಯಾಣ ಆರಂಭಿಸಿದ. ಸಮರಾಂಗಣದಲ್ಲಿ ಮುಹಮ್ಮದ್ ಸೋಲನ್ನೊಪ್ಪಿ ಅರಣ್ಯಕ್ಕೆ ಪಲಾಯನಗೈಯಬೇಕಾಯಿತು. ಕೊನೆಗೆ ಯಾವುದೇ ರೀತಿಯ ಹಾನಿ ಉಂಟು ಮಾಡುವುದಿಲ್ಲ ಎಂಬ ಭರವಸೆ ದೊರೆತ ನಂತರ ದೊರೆಯ ಸಮ್ಮುಖದಲ್ಲಿ ಶಸ್ತ್ರತ್ಯಜಿಸಿ ಶರಣಾಗತನಾಗಬೇಕಾಯಿತು. ಸಹೋದರರ ನಡುವೆ ಒಪ್ಪಂದ ಏರ್ಪಟ್ಟು ಮೃತ ಸಹೋದರ ದಾವುದ್‌ನಿಗೆ ನೀಡಲಾಗಿದ್ದ ರಾಜಾಚಲದ ಜಹಾಗೀರ್‌ನ್ನು ಮುಹಮ್ಮದ್‌ನಿಗೆ ನೀಡಲಾಯಿತು.

ಸಂಗಮೇಶ್ವರ ಮತ್ತು ರಾನೆಲ್ ವಿರುದ್ಧ ಕಳುಹಿಸಿದ್ದ ಪ್ರಧಾನಿ ದಿಲಾವರ್‌ಖಾನ್‌ನ ಸೈನ್ಯ ಕೂಡ ವಿಜಯದೊಂದಿಗೆ ಮರಳಿತು. ಪರ್ಷಿಯನ್ ಹೊಸ ವರುಷದ ದಿನ ದಿಲಾವರ್‌ಖಾನ್‌ನಿಗೆ ಅಮೂಲ್ಯ ಉಡುಗೊರೆಗಳನ್ನು ನೀಡಿದ. ದಿಲಾವರ್ ಕರೆದುತಂದಿದ್ದ ಸಂಗಮೇಶ್ವರದ ರಾಜಕುಮಾರಿಯೊಂದಿಗೆ ಮದುವೆಯಾದ ಅರಸು ಅಲಾವುದ್ದೀನ್ ಅವಳಿಗೆ ಜೇಬಾ ಚೆಹರಾ (ಸುಂದರ ವದನೆ) ಎಂಬ ಬಿರುದು ನೀಡಿದ. ದಿಲಾವರ್‌ಖಾನ್‌ನು ಸಂಗಮೇಶ್ವರದ

ಅರಸನಿಂದ ಲಂಚ ಪಡೆದಿದ್ದಾನೆ ಎಂಬ ಮಾಹಿತಿ ದೊರೆತದ್ದರಿಂದ ಅಲಾವುದ್ದೀನ್ ಕೋಪಗೊಂಡಿದ್ದ. ಸುಲ್ತಾನ್‌ನನ್ನು ದಿಲಾವರ್‌ಖಾನ್ ಭೇಟಿಯಾಗಲು ಹೋಗುವಷ್ಟರಲ್ಲಿಯೇ ಅಬಿಸೀನಿಯಾದ ನಿಗ್ರೊ ದಸ್ತೂರ್ ಉಲ್ ಮುಲ್ಕ್‌ನನ್ನು ಪ್ರಧಾನಿಯಾಗಿ ಘೋಷಿಸಲಾಗಿತ್ತು. ಅವನ ಸ್ಥಾನ ಕೂಡ ಹೆಚ್ಚು ದಿನಗಳ ಕಾಲ ಇರಲಿಲ್ಲ. ಯುವರಾಜ ಹುಮಾಯೂನ್‌ನ ಹತ್ಯೆಗೆ ಸಂಬಂಧಿಸಿದ ಘಟನೆಯ ಹಿನ್ನೆಲೆಯಲ್ಲಿ ಅಧಿಕಾರ ಕಳೆದುಕೊಳ್ಳಬೇಕಾಯಿತು. ಆಗ ಸುಲ್ತಾನ್‌ನು ಮಿಯಾಂ ಮಿನ್ನಾಲ್ ದಖನಿಯನ್ನು ಪ್ರಧಾನಿಯನ್ನಾಗಿ ಘೋಷಿಸಿದ.

ಇದಾದ ಕೆಲವೇ ದಿನಗಳಲ್ಲಿ ಅಂದರೆ 1437–8ರಲ್ಲಿ ಮಾವ ಖಾಂದೇಶ್‌ದ ನಾಸಿರ್‌ಖಾನ್ ಜೊತೆಗೆ ಯುದ್ಧ ಮಾಡಬೇಕಾಯಿತು. ಸಂಗಮೇಶ್ವರದ ದೊರೆಯ ಪುತ್ರಿ ಜೇಬಾ ಚೆಹರಾಳ ಜೊತೆಗಿನ ಮದುವೆಯ ನಂತರ ಸುಲ್ತಾನ್ ತನ್ನನ್ನು ಕಡೆಗಣಿಸುತ್ತಿದ್ದಾನೆ ಎಂದು ಖಾಂದೇಶ್‌ದ ದೊರೆಯ ಪುತ್ರಿ ಆಘಾ ಜೈನಾಬ್ ತನ್ನ ತಂದೆಗೆ ದೂರು ಹೇಳಿದಳು. ಅಲಾವುದ್ದೀನ್‌ನ ಸಿಂಹಾಸನ ಆರೋಹಣದ ದಿನಗಳಿಂದಲೂ ಆಘಾ ಜೈನಾಬ್‌ಳೇ ಮಲಿಕಾ ಎ ಜಹಾನ್ ಆಗಿದ್ದಳು. ಪತಿಯು ಕಡೆಗಣಿಸುತ್ತಿದ್ದಾನೆ ಎಂದು ತಂದೆಗೆ ನೀಡಿದ ದೂರಿನ ಹಿನ್ನೆಲೆಯಲ್ಲಿ ಖಾಂದೇಶ್‌ದ ದೊರೆಯು ಗುಜರಾತಿನ ಅಹ್ಮದ್ ಶಹಾನ ನೆರವಿನೊಂದಿಗೆ ಬೆರಾರ್ ಪ್ರಾಂತ್ಯದ ಮೇಲೆ ದಾಳಿ ನಡೆಸಿದ. ಅದಕ್ಕೆ ಗೊಂಡ್ವಾನ್‌ದ ಅರಸನ ಬೆಂಬಲವೂ ಇತ್ತು. ಬೇರಾರ್‌ನ ಕೆಲವು ಗಣ್ಯರು ಮತ್ತು ನಿಸಾರ್‌ಖಾನ್‌ನ ನಡುವೆ ಒಳಒಪ್ಪಂದ ಇತ್ತೆಂದು ಕಾಣಿಸುತ್ತದೆ. ನಿಸಾರ್‌ಖಾನ್‌ನ ಸೈನ್ಯ ಆಗಮಿಸುತ್ತಿದ್ದಂತೆಯೇ ತಮ್ಮ ಬೆಂಬಲ ಘೋಷಿಸಿದರು. ಬೆರಾರ್‌ನ ಮುಖ್ಯಸ್ಥನಾಗಿದ್ದ ಖಾನ್ ಎ ಜಹಾನ್ ಅಬ್ದುಲ್ ಖಾದೀನ್ ನಾರ್ನಲಾಕ್ಕೆ ಹೋಗಿ ತಲೆ ತಪ್ಪಿಸಿಕೊಂಡು ಸುಲ್ತಾನ್‌ನಿಗೆ ಬೆಳವಣಿಗೆಯ ಮಾಹಿತಿ ಒದಗಿಸಿದ. ನಾಸಿರ್‌ಖಾನ್‌ನು ಶುಕ್ರವಾರದ ಪ್ರಾರ್ಥನೆಯ ಸಂದರ್ಭದಲ್ಲಿ ಬೆರಾರ್ ತನ್ನ ವ್ಯಾಪ್ತಿಗೆ ಸೇರಿದೆ ಎಂದು ಕುತ್ಬಾ ಓದಿದನು.

ಈ ಬೆಳವಣಿಗೆಯ ಮಾಹಿತಿ ದೊರೆಯುತ್ತಿದ್ದಂತೆಯೇ ಅಲಾವುದ್ದೀನ್‌ನು ರಾಜಧಾನಿಯಲ್ಲಿ ಸಮರ ಸಮಿತಿಯ ಸಭೆ ಕರೆದನು. ಅಲ್ಲಿ ಅಫಾಕಿ ಮತ್ತು ದಖನಿಗಳ ನಡುವಿನ ಭಿನ್ನಾಭಿಪ್ರಾಯವು ಬಯಲಿಗೆ ಬಂದಿತು. ಹಿಂದಿನ ದೊರೆ ಅಹ್ಮದ್‌ನ ಕಾಲದಲ್ಲಿ ಮಾಹೇಮ್‌ನಲ್ಲಿ ನಡೆದ ಕದನದಲ್ಲಿ ಹಿನ್ನೆಡೆ ಆಗುವುದಕ್ಕೆ ಅಫಾಕಿಗಳೇ ಕಾರಣ ಎಂದು ದಖನಿ ಮತ್ತು ಹಬಶಿಗಳು ಸುಲ್ತಾನ್‌ನಿಗೆ ಹೇಳಿದರು. ಜಂಟಿಯಾಗಿರುವ ಗುಜರಾತ್, ಮಾಳ್ವ ಮತ್ತು ಗೊಂಡ್ವಾನದ ಸೈನ್ಯವನ್ನು ಎದುರಿಸುವುದು ಕಷ್ಟಸಾಧ್ಯ ಎಂಬ ಅಭಿಪ್ರಾಯ ದಖನಿಗಳದ್ದಾಗಿತ್ತು. ಆದ್ದರಿಂದ ಕೇವಲ ಅಫಾಕಿಗಳನ್ನು ಮಾತ್ರ ಖಾಂದೇಶ್‌ದ ವಿರುದ್ಧದ ಯುದ್ಧಕ್ಕೆ

ಕಳುಹಿಸಿಲು ಸುಲ್ತಾನ್‌ನು ನಿರ್ಧರಿಸಿದ. ಇದಕ್ಕೆ ದಖನಿಗಳ ಮುಖ್ಯಸ್ಥನಾದ ಮಿಯಾಂ ಮಿನ್ನಾಲ್ ಮತ್ತು ಖಾನ್ ಎ ಜಮಾನ್ ಕೂಡ ಒಪ್ಪಿಕೊಂಡರು. ಖಾಸಿಂ ಬೇಗ್ ಸಫಿಸ್‌ಖಾನಿ, ಖರಾಖಾನ್ ಕುರ್ದ್ ಅಲಿಖಾನ್ ಸಿಸ್ತಾನಿ, ಇಪ್ತಿಘಾರ್ ಉಲ್ ಮುಲ್ಕ್ ಹಮದಾನಿ, ರುಸ್ತುಮ್‌ಖಾನ್ ಮಜೇಂದ್ರಾನಿ, ಹುಸೇನ್‌ಖಾನ್ ಬದಾಕ್ಷಿ, ಖುಸ್ರುಖಾನ್ ಉಜ್ಬೇಕ್, ಮಂಜುಸುಲ್ತಾನ್‌ರನ್ನು ಒಳಗೊಂಡ ಮೂರು ಸಾವಿರ ಸೈನಿಕರನ್ನು ಒಳಗೊಂಡ ಅಫಾಕಿಗಳ ಸೈನ್ಯ ಖಲಾಫ್ ಹಸನ್‌ನ ನೇತೃತ್ವದೊಂದಿಗೆ ಉತ್ತರದ ಕಡೆಗೆ ಪ್ರಯಾಣ ಬೆಳೆಸಿತು.

ದೌಲತಾಬಾದ್‌ಗೆ ಹೋದ ಖಲಾಫ್ ಹಸನ್‌ನು ಗುಜರಾತಿನ ಗಡಿಭಾಗವನ್ನು ಕಾಯುವಂತೆ ದಖನಿಗಳು ಮತ್ತು ಹಬಶಿಗಳಿಗೆ ವಹಿಸಿದನು. ನಂತರ ಏಳು ಸಾವಿರ ಅರಬ್ಬರ ಪಡೆಯೊಂದಿಗೆ ಬೇರಾರ್ ಕಡೆಗೆ ನಡೆದನು. ನಾರ್ನಲಾ ಕೋಟೆಯ ಕಡೆಯಿಂದ ಬಂದಿದ್ದ ಖಾನ್ ಎ ಜಹಾನ್‌ನ ಸೈನ್ಯ ಕೂಡ ಮೆಹಕರ್‌ನಲ್ಲಿ ಖಲಾಪ್ ಹಸನ್‌ನೊಂದಿಗೆ ಸೇರಿಕೊಂಡಿತು. ಖಲಾಫ್ ಹಸನ್‌ನು ಖಾನ್ ಎ ಜಹಾನ್ ಮತ್ತು ಕೆಲವು ದಖನಿಗಳನ್ನು ಎಲಿಚಿಪುರ ಮತ್ತು ಮಲಾಪುರಕ್ಕೆ ಕಳುಹಿಸಿ ಗೊಂಡ್ವಾನದ ಕಡೆಯಿಂದ ನಡೆಯಬಹುದಾದ ದಾಳಿಯನ್ನು ತಡೆಯಲು ಸೂಚಿಸಿದ. ನಾಸಿರ್‌ಖಾನ್ ಬಿಡಾರ ಹೂಡಿದ್ದ ರಾಂಖೇರ್‌ದ ಕಡೆಗೆ ತನ್ನ ಸೈನ್ಯದೊಂದಿಗೆ ಮುಂದುವರೆದ. ರಾಂಖೇರ್‌ದ ಘಟ್ಟ ಪ್ರದೇಶದಲ್ಲಿ ನಡೆದ ಕದನದಲ್ಲಿ ಖಾಂದೇಶ್‌ದ ಸೈನ್ಯವು ಸಂಪೂರ್ಣವಾಗಿ ಸೋತುಹೋಯಿತು. ಮಲಿಕ್‌ತುಜಾರ್‌ನು ಖಾಂದೇಶ್‌ದ ರಾಜಧಾನಿ ಬುರ್ಹಾನ್‌ಪುರದ ವರೆಗೂ ನಾಸಿರ್‌ಖಾನ್‌ನ್ನು ಬೆನ್ನಟ್ಟಿಕೊಂಡು ಹೋದನು. ಅಲ್ಲಿ ಉಡುಗೊರೆ ಸ್ವೀಕರಿಸುತ್ತಿರುವಾಗಲೇ ಗುಜರಾತ್ ಮತ್ತು ಮಾಳ್ವದ ಸೈನ್ಯ ಒಂದಾಗಿ ನಾಸಿರ್‌ಖಾನ್‌ನ ಸಹಾಯಕ್ಕಾಗಿ ನಂದೂರಬರ್ ಮತ್ತು ಸುಲ್ತಾನ್‌ಪುರ ಬಳಿ ಬಂದಿರುವ ಮಾಹಿತಿ ದೊರೆಯಿತು. ಖಲಾಫ್ ಹಸನ್‌ನು ಅಲ್ಲಿಗೆ ಧಾವಿಸಿದ. ನಡೆದ ಕದನದಲ್ಲಿ ನಾಸಿರ್‌ಖಾನ್ ಮತ್ತು ಅವನ ಮಿತ್ರಪಡೆಯು ಸಂಪೂರ್ಣವಾಗಿ ಸೋತು ಸುಣ್ಣವಾಯಿತು. 70 ಆನೆಗಳು ಮತ್ತು ಅಪಾರ ಪ್ರಮಾಣದ ಚಿನ್ನ–ಬೆಳ್ಳಿಯನ್ನು ಸಮರಾಂಗಣದಲ್ಲಿಯೇ ಬಿಟ್ಟು ಪರಾರಿಯಾಗಬೇಕಾಯಿತು. ತನ್ನ ಗುರಿ ತಲುಪಿದ ಮೇಲೆ ಮಲಿಕ್‌ತುಜಾರ್‌ನು ದಖನ್ ಕಡೆಗೆ ಮರುಪ್ರಯಾಣ ಬೆಳೆಸಿದ. ಸೋಲಿನ ಹತಾಶೆಯಿಂದ ಹೊರಬರಲಾಗದೆ ನಾಸಿರ್‌ಖಾನ್‌ನು ಅಸುನೀಗಿದನು. ಅವನ ಪುತ್ರ ಮಾಳ್ವದ ಹೋಷಾಂಗ್‌ನ ಅಳಿಯ ಮಿರಾನ್ ಆದಿಲ್ ಖಾನ್ ಪಟ್ಟವೇರಿದನು. ದಖನ್ ಸೈನ್ಯದ ಪ್ರಾಬಲ್ಯ ಅರಿತಿದ್ದ ಆದಿಲ್‌ಖಾನ್‌ನು ಶಾಂತಿ ಒಪ್ಪಂದ ಮಾಡಿಕೊಂಡನು. ವಿಜಯಪತಾಕೆ ಹಾರಿಸಿ ಬಂದ ಖಲಾಫ್

ಹಸನ್ ನೇತೃತ್ವದ ಸೈನ್ಯಕ್ಕೆ ಸಹಜವಾಗಿಯೇ ಅದ್ಧೂರಿ ಸ್ವಾಗತ ದೊರೆಯಿತು. ಸ್ವತಃ ಸುಲ್ತಾನ್‌ನೇ ರಾಜಧಾನಿಯಿಂದ 70 ಕಿ.ಮೀ. ದೂರದವರೆಗೆ ಬಂದು ಸೈನ್ಯವನ್ನು ಸ್ವಾಗತಿಸಿದ. ಅಫಾಕಿಗಳ ಸಾಧನೆಯಿಂದ ಸಂತೃಪ್ತನಾದ ಸುಲ್ತಾನ್‌ನು ತನ್ನ ಮಗಳನ್ನು ಅಫಾಕಿಗಳ ಪೈಕಿ ಪ್ರಮುಖನಾದ ಶಹಾ ಕುಲಿ ಸುಲ್ತಾನ್‌ನಿಗೆ ಕೊಟ್ಟು ಮದುವೆ ಮಾಡಿದನು. ಅದಾದ ನಂತರ ಅಫಾಕಿಗಳು ಸುಲ್ತಾನ್‌ನ ಬಲಭಾಗದಲ್ಲಿಯೂ ದಖನಿಗಳು ಎಡಭಾಗದಲ್ಲಿಯೂ ಇರಬೇಕು ಎಂದು ಆದೇಶಿಸಿದನು. ಈ ವ್ಯವಸ್ಥೆ ಸೈನ್ಯ ಮತ್ತು ದರ್ಬಾರ್ ಎರಡರಲ್ಲಿಯೂ ಜಾರಿಗೆ ಬಂದಿತು. ಉಭಯ ಪಂಗಡಗಳ ನಡುವಿನ ಭಿನ್ನಾಭಿಪ್ರಾಯ ಅಧಿಕೃತತೆಯ ರೂಪ ಪಡೆದುಕೊಂಡಿತು.

ಮುಹಮ್ಮದ್‌ನನ್ನು ಎತ್ತಿಕಟ್ಟುವ ಮೂಲಕ ಮುಖಭಂಗ ಅನುಭವಿಸಿದ್ದ ವಿಜಯನಗರದ ದೊರೆ ದೇವರಾಯನು ತನ್ನ ಸೈನ್ಯದ ಮಿತಿಯೇ ಅದಕ್ಕೆ ಕಾರಣ ಎಂದು ಅರಿತು ಸದೃಢಗೊಳಿಸಲು ನಿರ್ಧರಿಸಿದನು. ವಿಜಯನಗರದಲ್ಲಿಯೂ ಅಧಿಕಾರಕ್ಕಾಗಿ ಮೇಲಾಟ ನಡೆದೇ ಇತ್ತು. 1443ರಲ್ಲಿ ತನ್ನ ಸಹೋದರನಿಂದ ನಡೆದ ದಾಳಿಯ ಸಂದರ್ಭದಲ್ಲಿ ದೇವರಾಯ ಕೂದಲೆಳೆಯ ಅಂತರದಿಂದ ಪಾರಾಗಿದ್ದ. ದಖನ್‌ನ ಸುಲ್ತಾನ್ ಅಲಾವುದ್ದೀನ್‌ನು ಬಾಕಿ ಇರುವ ಏಳು ಲಕ್ಷದ ವಾರ್ಷಿಕ ಕಪ್ಪ ಒಪ್ಪಿಸುವಂತೆ ದೇವರಾಯನಿಗೆ ಸೂಚಿಸಿದ. ಅದನ್ನು ಖಚಿತವಾಗಿ ನಿರಾಕರಿಸಿದ ರಾಯನು ತನ್ನ ಡಣಾಯಿಕರನ್ನು ಕಳುಹಿಸಿ ದಖನ್ ಸೈನ್ಯದ ಅಂದಾಜು ಮಾಹಿತಿ ಪಡೆದು ರಣರಂಗಕ್ಕೆ ಇಳಿದ. ತನ್ನ ಪಡೆಯೊಂದಿಗೆ ತುಂಗಭದ್ರಾ ನದಿ ದಾಟಿ ಮುದಗಲ್ ಕೋಟೆ ವಶಪಡಿಸಿಕೊಂಡ. ತನ್ನ ಮಕ್ಕಳ ನೇತೃತ್ವದ ಸೈನ್ಯವನ್ನು ರಾಯಚೂರು, ಬಂಕಾಪುರದ ಕಡೆಗೆ ಕಳುಹಿಸಿ ದೋಆಬ್ ಪ್ರದೇಶವನ್ನು ವಶಕ್ಕೆ ತೆಗೆದುಕೊಂಡು ಸಗರ–ನಸ್ರತಾಬಾದ್ ಹಾಗೂ ಬಿಜಾಪುರದ ರಕ್ಷಣಾಗೋಡೆಗಳನ್ನು ಧ್ವಂಸಗೊಳಿಸಿದ. ಇದರಿಂದ ಆತಂಕಕ್ಕೆ ಒಳಗಾದ ದಖನ್ ಸುಲ್ತಾನ್‌ನು ತನ್ನ ನಾಲ್ಕು ಪ್ರಾಂತ್ಯಗಳ ರಾಜ್ಯಪಾಲರಿಗೆ ಸೈನ್ಯ ಸಮೇತರಾಗಿ ಆಗಮಿಸುವಂತೆ ಸೂಚನೆ ನೀಡಿದ. ಬಹಮನಿ ಸೈನ್ಯದ ಅಬ್ಬರ ನೋಡಿದ ರಾಯನು ಮುದಗಲ್ ಕೋಟೆಯೊಳಗೆ ಹೋಗಿ ಕುಳಿತುಕೊಂಡ. ಕೃಷ್ಣಾ ನದಿಯನ್ನು ದಾಟಿದ ಸುಲ್ತಾನ್‌ನು ಮುದಗಲ್‌ನಿಂದ ಒಂಬತ್ತು ಮೈಲಿದೂರದಲ್ಲಿ ಬಿಡಾರ ಹೂಡಿದನು. ಮಲಿಕ್‌ತುಜಾರ್ ಖಲಾಫ್ ಹಸನ್‌ನ ನೇತೃತ್ವದ ದೌಲತಾಬಾದ್‌ನ ಸೈನ್ಯವನ್ನು ರಾಯನ ಮಗನ ವಿರುದ್ಧ ಕಳುಹಿಸಿದನು. ಖಾನ್ ಎ ಜಮಾನ್ ನೇತೃತ್ವದ ಬಿಜಾಪುರದ ಸೈನ್ಯ ಹಾಗೂ ಖಾನ್ ಎ ಆಜಂ ನೇತೃತ್ವದ ಬೆರಾರ್ ಸೈನ್ಯದ ನೆರವಿನೊಂದಿಗೆ ರಾಯ ಉಳಿದಿದ್ದ ಮುದಗಲ್

ಕೋಟೆಗೆ ಮುತ್ತಿಗೆ ಹಾಕಿದ. ಖಲಾಫ್ ಹಸನ್ ನೇತೃತ್ವದ ಸೈನ್ಯ ರಾಯಚೂರಿನಲ್ಲಿ ಇದ್ದ ವಿಜಯನಗರದ ರಾಜಕುಮಾರನ ಜೊತೆ ಯುದ್ಧದಲ್ಲಿ ನಿರತವಾಯಿತು. ಆ ಕದನದಲ್ಲಿ ವಿಜಯನಗರದ ರಾಜಕುಮಾರ ತೀವ್ರವಾಗಿ ಗಾಯಗೊಂಡ. ಅಲ್ಲಿಂದ ಖಲಾಫ್ ಹಸನ್‌ನ ಸೈನ್ಯ ಬಂಕಾಪುರದ ಕಡೆಗೆ ಮುಂದುವರೆಯಿತು. ಮುದುಗಲ್‌ನಲ್ಲಿ ಸುಲ್ತಾನ್‌ನ ನೇತೃತ್ವದ ಸೈನ್ಯವು ಸಮಬಲದ ವಿಜಯನಗರದ ಸೈನ್ಯದೊಂದಿಗೆ ಕದನ ಆರಂಭಿಸಿತು. ಒಮ್ಮೆ ಸುಲ್ತಾನ್‌ನ ಸೈನ್ಯದ ಕೈ ಮೇಲಾದರೆ ಮತ್ತೊಮ್ಮೆ ರಾಯನ ಸೈನ್ಯದ ಕೈ ಮೇಲಾಗುತ್ತಿತ್ತು. ಅಂತಿಮವಾಗಿ ರಾಯನ ಸೈನ್ಯಕ್ಕೆ ಹಿನ್ನಡೆ ಉಂಟಾಯಿತು. ರಾಯಚೂರಿನ ಕದನದಲ್ಲಿ ಗಾಯಗೊಂಡಿದ್ದ ರಾಯನ ಪುತ್ರ ಅಸುನೀಗಿದ. ಇದರಿಂದ ಶೋಕತಪ್ತನಾದ ರಾಯನು ಮುದುಗಲ್ ಕೋಟೆಯೊಳಗೆ ಉಳಿದುಕೊಂಡ. ಹಾಗೆಯೇ ಸುಲ್ತಾನ್‌ನ ಫಕ್ರುಲ್ ಮುಲ್ಕ್ ದಹಲ್ವಿ ಮತ್ತು ಅವನ ಸಹೋದರರನನ್ನು ಒತ್ತೆಯಾಳಾಗಿ ಇರಿಸಿಕೊಂಡ. ಇದನ್ನು ಕೇಳಿದ ಸುಲ್ತಾನ್‌ನು ಒತ್ತೆಯಾಳುಗಳನ್ನು ಸಾಯಿಸಿದರೆ ಎರಡು ಲಕ್ಷ ಸೈನ್ಯ ಪ್ರಾಣ ಕಳೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದನು. ಕದನ ಮುಂದುವರೆಸಲು ಬಯಸದ ರಾಯನು ಬಾಕಿ ಇದ್ದ ಕಪ್ಪ ಕೊಡಲು ಒಪ್ಪಿದನು. ಗಡಿಗಳನ್ನು ಉಲ್ಲಂಘಿಸದಿರುವ ಒಪ್ಪಂದದೊಂದಿಗೆ ಕದನ ಕೊನೆಗೊಂಡಿತು. ಎರಡನೇ ದೇವರಾಯನು 24-5-1446ರಲ್ಲಿ ಅಸು ನೀಗಿದನು. ಅವನ ಪುತ್ರ ಮಲ್ಲಿಕಾರ್ಜುನ ಅಧಿಕಾರಕ್ಕೆ ಬಂದ. ಬಹಮನಿ ಸುಲ್ತಾನ್‌ರ ಸಹಾಯದೊಂದಿಗೆ ಕಪಿಲೇಂದ್ರ ದೇವನು ಗಜಪತಿ ಸಾಮ್ರಾಜ್ಯ ಸ್ಥಾಪಿಸಿದ.

## ಚಾಕಣದ ವ್ಯವಹಾರ

ದಿಲಾವರ್‌ಖಾನ್‌ನು ಸಂಗಮೇಶ್ವರದ ರಾಜನ ವಿರುದ್ಧ ನಡೆಸಿದ ದಾಳಿಯಲ್ಲಿ ದೊರೆತ ಯಶಸ್ಸು ಹೆಚ್ಚು ಸಮಯ ಉಳಿಯಲಿಲ್ಲ. ಬಹಮನಿ ಸಾಮ್ರಾಜ್ಯದ ಅವಧಿಯುದ್ದಕ್ಕೂ ಪಶ್ಚಿಮದಲ್ಲಿ ಮೇಲಿಂದ ಮೇಲೆ ಶಾಂತಿಗೆ ಭಂಗ ತರುವಂತಹ ಘಟನೆಗಳು ನಡೆಯುತ್ತಲೇ ಇದ್ದವು. ಸುಲ್ತಾನ್ ಅಲಾವುದ್ದೀನ್‌ನು 1447ರಲ್ಲಿ ದೌಲತಾಬಾದ್ ಪ್ರಾಂತ್ಯದ ರಾಜ್ಯಪಾಲನೂ ಆದ ಮಲಿಕ್‌ತುಜಾರ್ ಖಲಾಫ್ ಹಸನ್‌ನಿಗೆ ಸಂಗಮೇಶ್ವರ ಸೇರಿದಂತೆ ಪಶ್ಚಿಮ ಕರಾವಳಿಯ ದಟ್ಟವಾದ ಕಾಡಿನಿಂದ ಕೂಡಿದ ಜಿಲ್ಲೆಗಳ ಮೇಲೆ ದಾಳಿ ನಡೆಸುವಂತೆ ಸೂಚಿಸಿದ. ಏಳು ಸಾವಿರ ದಖನ್ನಿ ಸಐನಿಕರು ಮತ್ತು ಮೂರು ಸಾವಿರ ಅರಬ್ಬಿ ಕಾಲಾಳುಗಳೊಂದಿಗೆ ಚಾಕಣವನ್ನು ಕೇಂದ್ರವಾಗಿಟ್ಟು ಖಲಾಫ್ ಹಸನ್ ದಾಳಿ ಆರಂಭಿಸಿದ. ಅವುಗಳನ್ನು ವಶಪಡಿಸಿಕೊಳ್ಳುವುದು ಕಷ್ಟದ ಸಂಗತಿಯೇನಾಗಿರಲಿಲ್ಲ. ರಾಜಾ ಶಂಕರರಾವ

ಶಿರ್ಕೆ ನೀಡುತ್ತಿದ್ದ ತೊಂದರೆಯಿಂದಾಗಿ ಕದನ ನಡೆಸುವುದು ಕಿರಿಕಿರಿಯನ್ನುಂಟು ಮಾಡುವಂತಿತ್ತು. ಅವನನ್ನು ವಶಕ್ಕೆ ತೆಗೆದುಕೊಂಡ ಶಿರ್ಕೆಯು ಮುಸ್ಲಿಮ್‌ನಾಗಿ ಮತಾಂತರ ಹೊಂದಿದ. ಮತ್ತು ಬಹಮನಿ ಸಾಮ್ರಾಜ್ಯಕ್ಕೆ ವಾರ್ಷಿಕ ಕಪ್ಪ ನೀಡುವುದಾಗಿ ಒಪ್ಪಿಕೊಂಡ. ಸಂಗಮೇಶ್ವರದ ಕಡೆಗೆ ಕರೆದುಕೊಂಡು ಹೋಗುವುದಾಗಿ ತಿಳಿಸಿ ಬಹಮನಿ ಸಾಮ್ರಾಜ್ಯದ ಸೈನ್ಯವನ್ನು ದಟ್ಟವಾದ ಕಾಡಿನ ಒಳಗಡೆ ಗುರಿಯಿಂದ ಬೇರೆ ಕಡೆಗೆ ನಡೆದ. ದಖನ್ ಸೈನ್ಯದ ದಖನಿ ಮತ್ತು ಹಬಶಿಗಳು ಕಾಡಿನ ಕಷ್ಟದ ಪ್ರಯಾಣವನ್ನು ತಪ್ಪಿಸಿಕೊಂಡು ಅರಣ್ಯವನ್ನು ಪ್ರವೇಶಿಸಲೇ ಇಲ್ಲ. ಕೆಲಕಾಲದ ಪ್ರಯಾಣದ ನಂತರ ಅಫಾಕಿಗಳು ಹಳ್ಳಿಯೊಂದನ್ನು ತಲುಪಿದರು. ಅದು ಸುತ್ತ ಮೂರು ಕಡೆಯಿಂದ ಎತ್ತರವಾದ ಬೆಟ್ಟ ಪ್ರದೇಶದಿಂದ ಕೂಡಿ ತಪ್ಪಿಸಿಕೊಳ್ಳಲು ಸಾಧ್ಯವಾಗದಂತಹ ದುರ್ಗಮ ಪ್ರದೇಶವಾಗಿತ್ತು. ಅದಕ್ಕೆ ಹೊತ್ತಿಗೆ ಖಲಾಫ್ ಹಸನ್‌ನ ಆರೋಗ್ಯ ಹದಗೆಟ್ಟಿತು. ಅರಣ್ಯದ ನಡುವಿನ ಪ್ರಯಾಣದ ಕಾರಣದಿಂದ ಸೈನ್ಯದ ಬಹುತೇಕ ಜನ ಬಳಲಿದ್ದರು. ಶಿರ್ಕೆಯು ಸಂಗಮೇಶ್ವರದ ರಾಜನಿಗೆ ಕಳುಹಿಸಿದ್ದ ಸಂದೇಶದ ಮೇರೆಗೆ 30 ಸಾವಿರ ಸೈನಿಕರ ಪಡೆಯು ಖಲಾಫ್ ಹಸನ್ ಬಿಡಾರ ಹೂಡಿದ್ದ ಹಳ್ಳಿಯ ಕಡೆಗೆ ನಡೆಯಿತು. ಭರ್ಜಿ, ಈಟಿಗಳನ್ನು ಹೊಂದಿದ್ದ ಸೈನಿಕರ ಜೊತೆಗೆ ತೋಪುಗಳು ಕೂಡ ಇದ್ದವು. ಕಗ್ಗತ್ತಲೆಯಿಂದ ಕೂಡಿದ ರಾತ್ರಿ ದುರ್ಘಟನೆ ನಡೆಯಿತು. ಬಹಮನಿ ಸೈನ್ಯದ ಸುತ್ತುವರೆದ ಸಂಗಮೇಶ್ವರದ ಸೈನ್ಯವು ಅನಾರೋಗ್ಯಪೀಡಿತನಾಗಿದ್ದ ಮಲಿಕ್‌ತುಜಾರ್ ಖಲಾಫ್ ಹಸನ್‌ನನ್ನು ಹತ್ಯೆಗೈದಿತು.

ಮದಿನಾ, ಕರ್ಬಲಾ ಮತ್ತು ನಜಾಫಾದಿಂದ ಬಂದಿದ್ದ ಐದು ನೂರು ಸೈಯದ್‌ರೂ ಸೇರಿದಂತೆ ಸಾವಿರಾರು ಜನರ ಸೈನ್ಯವನ್ನು ಬರ್ಬರವಾಗಿ ಹತ್ಯೆ ಮಾಡಲಾಯಿತು. ಅಲ್ಲಿಂದ ತಪ್ಪಿಸಿಕೊಂಡು ಬಂದ ಕೆಲವೇ ಜನರು ಅರಣ್ಯದ ಪ್ರವೇಶಿಸಲು ಹಿಂದೇಟು ಹಾಕಿ ಬಿಡಾರ ಹೂಡಿದ್ದ ದಖನ್ನಿಗಳ ಶಿಬಿರಕ್ಕೆ ಬಂದು ದುರಂತದ ಮಾಹಿತಿ ನೀಡಿದರು. ಕೆಲವು ಮೂರ್ಖ ಅಫಾಕಿಗಳು ಇಡೀ ಘಟನೆ ನಡೆದದ್ದು ಅಫಾಕಿ ಮತ್ತು ದಖನಿಗಳ ನಡುವಿನ ಭಿನ್ನಾಭಿಪ್ರಾಯದಿಂದ ಎಂದು ತಪ್ಪು ಮಾಹಿತಿ ನೀಡಿದರು. ಇದು ದಖನ್ನಿಗಳು ಕೆರಳುವಂತೆ ಮಾಡಿತು. ಗುಟ್ಟಾಗಿ ರಾಜಧಾನಿ ಬೀದರ್‌ಗೆ ಸಂದೇಶ ಕಳುಹಿಸಿ 'ನಾವು ಎಚ್ಚರಿಸಿದರೂ ಕೇಳದೆ ದಟ್ಟವಾದ ಕಾಡು ಪ್ರವೇಶಿಸಿದರು. ಅದರಿಂದ ದುರಂತ ನಡೆದು ಅರಸನಿಗೆ ಕೆಟ್ಟ ಹೆಸರು ಬರುವಂತಾಯಿತು' ಎಂಬ ಮಾಹಿತಿ ನೀಡಿದರು. ಘಟನೆ ನಡೆದ ನಂತರ ಅದರ ಮಾಹಿತಿಯನ್ನು ಸುಲ್ತಾನ್‌ನ ಗಮನಕ್ಕೆ ತರುವಂತೆ ತಿಳಿಸಿದರೂ ತಮ್ಮ ಮಾತನ್ನು ಕೇಳಲಿಲ್ಲ. ತಾವಷ್ಟೇ ಹೋಗಿ ಚಾಕಣದ ದಟ್ಟಕಾಡಿನಲ್ಲಿ ಗೆಲುವು

ಸಾಧಿಸುವ ಉಮೇದಿನಲ್ಲಿದ್ದರು ಎಂದು ಎಂದೂ ಸಂದೇಶದಲ್ಲಿ ತಿಳಿಸಿದ್ದರು. ಈ ಮಾಹಿತಿಯನ್ನು ಸಲಾರ್ ಹಂಜಾ ಮುಷಿರ್ ಉಲ್ ಮುಲ್ಕ್ ಹಾಗೂ ರಾಜಾ ರುಸ್ತುಂ ನಿಜಾಂ ಉಲ್ ಮುಲ್ಕ್ ದಖನಿ ಎಂಬ ಸಹೋದರರ ಜೊತೆಗೆ ಕಳುಹಿಸಲಾಗಿತ್ತು. ಅಲಾವುದ್ದೀನ್ ಕುಡಿದ ಅಮಲಿನಲ್ಲಿದ್ದ ಸಂದರ್ಭದಲ್ಲಿ ಘಟನೆಯನ್ನು ವರದಿ ಮಾಡಿದರು. ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸುಲ್ತಾನ್ ಸೂಚಿಸಿದ. ಅಫಾಕಿಗಳ ಪರವಾಗಿ ಯಾವುದೇ ಅಭಿಪ್ರಾಯವೂ ಬೀದರ್‌ಗೆ ತಲುಪದಂತೆ ನೋಡಿಕೊಳ್ಳಲಾಯಿತು. ಮುಷಿರಲ್ ಮುಲ್ಕ್‌ನು ನಾಯಕರಹಿತವಾದ ಅಳಿದುಳಿದ ಅಫಾಕಿ ಸೈನ್ಯವು ಚಾಕಣದಿಂದ ಹೊರಗೆ ಬರದಂತೆ ಸುತ್ತುವರೆದು ಸೈನ್ಯ ನಿಲ್ಲಿಸಿದ್ದ. ಸುಲ್ತಾನ್‌ನ ಬಗ್ಗೆ ಅಗೌರವಯುತವಾಗಿ ನಡೆದುಕೊಂಡರು ಮತ್ತು ಗುಜರಾತಿನ ಗಡಿಯನ್ನೂ ದಾಟಿ ಹೋಗಲು ಪ್ರಯತ್ನಿಸಿದರು ಎಂದು ಸುಳ್ಳು ಮಾಹಿತಿ ಕೇಳದ ಸುಲ್ತಾನ್‌ನು ಎಲ್ಲ ಅಫಾಕಿಗಳನ್ನು ಕೊಂದು ಹಾಕುವಂತೆ ಆದೇಶಿಸಿದ.

ಚಾಕಣದ ಕೋಟೆಯೊಳಗಡೆ ಸಿಕ್ಕಿ ಹಾಕಿಕೊಂಡಿದ್ದ ಅಫಾಕಿ ಸೈನ್ಯದ ಬಳಿಯಿದ್ದ ಆಹಾರ ಸಾಮಗ್ರಿ ಮುಗಿಯುತ್ತ ಬಂದಿತ್ತು. ಕೆಲವರು ಅಲ್ಲಿಯೇ ತಮ್ಮ ಹೆಂಡತಿ ಮಕ್ಕಳನ್ನು ಬಿಟ್ಟು ಸುಲ್ತಾನ್‌ನಿಗೆ ಮಾಹಿತಿ ಅರುಹುವುದಕ್ಕಾಗಿ ಬೀದರ್‌ಗೆ ಓಡಿ ಹೋಗಲು ಯೋಚಿಸಿದರು. ಅಪಾಯದ ಮುನ್ಸೂಚನೆ ಅರಿತ ದಖನ್ನಿಗಳ ಮುಖ್ಯಸ್ಥ ಮುಷಿರ್ ಉಲ್ ಮುಲ್ಕ್ ಮತ್ತೊಂದು ಕುತಂತ್ರ ಮಾಡಿದ. ತಾವುಗಳೆಲ್ಲ ಒಂದೇ ಸಮುದಾಯಕ್ಕೆ ಸೇರಿದವರಾದ್ದರಿಂದ ಅವರಿಗೆ ಯಾವುದೇ ರೀತಿಯ ಅಪಾಯ ಉಂಟು ಮಾಡುವುದಿಲ್ಲ ಎಂದು ನಂಬಿಕೆ ಉಂಟಾಗುವಂತೆ ಭರವಸೆ ನೀಡಿದ. ಮೂರನೇ ದಿನ ಮುಷಿರ್ ಉಲ್ ಮುಲ್ಕ್‌ನ ನೇತೃತ್ವದ ಸೈನ್ಯವು ಚಾಕಣದ ಕೋಟೆಯನ್ನು ಪ್ರವೇಶಿಸಿ ರಾತ್ರಿಯ ಊಟ ಮಾಡುತ್ತಿದ್ದವರನ್ನು ಕರೆತಂದು ಎಲ್ಲರನ್ನೂ ಹತ್ಯೆ ಮಾಡಲಾಯಿತು. ಅದರಲ್ಲಿ ಮಹಿಳೆಯರು ಮತ್ತು ಮಕ್ಕಳೂ ಸೇರಿದ್ದರು. ಆ ಪೈಕಿ ಸಾವಿರಾರು ಜನ ಕರ್ಬಲಾ, ನಜಾಫ್ ಹಾಗೂ ಮದಿನಾದಿಂದ ಬಂದಿದ್ದ ಸೈಯದ್‌ರೂ ಇದ್ದರು. ದುರಂತದಲ್ಲಿ ಬಚಾವಾದ ಖಾಸಿಂ ಬೇಗ್ ಸಫಿಸ್ಖಾನ್‌ನ ನೇತೃತ್ವದ ಕೆಲವು ಮೊಗಲ್‌ರು ಮಹಿಳೆಯರಿಗೆ ಪುರುಷ ವೇಷ ತೊಡಿಸಿ ದುರ್ಘಟನೆ ನಡೆದ ಸ್ಥಳದಿಂದ ಪಲಾಯನಗೈದರು. ಅವರು ತಪ್ಪಿಸಿಕೊಂಡ ಸುದ್ದಿ ಕೇಳದ ಮುಷಿರ್ ಉಲ್ ಮುಲ್ಕ್ ಹುಡುಕಿ ಕೊಂದು ಹಾಕುವಂತೆ ಸೂಚಿಸಿ ಎರಡು ಸಾವಿರ ಅಶ್ವದಳದ ಸೈನಿಕರನ್ನು ಬೆನ್ನಟ್ಟಿದ. ಬೀರ್ ಪ್ರದೇಶದ ಮುಖ್ಯಸ್ಥನಾಗಿದ್ದ ಹಸನ್‌ಖಾನ್‌ನ ಬಳಿ ಆಶ್ರಯ ಪಡೆಯುವಲ್ಲಿ ಯಶಸ್ವಿಯಾದರು. ಆಗ ಅಲ್ಲಿಗೆ ಮುಷಿರ್ ಉಲ್ ಮುಲ್ಕ್‌ನ ಸೈನ್ಯಕ್ಕೆ ಹಸನ್‌ಖಾನ್‌ನು ಬಹಮನಿ ವೈರಿಗಳಾದ ಅಫಾಕಿಗಳು ಗುಜರಾತಿಗೆ

ಓಡಿಹೋದರು ಎಂಬ ಮಾಹಿತಿ ನೀಡಿ ಸಾಗಹಾಕಿದ. ಕೊನೆಗೂ ಖಾಸಿಂ ಬೇಗ್ ಮತ್ತಿತರರು ರಾಜಧಾನಿ ಬೀದರ್ ತಲುಪಿ ಸುಲ್ತಾನ್‌ನಿಗೆ ತಾವು ಪಟ್ಟ ಪಡಿಪಾಟಲನ್ನು ವಿವರಿಸಿದರು. ಸುಲ್ತಾನ್‌ನಿಗೆ ನಿಜ ಸಂಗತಿಯ ಅರಿಯಲು ಹೆಚ್ಚು ಕಾಲ ಬೇಕಾಗಲಿಲ್ಲ. ದುರಂತದಲ್ಲಿ ಮಡಿದವರ ಪೈಕಿ ಶಹಾ ನಿಯಾಮತ್ ಅಲ್ಲಾ ಕಿರ್ಮಾನಿಯ ಕುಟುಂಬದ ಸದಸ್ಯರೂ ಸೇರಿದ್ದರು. ಅರಸ ದಖನ್ನಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ನಿರ್ಧರಿಸಿದ. ದಖನ್ನಿಗಳ ಪರವಾಗಿ ಸಂದೇಶ ತಂದಿದ್ದ ಮುಸ್ತಫಾಖಾನ್‌ನನ್ನು ಸಾಯಿಸಿ ಅವನ ತಲೆಯನ್ನು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಮುಷಿರ್ ಉಲ್ ಮುಲ್ಕ್ ಮತ್ತು ನಿಜಾಂ ಉಲ್ ಮುಲ್ಕ್‌ರ ಆಸ್ತಿ ವಶಕ್ಕೆ ತೆಗೆದುಕೊಂಡು ಅವರನ್ನು ಸರಪಳಿ ತೊಡಿಸಿ ರಾಜಧಾನಿಗೆ ಕರೆತರುವಂತೆ ಆದೇಶಿಸಲಾಯಿತು. ಹಾಗೆಯೇ ಅಫಾಕಿಗಳಿಗೆ ಉನ್ನತವಾದ ಸ್ಥಾನಮಾನ, ಉಡುಗೊರೆ ನೀಡಿ ಗೌರವಿಸಲಾಯಿತು. ಸುಲ್ತಾನ್‌ನು ಖಾಸಿಂ ಬೇಗ್‌ನನ್ನು ಮಲಿಕ್‌ತುಜಾರ್ ಎಂದು ಘೋಷಿಸಿ ದೌಲತಾಬಾದ್‌ನ ರಾಜ್ಯಪಾಲನನ್ನಾಗಿ ಮಾಡಿದ. ಖುರಾಸಾನ್‌ನಲ್ಲಿ ಇದ್ದ ಕವಿ ಆಜಾರಿಯು ಘಟನೆಯನ್ನು ಖಂಡಿಸಿ ಸುಲ್ತಾನ್‌ನಿಗೆ ಬರೆದ ಪತ್ರ ತಲುಪಿದ ಮೇಲೆ ಕೋಪೋದ್ರಿಕ್ತನಾದನು. ಸೆರೆಯಲ್ಲಿದ್ದವರ ತಲೆ ಕಡಿಯುವಂತೆ ಆದೇಶಿಸಿದ. ಎಲ್ಲ ದಖನ್ನಿಗಳ ಗೌರವ, ಸ್ಥಾನಮಾನ ಕಸಿದುಕೊಂಡ. ಆ ಪೈಕಿ ಪ್ರಧಾನಿಯಾಗಿದ್ದ ಮಿಯಾನ್ ಮಿನಾಲ್ ಪ್ರಮುಖನಾಗಿದ್ದ.

## ತೆಲಂಗಾಣ ಮತ್ತು ಮಾಳ್ವ

ಸುಲ್ತಾನ್ ಅಲಾವುದ್ದೀನ್‌ನ ಭಾವ ಜಲಾಲ್‌ಖಾನ್ ಬಂಡೆಳುವವರೆಗೂ ತೆಲಂಗಾಣ ಪ್ರದೇಶ ಬಹುತೇಕ ಶಾಂತವಾಗಿತ್ತು. ಮೊಣಕಾಲ ಕೆಳಗಿನಲ್ಲಿ ಉಂಟಾಗಿದ್ದ ಗಾಯ ಉಲ್ಬಣಿಸಿ ದೊರೆ ಅಲಾವುದ್ದೀನ್ ಮೃತಪಟ್ಟ ಎಂಬ ವದಂತಿ ಎಲ್ಲೆಡೆ ಹರಡಿತು. ಅಲಾವುದ್ದೀನ್‌ನ ನಂತರ ಅರಸನಾಗಬೇಕಿದ್ದ ಹುಮಾಯೂನ್‌ನ ನಡತೆ ಕುರಿತು ಜನರಲ್ಲಿದ್ದ ತಪ್ಪುಕಲ್ಪನೆಯ ಲಾಭ ಪಡೆಯಲು ಜಲಾಲ್‌ಖಾನ್ ನಿರ್ಧರಿಸಿ ತನ್ನ ಜಹಾಗೀರ್ ಆಗಿದ್ದ ನಲಗೊಂಡದಲ್ಲಿಯೇ 1455ರಲ್ಲಿ ತನ್ನಷ್ಟಕ್ಕೆ ತಾನೇ ಅರಸನೆಂದು ಘೋಷಿಸಿಕೊಂಡ. ಅದಕ್ಕೆ ಪ್ರತಿಯಾಗಿ ಸುಲ್ತಾನ್‌ನು ಕೈಗೊಂಡ ಕ್ರಮಕ್ಕೆ ಅನುಗುಣವಾಗಿ ಅರಮನೆಯಿಂದ ಹೊರಗೆ ಬರದೆ ಒಳಗಡೆಯೇ ಉಳಿದುಕೊಂಡ ಜಲಾಲ್‌ಖಾನ್ ತನ್ನ ಸಿಕಂದರ್‌ಖಾನ್‌ನನ್ನು ಮಾಹುರ್ ಪ್ರದೇಶವನ್ನು ಆಳುತ್ತಿದ್ದ ಮಹಮೂದ್ ಖಲ್ಜಿಯ ಬಳಿಗೆ ಕಳುಹಿಸಿದ. ಹೋಷಾಂಗ್ ಘೋರಿಯ ನಂತರ ಮಾಳ್ವದ ರಾಜನಾಗಿದ್ದ ಮಹಮೂದ್‌ನಿಗೆ

ಸಿಕಂದರ್‌ನು ಸುಲ್ತಾನ್ ಅಲಾವುದ್ದೀನ್ ಅಸು ನೀಗಿರುವುದರಿಂದ ರಾಜಧಾನಿ ಬೀದರ್‌ನಲ್ಲಿನ ಅಪಾರ ಸಂಪತ್ತಿಗೆ ಆಪತ್ತು ಒದಗಿದೆ. ಅದನ್ನು ರಕ್ಷಿಸುವುದಕ್ಕಾಗಿ ಸಹಾಯಹಸ್ತ ಚಾಚುವಂತೆ ಕೋರಿದ. ಮಹತ್ವಾಕಾಂಕ್ಷಿಯಾಗಿದ್ದ ಖಲ್ಜಿಯು ತಾನಾಗಿಯೇ ಒದಗಿ ಬಂತ ಇಂತಹ ಅವಕಾಶ ಬಿಟ್ಟುಕೊಡಲು ಸಿದ್ಧನಿರಲಿಲ್ಲ. 1456ರಲ್ಲಿ ಖಾಂದೇಶ್‌ದ ಮುಬಾರಕ್‌ಖಾನ್‌ನ ಜೊತೆಗೂಡಿ ಸ್ವತ ಖಲ್ಜಿಯೇ ಮಾಹುರ್ ತಲುಪಿ ಸಿಕಂದರ್‌ಖಾನ್‌ನ ಸೈನ್ಯ ಸೇರಿಕೊಂಡ.

ಅದಕ್ಕೆ ಪ್ರತಿಯಾಗಿ ಸುಲ್ತಾನ್ ಅಲಾವುದ್ದೀನ್‌ನು ಒಂದುಲಕ್ಷ ಎಂಬತ್ತು ಸಾವಿರ ಬೃಹತ್ ಸೈನ್ಯದೊಂದಿಗೆ ನಲಗೊಂಡದಿಂದ ಮಾಹುರ್ ಕಡೆಗೆ ನಡೆದ. ದೌಲತಾಬಾದ್‌ನ ಆಡಳಿತಾಧಿಕಾರಿಯೂ ಆಗಿದ್ದ ಮಲಿಕ್‌ತುಜಾರ್ ಖಾಸಿಂಬೇಗ್‌ನನ್ನು ಮಾಳ್ವದ ಸೈನ್ಯ ಮುನ್ನಡೆಯದಂತೆ ತಡೆಯಲು ಸೂಚಿಸಿದ. ಬೇರಾರ್‌ನ ಸೈನ್ಯಕ್ಕೆ ಖಾಂದೇಶ್‌ದ ಮುಬಾರಕ್‌ನ ಸೈನ್ಯ ಎದುರಿಸಲು ತಿಳಿಸಿದ. ಬಿಜಾಪುರದ ಸೈನ್ಯದ ನೇತೃತ್ವ ವಹಿಸಿ ಎಂದು ಮೈಲಿ ದೂರದಲ್ಲಿ ಬಿಡಾರ ಹೂಡಿದ. ಸುಲ್ತಾನ್ ಸತ್ತ ಸುದ್ದಿ ಎಂದು ಗೊತ್ತಾಗುತ್ತಿದ್ದಂತೆಯೆ ಖಲ್ಜಿಯು ಸಿಕಂದರ್‌ಖಾನ್‌ನ ರಕ್ಷಣೆಯ ಜೊತೆಗೆ ಬಹಮನಿ ಸೈನ್ಯದ ಜೊತೆಗೆ ಕದನಕ್ಕೆ ಇಳಿಯದಂತೆ ನೋಡಿಕೊಳ್ಳುವುದಕ್ಕಾಗಿ ಒಂದಷ್ಟು ಸೈನಿಕರನ್ನು ಬಿಟ್ಟು ರಣರಂಗದಿಂದ ಹಿಂದೆ ಸರಿದ.

ಈ ಮಧ್ಯೆ ಅಲಾವುದ್ದೀನ್‌ನು ಹೊಸದಾಗಿ ಬಂದವರ ಪೈಕಿ ಒಬ್ಬನಾಗಿದ್ದ ಮಹಮೂದ್ ಗಾವಾನ್‌ನನ್ನು ಸಾವಿರ ಸೈನ್ಯದ ಮನ್ಸಬ್‌ದಾರನನ್ನಾಗಿ ಮಾಡಿ ಜಲಾಲ್‌ನ ಹುಟ್ಟಡಗಿಸಲು ನಲಗೊಂಡಕ್ಕೆ ಕಳುಹಿಸಿದ್ದ. ನೂತನ ಸೈನ್ಯಾಧಿಕಾರಿಯು ನಲಗೊಂಡ ಕೋಟೆಯ ಮುತ್ತಿಗೆ ಹಾಕಿದ. ಮಾಳ್ವದ ಸೈನ್ಯದ ಉಸ್ತುವಾರಿಯಲ್ಲಿ ಅಕ್ಷರಶಃ ಸೆರೆಯಾಳಾಗಿದ್ದ ಸಿಕಂದರ್ ತಪ್ಪಿಸಿಕೊಂಡು ನಲಗೊಂಡಕ್ಕೆ ಓಡಿಬಂದ. ನಲಗೊಂಡದ ಸೈನ್ಯ ಸೋತು ಸುಣ್ಣವಾಯಿತು. ಕ್ಷಮೆ ನೀಡಿಸುವ ಭರವಸೆ ನೀಡಿದ ಗಾವಾನ್‌ನು ಜಲಾಲ್ ಮತ್ತು ಸಿಕಂದರ್‌ರಿಂದ ಅರಮನೆ ವಶಕ್ಕೆ ತೆಗೆದುಕೊಂಡ. ಸುಲ್ತಾನ್‌ನು ಸಂಪೂರ್ಣ ಕ್ಷಮೆ ನೀಡಿ ನಲಗೊಂಡದ ಜಹಾಗೀರ್‌ನ್ನು ಜಲಾಲ್‌ನಿಗೆ ಮರಳಿ ನೀಡಿದ. ರಾಜಕೀಯ ಹೊಂದಾಣಿಕೆ ಮತ್ತು ಸಹನಶೀಲತೆಯ ಹೊಸ ನೀತಿಯನ್ನು ಗಾವಾನ್ ಅಳವಡಿಸಲು ಪ್ರೇರಣೆ ನೀಡಿದ. ಅದು ಮುಂದಿನ ಕಾಲು ಶತಮಾನ ಸಾಮ್ರಾಜ್ಯದ ಚೈತನ್ಯ ಹೆಚ್ಚಿಸುವುದಕ್ಕೆ ಕಾರಣವಾಯಿತು. ಜಲಾಲ್‌ನ ಬಂಡಾಯದ ಸಂದರ್ಭದಲ್ಲಿಯೇ ತೆಲಂಗಾಣದಲ್ಲಿಯೂ ಕೆಲವರು ಬಂಡೆದ್ದರು. ಅದನ್ನು ಅಡಗಿಸುವುದಕ್ಕೆ ಬಹಮನಿ ಸೈನ್ಯ ಹೆಣಗಾಡಬೇಕಾಯಿತು. ಕೆಲವು ಕಡೆ ಹಿನ್ನಡೆ ಅನುಭವಿಸಬೇಕಾಯಿತು. ತೆಲಂಗಾಣ ಮತ್ತು ಮಾಳ್ವದ ಜೊತೆಗಿನ

ಯುದ್ಧದ ಸಂದರ್ಭದಲ್ಲಿಯೇ ಅಲಾವುದ್ದೀನ್ ಮೊಳಕಾಲ ಕೆಳಗಿನ ಗಾಯ ಉಲ್ಬಣಗೊಂಡಿತು. ದಿನದಿಂದ ದಿನಕ್ಕೆ ಹದಗೆಡುತ್ತ ಹೋದ ದೇಹಸ್ಥಿತಿಯಿಂದಾಗಿ ಸುಲ್ತಾನ್‌ನು 1458ರ ಏಪ್ರಿಲ್ ಮೂರರಂದು ಅಸು ನೀಗಿದ.

ಅಲಾವುದ್ದೀನ್‌ನ ಮಾನವೀಯ ಗುಣ ಅಪರೂಪದ್ದಾಗಿತ್ತು. ತನ್ನ ಸಹೋದರರೊಂದಿಗೆ ನಡೆದುಕೊಂಡ ಅನುಕರಣೀಯವಾಗಿತ್ತು. ಮುಹಮ್ಮದ್‌ನ ಜೊತೆ ಸಿಂಹಾಸನ ಹಂಚಿಕೊಳ್ಳುವುದು ಸಾಧ್ಯವಿರಲಿಲ್ಲವಾದರೂ ಅದನ್ನು ಹೆಚ್ಚು ತೊಂದರೆಯಾಗದಂತೆ ನಿಭಾಯಿಸುವಲ್ಲಿ ಅಲಾವುದ್ದೀನ್ ಯಶಸ್ವಿಯಾಗಿದ್ದ. ಚಾಕಣದ ದುರ್ಘಟನೆಯನ್ನು ನಿರ್ವಹಿಸುವಲ್ಲಿ ಅಲಾವುದ್ದೀನ್ ಸಂಪೂರ್ಣವಾಗಿ ವಿಫಲನಾಗಿದ್ದ. ರಾಜಧಾನಿಯಲ್ಲಿ ಆಸ್ಪತ್ರೆ ಕಟ್ಟಿಸಿದ ಅಲಾವುದ್ದೀನ್ ಅಲ್ಲಿ ಹಿಂದು ಮತ್ತು ಮುಸ್ಲಿಮ್‌ರಿಬ್ಬರಿಗೂ ಅನುಕೂಲ ಆಗುವಂತಹ ವೈದ್ಯಪದ್ಧತಿಯನ್ನು ಜಾರಿಗೆ ತಂದಿದ್ದ.

## ಅಲಾವುದ್ದೀನ್ ಹುಮಾಯೂನ್ ಶಹಾ

(7 ಮೇ 1458 ರಿಂದ 4 ಸೆಪ್ಟೆಂಬರ್ 1461)

ಹುಮಾಯೂನ್ ಶಹಾ ದಂತಕತೆಗಳಿಗೆ ಕಾರಣನಾದ ಅರಸ. ಅವನ ಬಗ್ಗೆ ಹತ್ತಾರು, ನೂರಾರು ದಂತಕತೆಗಳಿವೆ. ಅವು ರೋಚಕ ಮಾತ್ರವಲ್ಲ ಭಯಾನಕ ಕೂಡ. ಅರಸರೆಂದ ಮೇಲೆ ಅವರ ಸುತ್ತ ಪ್ರಭಾವಲಯ ಇರುವುದು ಸಹಜ. ಹಾಗೆಯೇ ಅವರ ಪ್ರತಿಯೊಂದು ನಡೆನುಡಿಗೂ ವಿಶೇಷ ಅರ್ಥ ಹಚ್ಚುವುದು ಅಥವಾ ಹುಡುಕುವುದು ಕೂಡ ಸಾಮಾನ್ಯ. ಹೀಗೆ ಹುಟ್ಟಿಕೊಂಡ 'ಅರ್ಥ'ಗಳು ಬಾಯಿಂದ ಬಾಯಿಗೆ ಹರಡಿ ರೆಕ್ಕೆಪುಕ್ಕ ಮೂಡಿ ಆಕಾಶದಲ್ಲಿ ಹಾರಾಡಲು ಆರಂಭಿಸುತ್ತವೆ. ನೆಲದ ಮೇಲೆ ಇಲ್ಲದೇ ಇರುವ ಮತ್ತು ದೂರದಿಂದ ನೋಡುವುದೆಲ್ಲ ಮೋಹಕವಾಗಿಯೇ ಕಾಣಿಸುತ್ತದೆ. ವಾಸ್ತವದಿಂದ ದೂರ ಇರುವ ಕಾರಣಕ್ಕಾಗಿಯೇ ಮೋಹಕವಾಗಿ ಕಾಣುವ ಸಂಗತಿ ಮತ್ತಷ್ಟು ಕಲ್ಪನೆ–ರಂಜನೆಗೆ ಅವಕಾಶ ನೀಡುತ್ತದೆ. ಕಾಲ ಕಳೆದಂತೆ ಕತೆಗಳ ಸಂಖ್ಯೆಗಳಿಗಿಂತ ಹೆಚ್ಚು ಗಾಢವಾಗುತ್ತವೆ. ಹೀಗೆ ಬೆಳೆದ ಮತ್ತು ಇರುವ ಕತೆಗಳ ನಡುವೆ ನಿಜವಾದ ವ್ಯಕ್ತಿ ಕಳೆದುಹೋಗಿರುತ್ತಾನೆ. ಅಥವಾ ಹುಡುಕಿದರೂ ಸಿಗುವುದಿಲ್ಲ. ವ್ಯಕ್ತಿ ಆತ ಅರಸನೇ ಆಗಿದ್ದರೂ ಸಮುದಾಯ ತನಗೆ ಬೇಕಾದಂತೆ ಅವನ ವ್ಯಕ್ತಿತ್ವವನ್ನು ಬೆಳೆಸುತ್ತ ಹೋಗುತ್ತದೆ. ಅದಕ್ಕೆ ಪೂರಕವಾಗಿ ಕಾಕತಾಳೀಯ ಘಟನೆಗಳು

ನಡೆದರಂತೂ ಅದು ಐತಿಹಾಸಿಕ 'ಸತ್ಯ'ವಾಗಿ ಮಾರ್ಪಡುತ್ತದೆ. ಹೀಗೆ ಮಾರ್ಪಟ್ಟ ಸತ್ಯದ ಗೋರಿಯಲ್ಲಿ ಕುಳಿತ ವ್ಯಕ್ತಿಯ ಆತ್ಮ ಎಷ್ಟೇ ವಿಲಿವಿಲಿ ಒದ್ದಾಡಿದರೂ ಹೊರ ಬರುವುದು ಕಷ್ಟ. ಹೊರತರುವುದು ಇನ್ನೂ ಕಷ್ಟ. ಗೋರಿ ಕಟ್ಟುವ ಮತ್ತು ಅದರೊಳಗೆ ಬಂದಿಯಾದ ವ್ಯಕ್ತಿಯ ವ್ಯಕ್ತಿತ್ವವನ್ನು ಹೊರ ತರುವುದಕ್ಕಾಗಿ ಹಲವು ವಿದ್ವಾಂಸರು ಪ್ರಯತ್ನಿಸಿದ್ದಾರೆ. ಅದು ಕತೆಗಳ ಮೋಹಕತೆಯ ನಡುವೆ ಅಡಗಿಹೋಗಿದೆ.

ಹೀಗೆ ಕತೆಗಳ ನಡುವೆ ಕಳೆದು ಹೋಗಿರುವ ಹುಮಾಯೂನ್ ಶಹಾನನ್ನು ಹುಡುಕುವ ಮುನ್ನ ಅವನ ಬಗೆಗಿನ ಕತೆಗಳಾದರೂ ಏನು ಎನ್ನುವ ಅರಿವು ಇದ್ದರೆ ಒಳಿತು. ಹುಮಾಯೂನ್ ಶಹಾನ ಹೆಸರಿನ ಜೊತೆಗೇ 'ಜಾಲೀಂ' ಎಂಬ ಪದ ಅಂಟಿಕೊಂಡಿದೆ. 'ಜಾಲೀಂ' ಎಂದರೆ ಸರ್ವಾಧಿಕಾರಿ ಮನೋಭಾವದ, ಕ್ರೂರಿ ಎಂದರ್ಥ. ಹುಮಾಯೂನ್‌ನಿಗೆ ಜಾಲೀಂ ಎನ್ನುವ ಪದ ಬೆನ್ನು ಬಿಡದ ಬೇತಾಳನಂತಿದೆ. ಅದಕ್ಕೆ ಅವನೇ ಬೇತಾಳನಂತೆ ವರ್ತಿಸಿದ್ದೂ ಕಾರಣ ಇರಬಹುದು.

ಜನರಿಗೆ ಅಥವಾ ತನಗೆ ಆಗದೇ ಇರುವವರಿಗೆ ಅಂದರೆ ವಿರೋಧಿಗಳಿಗೆ ಯಾವ ಯಾವ ರೀತಿಯ ಹಿಂಸೆಗಳನ್ನು ನೀಡಬಹುದು ಎನ್ನುವುದರ ಶೋಧ ಹುಮಾಯೂನ್ ನಡೆಸಿದ್ದ. ಸುಡುವ ಬಿಸಿನೀರು ಮೈ ಮೇಲೆ ಚೆಲ್ಲುವ, ಕಾದ ಎಣ್ಣೆಯಲ್ಲಿ ಕೈ ಕಾಲು ಇಡುವ, ಹಸಿದ ಕಾಡು ಮೃಗಗಳ ಮುಂದೆ ನೂಕುವ, ಆನೆಯ ಕಾಲಿನಡಿ ತುಳಿಸುವ ಹೀಗೆ ತರಹೇವಾರಿ ಶಿಕ್ಷೆ ಕೊಡುವುದರಲ್ಲಿ ನಿಸ್ಸೀಮನಾಗಿದ್ದ. ಅವನ ಶಿಕ್ಷೆಗಳ ಬಗ್ಗೆ ಕೇಳುತ್ತಿದ್ದರೆ ನರಕದ ಕಾಲ್ಪನಿಕ ಅನುಭವ ಕಣ್ಮುಂದೆ ಕಟ್ಟಿದಂತಿರುತ್ತದೆ.

ಬೀದರ್‌ನಲ್ಲಿ 'ದುಲ್ಹನ್ ದರ್ವಾಜ' ಎಂಬ ಹೆಸರಿನ ಸ್ಮಾರಕ ಅಥವಾ ದ್ವಾರವಿದೆ. ಅಷ್ಟೂರು ಗ್ರಾಮದ ಕಡೆಗೆ ಹೋಗುವುದಕ್ಕಾಗಿ ಇರುವ ಮಹಾದ್ವಾರವನ್ನು ಜನ 'ದುಲ್ಹನ್ ದರ್ವಾಜ' ಎಂದು ಕರೆಯುತ್ತಾರೆ. ಈ ದರ್ವಾಜದ ಕೆಳಗಡೆ ನಿಂತರೆ ಕೈಯೆಲ್ಲ ಹಳದಿಯಾಗುತ್ತದೆ ಎಂಬ ಪ್ರತೀತಿ, ನಂಬಿಕೆಯಿದೆ. ಇರಬಹುದು ನಾನಂತೂ ಪರೀಕ್ಷಿಸಿಲ್ಲ. ಪ್ರತಿಯೊಂದು ಸ್ಮಾರಕದ ಜೊತೆಗೂ ಇತಿಹಾಸ ತಳುಕು ಹಾಕಿಕೊಂಡಿರುತ್ತದೆ. ಕೆಲವು ಕಡೆ ಮಾತ್ರ ಇತಿಹಾಸ ಹಿಂದೆ ಸರಿದು ಕತೆ ಮಾತ್ರ ಮುಂದೆ ಬಂದು ನಿಂತು ಬಿಡುತ್ತದೆ. ದುಲ್ಹನ್ ದರ್ವಾಜ ಕೂಡ ಇಂತಹುದೇ ಒಂದು ಉದಾಹರಣೆ. 'ದುಲ್ಹನ್' ಎಂದರೆ ಮದುಮಗಳು ಎಂದರ್ಥ. ಮದುವೆಯಾದ ವಧು ಗಂಡನ ಜೊತೆ

ಮೊದಲ ರಾತ್ರಿ ಕಳೆಯುವ ಮುನ್ನ ಅರಸನ ಜೊತೆ ಇರುವ ವ್ಯವಸ್ಥೆ ಇತ್ತಂತೆ. ಅದೂ ಹುಮಾಯೂನ್ ಶಹಾ ಕಾಲದ ಅವಧಿಯಲ್ಲಿ. ಇದು ಬೀದರ್‌ನಲ್ಲಿ ಮದುವೆಯಾಗುವ ಎಲ್ಲ ವಧುಗಳಿಗೂ ಅನ್ವಯ ಆಗುತ್ತಿತ್ತು. ವಧುವನ್ನು ಅರಸನ ಬಳಿ ಕರೆದುಕೊಂಡು ಹೋಗುವುದಕ್ಕೆ ಬಳಸುತ್ತಿದ್ದ ದ್ವಾರವೇ 'ದುಲ್ಹನ್ ದರ್ವಾಜ' ಎಂಬ ಕತೆಯಿದೆ.

ಮದುವೆಯ ಸಂದರ್ಭದಲ್ಲಿ ಮದುಮಕ್ಕಳಿಬ್ಬರ ಮೈಗೂ ಅರಿಷಿಣ ಹಚ್ಚುವ ಸಂಪ್ರದಾಯವಿದೆ. ಹೀಗೆ ಅರಿಷಿಣ ಹಚ್ಚಿಕೊಂಡಿದ್ದ ನವವಿವಾಹಿತೆ ಒಬ್ಬಳು ಅರಸನ ಬಳಿ ಹೋಗಲು ಹಿಂದೇಟು ಹಾಕಿದಳು. ಮಾತ್ರವಲ್ಲ ದುಲ್ಹನ್ ದರ್ವಾಜ ಬಳಿಯಲ್ಲಿ ವಿಷಸೇವಿಸಿ ಮೃತಪಟ್ಟಳಂತೆ. ಆಗಿನಿಂದ ದುಲ್ಹನ್ ದರ್ವಾಜದಲ್ಲಿ ಓಡಾಡುವರ ಕೈ ಹಳದಿಯಾದಂತೆ ಕಾಣಿಸುತ್ತದೆ ಎಂಬ ನಂಬಿಕೆ.

ಇದು ಕತೆಯ ಮಾತಾಯಿತು. ಇದಕ್ಕೆ ಏನಾದರೂ ಐತಿಹಾಸಿಕ ಹಿನ್ನೆಲೆ ಇದೆಯಾ ಅಂತ ಹುಡುಕಲು ಹೊರಟರೆ ಕತ್ತಲೆಯಲ್ಲಿ ಕರಿಬೆಕ್ಕು ಹುಡುಕಿದಂತೇನಾಗುವುದಿಲ್ಲ. ಬಹಮನಿ ಅರಸರ ಬಗ್ಗೆ ಅಧಿಕೃತ ಇತಿಹಾಸ ಬರೆದ ಫೆರಿಸ್ತಾ ತನ್ನ ಪುಸ್ತಕದಲ್ಲಿ ಹುಮಾಯೂನ್ ಬಗ್ಗೆ ಇಂತಹ ಕತೆಯ ಬಗ್ಗೆ ಉಲ್ಲೇಖಿಸುತ್ತಾನೆ. ಆದರೆ, ಅಚ್ಚರಿಯ ಸಂಗತಿ ಎಂದರೆ 'ದುಲ್ಹನ್ ದರ್ವಾಜ' ಎಂದು ಕರೆಯಲಾಗುವ ದ್ವಾರ ನಿರ್ಮಾಣವಾದದ್ದು ಹುಮಾಯೂನ್ ಶಹಾ ಸತ್ತ ಎಷ್ಟೋ ವರ್ಷಗಳ ನಂತರ. ಅಂದರೆ ಹುಮಾಯೂನ್ ಶಹಾನ ಅವಧಿಯಲ್ಲಿ ಆ ದ್ವಾರದ ನಿರ್ಮಾಣವೇ ಆಗಿರಲಿಲ್ಲ. ಬೀದರ್ ಕೋಟೆಯ ನಿರ್ಮಾಣದ ವಿವಿಧ ಹಂತಗಳ ಬಗ್ಗೆ ನಡೆದ ಸಂಶೋಧನೆ, ಕಟ್ಟಡ ನಿರ್ಮಾಣದ ಸ್ವರೂಪಗಳು ಇದನ್ನು ಸಾಬೀತು ಪಡಿಸಿವೆ. ಆದರೆ, ತಳುಕು ಹಾಕಿಕೊಂಡ ಕತೆ ಮಾತ್ರ ಜನರ ನೆನಪುಗಳ ಜೊತೆ ಹಾಗೆಯೇ ಇದೆ.

ಹುಮಾಯೂನ್ ಶಹಾ ಕ್ರೂರಿಯಾಗಿದ್ದ ಎಂಬುದರಲ್ಲಿ ಎರಡು ಮಾತಿಲ್ಲ. ಅವನು ಹದಿಹರಯದ ಯುವತಿಯರನ್ನು ಬಳಸುತ್ತಿದ್ದ ಎಂಬ ಬಗ್ಗೆಯೂ ಉಲ್ಲೇಖಗಳಿವೆ. ಅದಕ್ಕೆ ಪೂರಕವಾಗಿ ಹುಮನಾಬಾದ್ ತಾಲ್ಲೂಕಿನ ಘೋಡವಾಡಿಯ ಸೂಫಿ ಪರಂಪರೆಯ ಸಂತ ಇಸ್ಮಾಯಿಲ್ ಖಾದ್ರಿಯ ಕತೆಯನ್ನೂ ಉಲ್ಲೇಖಿಸಬಹುದು.

ಬೀದರ್‌ನ ಬಡ ಬ್ರಾಹ್ಮಣನೊಬ್ಬ ತನ್ನ ನೆರೆಮನೆಯಲ್ಲಿ ವಾಸಿಸುತ್ತಿದ್ದ ಇಸ್ಮಾಯಿಲ್ ಖಾದ್ರಿಯ ಹತ್ತಿರ ಬಂದು 'ಮಗಳನ್ನು ಕಳುಹಿಸಲು' ಹೇಳಿದ ಅರಸನ ಅದೇಶದ ಬಗ್ಗೆ ಪ್ರಸ್ತಾಪಿಸಿದ. ಹಾಗೆಯೇ 'ಇವಳು ನನ್ನ ಮಗಳಲ್ಲ.

ನಿನ್ನ ಮಗಳು' ಎಂದು ತಿಳಿಸಿ ದೇಶಾಂತರ ಹೊರಟ. ಹುಮಾಯೂನ್‌ನ ಸಿಟ್ಟು–ಕ್ರೂರ ನಡುವಳಿಕೆಯ ಬಗ್ಗೆ ಅರಿವಿದ್ದ ಖಾದ್ರಿಯು ಬ್ರಾಹ್ಮಣ ಯುವತಿ ಮತ್ತು ತನ್ನ ಮನೆಯವರನ್ನು ಕರೆದುಕೊಂಡು ನಗರದಿಂದ ಪಲಾಯನ ಮಾಡಿದ. ಯುವತಿಗಾಗಿ ಕಾದು ಕುಳಿತ ಅರಸ ಅವಳ ಮನೆಗೆ ತನ್ನ ಸೈನಿಕರನ್ನು ಕಳುಹಿಸಿದ. ಯುವತಿಯ ಮನೆಯಲ್ಲಿ ಮಾತ್ರವಲ್ಲದೆ ನೆರೆಹೊರೆಯವರು ಕೂಡ ಯಾರೂ ಇಲ್ಲದೇ ಇರುವ ಸಂಗತಿಯನ್ನು ಸೈನಿಕರು ಅರಸನಿಗೆ ಅರುಹಿದರು. ಇದರಿಂದ ಕೋಪೋದ್ರಿಕ್ತನಾದ ಅರಸ ಸೈನ್ಯದೊಂದಿಗೆ ಖಾದ್ರಿಯ ಬೆನ್ನು ಹತ್ತಿದ. ಅರಸನ ಸೈನ್ಯದ ಜೊತೆ ಕಾದಾಡಿದ ಇಸ್ಮಾಯಿಲ್ ಖಾದ್ರಿಯು ತನ್ನ ನೈತಿಕ ಬಲದಿಂದ ಗೆಲುವು ಸಾಧಿಸಿದ. ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಹತಾಶಳಾದ ಬ್ರಾಹ್ಮಣ ಯುವತಿ ಆತ್ಮಹತ್ಯೆಗೆ ಶರಣಾದಳು. ಇಸ್ಮಾಯಿಲ್ ಖಾದ್ರಿ ಮತ್ತು ಹುಮಾಯೂನ್ ಶಹಾನ ನಡುವೆ ಎರಡೂ ಕದನದಲ್ಲಿ ಸೋಲು ಅರಸನದೇ ಆಗಿತ್ತು. ಘೋಡವಾಡಿಯ ಸಂತ ಇಸ್ಮಾಯಿಲ್ ಖಾದ್ರಿಯ ಸಮಾಧಿ ಇರುವ ದರ್ಗಾದ ಬಳಿ ಇರುವ ಕೋಣೆಯೊಂದನ್ನು ತೋರಿಸಿ 'ಇದು ಬ್ರಾಹ್ಮಣ ಯುವತಿಯ ಕೋಣೆ' ಎಂದು ತೋರಿಸುತ್ತಾರೆ. ಸೋಲುಂಡು ಕಳಾಹೀನನಾಗಿ ಮರಳಿದ ಹುಮಾಯೂನ್‌ನ ಪತ್ನಿಯೇ ಬಾಣ ಬಿಟ್ಟು ಸಾಯಿಸಿದಳು ಎಂಬ ಕತೆಯಿದೆ. ಪತ್ನಿ ಸಾಯಿಸಿದಳು ಎಂಬ ಸಂಗತಿ ಕಟ್ಟುಕತೆ ಇರಬಹುದು ಎನಿಸುತ್ತದೆ.

ಅಷ್ಟೂರಿನಲ್ಲಿ ಇರುವ ಬಹಮನಿ ಅರಸರ ಗೋರಿಗಳ ಪೈಕಿ ಸಿಡಿಲಿನಿಂದ ಅರ್ಧ ಕುಸಿದ ಗುಂಬಜ್ ಒಂದಿದೆ. ಅದೇ ಹುಮಾಯೂನ್ ಶಹಾನ ಗೋರಿ. ಹುಮಾಯೂನ್‌ನ ಕ್ರೂರ ನಡುವಳಿಕೆಗಳಿಂದ ಬೇಸತ್ತ ದೇವರು ಅವನ 'ಗೋರಿಯ ಮೇಲೆ ನೆರಳು ಕೂಡ ಇರಬಾರದು ಎಂದು ಸಿಡಿಲಿನಿಂದ ಗುಂಬಜ್ ಇಲ್ಲದಂತೆ ಮಾಡಿದ' ಎಂಬ ಮತ್ತೊಂದು ನಂಬಿಕೆಯಿದೆ.

ಅದು ಕೂಡ ವಾಸ್ತವ ಏನಲ್ಲ. ಹುಮಾಯೂನ್ ಸತ್ತ 400 ವರ್ಷಗಳ ನಂತರ ಸಿಡಿಲಿಗೆ ಗುಂಬಜ್ ಕುಸಿದದ್ದು 1882–83ರಲ್ಲಿ. ಹುಮಾಯೂನ್‌ನ ಗೋರಿಯ ಮೇಲಿನ ಗುಂಬಜ ಕುಸಿದ ಘಟನೆ ಸಂಭವಿಸಿದ ಕಾಲದಲ್ಲಿ ಮೌಲಾನಾ ಬಸಿರುದ್ದೀನ್ ಬೀದರ್‌ನಲ್ಲಿ ಅಧಿಕಾರಿಯಾಗಿದ್ದರು. ಆ ಘಟನೆಯನ್ನು ತಮ್ಮ ಉರ್ದು ಪುಸ್ತಕ 'ತಿಚಿಡು'ಚಿಣ–ಖ ಒಚಿಟಟಣಾಇಚಿಣ–ಟ ಏರಿಚಿಠಿಣಾಡಿ'ನಲ್ಲಿ ದಾಖಲಿಸಿದ್ದಾರೆ. ಇದೆಲ್ಲ ಕತೆಗಳ ನಡುವಿನ ಹುಮಾಯೂನ್. ಇತಿಹಾಸದ ಬಹುತೇಕ ಪುಸ್ತಕಗಳಲ್ಲಿ ಹುಮಾಯೂನ್‌ನ ವ್ಯಕ್ತಿತ್ವವನ್ನು ಕಪ್ಪಾಗಿಯೇ ಚಿತ್ರಿಸಲಾಗಿದೆ. ಅದರಲ್ಲಿ ಮುಂಚೂಣಿಯಲ್ಲಿ ಇರುವವನೆಂದರೆ ಫೆರಿಸ್ತಾ. ತಬಾತಬಾಯಿ ಕೂಡ ಅದೇ ಸಾಲಿನಲ್ಲಿ ನಿಲ್ಲುತ್ತಾನೆ. ಪರ್ಶಿಯನ್ ಮೂಲದ

ಇಬ್ಬರೂ ಲೇಖಕರು ಹುಮಾಯೂನ್‌ನ ವ್ಯಕ್ತಿತ್ವದ ಬಗ್ಗೆ ಋಣಾತ್ಮಕ ನಿಲುವು ತಳೆದವರಾಗಿದ್ದಾರೆ. ಕತೆಗಳಿಗೆ ಕಾರಣವಾಗುವ ರೀತಿಯ ಬರವಣಿಗೆ ಸ್ವರೂಪ ಇಬ್ಬರೂ ಲೇಖಕರದ್ದಾಗಿದೆ. ಆಧುನಿಕ ಇತಿಹಾಸಕಾರರು ಮಾತ್ರ ಹೊಸ ಬೆಳಕಿನಲ್ಲಿ ಹುಮಾಯೂನ್‌ನ ವ್ಯಕ್ತಿತ್ವವನ್ನು ಕಟ್ಟಿಕೊಡುವ ಪ್ರಯತ್ನ ನಡೆಸಿದ್ದಾರೆ. ಐತಿಹಾಸಿಕ ದಾಖಲೆ ಮತ್ತು ಸಾರಾಸಾರ ವಿವೇಚನೆಯಿಂದ ಕೂಡಿದ ಆಧುನಿಕ ಲೇಖಕರ ಬರವಣಿಗೆಗಳು ವಾಸ್ತವಕ್ಕೆ ಹೆಚ್ಚು ಹತ್ತಿರ ಅನ್ನಿಸುತ್ತವೆ. ಇಲ್ಲಿ ಎರಡನ್ನೂ ದಾಖಲಿಸುವ ಪ್ರಯತ್ನ ಮಾಡಿದ್ದೇನೆ.

ತಂದೆ ಅಲ್ಲಾವುದ್ದೀನ್ ಶಹಾ ಕೊನೆಯುಸಿರು ಎಳೆಯುವ ಸಂದರ್ಭದಲ್ಲಿ ಯುವರಾಜನಾಗಿದ್ದ ಹುಮಾಯೂನ್ ತನ್ನ ಅರಮನೆಯಲ್ಲಿದ್ದ. ಅರಸನ ಸಾವು ಸಂಭವಿಸುತ್ತಿದ್ದಂತೆಯೇ ಸೈಫ್‌ಖಾನ್ ಮತ್ತು ಮಲ್ಲೂಖಾನ್ ಎಂಬ ಇಬ್ಬರು ಪ್ರಮುಖರು ಪಿತೂರಿ ನಡೆಸಿದರು. ಹುಮಾಯೂನ್‌ನ ಕಿರಿಯ ಸಹೋದರ ಹಸನ್‌ಖಾನ್‌ನನ್ನು ಸಿಂಹಾಸನದ ಮೇಲೆ ಕೂಡಿಸಲು ನಿರ್ಧರಿಸಿದರು. ಕಿರ್ಮಾನ್‌ನ ಸಂತ ನಿಯಾಮತುಲ್ಲಾ ಕಿರ್ಮಾನಿಯ ಮಗ ಹಬೀಬುಲ್ಲಾ ಕೂಡ ಅದಕ್ಕೆ ಕೈ ಜೋಡಿಸಿದ. ಸಂತ ಪರಂಪರೆಗೆ ಸೇರಿದ ಹಬೀಬುಲ್ಲಾ ಹುಮಾಯೂನ್‌ನ ಸಹೋದರಿಯ ಪತಿ ಕೂಡ ಹೌದು. ಮಾತ್ರವಲ್ಲ, ಅರಮನೆಯ ಪಿತೂರಿಯಲ್ಲಿ ಸಕ್ರಿಯವಾಗಿದ್ದ. ಈ ಮೂವರ ಜೊತೆಗೆ ಕೆಲವು ಗಣ್ಯರು ಕೂಡ ಸೇರಿದ್ದರು. ಅವರೆಲ್ಲ ಹುಮಾಯೂನ್‌ನ ಅರಮನೆಯ ಕಡೆಗೆ ಧಾವಿಸಿದರು. ಯುವರಾಜನನ್ನು ವಶಕ್ಕೆ ತೆಗೆದುಕೊಳ್ಳುವುದು ಅವರ ಉದ್ದೇಶವಾಗಿತ್ತು. ಆಗ ಹುಮಾಯೂನ್ ನಿವೃತ್ತನಾಗುವುದಾಗಿ ಹೇಳಿ ಅರಮನೆಯಲ್ಲಿ ಭೇಟಿ ಮಾಡುವ ಬಗ್ಗೆ ಭರವಸೆ ನೀಡಿ ಅವರ ದಾರಿ ತಪ್ಪಿಸಿದ.

ನಂತರ ತನ್ನ ಬೆಂಬಲಿಗ ಸೈನಿಕರೊಂದಿಗೆ ಸಿಂಹಾಸನ ಇರಿಸಲಾಗಿದ್ದ 'ತಖ್ತ್ ಮಹಲ್' ಕಡೆಗೆ ಹೊರಟ. ಹುಮಾಯೂನ್‌ನ ನಿಲುವು ಮತ್ತು ಅವನ ತೆಗೆದುಕೊಳ್ಳಲಿರುವ ನಿರ್ಧಾರಗಳ ಬಗ್ಗೆ ಗೊತ್ತಿರದಿದ್ದರೂ ಮಾವುತರು, ಅಂಗರಕ್ಷಕರು, ಅರಮನೆಯ ಸಿಬ್ಬಂದಿ ಜೊತೆ ನಡೆದರು. ಯಾವುದೇ ರೀತಿಯ ಅಡೆತಡೆಗಳಿಲ್ಲದೇ ಹುಮಾಯೂನ್ ಸಭಾಂಗಣ ಪ್ರವೇಶಿಸಿದ್ದರನ್ನು ನೋಡಿ ಸಿಂಹಾಸನದ ಮೇಲೆ ಕುಳಿತಿದ್ದ ಹಸನ್‌ಖಾನ್ ಗಾಬರಿಯಾದ. ಸಿಂಹಾಸನದ ಕಡೆಗೆ ಓಡಿದ ಹುಮಾಯೂನ್ ತಕ್ಷಣ ಭಯದಿಂದ ನಡುಗುತ್ತಿದ್ದ ಹಸನ್‌ಖಾನ್‌ನನ್ನು ಎಳೆದು ನೆಲದ ಮೇಲೆ ಬೀಳಿಸಿದ. ಬಂಧಿಸುವಂತೆ ಆದೇಶಿಸಿ ತಾನೇ ಸಿಂಹಾಸನದ ಮೇಲೆ ಕುಳಿತುಕೊಂಡ. ಹಠಾತ್ತನೆ ಅರಸನಾದ ಹುಮಾಯೂನ್‌ನಿಗೆ ಯಾವುದೇ ರೀತಿಯ ಪ್ರತಿರೋಧಗಳು ಎದುರಾಗಲಿಲ್ಲ. ಹಸನ್‌ಖಾನ್‌ನನ್ನು ಅರಸನನ್ನಾಗಿಸುವ

ಯೋಜನೆಯ ರೂವಾರಿ ಸೈಫ್‌ಖಾನ್‌ನನ್ನು ಸರಪಳಿಗಳಿಂದ ಬಂಧಿಸಲಾಯಿತು. ಅವನನ್ನು ಆನೆಯ ಕಾಲಿಗೆ ಕಟ್ಟಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿಸಲಾಯಿತು. ಅಷ್ಟೇ ಅಲ್ಲ ಆನೆಯಿಂದ ತುಳಿಸಿ ಸಾಯಿಸಲಾಯಿತು. ಅವನ ಬಹುತೇಕ ಜೊತೆಗಾರರಿಗೂ ಅದೇ ಶಿಕ್ಷೆಯಾಯಿತು. ಸಹೋದರಿಯ ಗಂಡ ಎನ್ನುವ ಕಾರಣಕ್ಕಾಗಿ ಹಬೀಬುಲ್ಲಾನನ್ನು ಸೆರೆಮನೆಗೆ ಕಳುಹಿಸಿದರೆ ಸಹೋದರ ಹಸನ್‌ಖಾನ್‌ನ ಕಣ್ಣು ಕೀಳಿಸಲಾಯಿತು. ಬಹಮನಿ ಇತಿಹಾಸದಲ್ಲಿ ಇಂತಹ ಘಟನೆ ಇದೇ ಮೊದಲನಯದ್ದೇನಾಗಿರಲಿಲ್ಲ.

ಅರಸನಾಗುತ್ತಿದ್ದಂತೆಯೇ ಹುಮಾಯೂನ್ ತನ್ನ ತಂದೆ ಅಲ್ಲಾವುದ್ದೀನ್‌ನ ಇಚ್ಛೆಯ ಮೇರೆಗೆ ಮಹಮೂದ್ ಗವಾನ್‌ನನ್ನು ಮಂತ್ರಿಯಾಗಿ ನೇಮಿಸಿದ. ಜೊತೆಗೆ 'ವ್ಯಾಪಾರಿಗಳ ಅರಸ' (ಮಲಿಕ್‌ತುಜರ್) ಬಿರುದಿನೊಂದಿಗೆ ಬಿಜಾಪುರ ಪ್ರಾಂತ್ಯದ ಆಡಳಿತಾಧಿಕಾರಿಯನ್ನಾಗಿ ಮಾಡಿದ. ತುರ್ಕಿಯ ಚೆಂಗಿಸ್‌ಖಾನ್‌ನ ಪರಂಪರೆಗೆ ಸೇರಿದವನೆಂದು ಹೇಳಿಕೊಳ್ಳುತ್ತಿದ್ದ ಮಲಿಕ್‌ಶಹಾನನ್ನು ತೆಲಂಗಾಣ ಪ್ರದೇಶದ ರಾಜ್ಯಪಾಲನನ್ನಾಗಿ ನೇಮಿಸಿದ. ಅವನಿಗೆ 'ಖ್ವಾಜಾ ಜಹಾನ್' (ಜಗದ ಒಡೆಯ) ಬಿರುದಿನೊಂದಿಗೆ ಸಾವಿರ ಕುದುರೆಗಳ ಸರದಾರನನ್ನಾಗಿ ಮಾಡಿದ.

ಹುಮಾಯೂನ್ ಅರಸನಾಗುವ ಮುಂಚೆ ಅವನ ಸಹೋದರಿಯ ಪುತ್ರ ಸಿಕಂದರ್‌ಖಾನ್ ಆಪ್ತನಾಗಿದ್ದ. ತೆಲಂಗಾಣದಲ್ಲಿ ಅಧಿಕಾರಿಯಾಗಿದ್ದ ಸಿಕಂದರ್‌ಖಾನ್ ಅರಸನ ಅನುಮತಿ ಪಡೆಯದೇ ದರ್ಬಾರದಿಂದ ಹೊರಟ. ನಿತ್ಯದ ಕೆಲಸ ಮುಗಿದ ನಂತರ ತೆರಳುವುದೂ ಸೇರಿದಂತೆ ಅರಸನ ಗಮನಕ್ಕೆ ತಾರದೇ ದರ್ಬಾರಿಗೆ ಗೈರು ಹಾಜರಾಗುವುದನ್ನು ಕೂಡ 'ಬಂಡಾಯ' ಎಂದೇ ಭಾವಿಸಲಾಗುತ್ತಿತ್ತು. ಇದು ಸಿಕಂದರ್‌ಖಾನ್ ಕೂಡ ತನ್ನ ವಿರುದ್ಧ ತಿರುಗಿ ಬಿದ್ದಿದ್ದಾನೆ ಎಂದು ಅರಸನಿಗೆ ಅನ್ನಿಸುವುದಕ್ಕೆ ಕಾರಣವಾಯಿತು. ಅದೇ ಹೊತ್ತಿಗೆ ಸಿಕಂದರ್‌ಖಾನ್ ನವಲಗುಂದದಲ್ಲಿ ಇದ್ದ ತನ್ನ ತಂದೆ ಜಲಾಲಖಾನ್ ಜೊತೆ ಸೇರಿ ಸೈನ್ಯ ಕಲೆ ಹಾಕಲು ಆರಂಭಿಸಿದ. ಬಂಡಾಯ ಶಮನ ಮಾಡದೆ ಬೇರೆ ದಾರಿಯೇ ಇಲ್ಲ ಎಂದು ಭಾವಿಸಿದ ಹುಮಾಯೂನ್ ತಕ್ಷಣವೇ ಸೈನ್ಯ ಕಳುಹಿಸಲು ನಿರ್ಧರಿಸಿದ. ಬೆರಾರ್ ರಾಜ್ಯಪಾಲನಾಗಿದ್ದ ಖಾನ್ ಜಹಾನ್ ನೂತನ ಅರಸನಿಗೆ ಶುಭ ಕೋರುವುದಕ್ಕಾಗಿ ರಾಜಧಾನಿಗೆ ಆಗಮಿಸಿದ್ದ. ನವಲಗುಂದಗೆ ಹೋಗಿ ಬಂಡಾಯಗಾರರ ಹುಟ್ಟಡಗಿಸುವಂತೆ ಖಾನ್ ಜಹಾನ್‌ನಿಗೆ ಹುಮಾಯೂನ್ ಆದೇಶಿಸಿದ. ಅರಸನ ಆದೇಶದಂತೆ ತನ್ನ ಸೈನ್ಯದೊಂದಿಗೆ ಹೋದ ಖಾನ್ ಜಹಾನ್ ಸೋಲುಂಡು ಮರಳಬೇಕಾಯಿತು. ಅದು ಅರಸ ಮತ್ತಷ್ಟು ಕೋಪದಿಂದ ಉದ್ರಿಕ್ತನಾಗುವಂತೆ ಮಾಡಿತು. ತನ್ನ ಬಂಧುಗಳೇ ಮಗ್ಗುಲ ಮುಳ್ಳುಗಳಾಗಿ

ಕಾಡುತ್ತಿರುವುದು ಅರಸನಿಗೆ ಸಹಿಸಲಾಗದ ನೋವುಂಟು ಮಾಡಿತ್ತು. ಆಗ ಅರಸ ಸ್ವತಃ ತಾನೇ ಸೈನ್ಯದೊಂದಿಗೆ ದಾಳಿ ನಡೆಸಿ ಹುಟ್ಟಡಗಿಸಲು ನಿರ್ಧರಿಸಿದ.

ತಾನೇ ಹೊರಟು ಬಂದರೆ ಭೀತಿಯಿಂದ ಶರಣಾಗತರಾಗಬಹುದು ಎಂಬ ಆಸೆ ಅರಸನಲ್ಲಿತ್ತು. ಆ ನಿರೀಕ್ಷೆ ತಪ್ಪು ಎಂದು ಗೊತ್ತಾಗಲು ಹೆಚ್ಚು ಹೊತ್ತು ಬೇಕಾಗಲಿಲ್ಲ. ನವಲಗುಂದದ ಹೊರಭಾಗದಲ್ಲಿ ಹುಮಾಯೂನ್ ಮತ್ತು ಅವನ ಸೈನ್ಯ ಬಿಡಾರ ಹೂಡಿತು. ರಾತ್ರಿ ವೇಳೆ ಸಿಕಂದರಖಾನ್ ತನ್ನ ಸೈನ್ಯದೊಂದಿಗೆ ಬಿಡಾರದ ಮೇಲೆ ಹಠಾತ್ ದಾಳಿ ನಡೆಸಿ ಅಲ್ಪಮಟ್ಟಿನ ಯಶ ಗಳಿಸಿದ. ಅದರಿಂದ ಕುಪಿತನಾದ ಅರಸ ಕೋಟೆಗೆ ಮುತ್ತಿಗೆ ಹಾಕಲು ನಿರ್ಧರಿಸಿದ. ಅದಕ್ಕೂ ಮುನ್ನವೇ ತನ್ನ ಸೈನ್ಯದ ಜೊತೆಗೆ ಸಮರಕ್ಕೆ ಬಂದ.

ಸಿಕಂದರಖಾನ್‌ನಿಗೆ ತನ್ನ ಸೈನ್ಯದ ಸಾಹಸಿ ಯೋಧರ ಬಗ್ಗೆ ಅಪಾರ ವಿಶ್ವಾಸವಿತ್ತು. ಆದ್ದರಿಂದಲೇ ಎಂಟು ಸಾವಿರಕ್ಕೂ ಹೆಚ್ಚಾಗಿದ್ದ ದಖನಿ ಮತ್ತು ರಜಪೂತ ಸೈನ್ಯದ ಜೊತೆ ಕದನಕ್ಕೆ ಇಳಿಯಲು ಹಿಂದೇಟು ಹಾಕಲಿಲ್ಲ. ಆದರೂ ಹುಮಾಯೂನ್‌ನೇ ಸಿಕಂದರಖಾನ್‌ನಿಗೆ ಒಂದು ಪತ್ರ ಕಳಿಸಿದ. ಅದರಲ್ಲಿ ತಮ್ಮ ಹಳೆಯ ಆತ್ಮೀಯತೆ, ಸ್ನೇಹ ಸಂಬಂಧವನ್ನು ಪ್ರಸ್ತಾಪಿಸಿ 'ಆಯುಧ ಹಿಡಿದು ನನ್ನ ಮುಂದೆ ನಿಲ್ಲುವುದು ಅತ್ಯಂತ ಹೀನ ಅಪರಾಧ' ಎಂದು ಬರೆದ. 'ನಿನ್ನನ್ನು ನಾಶ ಮಾಡುವ ಉದ್ದೇಶ ನನಗಿಲ್ಲ. ಆದ್ದರಿಂದ ಶರಣಾಗತನಾದರೆ ಕ್ಷಮಾದಾನ ನೀಡುವುದರ ಜೊತೆಗೆ ದೌಲತಾಬಾದ್‌ನ ಆಡಳಿತ ವಹಿಸುವುದಾಗಿ' ತಿಳಿಸಿದ. ಅರಸನ ಆಹ್ವಾನವನ್ನು ಸಿಕಂದರಖಾನ್ ನಿರಾಕರಿಸಿದ. ಹುಮಾಯೂನ್ ತಂದೆಯ ಕಡೆಯಿಂದ ಅಹ್ಮದ್ ಶಹಾ ಅಲಿವಲಿಯ ಮೊಮ್ಮಗನಾದರೆ ತಾನು ತಾಯಿಯ ಕಡೆಯಿಂದ ಮೊಮ್ಮಗ. ಆದ್ದರಿಂದ ಅರಸೊತ್ತಿಗೆಯ ಮೇಲೆ ಹುಮಾಯೂನ್‌ನಿಗೆ ಇರುವಷ್ಟೇ ಹಕ್ಕು, ಅಧಿಕಾರ ತನಗೂ ಇದೆ. ಆದ್ದರಿಂದ ತೆಲಂಗಾಣ ಪ್ರದೇಶಕ್ಕೆ ಸ್ವತಂತ್ರ ಅರಸನನ್ನಾಗಿ ಮಾಡು ಇಲ್ಲವೇ ಯುದ್ಧಕ್ಕೆ ಸಿದ್ಧನಾಗುವಂತೆ ಮಾರುತ್ತರ ನೀಡಿದ.

ಸಿಕಂದರಖಾನ್ ಬರೆದ ಪತ್ರದಲ್ಲಿ ಬಳಸಿದ ಭಾಷೆ ಮತ್ತು ಆಡಿದ ಮಾತಿನ ರೀತಿ ಹುಮಾಯೂನ್‌ನನ್ನು ಕುಪಿತಗೊಳಿಸಿತು. ತಕ್ಷಣವೇ ದಾಳಿ ನಡೆಸಲು ಆದೇಶಿಸಿದ ಹುಮಾಯೂನ್ ಸ್ವತಃ ರಣರಂಗಕ್ಕೆ ಬಂದ. ಸಿಕಂದರಖಾನ್‌ನ ಸೈನ್ಯ ಕೂಡ ವೀರಾವೇಶದಿಂದಲೇ ಹೊರಾಡಲು ಆರಂಭಿಸಿತು. ಹಿನ್ನೆಡೆ ಉಂಟಾಗುವ ಯಾವುದೇ ಲಕ್ಷಣಗಳೂ ಇರಲಿಲ್ಲ. ಕದನ ಭೀಕರವಾಗುತ್ತಲೇ ಹೋಯಿತು. ಎರಡೂ ಪಡೆಗಳು ಸಮಬಲದಿಂದಲೇ ಹೋರಾಟ ನಡೆಸಿದವು. ಬಿಜಾಪುರದ

ಕಡೆಯಿಂದ ಮಹಮೂದ್ ಗವಾನ್‌ನ ಸೈನ್ಯ ಬಲಗಡೆಯಿಂದ ದಾಳಿ ನಡೆಸಿತು. ಅದೇ ಹೊತ್ತಿಗೆ ಸರಿಯಾಗಿ ತೆಲಂಗಾಣದ ಖ್ವಾಜಾ ಜಹಾನ್‌ನ ಪಡೆಯೂ ಎಡಗಡೆಯಿಂದ ಸಮರಾಂಗಣ ಪ್ರವೇಶಿಸಿತು. ಅನಿರೀಕ್ಷಿತ ದಾಳಿಯಿಂದ ಕಂಗಾಲಾದ ಸಿಕಂದರಖಾನ್‌ನ ಪಡೆ ಹಿಂದೆ ಸರಿಯಲು ಆರಂಭಿಸಿತು. ಇದರಿಂದ ಉತ್ತೇಜಿತನಾದ ಹುಮಾಯೂನ್ ಶಹಾ ತನ್ನ 500 ಬಿಲ್ಲುಗಾರರು ಮತ್ತು 500 ಈಟಿಗಾರರ ಪಡೆಯೊಡನೆ ಮುನ್ನುಗ್ಗಿದ. ಆನೆಯ ಮೇಲೆ ಕುಳಿತಿದ್ದ ಹುಮಾಯೂನ್‌ಶಹಾ ತನ್ನ ಸೈನ್ಯಕ್ಕೆ ಸ್ಫೂರ್ತಿ ನೀಡುತ್ತ ರಣಾಂಗಣದ ಮಧ್ಯಕ್ಕೆ ಬಂದ. ಸಮರನಿರತ ಸೈನಿಕರೆಲ್ಲ ಅಲ್ಲಲ್ಲಿ ಚೆದುರಿದ್ದರಿಂದ ಒಬ್ಬಂಟಿಯಾಗಿಬಿಟ್ಟ. ಇದನ್ನು ಗಮನಿಸಿದ ಸಿಕಂದರಖಾನ್ ತಕ್ಷಣ ಕುದುರೆಯನ್ನೇರಿ ಅರಸ ಕುಳಿತಿದ್ದ ಆನೆಯ ಕಡೆಗೆ ಧಾವಿಸಿದ. ಜೊತೆಗೆ ತನ್ನ ಕೈಯಲ್ಲಿದ್ದ ಭರ್ಚಿಯಿಂದ ಅರಸನ ಮೇಲೆ ಹಲ್ಲೆ ನಡೆಸಿದ. ಅದೇ ಹೊತ್ತಿಗೆ ಹುಮಾಯೂನ್ ಕುಳಿತಿದ್ದ ಆನೆಯು ತನ್ನ ಸೊಂಡಿಲಿನಿಂದ ಸಿಕಂದರಖಾನ್‌ನನ್ನು ಅವನು ಕುಳಿತಿದ್ದ ಕುದುರೆಯ ಸಮೇತ ಎತ್ತಿ ದೂರ ಬಿಸಾಡಿತು. ಘಟನೆಯಿಂದಾಗಿ ಸಿಕಂದರಖಾನ್‌ನ ಸಹಾಯಕ್ಕೆ ವೇಗವಾಗಿ ನುಗ್ಗಿದ್ದ ಸಿಕಂದರಖಾನ್‌ನ ಬೆಂಬಲಿಗರು ತಮ್ಮನ್ನು ತಾವು ನಿಯಂತ್ರಿಸಿಕೊಳ್ಳಲು ವಿಫಲರಾದರು. ಅವನನ್ನು ತುಳಿದು, ದಾಟಿ ಮುಂದೆ ಬಂದರು. ತನ್ನದೇ ಸೈನಿಕರ ಕಾಲಡಿ ಸಿಕ್ಕ ಸಿಕಂದರಖಾನ್ ಕೊನೆಯುಸಿರೆಳೆದ. ನಾಯಕನ ಸಾವಿನಿಂದ ಕಂಗೆಟ್ಟ ಸೈನ್ಯ ದಿಕ್ಕೆಟ್ಟು ಓಡಲಾರಂಭಿಸಿತು. ಆಗ ಹುಮಾಯೂನ್ ತನ್ನ ಸೈನ್ಯದ ಜೊತೆಗೆ ಬಹಳಷ್ಟು ದೂರದ ವರೆಗೆ ಬೆಂಬತ್ತಿದ ಮಾತ್ರವಲ್ಲ ಕೈಗೆ ಸಿಕ್ಕವರನ್ನೆಲ್ಲ ಕಡಿದು ಹಾಕುವಂತೆ ಆದೇಶಿಸಿದ., ಸಾವಿರಾರು ಸೈನಿಕರು ನಿರಾಯುಧರಾದ ಕೊನೆಯುಸಿರೆಳೆದರು.

ಮರುದಿನ ನವಲಗುಂದ ಕೋಟೆಯ ಮುತ್ತಿಗೆ ಮುಂದುವರೆಸಿದ. ಒಂದು ವಾರದ ಸತತ ಮುತ್ತಿಗೆಯ ನಂತರ ಜಲಾಲಖಾನ್ ಹತಾಶೆಯಿಂದ ಶರಣಾಗತನಾದ. ನವಲಗುಂದ ಕೋಟೆಯನ್ನು ವಶಕ್ಕೆ ತೆಗೆದುಕೊಂಡ. ಕಾಲಡಿ ಬಿದ್ದು ಬೇಡಿದ ತನ್ನ ಸಹೋದರಿಯ ಪತಿಯಾದ ಜಲಾಲಖಾನ್‌ನಿಗೆ ಹುಮಾಯೂನ್ ಪ್ರಾಣಭಿಕ್ಷೆ ನೀಡಿದ. ಜಲಾಲಖಾನ್ ತನ್ನ 40 ವರ್ಷದ ರಾಜಕೀಯ ಜೀವನದಲ್ಲಿ ಗಳಿಸಿದ್ದ ಎಲ್ಲ ಆಸ್ತಿಯನ್ನು ಅರಸನ ಅಡಿಗಳಿಗೆ ಅರ್ಪಿಸಿದ. ಜೈಲಿಗೆ ಕಳುಹಿಸಲಾದ ಜಲಾಲಖಾನ್ ಬಹಳಷ್ಟು ದಿನಗಳ ನಂತರ ಅಲ್ಲಿಯೇ ಕೊನೆಯುಸಿರೆಳೆದ.

ನವಲಗುಂದ ವಶಪಡಿಸಿಕೊಂಡ ನಂತರ ಹುಮಾಯೂನ್‌ನ ಚಿತ್ತ ದೇವರಕೊಂಡ ಕೋಟೆಯತ್ತ ತಿರುಗಿತು. ದೇವರಕೊಂಡ ಕೋಟೆಯನ್ನು

ತೆಲಂಗಾಣದ ಜಮಿನ್ದಾರರು ನೋಡಿಕೊಳ್ಳುತ್ತಿದ್ದರು. ಆ ಜಮೀನ್ದಾರರು ಯುದ್ಧದಲ್ಲಿ ಸಿಕಂದರಖಾನ್‌ನಿಗೆ ಬೆಂಬಲ ನೀಡಿದ್ದರು. ಅವರಿಗೆ ಪಾಠ ಕಲಿಸಲು ನಿರ್ಧರಿಸಿದ ಹುಮಾಯೂನ್‌ನು ಖ್ವಾಜಾ ಜಹಾನ್ ಮತ್ತು ನಿಜಾಮ್- ಉಲ್-ಮುಲ್ಕ್ ನೇತೃತ್ವದಲ್ಲಿ ಸೈನ್ಯವನ್ನು ದೇವರಕೊಂಡಕ್ಕೆ ಕಳುಹಿಸಿದ. ಜೊತೆಗೆ ಸ್ವತಃ ಸೈನ್ಯದ ತುಕಡಿಯೊಂದಿಗೆ ವಾರಂಗಲ್‌ನಲ್ಲಿ ಬಿಡಾರ ಹೂಡಿದ. ಅದುವರೆಗೆ ನಡೆದಿದ್ದ ಹಲವು ಕದನಗಳಲ್ಲಿ ಖ್ವಾಜಾ ಜಹಾನ್‌ನೇ ಮೇಲುಗೈ ಸಾಧಿಸಿದ್ದ. ಸುತ್ತ ದಟ್ಟವಾದ ಕಾಡು ಮತ್ತು ಎತ್ತರದ ಬೆಟ್ಟದ ಮೇಲೆ ನಿರ್ಮಿಸಲಾಗಿದ್ದ ದೇವರಕೊಂಡದ ಕೋಟೆಯು ಅಬೇಧ್ಯ ಕೋಟೆಗಳಲ್ಲಿ ಒಂದಾಗಿತ್ತು. ಅವರ ಸುತ್ತ ಮುತ್ತಿಗೆ ಹಾಕುವುದು ಕಷ್ಟದ ಕೆಲಸವೇ ಆಗಿತ್ತು. ಈ ಸಲ ತೆಲಂಗಾಣದ ಜನ ಒರಿಸ್ಸಾದ ಅರಸನಿಗೆ ಸಹಾಯಹಸ್ತ ಚಾಚುವಂತೆ ಕೋರಿ ಪತ್ರ ಬರೆದಿದ್ದರು. ಹಾಗೆಯೇ ಸಹಾಯ ನೀಡಿದರೆ ಅಪಾರ ಪ್ರಮಾಣದ ಹಣ ಮತ್ತು ಬೆಲೆಬಾಳುವ ಆನೆಗಳನ್ನು ನೀಡುವುದಾಗಿಯೂ ಪತ್ರದಲ್ಲಿ ತಿಳಿಸಲಾಗಿತ್ತು. ತೆಲಂಗಾಣದ ಪತ್ರಕ್ಕೆ ಪ್ರತಿಕ್ರಿಯಿಸಿದ ಒರಿಸ್ಸಾದ ದೊರೆ ತನ್ನ ಸೈನ್ಯ ಕಳುಹಿಸುವುದಾಗಿ ಭರವಸೆ ನೀಡಿದ್ದ. ಬಹಮನಿ ಸೈನ್ಯ ಮುತ್ತಿಗೆ ಹಾಕಿದ್ದರೂ ಕೋಟೆಯೊಳಗೆ ಜನ ಒರಿಸ್ಸಾದ ಸೈನ್ಯ ಬರುವ ನಿರೀಕ್ಷೆಯೊಂದಿಗೆ ಕಾದಿದ್ದರು.

ಅದೇ ದಿನಗಳಲ್ಲಿ ನಿಜಾಮ್- ಉಲ್- ಮುಲ್ಕ್‌ನು ಕೋಟೆಗೆ ಹಾಕಿರುವ ಮುತ್ತಿಗೆಯನ್ನ ಸಡಲಿಸಿ ದೂರದ ಬೆಟ್ಟದ ಮೇಲೆ ಕಾದು ಕುಳಿತು ಒರಿಸ್ಸಾದ ಸೈನ್ಯ ಬಂದ ನಂತರ ದಾಳಿ ಆರಂಭಿಸುವ ಸಲಹೆ ನೀಡಿದ. ಆದರೆ, ಅದಕ್ಕೆ ಖ್ವಾಜಾ ಜಹಾನನು ಆಕ್ಷೇಪ ವ್ಯಕ್ತಪಡಿಸಿ ಮುತ್ತಿಗೆ ಮುಂದುವರೆಸುವುದೇ ಸೂಕ್ತ ಎಂಬ ನಿಲುವು ತಳೆದ. ಭಯದಿಂದ ಕೋಟೆಯೊಳಗಿನ ಜನ ಶರಣಾಗುವರೆಂಬ ಅಂದಾಜು ಅವನದಾಗಿತ್ತು. ಆದರೆ, ಮರುದಿನ ಒರಿಸ್ಸಾದ ಸೈನ್ಯ ಬರುತ್ತಿದ್ದಂತೆಯೇ ಕೋಟೆಯ ಬಾಗಿಲು ತೆರೆದು ಬಹಮನಿ ಸೈನ್ಯದ ಮೇಲೆ ದಾಳಿ ನಡೆಸಲು ಆರಂಭಿಸಿದರು. ಒಂದು ಕಡೆಯಿಂದ ಒರಿಸ್ಸಾ ಸೈನ್ಯದ ದಾಳಿ ಮತ್ತೊಂದೆಡೆ ತೆಲಂಗಾಣದ ಜನರ ದಾಳಿಯಿಂದ ಬಹಮನಿ ಸೈನ್ಯ ತತ್ತರಿಸಿ ಹೋಯಿತು. ಸೋಲುತ್ತಿದ್ದ ಸೈನ್ಯವನ್ನು ಬಿಟ್ಟು ಇಬ್ಬರೂ ಮುಖ್ಯಸ್ಥರು ಕಾಡಿನ ಮಧ್ಯೆ ತಲೆ ಮರೆಸಿಕೊಂಡು ಪರಾರಿಯಾದರು. 80 ಮೈಲು ದೂರದಲ್ಲಿನ ವಾರಂಗಲ್‌ನಲ್ಲಿ ಬೀಡುಬಿಟ್ಟಿದ್ದ ಹುಮಾಯೂನ್ ತನ್ನ ಸೈನ್ಯ ಸೋಲು ಅನುಭವಿಸಿದ್ದು ಕೇಳಿ ಸಿಟ್ಟಿನಿಂದ ಆರ್ಭಟಿಸತೊಡಗಿದ. ಸೋಲಿನ ಕಾರಣ ಕೇಳಿದಾಗ ಖ್ವಾಜಾ ಜಹಾನ್‌ನು ತನ್ನ ಜೀವ ಉಳಿಸಿಕೊಳ್ಳುವುದಕ್ಕಾಗಿ ನಿಜಾಮ್ ಉಲ್- ಮುಲ್ಕ್ ತನ್ನ ಮಾತು ಕೇಳಲಿಲ್ಲ ಎಂದು ಸುಳ್ಳು ಹೇಳಿದ. ಸಿಟ್ಟಿನಿಂದ ಕುದಿಯುತ್ತಿದ್ದ ಅರಸ

ವಿಚಾರಣೆ ಕೂಡ ನಡೆಸಿದ ನಿಜಾಮ್ ಉಲ್ ಮುಲ್ಕ್‌ನಿಗೆ ಮರಣ ದಂಡನೆ ವಿಧಿಸಿದ. ಅವನ ಬಂಧುಗಳು ಮತ್ತು ಆಪ್ತರು ಮಾಳವಾದ ಕಡೆಗೆ ಪಲಾಯನ ಗೈದರು. ಖ್ವಾಜಾ ಜಹಾನ್‌ನನ್ನು ಕೂಡ ಸೆರೆಮನೆಗೆ ಹಾಕುವಂತೆ ಆದೇಶಿಸಿದ.

ಅಳಿದುಳಿದ ಸೈನ್ಯ ತೆಗೆದುಕೊಂಡ ದೇವರಕೊಂಡದ ಮೇಲೆ ದಾಳಿ ನಡೆಸಲು ಸಿದ್ಧತೆ ನಡೆಸುತ್ತಿರುವಾಗಲೇ ರಾಜಧಾನಿ ಬೀದರ್‌ನಿಂದ ಬಂದ ಆಘಾತಕಾರಿ ಸುದ್ದಿ ಅವನನ್ನು ವಿಹ್ವಲನನ್ನಾಗಿಸಿತು. ಸೆರೆಯಲ್ಲಿ ಇರಿಸಲಾಗಿದ್ದ ಕಣ್ಣು ಕಳೆದುಕೊಂಡಿದ್ದ ಯುವರಾಜ ಹಸನಖಾನ್ ಮತ್ತು ಹಬೀಬುಲ್ಲಾ ಖಾಂದೇಶ್‌ಕ್ಕೆ ಪರಾರಿಯಾಗಿರುವ ಸಂಗತಿ ಕೇಳಿ ಅರಸನಿಗೆ ಎಲ್ಲಿಲ್ಲದ ಕೋಪ ಉಕ್ಕಿ ಬಂತು. ತಾಳ್ಮೆ ಕಳೆದು ಕೊಂಡ ಹುಮಾಯೂನ್ ತನ್ನ ಮಂತ್ರಿ ಮಹಮೂದ್ ಗವಾನ್‌ನಿಗೆ ತೆಲಂಗಾಣದ ಮೇಲೆ ದಾಳಿ ನಡೆಸುವಂತೆ ಸೂಚಿಸಿ ಬೀದರ್‌ಗೆ ಹೊರಟು ನಿಂತ. ಬೀದರ್ ತಲುಪಿದ ಅರಸನ ಕೋಪಕ್ಕೆ ಮೇರೆಯೇ ಇರಲಿಲ್ಲ.

## ಬೀದರ್‌ನಲ್ಲಿ ನಡೆದ ಘಟನೆ:

ಯುವರಾಜ ಹಸನ್‌ಖಾನ್‌ನನ್ನು ಸಿಂಹಾಸನದ ಮೇಲೆ ಕೂಡಿಸುವ ಪಿತೂರಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹಬೀಬುಲ್ಲಾನನ್ನು ಸೆರೆಮನೆಗೆ ಕಳುಹಿಸಲಾಗಿತ್ತು. ಕಿರ್ಮಾನ್‌ನ ಸಂತ ನಿಯಾಮುತ್‌ಉಲ್ಲಾ ಕಿರ್ಮಾನಿಯ ಮೊಮ್ಮಗನಾಗಿದ್ದ ಕಾರಣಕ್ಕಾಗಿ ಹಬೀಬುಲ್ಲಾ ಬಗ್ಗೆ ಜನರಿಗೆ ವಿಶೇಷ ಗೌರವ–ಭಕ್ತಿ ಇತ್ತು. ಹುಮಾಯೂನ್ ಬಂಡೆದ್ದ ಸಿಕಂದರ್‌ಖಾನ್‌ನ ಹುಟ್ಟಡಿಸಲು ನವಲಗುಂದದ ಕಡೆಗೆ ಪ್ರಯಾಣ ಬೆಳೆಸುತ್ತಿದ್ದಂತೆಯೇ ಏಳು ಜನ ಹಬೀಬುಲ್ಲಾನ ಬೆಂಬಲಿಗರು ಎಷ್ಟೇ ಕಷ್ಟವಾದರೂ ಸೆರೆಯಿಂದ ಬಿಡಿಸಲು ನಿರ್ಧರಿಸಿದರು. ಅದಕ್ಕಾಗಿ ಅಲ್ಲಾವುದ್ದೀನ್ ಶಹಾನ ಬೆಂಗಾವಲು ಪಡೆಯಲ್ಲಿದ್ದ ಟರ್ಕಿಯ ಗುಲಾಮ ಯುಸೂಫ್‌ನ ನೆರವು ಕೋರಿದರು. ತನ್ನ ಪ್ರಾಮಾಣಿಕತೆ, ರಾಜನಿಷ್ಠೆ, ಒಳ್ಳೆಯತನದಿಂದ ಹೆಸರಾಗಿದ್ದ ಯುಸೂಫ್ ಗುರುವಿನ ಸ್ಥಾನದಲ್ಲಿದ್ದ ಹಬೀಬುಲ್ಲಾನ ಮೇಲಿನ ಗೌರವದಿಂದ ಸಹಾಯ ಮಾಡಲು ಮುಂದಾದ. ಅದಕ್ಕಾಗಿ ಯುಸೂಫ್ ಕೆಲವು ಅಧಿಕಾರಿಗಳಿಗೆ ಹಣದ ಆಮಿಷವೊಡ್ಡಿದ. ಕೇವಲ ಒಂದೇ ರಾತ್ರಿ ಸೆರೆಮನೆಯ ಉಸ್ತುವಾರಿ ನೋಡಿಕೊಳ್ಳುವುದಕ್ಕಾಗಿ 12 ಜನ ಕುದುರೆ ಸವಾರರು ಮಾತ್ರ ಇರುವಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾದ. ಸಂಚು ಜಾರಿಗೆ ತರುವ ದಿನ ಸಂಜೆ ಕೆಲವು ಗೆಳೆಯರೊಂದಿಗೆ ಹರಟುತ್ತ ಪ್ರಮುಖ ಕೈದಿಗಳನ್ನು ಇರಿಸಲಾಗಿದ್ದ ಸೆರೆಮನೆಯ ಕಡೆಗೆ ನಡೆದ. ಮೊದಲೇ

ಸೂಚಿಸಿದ್ದಂತೆ ಬಹುತೇಕ ಕಾವಲುಗಾರರು ಗೈರುಹಾಜರಾಗಿದ್ದರು. ಇದ್ದ ಕೆಲವರು ಯುಸೂಫ್ ಜೈಲುಕಟ್ಟಡದೊಳಕ್ಕೆ ಪ್ರವೇಶಿಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಕೆಲವು ಕೈದಿಗಳಿಗೆ ಕಣ್ಣು ಕೀಳಿಸುವ ಶಿಕ್ಷೆ ನೀಡುವ ಉದ್ದೇಶದಿಂದ ಅರಸು ತನ್ನನ್ನು ಕಳುಹಿಸಿರುವುದಾಗಿ ಯುಸೂಫ್ ತಿಳಿಸಿದ. ಜೊತೆಗೆ ತನ್ನ ಬಳಿಯಿದ್ದ ನಕಲಿ ಪರವಾನಗಿ ಪತ್ರ ತೋರಿಸಿ ಮೊದಲ ಗೇಟಿನಿಂದ ಹಾಯ್ದು ಒಳನಡೆದ. ಆದರೆ, ಎರಡನೇ ಗೇಟ್‌ನಲ್ಲಿದ್ದ ಕಾವಲುಗಾರ ಯುಸೂಫ್‌ನನ್ನು ಒಳಗಡೆ ಬಿಡುವುದು ಸಾಧ್ಯವೇ ಇಲ್ಲ ಎಂದು ತಕರಾರು ತೆಗೆದ. ನಕಲಿ ಪತ್ರ ತೋರಿಸಿದರೂ ಸೆರೆಮನೆಯೊಳಕ್ಕೆ ಪ್ರವೇಶಿಸುವುದಕ್ಕೆ 'ಕೋತ್ವಾಲ್‌ನ ಪತ್ರ' ಬೇಕು ಎಂದು ಹೇಳಿದ. ಆಗ ತನ್ನ ಬಳಿಯಿದ್ದ ಖಡ್ಗದಿಂದ ತಿವಿದು ಕಾವಲುಗಾರರನನ್ನು ಸಾಯಿಸಿ ಒಳಪ್ರವೇಶಿಸಿದ ಯುಸೂಫ್ ರಾಜಕೈದಿಗಳಿದ್ದ ಕಡೆಗೆ ಧಾವಿಸಿದ. ಅಲ್ಲಿ ಶಹಾ ಹಬೀಬುಲ್ಲಾ ಮತ್ತು ಯುವರಾಜ ಹಸನ್‌ಖಾನ್ ಹಾಗೂ ಮತ್ತೊಬ್ಬ ಯುವರಾಜ ಯಾಹ್ಯಾಖಾನ್‌ರನ್ನು ಕಬ್ಬಿಣದ ಸರಪಳಿಯಿಂದ ಬಂಧಿಸಿಡಲಾಗಿತ್ತು. ತಕ್ಷಣ ಅವರನ್ನು ಸಂಕೋಲೆಗಳಿಂದ ಬಿಡಿಸಿ ಹೊರಗೆ ಕರೆದುಕೊಂಡು ಬಂದ. ಈ ಕಾರ್ಯದಲ್ಲಿ ಅರಸನ ಬಂಧುವಾಗಿದ್ದ ಜಲಾಲ್‌ಖಾನ್ ಬುಖಾರಿ ಕೂಡ ಯುಸೂಫ್‌ನಿಗೆ ಸಹಾಯ ಮಾಡಿದ. ಕೇವಲ ಗಣ್ಯ ಕೈದಿಗಳನ್ನು ಮಾತ್ರವಲ್ಲದೆ ಸೆರೆಯಲ್ಲಿರುವ ಎಲ್ಲ ಕೈದಿಗಳಿಗೆ ಪರಾರಿಯಾಗುವಂತೆ ಸೂಚಿಸಲಾಯಿತು. ಸುಮಾರು ಏಳು ಸಾವಿರ ಜನ ಕೈದಿಗಳು ಮುಕ್ತಿ ದೊರೆತ ಸಂಭ್ರಮದಲ್ಲಿ ಸೆರೆಯಿಂದ ಹೊರಗೋಡಿದರು.

ಇದೇ ಹೊತ್ತಿಗೆ ಎಚ್ಚೆತ್ತುಕೊಂಡ ಕೋತ್ವಾಲ್ ಅಪಾಯದ ಗಂಟೆ ಬಾರಿಸಿ ಕಾವಲುಗಾರರು ಎಚ್ಚರವಹಿಸುವಂತೆ ಸೂಚಿಸಿದ. ಹತಾಶರಾಗಿದ್ದ ಕೈದಿಗಳು ಕಾವಲುಗಾರರ ಮೇಲೆ ಕೈಗೆ ಸಿಕ್ಕ ಕಲ್ಲು ಮತ್ತಿತರ ವಸ್ತುಗಳನ್ನು ತೂರಲು ಆರಂಭಿಸಿದರು. ಕಾವಲುಗಾರರು ಅನಿವಾರ್ಯವಾಗಿ ಹಿಂದೆ ಸರಿಯಬೇಕಾಯಿತು. ರಾತ್ರಿ ಕಗ್ಗತ್ತಲೆಯಲ್ಲಿ ಕೈದಿಗಳು ದಿಕ್ಕಾಪಾಲಾಗಿ ಓಡಿ ತಮ್ಮ ಆಪ್ತರ ಹತ್ತಿರ ಆಶ್ರಯ ಪಡೆದರು. ಆದರೆ, ಕೋತ್ವಾಲ್‌ನ ಕೈಯಿಂದ ತಪ್ಪಿಸಿಕೊಳ್ಳುವುದು ಎಂಬತ್ತು ವರ್ಷ ವಯಸ್ಸಿನ ಜಲಾಲ್‌ಖಾನ್ ಮತ್ತು ಯುವರಾಜ ಯಾಹ್ಯಾಖಾನ್ ಅವರಿಂದ ಸಾಧ್ಯವಾಗಲಿಲ್ಲ. ಪರಾರಿಯಾದ ಕೆಲವೇ ಗಂಟೆಗಳಲ್ಲಿ ಅವರಿಬ್ಬರೂ ಸೆರೆ ಸಿಕ್ಕರು. ಅವರನ್ನು ತಕ್ಷಣವೇ ಕೊಂದು ಹಾಕಲಾಯಿತು. ಯುವರಾಜ ಹಸನ್‌ಖಾನ್ ಮತ್ತು ಶಹಾ ಹಬೀಬುಲ್ಲಾ ಕ್ಷೌರಿಕನೊಬ್ಬನ ಮನೆಯಲ್ಲಿ ಆಶ್ರಯ ಪಡೆದರು. ಗಡ್ಡ ಮೀಸೆ ಬೋಳಿಸಿಕೊಂಡು ಭಿಕ್ಷುಕರ ವೇಷದಲ್ಲಿ ನಗರದಿಂದ ಮಾತ್ರವಲ್ಲದೇ ರಾಜ್ಯದಿಂದಲೇ ಹೊರಟು ಹೋಗುವಂತೆ ಸೂಚಿಸಲಾಯಿತು.

ಹೊರಗಡೆಯಿಂದ ಸೈನ್ಯ ಕಲೆಹಾಕಿಕೊಂಡು ದಾಳಿ ನಡೆಸಿದರೆ ಒಳಗಿನಿಂದ ಬೆಂಬಲ ನೀಡುವುದಾಗಿಯೂ ಕೆಲವರು ಭರವಸೆ ನೀಡಿದರು. ಶಹಾ ಹಬೀಬುಲ್ಲಾ ಈ ಯೋಚನೆಗೆ ಅನುಮೋದನೆ ನೀಡಿದ. ಅವರಿಬ್ಬರೂ ಬೀದರ್ ತೊರೆದರು. ಯುವರಾಜ ಹಸನ್‌ಖಾನ್ ರಾಜ್ಯದಾದ್ಯಂತ ಹರಡಿದ್ದ ತನ್ನ ಬೆಂಬಲಿಗರನ್ನು ಹುಮಾಯೂನ್‌ನ ಆಡಳಿತದಿಂದ ಬೇಸತ್ತವರನ್ನೆಲ್ಲ ಒಂದೆಡೆ ಸೇರಿಸಲು ಆರಂಭಿಸಿದ. ಯುಸೂಫ್ ಮುಂಚೂಣಿಯಲ್ಲಿ ನಿಂತು ಸೈನ್ಯ ಕಲೆಹಾಕಿದ. ಕೆಲವೇ ದಿನಗಳಲ್ಲಿ ಮೂರು ಸಾವಿರ ಕುದುರೆ ಐದು ಸಾವಿರ ಪದಾತಿದಳದ ಸೈನ್ಯ ಕಟ್ಟುವುದು ಸಾಧ್ಯವಾಯಿತು. ತನ್ನ ಸೈನ್ಯದ ಜೊತೆಗೆ ಬೀದರ್ ನಗರದಿಂದ ಕೇವಲ ಆರು ಮೈಲು ದೂರದಲ್ಲಿ ಕಮಠಾಣದಲ್ಲಿ ಬಿಡಾರ ಹೂಡಿದ. ಬೀದರ್ ಮೇಲೆ ದಾಳಿ ನಡೆಸಿ ವಶಪಡಿಸಿಕೊಳ್ಳುವ ಉದ್ದೇಶ ಯುವರಾಜನದಾಗಿತ್ತು. ಆದರೆ, ಬೀದರ್‌ನ ಕೋಟೆಯನ್ನು ವಶಪಡಿಸಿಕೊಳ್ಳುವುದು ಅಷ್ಟೊಂದು ಸುಲಭದ ಮಾತಾಗಿರಲಿಲ್ಲ. ಹಸನ್ ಅಂದುಕೊಂಡದ್ದಕ್ಕಿಂತ ಅಥವಾ ಅಂದಾಜು ಮಾಡಿದ್ದಕ್ಕಿಂತ ಹೆಚ್ಚಿನ ಕಠಿಣವಾದ ಕಾರ್ಯ ಅದಾಗಿತ್ತು. ಆದ್ದರಿಂದ ಮತ್ತಷ್ಟು ಸೈನ್ಯ ಕಲೆಹಾಕಲು ನಿರ್ಧರಿಸಿ ಕಾರ್ಯನಿರತನಾದ. ಇದು ನಡೆಯುತ್ತಿರುವಾಗಲೇ ಅರಸ ಹುಮಾಯೂನ್ ನಗರಕ್ಕೆ ಆಗಮಿಸಿದ. ನಂತರದ್ದೆಲ್ಲ ರಕ್ತಸಿಕ್ತ ಅಧ್ಯಾಯ.

ರಾಜಧಾನಿಗೆ ಬರುತ್ತಿದ್ದಂತೆಯೇ ಹುಮಾಯೂನ್ ಮಾಡಿದ ಮೊದಲ ಕೆಲಸವೆಂದರೆ ಬೇಜವಾಬ್ದಾರಿಯಿಂದ ವರ್ತಿಸಿದ ಕಾವಲುಗಾರರ ಮೇಲೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಂಡದ್ದು. ಸುಮಾರು ಎರಡು ಸಾವಿರದಷ್ಟು ಸಂಖ್ಯೆಯ ಕಾವಲುಗಾರರನ್ನು ಹಿಂಸೆಗಳಿಗೆ ಗುರಿ ಪಡಿಸಲಾಯಿತು. ಅಥವಾ ಸಾಯಿಸಲಾಯಿತು. ಕೋತ್ವಾಲ್‌ನನ್ನು ವಶಕ್ಕೆ ತೆಗೆದುಕೊಳ್ಳುವಂತೆ ಸೂಚಿಸಿದ ಅರಸ ಅವನನ್ನು ಕಬ್ಬಿಣದ ಪಂಜರದಲ್ಲಿ ಇಡಿಸಿದ. ಕೋತ್ವಾಲ್‌ನಿಗೆ ಹುಮಾಯೂನ್ ನೀಡಿದ ಶಿಕ್ಷೆ ಯಾವ ವೈರಿಗೂ ಬೇಡವಾದದ್ದಾಗಿತ್ತು. ಕೋತ್ವಾಲ್ ಪ್ರತಿದಿನ ತನ್ನ ದೇಹದ ಒಂದು ಭಾಗವನ್ನು ಕತ್ತರಿಸಿ, ಅದನ್ನು ಬೇಯಿಸಿ ತಾನೇ ತಿನ್ನುವ ಅಮಾನುಷ ಶಿಕ್ಷೆಯನ್ನು ಅರಸ ನೀಡಿದ. ಸಾವು ಒಂದೇ ಕೋತ್ವಾಲ್‌ನಿಗೆ ಮುಕ್ತಿ ಕಲ್ಪಿಸುವುದಕ್ಕೆ ಸಾಧ್ಯವಿತ್ತು. ನಾಲ್ಕಾರು ದಿನಗಳಲ್ಲಿ ಕೋತ್ವಾಲ್ ಕೊನೆಯುಸಿರೆಳೆದ.

ಈ ಮಧ್ಯೆ ಎಂಟು ಸಾವಿರ ಕುದುರೆಗಳು ಮತ್ತು ಪದಾತಿದಳವನ್ನು ಒಳಗೊಂಡ ಸೈನ್ಯವನ್ನು ಯುವರಾಜ ಹಸನ್‌ನಿಗೆ ಬುದ್ಧಿ ಕಲಿಸಲು ಕಳುಹಿಸಿಕೊಟ್ಟ. ಒಂದು ಹಂತದಲ್ಲಿ ಯುವರಾಜನ ಸೈನ್ಯದ ಕೈ ಮೇಲಾಗಿತ್ತು. ಈ ಹಂತದಲ್ಲಿ ಮಹಿಳೆಯರು ಮತ್ತು ಮಕ್ಕಳೂ ಸೇರಿದಂತೆ ಹಸನ್‌ನ ಸೈನ್ಯದಲ್ಲಿದ್ದ ಸೈನ್ಯದ ಕುಟುಂಬದ ಸದಸ್ಯರನ್ನು ಹುಮಾಯೂನ್ ವಶಕ್ಕೆ ತೆಗೆದುಕೊಂಡ.

ಹಸನ್‌ನ ಜೊತೆ ತೊರೆಯದಿದ್ದರೆ ಬಂಧಿತರನ್ನೆಲ್ಲ ಸಾಯಿಸುವುದಾಗಿ ಬೆದರಿಕೆ ಹಾಕಿದ. ಅರಸನ ಮಿತಿಮೀರಿದ ಕೋಪದ ಬಗ್ಗೆ ಕೇಳಿದ ಸೈನಿಕರು ಭಯ ಭೀತರಾದರು. ನಂತರದ ಕದನದಲ್ಲಿ ಯುವರಾಜ ಸಂಪೂರ್ಣ ಸೋಲು ಅನುಭವಿಸಬೇಕಾಯಿತು. ತೀವ್ರ ಪ್ರತಿರೋಧ ಒಡ್ಡಿದ ಹಸನ್ ಹತಾಶನಾಗಿ ಜೀವ ಉಳಿಸಿಕೊಳ್ಳಲು ಹೆಣಗಾಡಬೇಕಾದ ಸ್ಥಿತಿ ಬಂತು. ರಣರಂಗದಿಂದ ಹೊರ ನಡೆದ ಹಸನ್ ಹಂಪಿಗೆ ತೆರಳಿ ವಿಜಯನಗರ ಅರಸರ ಬಳಿ ಆಶ್ರಯ ಪಡೆಯಲು ನಿರ್ಧರಿಸಿದ. ತಲೆ ತಪ್ಪಿಸಿಕೊಂಡು ಓಡಿದ ಹಸನ್ ಮತ್ತು ಎಂಟು ನೂರು ಕುದುರೆಗಳಿದ್ದ ಬೆಂಬಲಿಗರ ಪಡೆ ಬಿಜಾಪುರದ ಕೋಟೆ ಹತ್ತಿರ ಬಂದಿತು. ಆಗ ಕೋಟೆಯ ಆಡಳಿತ ನೋಡಿಕೊಳ್ಳುತ್ತಿದ್ದ ಸಿರಾಜ್‌ಖಾನ ಜುನ್ನೈದಿ ಬಿಜಾಪುರಕ್ಕೆ ಬರುವಂತೆ ಆಹ್ವಾನ ನೀಡಿ ಸಂದೇಶ ಕಳುಹಿಸಿದ. ಬಿಜಾಪುರಕ್ಕೆ ಬಂದರೆ ಕೋಟೆ ಮಾತ್ರವಲ್ಲದೇ ತನ್ನ ಅಧೀನದಲ್ಲಿ ಇರುವ ಎಲ್ಲ ಪ್ರದೇಶವನ್ನು ಯುವರಾಜನಿಗೆ ಬಿಟ್ಟುಕೊಡುವುದಾಗಿಯೂ ಪತ್ರದಲ್ಲಿ ತಿಳಿಸಿದ್ದ. ಶಹಾ ಹಬೀಬುಲ್ಲಾ ಮತ್ತು ಯುಸೂಫ್‌ನ ಸಲಹೆಯ ಮೇರೆಗೆ ಹಸನ್ ಬಿಜಾಪುರದ ಕೋಟೆಯನ್ನು ಪ್ರವೇಶಿಸಿದ. ಆಗ ಅದು ಮಣ್ಣಿನಿಂದ ನಿರ್ಮಿಸಲಾಗಿದ್ದ ಪುಟ್ಟ ಕೋಟೆಯಾಗಿತ್ತು. ಸಿರಾಜ್‌ಖಾನ್ ಯುವರಾಜನ ಸೈನ್ಯವನ್ನು ಪ್ರೀತಿ ವಿಶ್ವಾಸದಿಂದ ವರ್ತಿಸಿದ. ತೋರಿಕೆಯ ಪ್ರೀತಿಯನ್ನು ಅರಿಯದ ಹಸನ್ ತಮಗೆ ಆಶ್ರಯ ದೊರಕಿದ್ದಕ್ಕೆ ನಿಟ್ಟುಸಿರು ಬಿಟ್ಟ. ಆದರೆ, ಅವರ ಸಮಸ್ಯೆ- ದುರವಸ್ಥೆ ಅಂತ್ಯ ಕಾಣುವ ದಿನಗಳು ಬಂದಿರಲಿಲ್ಲ. ರಾತ್ರಿಯಾಗುತ್ತಿದ್ದಂತೆಯೇ ಸಿರಾಜ್ ತನ್ನ ಸೈನಿಕರೊಂದಿಗೆ ಯುವರಾಜ ಉಳಿದ ಕೊಂಡಿದ್ದ ಪ್ರದೇಶವನ್ನು ಸುತ್ತುವರೆದ. ಎರಡನೇ ದಿನ ತನ್ನ ಎಲ್ಲ ಅತಿಥಿಗಳನ್ನು ವಶಕ್ಕೆ ತೆಗೆದುಕೊಳ್ಳುವಲ್ಲಿ ಸಿರಾಜ್ ಯಶಸ್ವಿಯಾದ. ತೀವ್ರ ಪ್ರತಿರೋಧ ತೋರಿಸಿದ ಶಹಾ ಹಬೀಬುಲ್ಲಾ ಕೊನೆಯುಸಿರೆಳೆಯ ಬೇಕಾಯಿತು. ಹಸನ್‌ಖಾನ್, ಯುಸೂಫ್ ಮತ್ತು ಬೆಂಬಲಿಗರು ಮಾತ್ರವಲ್ಲದೆ ಟೆಂಟ್ ಹಾಕುವವರು, ನೀರು ತರುವವರು, ಕಸ ಬಳಿಯುವವರು ಸೇರಿದಂತೆ ಯಾರೊಬ್ಬರನ್ನೂ ಬಿಡದ ಬಂಧಿಸಲಾಯಿತು. ಅವರನ್ನೆಲ್ಲ ಬಿಗಿ ಬಂದೋಬಸ್ತ್‌ನಲ್ಲಿ ಬೀದರ್‌ಗೆ ಕಳುಹಿಸಲಾಯಿತು.

ಅರಸ ಹುಮಾಯೂನ್‌ನ ಕ್ರೂರ ಯೋಚನೆಗಳು ಅವನ ವಿವೇಚನೆಯನ್ನು ಹಿಂದಿಕ್ಕಿದ್ದವು. ಕಂಡು ಕೇಳರಿಯದ ಹಿಂಸೆಯ ವಿಧಾನಗಳನ್ನು ಹುಮಾಯೂನ್ ಅನುಸರಿಸ ತೊಡಗಿದ. ಬಹುತೇಕ ಹುಚ್ಚನಂತೆ ವರ್ತಿಸತೊಡಗಿದ್ದ ಹುಮಾಯೂನ್‌ನಿಗೆ ಎಲ್ಲರ ಮೇಲೂ ಅನುಮಾನ ಶಂಕೆಗಳು ಕಾಣಿಸತೊಡಗಿದ್ದವು. ನಂಬಿಗಸ್ಥರೇ ಮೋಸ ಮಾಡಿದ್ದು ನೋಡಿದ್ದ ಅವನಿಗೆ ಅದನ್ನು ಜೀರ್ಣಿಸಿಕೊಳ್ಳಲು

ಆಗಲಿಲ್ಲ. ನಗರದ ಪ್ರಮುಖ ಚೌಕ ಮತ್ತು ಮಾರುಕಟ್ಟೆ ಪ್ರದೇಶಗಳನ್ನು ಶಿಕ್ಷೆ ವಿಧಿಸುವ ಸ್ಥಳಗಳನ್ನಾಗಿ ಆರಿಸಿದ. ಅಲ್ಲಿ ಕುದಿವ ನೀರು ಮತ್ತು ಕಾಯಿಸಿದ ಎಣ್ಣೆಗಳನ್ನು ತುಂಬಿದ ಬೃಹತ್ ಪಾತ್ರೆಗಳನ್ನು ಇರಿಸಿದ. ಹಿಂಸಿಸುವುದಕ್ಕಾಗಿ ಕಾದ ಎಣ್ಣೆ ಮತ್ತು ಬಿಸಿ ನೀರು ಚೆಲ್ಲುವ ಶಿಕ್ಷೆ ನೀಡಿದ. ಅರಮನೆಯ ಬಾಲ್ಕನಿಯಲ್ಲಿ ಕುಳಿತು ನೋಡಿದರೆ ಜನರು ಅನುಭವಿಸುವ ಸಂಕಟ– ನೋವು ಕಾಣಿಸುವಂತೆ ವ್ಯವಸ್ಥೆ ಮಾಡಿದ್ದ. ಸುತ್ತ ಆವರಣ ಕಟ್ಟಿದ ಬಯಲಿನಲ್ಲಿ ಕ್ರೂರ ಕಾಡು ಮೃಗಗಳು ಮತ್ತು ಆನೆಗಳನ್ನು ಬಿಟ್ಟು ಅವು ಜನರ ಜೀವದ ಜೊತೆ ಆಟ ಆಡುವುದನ್ನು ನೋಡುತ್ತಿದ್ದ. ಉದ್ರಿಕ್ತನಾದ ಅವನ ಕೋಪಕ್ಕೆ ಬಲಿಯಾದ ಮೊದಲಿಗ ಎಂದರೆ ಅವನ ಸಹೋದರ ಹಸನ್. ಬಯಲಿನಲ್ಲಿ ಹಸನ್‌ನನ್ನು ಹಸಿದ ಹುಲಿಯ ಎದುರು ಬಿಟ್ಟ. ಕೆಲವೇ ಕ್ಷಣಗಳಲ್ಲಿ ಹುಲಿ ಹಸನ್‌ನನ್ನು ಚಿಂದಿ ಮಾಡಿಬಟ್ಟಿತು. ಯುಸೂಫ್ ಮತ್ತವನ ಏಳು ಜನ ಸಹಚರರ ತಲೆ ಕಡಿಯಲಾಯಿತು. ಅವರ ಕುಟುಂಬದ ಸದಸ್ಯರನ್ನು ಅಮಾಯಕ ಮಹಿಳೆಯರೂ ಅರಸನ ಶಿಕ್ಷೆಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಹೆಂಗಳೆಯರನ್ನು ಮನೆಯಿಂದ ಹೊರಗೆಳೆದು ತಂದು ಸಾರ್ವಜನಿಕರ ಸಮ್ಮುಖದಲ್ಲಿಯೇ ಮಾನಭಂಗ ಮಾಡಲಾಯಿತು. ಮಹಿಳೆಯರು ಮತ್ತು ಪುರುಷರನ್ನು ಹಿಂಸಿಸುವುದಕ್ಕಾಗಿ ಹುಮಾಯೂನ್ ಹುಟ್ಟು ಹಾಕಿದ ಹಿಂಸೆಯ ಶೋಧಗಳು ಅತ್ಯಂತ ಕ್ರೂರಿ ರಾಕ್ಷಸನ ಕಲ್ಪನೆಯಲ್ಲಿ ಹುಟ್ಟುವುದಕ್ಕಿಂತ ಭಯಾನಕವಾಗಿದ್ದವು. ಸುಮಾರು ಏಳು ಸಾವಿರ ಅರಸನ ಕೆಂಗಣ್ಣಿಗೆ ಗುರಿಯಾದರು. ಪಿತೂರಿಯಲ್ಲಿ ಭಾಗಿಯಾಗಿದ್ದ ವ್ಯಕ್ತಿಗಳ ದೂರದ ಸಂಬಂಧಿಗಳು ಕೂಡ ಅರಸನ ಶಿಕ್ಷೆಯಿಂದ ತಪ್ಪಿಸಿಕೊಳ್ಳಲಿಲ್ಲ. ಅಡುಗೆ ಮಾಡುವವರು, ಸೇವಕರು, ಮನೆಗೆಲಸದವರನ್ನೆಲ್ಲ ಸಾಯಿಸಲಾಯಿತು. ಕೆಲವರು ಖಡ್ಗದ ಮೊನೆಯ ತಿವಿತದಿಂದ ಮೃತಪಟ್ಟರೆ, ಕೆಲವರನ್ನು ಕಾಡು ಮೃಗಗಳು ತುಂಡು ತುಂಡಾಗಿ ಕತ್ತರಿಸಿದವು. ಮತ್ತೆ ಕೆಲವರು ಬಿಸಿನೀರು, ಕಾದೆಣ್ಣೆಗೆ ಬಲಿಯಾದರು. ಬಂಡೆಳುವುದಕ್ಕೆ ಯಾರೂ ಉಳಿಯಬಾರದು ಎಂಬ ಯೋಚನೆ ಅರಸನದಾಗಿತ್ತು. ಹಸನ್ ಮತ್ತವನ ಬೆಂಬಲಿಗರು ಸೆರೆಮನೆಯಿಂದ ತಪ್ಪಿಸಿಕೊಂಡ ವರ್ಷವೇ ಅಂದರೆ 1460ರ ಆಗಸ್ಟ್‌ನಲ್ಲಿ ಈ ಕ್ರೂರ, ಅಮಾನವೀಯ ಘಟನೆಗಳು ನಡೆದವು.

ಲೇಖಕ ತಾರೀಖ್ ಮಹಮೂದ್ ಸಹಾಯ್ ಹುಮಾಯೂನ್ ಕುರಿತು ಹೀಗೆ ಬರೆಯುತ್ತಾನೆ–

> ಹಸನ್‌ಖಾನ್ ಸೆರೆಯಿಂದ ತಪ್ಪಿಸಿಕೊಂಡ ಸುದ್ದಿಯನ್ನು ಕೇಳಿದ ತಕ್ಷಣ ಅರಸ ಉದ್ರಿಕ್ತನಾಗಿ ತನ್ನ ಮೈ ಪರಚಿಕೊಳ್ಳತೊಡಗಿದ. ಜೊತೆಗೆ ಧರಿಸಿದ್ದ ಪೋಷಾಕನ್ನೂ ಹರಿದು ಹಾಕಿದ. ತಲೆದಿಂಬನ್ನು ಬಾಯಿಂದ

ಕಡಿದು ಚಿಂದಿಚಿಂದಿ ಮಾಡಿದ. ಹಲ್ಲಿನಿಂದ ಕಡಿದ ಕಾರಣಕ್ಕಾಗಿ ತುಟಿಗಳಿಂದ ರಕ್ತ ಒಸರುತ್ತಿತ್ತು. ಹರಿದ ಚಿಂದಿ ಬಟ್ಟೆ ರಕ್ತಸಿಕ್ತವಾಗಿದ್ದವು. ಅವನು ಕೋಪದಲ್ಲಿ ಗಡಗಡ ನಡುಗುತ್ತಿದ್ದ. ಏನು ಮಾಡುತ್ತಿದ್ದೇನೆ ಎಂಬ ಅರಿವು ಅರಸನಿಗೆ ಇರಲೇ ಇಲ್ಲ.

ಹಸನ್‌ಖಾನ್‌ನ ತಪ್ಪಿಸಿಕೊಂಡ ಘಟನೆಯಿಂದ ಎಚ್ಚೆತ್ತ ಹುಮಾಯೂನ್ ವಿವಿಧ ಕೋಟೆಗಳಲ್ಲಿ ಬಂಧಿಗಳಾಗಿದ್ದ ರಾಜ ಕುಟುಂಬಕ್ಕೆ ಸೇರಿದ ಕೈದಿಗಳನ್ನೆಲ್ಲ ಸಾಯಿಸುವಂತೆ ಆದೇಶ ಮಾಡಿದ. ಅನುಮಾನಕ್ಕೆ ಆಸ್ಪದ ನೀಡುವಂತಹ ಯಾವೊಬ್ಬ ವ್ಯಕ್ತಿಯೂ ಉಳಿಯದಂತೆ ನೋಡಿದ. ಅಷ್ಟಕ್ಕೇ ಹುಮಾಯೂನ್‌ನ ಕೋಪ ತಣಿಯಲಿಲ್ಲ. ಅವನ ಆಸ್ಥಾನದಲ್ಲಿದ್ದ ನಿಷ್ಪಾಪಿಗಳು, ಅಮಾಯಕರೂ ಅರಸನ ಕೆಂಗಣ್ಣಿಗೆ ಗುರಿಯಾದರು. ಕಂಡು ಕೇಳರಿಯದ ಶಿಕ್ಷೆಗಳಿಗೆ ಬಲಿಯಾದರು. ಬಂಡಾಯಕ್ಕೆ ಕಾರಣರಾದ ಕುಟುಂಬದ ಸದಸ್ಯರನ್ನು ಬಂಧಿಸಿದ ಸಂದರ್ಭದಲ್ಲಿ ಮಹಿಳೆಯರ ಕಂಕುಳಲ್ಲಿದ್ದ ಕೂಸುಗಳನ್ನು ಕಿತ್ತು ಹಿಂಸೆ ನೀಡಿದ. ಹುಮಾಯೂನ್ ನಗರದಲ್ಲಿ ನಡೆಯುವ ಮದುವೆಯ ರಾತ್ರಿಯ ಮೆರವಣಿಗೆಗಳನ್ನು ಆಗಾಗ ತಡೆದು ನಿಲ್ಲಿಸುತ್ತಿದ್ದ. ವಧುಗಳನ್ನು ಕರೆತಂದು ಭೋಗಿಸಿ, ಮೀಸಲು ಮುರಿದು ಗಂಡನ ಕಡೆಗೆ ಕಳುಹಿಸುತ್ತಿದ್ದ. ಹಾಗೆಯೇ ಅರಮನೆಯಲ್ಲಿ ಕೆಲಸ ಮಾಡುತ್ತಿದ್ದ ಹೆಣ್ಣಾಳುಗಳನ್ನು ಸಣ್ಣಪುಟ್ಟ ತಪ್ಪುಗಳಿಗಾಗಿ ಸಾವಿನ ಶಿಕ್ಷೆ ನೀಡುತ್ತಿದ್ದ. ಅರಸನ ಸೇವೆಗೆ ನಿಯುಕ್ತರಾಗುವುದು ಎಂದರೆ ಆಳು ಭೀತರಾಗುತ್ತಿದ್ದರು. ಸಾವಿನ ಮನೆಗೆ ಹೋಗುತ್ತಿರುವಂತೆ ಸಿದ್ಧರಾಗಿ ಮನೆಯವರಿಗೆ ವಿದಾಯ ಹೇಳಿ ಬರುತ್ತಿದ್ದರು.

ಅಮಾಯಕ ಜನ ಎದುರಿಸುತ್ತಿರುವ ಸಂಕಟಗಳನ್ನು ನೋಡಲಾಗದೆ ದೇವರು ಕೊನೆಗೂ ಕರುಣೆಯಿಂದ ಕಣ್ತೆರೆದ. ಅರಸು ಅನಾರೋಗ್ಯದಿಂದ ಹಾಸಿಗೆ ಹಿಡಿದ. ಆಗ ಅರಸನಿಗೆ ತನ್ನ ಕೊನೆಯ ದಿನಗಳು ಸಮೀಪಿಸುತ್ತಿರುವ ಅನುಭವ ಆಗತೊಡಗಿತು. ತನ್ನ ಹಿರಿಯ ಮಗ ನಿಜಾಮ್ ಶಹಾನನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸಿದ. ಆಗ ನಿಜಾಮ್‌ನಿಗೆ ಕೇವಲ ಎಂಟು ವರ್ಷ ವಯಸ್ಸು. ಬೆರಾರ್‌ನಿಂದ ಖ್ವಾಜಾ ಜಹಾನ್ ಟರ್ಕ್ ಮತ್ತು ತೆಲಂಗಾಣದಿಂದ ಖ್ವಾಜಾ ಮಹಮೂದ್ ಗವಾನ್‌ನನ್ನು ಕರೆಸಿದ. ಅರಸು ಕಿರಿಯನಾಗಿರುವ ಕಾರಣಕ್ಕಾಗಿ ಆಡಳಿತ ನೋಡಿಕೊಳ್ಳುವುದಕ್ಕಾಗಿ 'ರಾಜಪ್ರತಿನಿಧಿ ಸಭೆ' ರಚಿಸುವ ಇರಾದೆ ವ್ಯಕಪಡಿಸಿದ. ಹಾಗೆಯೇ ಮಹಾರಾಣಿಯ ಅನುಮತಿ ಇಲ್ಲದೆ ಯಾವುದೇ

ನಿರ್ಧಾರ ತೆಗೆದುಕೊಳ್ಳದಿರುವಂತೆ ತಾಕೀತು ಮಾಡಿದ. 1461ರ ಸೆಪ್ಟೆಂಬರ್ 3ರಂದು ಕೊನೆಯುಸಿರೆಳೆದ. ಕೆಲವರು ಅರಸನ ಕ್ರೌರ್ಯಕ್ಕೆ ಸಾಕ್ಷಿಯಾಗಿದ್ದ ಅವನ ಮನೆಕೆಲಸದ ಹೆಣ್ಣಾಳು ಚಾಕುವಿನಿಂದ ಇರಿದು ಕೊಂದಳು ಎಂಬ ಮಾತು ಕೂಡ ಇದೆ. ಮೂರು ವರ್ಷ ಆರು ತಿಂಗಳು, ಆರು ದಿನಗಳ ಅವನ ಅರಸೊತ್ತಿಗೆ ಕೊನೆಗೊಂಡಿತು.

ಇದು ಫೆರಿಸ್ತಾನ ಬರವಣಿಗೆಯಲ್ಲಿ ದಾಖಲಾದದ್ದು. ಸಾರಾಸಾರ ವಿವೇಚನೆ ಮಾಡಿರುವ ಆಧುನಿಕ ಇತಿಹಾಸಕಾರರು ಇದಕ್ಕಿಂತ ಭಿನ್ನವಾದ ಹುಮಾಯೂನ್‌ನ ಚಿತ್ರ ನೀಡುತ್ತಾರೆ.

## ನಿಜಾಮುದ್ದೀನ್ ಅಹ್ಮದ್
(4 ಸೆಪ್ಟೆಂಬರ್1461 ರಿಂದ 30 ಜುಲೈ 1463)

ಹುಮಾಯೂನ್‌ನ ಸಾವಿನೊಂದಿಗೆ ಅವನ ಹಿರಿಯ ಮಗ ಎಂಟು ವರ್ಷ ವಯಸ್ಸಿನ ನಿಜಾಮುದ್ದೀನ್ ಅಧಿಕಾರಕ್ಕೆ ಬಂದ. ವೈಢೂರ್ಯಖಚಿತ ಸಿಂಹಾಸನ ಆರೋಹಣ ಮಾಡುವ ಸಂದರ್ಭದಲ್ಲಿ ಬಲಭಾಗದಲ್ಲಿ ಶಹಾ ಮುಹಿಬುಲ್ಲಾ ಹಾಗೂ ಸೈಯದುಸ್ಸತ್ ಹನೀಫ್‌ರ ಪುತ್ರ ಸೈಯದ್ ಶರೀಫ್ ಎಡಭಾಗದಲ್ಲಿ ಇದ್ದರು. ಹುಮಾಯೂನ್ ತನ್ನ ಸಾವಿನ ಮುನ್ಸೂಚನೆ ಅರಿತಿದ್ದನೇನೋ ಅನ್ನುವಂತೆ ಮೂವರು ಪ್ರಮುಖರನ್ನು ಒಳಗೊಂಡ ರಾಜ್ಯಪ್ರತಿನಿಧಿ ಸಭೆ ರಚಿಸಿದ್ದ. ಖ್ವಾಜಾ ಜಹಾನ್ ಟರ್ಕ್, ಮಲಿಕ್‌ತುಜಾರ್ ಮಹಮೂದ್ ಗಾವಾನ್ ಹಾಗೂ ಹುಮಾಯೂನ್‌ನ ಪತ್ನಿ ನರ್ಗಿಸ್ ಬೇಗಂ ಅವರನ್ನು ರಾಜ್ಯಪ್ರತಿನಿಧಿ ಸಭೆ ಒಳಗೊಂಡಿತ್ತು. ಅರಸನ ಸಿಂಹಾಸನ ಆರೋಹಣದ ತಕ್ಷಣ ಮಹಮೂದ್ ಗಾವಾನ್‌ನನ್ನು ಜುಮ್ಲಾರುಲ್ ಮುಲ್ಕ್, ವಜೀರ್ ಎ ಕುಲ್ ಎಂದು ನೇಮಕ ಮಾಡಿ ಬಿಜಾಪುರ ಪ್ರಾಂತ್ಯದ ರಾಜ್ಯಪಾಲನನ್ನಾಗಿ ಘೋಷಿಸಲಾಯಿತು. ಹಾಗೆಯೇ ಖ್ವಾಜಾ ಜಹಾನ್ ಟರ್ಕ್‌ನನ್ನು ವಕೀಲ್ ಎಂದು ನಿಯಮಿಸಿ ತೆಲಂಗಾಣ ಪ್ರಾಂತ್ಯದ ಆಡಳಿತದ ಜವಾಬ್ದಾರಿ ವಹಿಸಲಾಯಿತು. ಪ್ರತಿದಿನ ಅರಸು ಸಿಂಹಾಸನ ಮೇಲೆ ಕುಳಿತ ಸಂದರ್ಭದಲ್ಲಿ ಬಲಗಡೆಯಲ್ಲಿ ಖ್ವಾಜಾ ಜಹಾನ್ ಹಾಗೂ ಎಡಗಡೆಯಲ್ಲಿ ಮಹಮೂದ್ ಗಾವಾನ್ ಕುಳಿತುಕೊಳ್ಳುತ್ತಿದ್ದರು. ರಾಜ್ಯದ ನಿತ್ಯದ ಆಡಳಿತ ಬಗ್ಗೆ ತೆಗೆದುಕೊಳ್ಳುವ ನಿರ್ಣಯವನ್ನು ಚರ್ಚಿಸಿ ಮಾಭಾನು ಎಂಬ ವಿಶ್ವಾಸಾರ್ಹ ಮಹಿಳೆಯ ಮೂಲಕ ಮಹಾರಾಣಿಗೆ ಸಂದೇಶ ಕಳುಹಿಸಲಾಗುತ್ತಿತ್ತು. ರಾಣಿಯ

ಸೂಚನೆಯ ಮೇರೆಗೆ ರಾಜಕುಮಾರ ನಿಜಾಮುದ್ದೀನ್‌ನ ಮೂಲಕ ಆದೇಶ ಹೊರಡಿಸಲಾಗುತ್ತಿತ್ತು.

ಹುಮಾಯೂನ್‌ನ ಅವಧಿಯಲ್ಲಿ ಸೆರೆವಾಸಕ್ಕೆ ಕಳುಹಿಸಲಾದ ಬಹುತೇಕ ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಪ್ರತಿನಿಧಿ ಸಭೆಯು ನಿರ್ಧರಿಸಿತು. ಅದಕ್ಕೆ ಮಲಿಕ್‌ತುಜಾರ್ ಮಹಮೂದ್ ಗಾವಾನ್‌ನ ಉದಾರ ಧೋರಣೆಯೇ ಕಾರಣವಾಗಿತ್ತು. ಖ್ವಾಜಾ ಜಹಾನ್ ಟರ್ಕ್ ಮತ್ತು ಮಲಿಕ್‌ತುಜಾರ್ ಗಿಲಾನಿ ಇಬ್ಬರೂ ಹೊಸದಾಗಿ ಬಂದವರ ಸಾಲಿಗೆ ಸೇರಿದವರಾಗಿದ್ದರು. ಟರ್ಕ್‌ನ ಧೋರಣೆಯ ಬಗ್ಗೆ ರಾಣಿಗೆ ಬಹಳ ಬೇಗನೆ ಅಸಮಾಧಾನ ಉಂಟಾಯಿತು. ಗಾವಾನ್‌ನ ಹಾಗೆ ಅವನನ್ನು ಪ್ರಧಾನಿಯನ್ನಾಗಿ ಮಾಡಿದ ಹುಮಾಯೂನ್ ಕೂಡ ಅಫಾಕಿ ಮತ್ತು ದಖನಿಗಳ ನಡುವಿನ ಭಿನ್ನಾಭಿಪ್ರಾಯ ಕಡಿಮೆ ಮಾಡಲು ಪ್ರಯತ್ನಿಸಿದ್ದ. ಆದರೆ, ಅವರಿಬ್ಬರೂ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಲಿಲ್ಲ. ಸಾಮ್ರಾಜ್ಯದ ಆರಂಭದ ದಿನಗಳಿಂದಲೂ ತಮಗೆ ದೊರೆಯುತ್ತ ಬಂದಿದ್ದ ಆದ್ಯತೆ ಕಡಿಮೆಯಾದಂತೆ ಭಾವಿಸಿದ ಅಫಾಕಿಗಳಿಗೆ ಅಲಾವುದ್ದೀನ್‌ನ ಆಡಳಿತದ ಕೊನೆಯಲ್ಲಿ ಸಮಾಧಾನ ಉಂಟು ಮಾಡುವಂತಹ ಬೆಳವಣಿಗೆ ನಡೆದವು. ಹೊಸ ಸರ್ಕಾರದಲ್ಲಿ ಇಬ್ಬರು ಅಫಾಕಿಗಳು ಇರುವುದು ದಖನಿಗಳ ಅಸಮಾಧಾನ ಮುಂದುವರೆಯಲು ಕಾರಣವಾದವು.

ಬಾಲಕ ರಾಜನಾಗಿರುವುದರಿಂದ ಸಾಮ್ರಾಜ್ಯ ದುರ್ಬಲವಾಗಿದೆ ಎಂದು ಭಾವಿಸಿದ ನೆರೆಯ ದೊರೆಗಳು ಅದರ ಲಾಭ ಪಡೆಯಲು ನಿರ್ಧರಿಸಿದರು. ಮಹತ್ವಾಕಾಂಕ್ಷಿಯಾಗಿದ್ದ ಒರಿಸ್ಸಾದ ಕಪಿಲೇಶ್ವರನು ತೆಲಂಗಾಣದ ತನ್ನ ಸಹಚರರೊಡನೆ ಸೇರಿ ದಾಳಿ ನಡೆಸಿದನು. ಹುಮಾಯೂನ್ ಅವಧಿಯಲ್ಲಿಯೇ ಬಹಮನಿ ಸಾಮ್ರಾಜ್ಯದಿಂದ ವಾರ್ಷಿಕ ಕಪ್ಪ ಸ್ವೀಕರಿಸುತ್ತಿದ್ದ ರಾಜನು ಅದರ ಬಾಕಿ ಹಣ ನೀಡುವಂತೆ ಆಗ್ರಹಿಸಿದನು. ಖ್ವಾಜಾ ಜಹಾನ್ ಟರ್ಕ್‌ನ ನೇತೃತ್ವದ ಸೈನ್ಯದ ಜೊತೆಗೆ ರಾಜಕುಮಾರನನ್ನು ಕಳುಹಿಸಲು ನರ್ಗೀಸ್ ಬೇಗಂ ನಿರ್ಧರಿಸಿದಳು. ಪದಾತಿದಳ, ಕುದುರೆ ಮತ್ತು ಆನೆಗಳೊಂದಿಗಿನ ಸೈನ್ಯವು ಒರಿಸ್ಸಾ ಸೈನ್ಯದೊಂದಿಗೆ ಮುಖಾಮುಖಿಯಾಯಿತು. ಹುಮಾಯೂನ್‌ನ ಹಳೆಯ ಸ್ನೇಹಿತ ಹಾಗೂ ಭಾವನಾದ ಶಹಾ ಮುಹೀಬ್ ಅಲ್ಲಾನ ನೇತೃತ್ವದ ಸೈನ್ಯದೊಂದಿಗೆ ಮೊದಲ ಪ್ರತಿದಾಳಿ ನಡೆಸಲಾಯಿತು. ಮಧ್ಯಾಹ್ನದ ವರೆಗೆ ನಡೆದ ಕದನದಲ್ಲಿ ಒರಿಸ್ಸಾದ ಸೈನ್ಯ ಸೋಲನ್ನು ಒಪ್ಪಬೇಕಾಯಿತು. ಖ್ವಾಜಾ ಜಹಾನ್‌ನು ಐದು ಲಕ್ಷ ಬೆಳ್ಳಿನಾಣ್ಯಗಳ ಕಪ್ಪ ನೀಡುವ ಒತ್ತಾಯದ ಒಪ್ಪಂದ ಹೇರಿದನು.

ನಂತರದ ಸರದಿ ಮಾಳ್ವದ ದೊರೆ ಮಹಮೂದ್ ಖಿಲ್ಜಿಯದಾಗಿತ್ತು. ಮಾಳ್ವದಲ್ಲಿ ದಖನ್ ಜೊತೆ ಸ್ನೇಹ ಸಂಬಂಧ ಮುಂದುವರೆಸುವ ಬಯಕೆ ಹೊಂದಿದ್ದ ಒಂದು ಗುಂಪು ಇದ್ದರೆ ಮತ್ತೊಂದು ಗುಂಪು ಕದನದ ಪರವಾಗಿ ಇತ್ತು. ಶಾಂತಿ ಕಾಲದಲ್ಲಿ ಮಾಳ್ವದ ದೂತನಾಗಿದ್ದ ಖಲಾಫ್ ಉಲ್ ಮಶ್ಯೈಕಾ ನೇತೃತ್ವದ ಗುಂಪು ಒಂದೆಡೆಗಿದ್ದರೆ ದಖನ್‌ನ ಹಿಂದಿನ ಆಡಳಿತದ ಅವಧಿಯಲ್ಲಿ ಮಾಳ್ವಕ್ಕೆ ಪಲಾಯನಗೈದಿದ್ದ ನಿಜಾಂ ಉಲ್ ಮುಲ್ಕ್ ನೇತೃತ್ವದ ಮತ್ತೊಂದು ಕಡೆಗಿತ್ತು. ಆರಂಭದಲ್ಲಿ ಶಾಂತಿಯ ಪರವಾಗಿ ಇರುವ ಗುಂಪಿನ ಪ್ರಭಾವ ಹೆಚ್ಚಾಗಿತ್ತು. ಶಾದಿಯಾಬಾದ್‌ನಿಂದ ಉಡುಗೊರೆಗಳೊಂದಿಗೆ ಬಂದ ಮಾಳ್ವದ ದೂತರನ್ನು ದಖನ್‌ನಲ್ಲಿ ಗೌರವದಿಂದ ಬರಮಾಡಿಕೊಳ್ಳಲಾಯಿತು. ದೂತರು ಮರಳುವಾಗ ಅವರ ಜೊತೆಗೆ ಅಮೂಲ್ಯವಾದ ಉಡುಗೊರೆಗಳನ್ನು ಕಳುಹಿಸಲಾಯಿತು. ಉಭಯ ದೊರೆಗಳ ನಡುವೆ ಸೌಹಾರ್ದಯುತ ಸಂಬಂಧ ಏರ್ಪಟ್ಟಿತು. ಇದೇ ಹೊತ್ತಿಗೆ ದಖನ್ ವಿರುದ್ಧ ಕಿಡಿ ಕಾರುತ್ತಿದ್ದ ಪಂಗಡದ ಪ್ರಾಬಲ್ಯ ಹೆಚ್ಚಾಯಿತು. ಬಾಲಕ ದೊರೆ ಇರುವುದರಿಂದ ದುರ್ಬಲವಾಗಿರುವ ದಖನ್ ಮೇಲೆ ದಾಳಿ ನಡೆಸಿದರೆ ಮಾಳ್ವದ ದೊರೆಗೆ ಲಾಭ ಉಂಟಾಗಲಿದೆ ಎಂದು ಮನವರಿಕೆ ಮಾಡುವಲ್ಲಿ ಯಶಸ್ವಿಯಾಯಿತು.

ಮಹಮೂದ್ ಖಿಲ್ಜಿಯು ದಖನ್‌ನ ಮೇಲೆ ಒಂಟಿಯಾಗಿ ದಾಳಿ ನಡೆಸಲಿಲ್ಲ. ಅವನ ಜೊತೆಗೆ ಮಹತ್ವಾಕಾಂಕ್ಷಿ ಕಪಿಲೇಶ್ವರ ಹಾಗೂ ಖಾಂದೇಶ್‌ದ ದೊರೆಯ ಸೈನ್ಯ ಕೂಡ ಇತ್ತು. 1462ರಲ್ಲಿ ದಖನ್‌ನ ವಿರೋಧಿ ಒಕ್ಕೂಟವು ಖಾಂದೇಶ್‌ದ ಮೂಲಕ ದಾಳಿ ಆರಂಭಿಸಿತು. ಮುಂದುವರೆದ ಪಡೆಯು ಬೀದರ್‌ನಿಂದ 32 ಮೈಲಿ ದೂರದಲ್ಲಿ ಬಿಡಾರ ಹೂಡಿತು. ಒರಿಸ್ಸಾದ ಜೊತೆಗಿನ ಯುದ್ಧದ ಮಾದರಿಯಲ್ಲಿಯೇ ಯುವ ಸುಲ್ತಾನ್ ಸ್ವತಃ ಆಸಕ್ತಿ ವಹಿಸಿ ಸಮರಾಂಗಣಕ್ಕೆ ಹೊರಡಲು ಸಿದ್ಧತೆ ನಡೆಸಿದ. ಬಿಜಾಪುರ, ದೌಲತಾಬಾದ್ ಮತ್ತು ಬೆರಾರ್ ಸೈನ್ಯದ ಜೊತೆಗೆ ಮಲಿಕ್‌ತುಜಾರ್ ಮಹಮೂದ್ ಗಾವಾನ್, ಖ್ವಾಜಾ ಜಹಾನ್ ಟರ್ಕ್, ಸಿಕಂದರ್‌ಖಾನ್ ಟರ್ಕ್ ಹಾಗೂ ಹಲವಾರು ಗಣ್ಯರು ಜೊತೆಗಿದ್ದರು. ಹುಮಾಯೂನ್ ನಂತರ ಗಾವಾನ್ ಆರಂಭಿಸಿದ ಸಹಬಾಳ್ವೆ ಮತ್ತು ಸಹನೆಯ ನೀತಿ ಫಲಕೊಡಲು ಆರಂಭಿಸಿತ್ತು. ಅತ್ಯಂತ ಅಪಾಯಕಾರಿಯಾಗಿದ್ದ ವೈರಿಪಡೆಯನ್ನು ಎದುರಿಸಲು ದಖನ್ ಪಡೆ ಸಿದ್ಧಗೊಂಡಿತ್ತು. ಅಫಾಕಿ ಮತ್ತು ದಖನಿಗಳು, ಹಬಶಿಗಳು ಜೊತೆಯಾಗಿ ವೈರಿಯನ್ನು ಎದುರಿಸಲು ಸನ್ನದ್ಧರಾಗಿದ್ದರು. ಖಂದಾರ್‌ದ ಕೋಟೆಯ ಸಮೀಪ ಇರುವ ಮಾಹೇಶ್ವರದ ಬಳಿ ಉಭಯ ಸೈನ್ಯಗಳು ಪರಸ್ಪರ ಮುಖಾಮುಖಿಯಾದವು. ಬಹಮನಿ ಸುಲ್ತಾನ್ ಹಾಗೂ

ಖ್ವಾಜಾ ಜಹಾನ್ ಟರ್ಕ್, ಸಿಕಂದರ್‌ಖಾನ್‌ರನ್ನು ಒಳಗೊಂಡ 11 ಸಾವಿರ ಪದಾತಿದಳ ಹಾಗೂ ನೂರು ಆನೆಗಳ ಪಡೆಯು ಮಧ್ಯದಲ್ಲಿ ಇತ್ತು. ಮತ್ತೊಂದು ಕಡೆ 10 ಸಾವಿರ ಪದಾತಿದಳ ಹಾಗೂ 40 ಆನೆಗಳನ್ನು ಒಳಗೊಂಡ ಸೈನ್ಯದ ನೇತೃತ್ವವನ್ನು ಮಹಮೂದ್ ಗಾವಾನ್ ವಹಿಸಿದ್ದ. ಸುಲ್ತಾನ್‌ನು ನೇರವಾಗಿ ಖಲ್ಜಿಯ ಜೊತೆ ನೇರವಾಗಿ ಎದುರಿಸಿದ. ಅವನ ಮುಂಭಾಗದಲ್ಲಿ ಖ್ವಾಜಾ ಜಹಾನ್ ಟರ್ಕ್ ಇದ್ದ. ಅವನ ಜೊತೆಯಲ್ಲಿ ಮಹಬ್ಬತ್‌ಖಾನ್ ಹಾಗೂ ನಿಜಾಂ ಉಲ್ ಮುಲ್ಕ್ ಟರ್ಕ್‌ರು ನಾಮಕಾವಸ್ತೆ ನಿಜಾಂ ಉಲ್ ಮುಲ್ಕ್ ಘೋರಿ ಹಾಗೂ ಮಾಳ್ವದ ಯುವರಾಜ ಘಿಯಾಸುದ್ದೀನ್‌ನ್ನು ಎದುರಿಸಿದರು.

ಮಾಳ್ವದ ಸೈನ್ಯ ಮಧ್ಯದಲ್ಲಿ ಕದನ ಆರಂಭಿಸುತ್ತಿದ್ದಂತೆಯೇ ಎಡ ಮತ್ತು ಬಲ ಭಾಗದಲ್ಲಿ ಇದ್ದ ಬಹಮನಿ ಪಡೆಯು ಉತ್ಸುಕತೆಯಿಂದ ಮುನ್ನುಗ್ಗಿತು. ಮಹಮೂದ್ ಗಾವಾನ್‌ನು ಮೊದಲು ಮಹಬ್ಬತ್‌ಖಾನ್ ಹಾಗೂ ಜಹೀರ್ ಉಲ್ ಮುಲ್ಕ್‌ನನ್ನು ಸೋಲಿಸಿ ಸಮರಾಂಗಣದಿಂದ ಓಡಿ ಹೋಗುವಂತೆ ನೋಡಿಕೊಂಡನು. ಮತ್ತೊಂದು ಕಡೆಯಲ್ಲಿ ನಿಜಾಂ ಉಲ್ ಮುಲ್ಕ್ ಟರ್ಕ್‌ನು ಮಾಳ್ವದ ಯುವರಾಜ ಘಿಯಾಸುದ್ದೀನ್‌ನನ್ನು ಗಾಯಗೊಳಿಸಿ ಪಲಾಯನಗೈಯುವಂತೆ ನೋಡಿಕೊಂಡನು. ಮೊದಲ ದಿನದ ಕದನದಲ್ಲಿ ಬಹಮನಿ ಸೈನ್ಯದ ಕೈ ಮೇಲಾಗಿತ್ತು. ಸ್ವತಃ ಖಲ್ಜಿ ಕೂಡ ಸ್ವತಃ ರಣರಂಗದಿಂದ ಓಡಿ ಹೋಗಲು ಸನ್ನದ್ಧನಾಗಿದ್ದ. ಸಮರದ ಸಂದರ್ಭದಲ್ಲಿ ಒಮ್ಮೊಮ್ಮೆ ಅದೃಷ್ಟ ನೆರವು ಕೇವಲ ಸೈನ್ಯಕ್ಕೆ ಮಾತ್ರವಲ್ಲದೆ ಇಡೀ ಸಾಮ್ರಾಜ್ಯಕ್ಕೆ ಒದಗಿ ಬರುವುದುಂಟು.

ಅನನುಭವಿ ಯುವ ಟರ್ಕಿ ಅಮೀರ್ ಪಡೆಯ ನಡುವೆ ಬಹಮನಿ ದೊರೆಯನ್ನು ಬಿಡಲಾಗಿತ್ತು. ಯಾರೂ ಜೊತೆಗಿಲ್ಲದೆ 50 ಆನೆಗಳನ್ನು ವೈರಿ ಪಡೆಗಳ ವಿರುದ್ಧ ಕಳುಹಿಸಲು ಟರ್ಕಿ ಅಮೀರ್‌ರು ನಿರ್ಧರಿಸಿದರು. ಅದೇ ಹೊತ್ತಿಗೆ ಸಿಕಂದರ್‌ಖಾನ್‌ನ ಆನೆಗೆ ಬಾಣವೊಂದು ತಗುಲಿ ಅದು ತೀವ್ರವಾಗಿ ಗಾಯಗೊಂಡಿತು. ತಿರುಗಿ ನಿಂತ ಆನೆಯು ತನ್ನದೇ ಸೈನಿಕ ಪಡೆಯ ಮೇಲೆ ಹರಿಹಾಯತೊಡಗಿತು. ಅಪಾಯದ ಮುನ್ಸೂಚನೆ ಅರಿತ ಸಿಕಂದರ್‌ಖಾನ್‌ನು ಸುಲ್ತಾನ್‌ನನ್ನು ತನ್ನ ಕುದುರೆಯ ಮೇಲೆ ಕರೆದುಕೊಂಡು ಅವಸರ ಅವಸರವಾಗಿ ಬೀದರ್ ಕಡೆಗೆ ಪ್ರಯಾಣ ಬೆಳೆಸಿದ. ರಾಜಕುದುರೆಯ ಮೇಲೆ ಸುಲ್ತಾನ್ ಇಲ್ಲದ್ದನ್ನು ನೋಡಿದ ಬಹಮನಿ ಸೈನ್ಯವು ಗೊಂದಲದಲ್ಲಿ ಸಿಲುಕಿ ರಣರಂಗಕ್ಕೆ ಬೆನ್ನು ತೋರಿಸಿತು. ವಿಜಯಲಕ್ಷ್ಮಿ ತನ್ನ ಚಂಚಲತೆಯನ್ನು ತೋರಿಸಿದಳು. ಗೆಲುವು ಸಾಧಿಸಿದ್ದ ಗಾವಾನ್ ಮತ್ತು ಖ್ವಾಜಾ ಜಹಾನ್ ಟರ್ಕ್‌ರು ಹತಾಶೆಯಿಂದ ರಾಜಧಾನಿಗೆ ಮರಳಬೇಕಾಯಿತು.

ಇಡೀ ಘಟನೆಯನ್ನು ಗಮನಿಸಿದ ಮಾಳ್ವದ ದೊರೆಯು ಖಲ್ಜಿಯು ಆರಂಭದಲ್ಲಿ ತನ್ನ ಸೋಲಿಸುವುದಕ್ಕಾಗಿ ಬಹಮನಿ ಸೈನ್ಯ ರೂಪಿಸಿದ ಸಂಚು ಎಂದೇ ಭಾವಿಸಿದ್ದ. ಮೂರು ದಿನಗಳ ನಂತರವಷ್ಟೇ ಬಹಮನಿ ಸೈನ್ಯ ರಾಜಧಾನಿಗೆ ಪಲಾಯನಗೈದಿದೆ ಎಂದು ಖಲ್ಜಿಗೆ ಖಚಿತವಾಯಿತು. ರಾಜಧಾನಿಗೆ ತಲುಪುತ್ತಿದ್ದಂತೆಯೇ ಖ್ವಾಜಾ ಜಹಾನ್ ಟರ್ಕ್‌ನು ಸಿಕಂದರ್‌ಖಾನ್‌ನಿಂದಾಗಿ ಗೆಲುವಿನ ಅಂಚಿನಲ್ಲಿದ್ದ ಸೈನ್ಯ ಸೋಲಬೇಕಾಯಿತು ಎಂದು ರಾಣಿಗೆ ದೂರು ನೀಡಿ, ಅವನನ್ನು ಸೆರೆಮನೆಗೆ ಕಳುಹಿಸಿದನು. ಬಹಮನಿ ಸೈನ್ಯವು ಭೀಕರ ಕದನದಲ್ಲಿ ತೊಡಗಿಕೊಂಡಿರುವಾಗ ಅಪಾಯದಲ್ಲಿ ಸಿಲುಕಿದ ಸುಲ್ತಾನ್‌ನನ್ನು ರಕ್ಷಿಸಿ ಕರೆತಂದಿರುವುದಾಗಿ ಸಿಕಂದರ್‌ಖಾನ್‌ನು ರಾಣಿಗೆ ಮನವರಿಕೆ ಮಾಡಿದನು. ಅರಸನನ್ನು ಪ್ರಾಣಾಪಾಯದಿಂದ ಪಾರು ಮಾಡಿದ ಸಿಕಂದರ್‌ಖಾನ್‌ನನ್ನು ಸೆರೆ ಕಳುಹಿಸುವುದು ಸರಿಯಲ್ಲ ಎಂಬ ಅಭಿಪ್ರಾಯ ರಾಣಿಯದಾಗಿದ್ದರೂ ಖ್ವಾಜಾ ಜಹಾನ್‌ನಿಗೆ ತಕ್ಕ ಶಾಸ್ತಿ ಮಾಡುವ ಅವಕಾಶಕ್ಕಾಗಿ ಹೊಂಚು ಹಾಕಿದಳು.

ಅಫಾಕಿ ಮತ್ತು ದಖನಿಗಳ ನಡುವೆ ಹೊಂದಾಣಿಕೆ ಮಾಡುವ ನೂತನ ನೀತಿಯಿಂದಾಗಿ ರಾಜ್ಯಪ್ರತಿನಿಧಿ ಸಭೆಯಲ್ಲಿ ಅಪಾರವಾದ ಆತ್ಮವಿಶ್ವಾಸ ಒಡಮೂಡಿತ್ತು. ಮಹಮೂದ್ ಗಾವಾನ್‌ನ ಸೂಚನೆಯ ಮೇರೆಗೆ ಮಲ್ಲುಖಾನ್‌ನನ್ನು ಬೀದರ್ ಕೋಟೆಯ ಉಸ್ತುವಾರಿ ನೋಡಿಕೊಳ್ಳುವಂತೆ ಸೂಚಿಸಿ ಸುಲ್ತಾನ್‌ನೊಂದಿಗೆ ಫಿರೋಜಾಬಾದ್‌ಗೆ ತೆರಳಿದಳು. ಅದಾದ ಸ್ವಲ್ಪ ಹೊತ್ತಿಗೇ ಮಹಮೂದ್ ಖಲ್ಜಿಯು ಬೀದರ್ ನಗರವನ್ನು ವಶಪಡಿಸಿಕೊಂಡು ಅರಮನೆಗೆ ಮುತ್ತಿಗೆ ಹಾಕಿದನು. ಬೀರ್, ಬೆರಾರ್ ಮತ್ತು ದೌಲತಾಬಾದ್ ಸೈನ್ಯ ಕೂಡ ಖಲ್ಜಿಯ ವಶವಾದವು. ಇಂತಹ ಸಂದಿಗ್ಧ ಸಮಯದಲ್ಲಿ ರಾಣಿ ಮತ್ತು ಮಹಮೂದ್ ಗಾವಾನ್ ಸಹಾಯಕೋರಿ ಗುಜರಾತ್‌ನ ಸುಲ್ತಾನ್ ಮಹಮೂದ್‌ನಿಗೆ ಪತ್ರ ಬರೆದರು. ಕೇವಲ ಹದಿಮೂರು ವರ್ಷದ ಹರೆಯದವನಾಗಿದ್ದ ಸುಲ್ತಾನ್ ಮಹಮೂದ್‌ನು ಕೆಲವೇ ದಿನಗಳ ಹಿಂದೆ ತನ್ನ ಚಿಕ್ಕಪ್ಪ ದಾವುದ್‌ನನ್ನು ಕೆಳಗಿಳಿಸಿ ಅಧಿಕಾರಕ್ಕೆ ಬಂದಿದ್ದ. ದಾವುದ್ ಮರಳಿ ಅಧಿಕಾರಕ್ಕೆ ಬರಲು ಪಿತೂರಿ ನಡೆಸುತ್ತಿದ್ದ ದಿನಗಳವು. ಆದ್ದರಿಂದ ಸುಲ್ತಾನ್‌ನು ರಾಜಧಾನಿ ಬಿಟ್ಟು ಬಹಮನಿ ಸಾಮ್ರಾಜ್ಯದ ಸಹಾಯಕ್ಕೆ ಹೋಗುವುದು ಸರಿಯಲ್ಲ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಆಗ ಸುಲ್ತಾನ್‌ನು ಅದನ್ನು ಲೆಕ್ಕಿಸದೇ ಬಹಮನಿ ಸೈನ್ಯದ ನೆರವಿಗೆ ಧಾವಿಸಲು ನಿರ್ಧರಿಸಿದ. ಆಗ ಗುಜರಾತಿನ ಗಣ್ಯರು ಸುಲ್ತಾನ್‌ನು ದಖನ್ ಕಡೆಗೆ ತನ್ನ ಸೈನ್ಯ ತೆಗೆದುಕೊಂಡು ಹೋಗುವ ಬದಲು ಮಾಳ್ವದ ಮೇಲೆ ದಾಳಿ ನಡೆಸುವುದು ಉಚಿತ ಎಂದು ಸಲಹೆ ನೀಡಿದರು.

ಮಾಳ್ವವು ಗುಜರಾತಿಗೆ ಹತ್ತಿರದಲ್ಲಿಯೇ ಇರುವುದರಿಂದ ಅದರ ಲಾಭ ತಕ್ಷಣ ಬಹಮನಿ ಸೈನ್ಯಕ್ಕೆ ದೊರಕುತ್ತದೆ ಎಂದು ಮನವರಿಕೆ ಮಾಡಲು ಯತ್ನಿಸಿದರು. ಅದನ್ನೂ ನಿರಾಕರಿಸಿದ ಮಹಮೂದ್‌ನು 80 ಸಾವಿರ ಸೈನ್ಯದೊಂದಿಗೆ ದಖನ್‌ನತ್ತ ಪ್ರಯಾಣ ಬೆಳೆಸಿದ. ದಖನ್ ಸೈನ್ಯದ ನೆರವಿಗೆ ಗುಜರಾತಿನ ಸೈನ್ಯ ಬರುತ್ತಿರುವ ಸಂಗತಿ ತಿಳಿಯುತ್ತಿರುವಂತೆಯೇ ಖಿಲ್ಜಿಯ ಯೋಜನೆಗಳೆಲ್ಲ ತಲೆಕೆಳಗಾದವು. ಗಾವಾನ್‌ನು ಬೀಡ್‌ನಿಂದ ಕಳುಹಿಸಿದ ಆರು ಸಾವಿರ ಅಶ್ವದಳದ ಜೊತೆಗೆ ಗುಜರಾತಿನ 20ಸಾವಿರ ಸೈನಿಕರ ಪಡೆಯು ಸೇರಿಕೊಂಡಿತು. ಅದೇ ಹೊತ್ತಿಗೆ ಗಾವಾನ್‌ನು 40 ಸಾವಿರ ಸೈನ್ಯವನ್ನು ಹೊಂದಿಸಿ ಬೀದರ್ ಕಡೆಗೆ ಮರುಪ್ರಯಾಣ ಬೆಳೆಸಿದನು. ಫಿರೋಜಾಬಾದ್‌ನಿಂದ ಖ್ವಾಜಾ ಜಹಾನ್ ಟರ್ಕ್ ಕೂಡ ರಾಜಧಾನಿ ಕಡೆಗೆ ಹೊರಟ. ರಾಣಿಯು ಭರವಸೆ ಇಟ್ಟು ಅರಮನೆಯ ರಕ್ಷಣೆಗೆ ಬಿಟ್ಟು ಹೋಗಿದ್ದ ಮಲ್ಲುಖಾನ್‌ನು ರಾಣಿಯ ವಿಶ್ವಾಸ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದ. ಮೂರೂ ಕಡೆಗಳಿಂದ ಸೈನ್ಯ ಬರುತ್ತಿರುವ ಮಾಹಿತಿ ಪಡೆದ ಖಿಲ್ಜಿಯು ಮುತ್ತಿಗೆ ಹಿಂತೆಗೆದು ಮಾಳ್ವದ ಕಡೆಗೆ ಮುಖಮಾಡಿದ. ಮೊದಲಿಗೆ ಖಿಲ್ಜಿಯ ಸೈನ್ಯವು ಕಲ್ಯಾಣದ ಕಡೆಗೆ ಪ್ರಯಾಣ ಬೆಳೆಸಿತು. ಗುಜರಾತಿನ ಸೈನ್ಯವು ಅದೇ ಮಾರ್ಗವಾಗಿ ಬರುತ್ತಿದೆ ಎಂಬ ಮಾಹಿತಿ ದೊರೆತದ್ದರಿಂದ ನೇರವಾಗಿ ಬುರ್ಹಾನಪುರ ಮತ್ತು ಆಸಿರ್ ಕಡೆಗೆ ದಿಕ್ಕು ಬದಲಿಸಿದ. ತನ್ನ ಜೊತೆಗಿದ್ದ 10 ಸಾವಿರ ಸೈನ್ಯದ ಪಡೆಯೊಂದಿಗೆ ಗಾವಾನ್‌ನು ಮಾಳ್ವದ ಸೈನ್ಯದ ಸಂಪರ್ಕ ಕಡಿತಗೊಳಿಸಿದ್ದ. ಖಿಲ್ಜಿಯು ತನ್ನ ಆನೆಯನ್ನು ಕುರುಡಾಗಿಸಿ ತನ್ನ ವಸ್ತುಗಳಿಗೆ ಬೆಂಕಿ ಹಚ್ಚಿ ಗೊಂಡ್ವಾನ, ಎಲಿಚಿಪುರ, ಅಕ್ಕಲಕೋಟದ ಮೂಲಕ ಮಾಳ್ವದ ಕಡೆಗೆ ಪಲಾಯನಗೈದ. ಮಾರ್ಗದಲ್ಲಿಯೇ ಐದಾರು ಸಾವಿರ ಸೈನ್ಯ ನಷ್ಟಗೊಂಡಿತು. ಅಳಿದುಳಿದ ಸೈನ್ಯವನ್ನು ಗೊಂಡರು ಲೂಟಿ ಮಾಡಿದರು.

ಅಪಾರ ಹಾನಿಯ ನಂತರವೂ ಮಾಳ್ವದ ದಾಳಿಗಳು ಕೊನೆಗೊಳ್ಳಲಿಲ್ಲ. 1463ರಲ್ಲಿ ಮಹಮೂದ್ ಖಿಲ್ಜಿಯು 90ಸಾವಿರ ಸೈನ್ಯದೊಂದಿಗೆ ಮಾಂಡು ಮೂಲಕ ದಾಳಿ ಆರಂಭಿಸಿದ. ಯಾವುದೇ ರೀತಿಯ ತಡೆಯಿಲ್ಲದೇ ಫತಾಬಾದ್ ವರೆಗೆ ಪ್ರಯಾಣ ಬೆಳೆಸಿದ್ದ. ಗುಜರಾತಿನ ಸೈನ್ಯವು ದಖನ್ ಸೈನ್ಯದ ಬೆಂಬಲಕ್ಕೆ ಬರುತ್ತಿದೆ ಎಂಬ ಮಾಹಿತಿ ಪಡೆದು ಮಾಳ್ವಕ್ಕೆ ಮರಳಿದ. ಅದಾದ ಮೂರು ತಿಂಗಳ ನಂತರ ನಿಜಾಮುದ್ದೀನ್‌ನು ಮದುವೆಯ ಮೊದಲ ರಾತ್ರಿಯೇ (13–11–1463) ಅಸು ನೀಗಿದನು. ಅವನ ಕಿರಿಯ ಸಹೋದರ ಶಂಸುದ್ದೀನ್ ಮುಹಮ್ಮದ್ ಶಹಾ ಸಿಂಹಾಸನವನ್ನೇರಿದನು.

## ಶಂಸುದ್ದೀನ್ ಮುಹಮ್ಮದ್ III
(30 ಜುಲೈ 1463 ರಿಂದ 26 ಮಾರ್ಚ್ 1482)

ನಿಜಾಮುದ್ದೀನ್‌ನ ನಂತರ ಅವನ ಕಿರಿಯ ಸಹೋದರ ಶಂಸುದ್ದೀನ್ ಮುಹಮ್ಮದ್ ಸಿಂಹಾಸನ ಏರಿದಾಗ ಅವನಿಗೆ 9 ಅಥವಾ 10 ವರ್ಷ. ಶಂಸುದ್ದೀನ್ ಆರೋಹಣ ಮಾಡುವ ಸಂದರ್ಭದಲ್ಲಿ ಬಲಭಾಗದಲ್ಲಿ ಶಹಾ ಮುಹೀಬ್ ಅಲ್ಲಾ ಕಿರ್ಮಾನಿ ಹಾಗೂ ಎಡಭಾಗದಲ್ಲಿ ಸೈಯದ್ ಹನೀಫ್ ಜೊತೆಗಿದ್ದರು. ವ್ಯವಹಾರ ಕುಶಲಿಯಾದ ಮಹಾರಾಣಿಯು ತನ್ನ ಪುತ್ರನಿಗೆ ಎಲ್ಲ ರೀತಿಯ ಆಡಳಿತಾತ್ಮಕ ತರಬೇತಿ ದೊರೆಯುವಂತೆ ನೋಡಿಕೊಂಡಳು. ಅದಕ್ಕಾಗಿ ಸದ್ರ್ ಜಹಾನ್ ಶುಸ್ತಾರಿಯನ್ನು ಅರಸನ ಕಲಿಕೆಯ ಉಸ್ತುವಾರಿ ನೋಡಿಕೊಳ್ಳುವುದಕ್ಕಾಗಿ ನಿಯಮಿಸಿದಳು.

### ಖ್ವಾಜಾ ಜಹಾನ್ ಟರ್ಕ್‌ನ ಹತ್ಯೆ

ತನ್ನ ನಡವಳಿಕೆಯಿಂದಾಗಿ ಪ್ರಧಾನಿ ಖ್ವಾಜಾ ಜಹಾನ್ ಟರ್ಕ್‌ನು ಮಹಾರಾಣಿಯ ವಿಶ್ವಾಸ ಕಳೆದುಕೊಳ್ಳಲು ಆರಂಭಿಸಿದನು. ಅಫಾಕಿ ಮತ್ತು ದಖನಿಗಳ ನಡುವಿನ ಭಿನ್ನಾಭಿಪ್ರಾಯ ಕಡಿಮೆ ಮಾಡಿ ಪರಸ್ಪರ ಹೊಂದಾಣಿಕೆಯಿಂದ ಬದುಕುವಂತಹ ನೀತಿ–ನಿಯಮವನ್ನು ಸುಲ್ತಾನ್ ಹುಮಾಯೂನ್ ಆರಂಭಿಸಿದ್ದ. ನಂತರದ ದಿನಗಳಲ್ಲಿ ಅದನ್ನು ರಾಜ್ಯಪ್ರತಿನಿಧಿ ಸಭೆಯು ಮುಂದುವರೆಸಿತ್ತು. ಅದಕ್ಕೆ ವ್ಯತಿರಿಕ್ತವಾದ ನಡವಳಿಕೆಯನ್ನು ಖ್ವಾಜಾ ಜಹಾನ್ ತೋರಿಸತೊಡಗಿದ. ಉಭಯ ಪಂಗಡಗಳ ನಡುವೆ ಸಮತೋಲನ ಕಡಿಮೆ ಆಗುವಂತಹ ನೇಮಕ ಮಾಡಿದ. ಅಫಾಕಿಗಳ ಪರವಾದ ನಿಲುವು ತಳೆಯ ತೊಡಗಿದ. ಹಾಗೆಯೇ ಮಲಿಕ್‌ತುಜಾರ್ ಮಹಮೂದ್ ಗಾವಾನ್ ಹೆಚ್ಚು ಕಾಲ ರಾಜಧಾನಿಯಲ್ಲಿ ಇರಲು ಆಗದಂತೆ ನೋಡಿಕೊಂಡ. ಗಡಿಭಾಗದಲ್ಲಿ ಇರುವುದನ್ನೇ ಗಾವಾನ್ ಇಷ್ಟಪಡುತ್ತಾನೆ ಎಂಬ ಮನೋಭಾವ ಹರಡುವಂತೆ ಮಾಡಿ, ನಿತ್ಯದ ಆಡಳಿತದಿಂದ ದೂರವೇ ಉಳಿಯುವಂತೆ ಮಾಡಿದ. ಇಷ್ಟು ಸಾಲದೆಂಬಂತೆ ರಾಜನ ಬೊಕ್ಕಸದಿಂದ ಹಣ ಹಾಗೂ ಆಭರಣಗಳನ್ನು ಲಪಟಾಯಿಸಿದ. ರಣರಂಗದಿಂದ ಹಿಂದಿನ ಸುಲ್ತಾನ್‌ನನ್ನು ರಕ್ಷಿಸಿ ತಂದಿದ್ದ ಸಿಕಂದರ್‌ಖಾನ್‌ನನ್ನು ಸೆರೆಮನೆಗೆ ಕಳುಹಿಸಿದ ನಿರ್ಣಯ ರಾಣಿಯ ಅಸಮಾಧಾನಕ್ಕೆ ಕಾರಣವಾಗಿತ್ತು. ನಿತ್ಯದ ಆಡಳಿತದಿಂದ ಗಾವಾನ್ ದೂರ ಉಳಿಯುವಂತಾದದ್ದು ರಾಜ್ಯಪ್ರತಿನಿಧಿ ಸಭೆಯ ನಿರ್ಣಯಗಳ ಮೇಲೆ ಪರಿಣಾಮಬೀರ ತೊಡಗಿತು. ಈ ಎಲ್ಲ ಅಂಶಗಳು ಖ್ವಾಜಾ ಜಹಾನ್‌ನ

ಗೋರಿ ತೋಡಲು ಕಾರಣವಾದವು. ಮಹಾರಾಣಿಯು ಅವನನ್ನು ಮಟ್ಟಹಾಕುವ ಸದವಕಾಶಕ್ಕಾಗಿ ಕಾದಿದ್ದಳು. ಖ್ವಾಜಾ ಜಹಾನ್‌ನ ಬೆಂಗಾವಲಿಗೆ ಟರ್ಕಿಯವನನ್ನು ನಿಯಮಿಸಿದ್ದಳು. 1466ರ ಒಂದು ಬೆಳಿಗ್ಗೆ ಎಂದಿನಂತೆ ಸುಲ್ತಾನ್‌ನಿಗೆ ಗೌರವ ಸಲ್ಲಿಸಲು ಸಿಂಹಾಸನ ಇರುವ ಕೋಣೆಯೊಳಕ್ಕೆ ಹೋಗುವಾಗ ನಿಜಾಂ ಉಲ್ ಮುಲ್ಕ್‌ನು ತನ್ನ ಪಡೆಯಿಂದ ದೂರ ನಿಂತದ್ದನ್ನು ನೋಡಿ ಆಶ್ಚರ್ಯಚಕಿತನಾದನು. ಕೋಣೆಯೊಳಗೆ ಬರುತ್ತಿದ್ದಂತೆಯೇ ಅರಮನೆಯ ರಾಣಿವಾಸದ ಕಡೆಯಿಂದ ಇಬ್ಬರು ಕೆಲಸದ ಮಹಿಳೆಯರು ಬರುತ್ತಿರುವುದನ್ನು ಕಂಡ. ಅವರ ಸೂಚನೆಯ ಮೇರೆಗೆ ನಿಜಾಂ ಉಲ್ ಮುಲ್ಕ್‌ನು ಖಡ್ಗ ತೆಗೆದು ಯುವಸುಲ್ತಾನ್‌ನ ಸಮ್ಮುಖದಲ್ಲಿಯೇ ಖ್ವಾಜಾ ಜಹಾನ್ ಮೇಲೆ ದಾಳಿ ಮಾಡಿದ. ಖ್ವಾಜಾ ಜಹಾನ್ ಸ್ಥಳದಲ್ಲಿಯೇ ಮೃತಪಟ್ಟ. ಇದರೊಂದಿಗೆ ಹುಮಾಯೂನ್ ಶಹಾನ ಮರಣದೊಂದಿಗೆ ಜಾರಿಗೆ ಬಂದಿದ್ದ ತ್ರಿವಳಿಗಳ ರಾಜ್ಯಪ್ರತಿನಿಧಿಯ ಅಸ್ತಿತ್ವ ಕೊನೆಗೊಂಡಿತು.

## ಪ್ರತಿನಿಧಿ ಸಭೆಯ ಯಶಸ್ಸು

ಕೇವಲ ಐದು ವರ್ಷಗಳ ಪ್ರತಿನಿಧಿ ಸಭೆ ಅಧಿಕಾರ ನಡೆಸಿದರೂ ಹಲವು ರೀತಿಯಲ್ಲಿ ಗಣನೀಯ ಸಾಧನೆಗೆ ಕಾರಣವಾಗಿತ್ತು. ಆಡಳಿತ ನಡೆಸುವುದಕ್ಕಾಗಿ ಸಭೆಯಲ್ಲಿನ ಮೂವರೂ ತೋರಿಸಿದ ಕಾಳಜಿ, ಶ್ರದ್ಧೆ ಅಸಾಧಾರಣವಾದ ಸಂಗತಿಯಾಗಿತ್ತು. ಯಾವೊಂದು ಕಾರಣಕ್ಕಾಗಿಯೂ ಮೂವರ ನಡುವೆ ಭಿನ್ನಾಭಿಪ್ರಾಯ ಉದ್ಭವಿಸಿರಲಿಲ್ಲ. ಅದರಿಂದಾಗಿಯೇ ಮಾಳ್ವದ ಜೊತೆಗೆ ನಡೆದ ಭೀಕರ ಕದನದ ಸಂದರ್ಭದಲ್ಲಿಯೂ ದಖನ್ ಸೈನ್ಯವನ್ನು ಪಾರುಮಾಡುವುದು ಸಾಧ್ಯವಾಗಿತ್ತು. ಒರಿಸ್ಸಾದ ಮಹತ್ವಾಕಾಂಕ್ಷಿ ದೊರೆ ಹಾಗೂ ಮಾಳ್ವದ ಜೊತೆಗಿನ ಎರಡು ಕದನಗಳಲ್ಲಿಯೂ ಗಾವಾನ್ ಮತ್ತು ಖ್ವಾಜಾ ಜಹಾನ್ ಯಾವುದೇ ರೀತಿಯ ಭಿನ್ನಾಭಿಪ್ರಾಯ ಇಲ್ಲದೇ ಸ್ವತಃ ಎಡಬಲದಲ್ಲಿ ನಿಂತು ಹೋರಾಟ ನಡೆಸಿದ್ದರು. ಪ್ರತಿನಿಧಿ ಸಭೆಯ ಎಲ್ಲ ನಿರ್ಣಯಗಳನ್ನು ತಾತ್ವಿಕವಾಗಿ ಎಲ್ಲರೂ ಒಪ್ಪಿಕೊಳ್ಳುತ್ತಿದ್ದರು. ಅದಕ್ಕಾಗಿಯೇ ಸಿಕಂದರ್‌ಖಾನ್‌ನನ್ನು ಖ್ವಾಜಾ ಜಹಾನ್ ಸೆರೆಮನೆಗೆ ಕಳುಹಿಸುವ ನಿರ್ಣಯ ತೆಗೆದುಕೊಂಡ ಸಂದರ್ಭದಲ್ಲಿಯೂ ಒಪ್ಪಿಕೊಳ್ಳಲಾಗಿತ್ತು. ರಾಣಿಗೆ ಸಿಕಂದರ್ ಮಾಡಿದ್ದು ತಪ್ಪಲ್ಲ ಎಂದು ಗೊತ್ತಿದ್ದರೂ ಬಿಡುಗಡೆ ಮಾಡಿಸದೇ ಸಭೆಯ ನಿರ್ಣಯ ಎಂದು ಒಪ್ಪಿಕೊಂಡಿದ್ದಳು. ಆಡಳಿತದಲ್ಲಿ ರಾಣಿಯು ತೋರಿಸುತ್ತಿದ್ದ ಆಸಕ್ತಿ ಹಾಗೂ ದಿಟ್ಟ ನಿಲುವುಗಳಿಂದ ಮಹಿಳೆಯರು ಪ್ರೇರಿತರಾಗಿದ್ದರು. ದಖನ್ನಿ

ಹಾಗೂ ಅಫಾಕಿಗಳ ನಡುವಿನ ಮನಸ್ತಾಪ ಕೊನೆಗೊಳಿಸುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳು ಅಭೂತಪೂರ್ವವಾಗಿದ್ದವು. ದಖನ್ನಿ ಮುಖ್ಯಸ್ಥ ಮಲ್ಲುಖಾನ್‌ನನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದ್ದಲ್ಲದೆ ಮಾಳ್ವದ ದಾಳಿಯ ಸಂದರ್ಭದಲ್ಲಿ ಬೀದರ್ ಅರಮನೆಯ ಉಸ್ತುವಾರಿ ವಹಿಸಲಾಗಿತ್ತು. ಮೂವರು ಒಂದಾಗಿ ತೆಗೆದುಕೊಳ್ಳುತ್ತಿದ್ದ ನಿರ್ಣಯದ ನೀತಿಯು ಮುಹಮ್ಮದ್ ಅಧಿಕಾರಕ್ಕೆ ಬಂದ ನಂತರ ಕಡಿಮೆಯಾಗಿತ್ತು. ತನ್ನ ಕೆಲವು ನಿರ್ಣಯಗಳಿಂದಾಗಿ ಖ್ವಾಜಾ ಜಹಾನ್‌ನು ಗಣ್ಯರ ಅಸಮಾಧಾನಕ್ಕೆ ಕಾರಣನಾಗಿದ್ದ. ಖ್ವಾಜಾ ಜಹಾನ್‌ನ ಹತ್ಯೆಯ ನಂತರ ಗಾವಾನ್‌ನ ಸಮಬಲರು ಯಾರೂ ಸಾಮ್ರಾಜ್ಯದಲ್ಲಿ ಇರಲಿಲ್ಲ.

## ಪ್ರಧಾನಿ ಮಹಮೂದ್ ಗಾವಾನ್

1466ರಲ್ಲಿ ಸುಲ್ತಾನ್‌ನ 14 ವರ್ಷ ವಯಸ್ಸಿನಲ್ಲಿ ಅದ್ಧೂರಿಯಿಂದ ಮದುವೆ ಮಾಡಲಾಯಿತು. ಸೈನ್ಯದ ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ಅಮೂಲ್ಯ ಉಡುಗೊರೆ ನೀಡಲಾಯಿತು. ಅದರೊಂದಿಗೆ ಮಹಾರಾಣಿ 'ಮಕ್ದುಮ್ ಎ ಜಹಾನ್' ನರ್ಗೀಸ್‌ಬೇಗಂ ಸಕ್ರಿಯ ರಾಜಕಾರಣದಿಂದ ನಿವೃತ್ತಳಾದಳು. ಆದರೂ ಸುಲ್ತಾನ್‌ನು ಪ್ರತಿದಿನ ಒಡ್ಡೋಲಗಕ್ಕೆ ಬರುವ ಮುನ್ನ ತಾಯಿಯನ್ನು ಭೇಟಿ ಮಾಡಿಯೇ ಬರುವುದನ್ನು ಹಾಗೂ ಸಲಹೆ–ಸೂಚನೆ ಕೇಳುವುದನ್ನು ಮುಂದುವರೆಸಿದ. ರಾಣಿಯು ಆಡಳಿತದಲ್ಲಿ ಭಾಗವಹಿಸದೆ ಸಾಮ್ರಾಜ್ಯದ ಹಿತಚಿಂತಕಿಯಾಗಿ ಮುಂದುವರೆದಳು. ಖ್ವಾಜಾ ಜಹಾನ್‌ನ ಹತ್ಯೆಯ ನಂತರ ಈಗ ರಾಣಿಯೂ ನಿವೃತ್ತಳಾಗಿದ್ದರಿಂದ ಮಲಿಕ್‌ತುಜಾರ್ ಮಹಮೂದ್ ಗಾವಾನ್ ಪ್ರಭಾವ ಹೆಚ್ಚಿತು. ರಾಣಿಯ ಸಮ್ಮತಿಯ ಮೇರೆಗೆ ಖ್ವಾಜಾ ಮಹಮೂದ್ ಗಾವಾನ್‌ನನ್ನು 'ಖ್ವಾಜಾ ಜಹಾನ್' ಬಿರುದಿನೊಂದಿಗೆ ಪ್ರಧಾನಿಯನ್ನಾಗಿ ಮಾಡಿ ಇಡೀ ಸಾಮ್ರಾಜ್ಯದ ಎಲ್ಲ ಪ್ರಾಂತ್ಯಗಳ ಹೊಣೆಗಾರಿಕೆಯನ್ನು ವಹಿಸಲಾಯಿತು. ಹಾಗೆಯೇ ಎರಡು ಸಾವಿರ ಮೊಗಲ್ ಸೈನ್ಯದ ಬೆಂಗಾವಲು ಪಡೆಯನ್ನು ನೀಡಲಾಯಿತು. ಗಾವಾನ್‌ನ ನಾಯಕತ್ವದಲ್ಲಿ ಬಹಮನಿ ಸಾಮ್ರಾಜ್ಯವು ಹಿಂದೆಂದೂ ತಲುಪದ ಔನ್ನತ್ಯವನ್ನು ಪಡೆಯಿತು. ಸಾಂಸ್ಕೃತಿಕವಾಗಿ ಮಾತ್ರವಲ್ಲದೇ ಸಾಮ್ರಾಜ್ಯದ ಗಡಿಗಳನ್ನು ಸಬಲಗೊಳಿಸಲಾಯಿತು. ಕೊಂಕಣದ ಕರಾವಳಿ ಪ್ರದೇಶವೂ ಸೇರಿದಂತೆ ಗೋವಾ ವಶವಾಯಿತು. ಗೋದಾವರಿ– ಕೃಷ್ಣಾ ದೋಆಬ್ ಪ್ರದೇಶವು ಸೇರಿದಂತೆ ಒರಿಸ್ಸಾ ಮತ್ತು ಕೋರಮಂಡಲ ಕರಾವಳಿಯು ಸಾಮ್ರಾಜ್ಯಕ್ಕೆ ಸೇರ್ಪಡೆಯಾಯಿತು. ದಕ್ಷಿಣದಲ್ಲಿ ಕಂಚಿಯವರೆಗೆ ವಿಸ್ತರಣೆಯಾಯಿತು. ಮೊದಲ ಬಾರಿಗೆ ಬಹಮನಿ ಸಾಮ್ರಾಜ್ಯವು ಪೂರ್ವ ಕರಾವಳಿಯಿಂದ ಪಶ್ಚಿಮ ಕರಾವಳಿಯ ವರೆಗೆ ವ್ಯಾಪಿಸಿತು.

ಗಾವಾನ್‌ನಿಂದಾಗಿ ಮಾಳ್ವ, ಒರಿಸ್ಸಾ ಮತ್ತು ವಿಜಯನಗರದ ಸಾಮ್ರಾಜ್ಯದ ಮಹತ್ವಾಕಾಂಕ್ಷೆ ಅಂತ್ಯಗೊಂಡಿತು.

ಉತ್ತರದಲ್ಲಿ ಮಾಳ್ವದ ದೊರೆ ಮಹಮೂದ್ ಖಿಲ್ಜಿಯು ಹೆಚ್ಚು ಕಾಲ ಸುಮ್ಮನೆ ಕುಳಿತುಕೊಳ್ಳಲಿಲ್ಲ. 1463ರ ನಂತರ ಯಾವುದೇ ರೀತಿಯ ಕದನ ಉಭಯ ಸೈನ್ಯದ ನಡುವೆ ಏರ್ಪಟ್ಟಿರಲಿಲ್ಲ. ಮಹಮೂದ್ ಖಿಲ್ಜಿಯು ಮಾಹುರ್ ಮತ್ತು ಎಲಿಚಿಪುರಗಳು ಮಾಳ್ವಕ್ಕೆ ಸೇರಿದವು ಎಂದು ತಂಟೆ ಮಾಡಿದನು. ಅದಕ್ಕೆ ಉತ್ತರಿಸಿದ ಗಾವಾನ್‌ನು ಎರಡೂ ಜಿಲ್ಲೆಗಳು ಬಹಮನಿ ಸಾಮ್ರಾಜ್ಯದ ಭಾಗವೇ ಆಗಿರುವುದರಿಂದ ಅವುಗಳನ್ನು ಮಾಳ್ವಕ್ಕೆ ಬಿಟ್ಟುಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ತಿಳಿಸಿದನು. ದಖನ್ ಮೇಲೆ ದಾಳಿ ನಡೆಸುವುದಕ್ಕಾಗಿ ಸಿದ್ಧತೆ ನಡೆಸಿದ್ದ ಖಿಲ್ಜಿಯು ಅದಕ್ಕಾಗಿ ನೆಪ ಹುಡುಕುತ್ತಿದ್ದ. ಉತ್ತರದಲ್ಲಿ ನಡೆಯುತ್ತಿದ್ದ ಬೆಳವಣಿಗೆಗಳನ್ನು ಗಮನಿಸಿದ ಸುಲ್ತಾನ್ ಮಹಮೂದ್ ಶಹಾನು ಸಮಸ್ಯೆಯನ್ನು ಬಗೆ ಹರಿಸುವುದಕ್ಕಾಗಿ ನಿಜಾಂ ಉಲ್ ಮುಲ್ಕ್ ಎಂದೇ ಜನಪ್ರಿಯನಾಗಿದ್ದ ಬೇರಾರ್‌ನ ಮುಖ್ಯಸ್ಥ ಮುಸ್ನುದ್ ಅಲಿ ಮಲಿಕ್ ಯುಸೂಫ್ ಟರ್ಕ್‌ನಿಗೆ ಉಸ್ತುವಾರಿಯನ್ನು ವಹಿಸಿದನು. ಹಾಗೆಯೇ ಮಹಮೂದ್ ಗಾವಾನ್‌ನ ನೇತೃತ್ವದ ಸೈನ್ಯವನ್ನು ಫತಾಬಾದ್ ಮೂಲಕ ಖಾಂದೇಶ್‌ದ ಕಡೆಗೆ ಕಳುಹಿಸಲಾಯಿತು. ಗುಜರಾತ್‌ನ ಜೊತೆಗಿನ ಹಳೆಯ ಸ್ನೇಹ ಸಂಬಂಧವನ್ನು ನವೀಕರಿಸಲಾಯಿತು. 1468ರಲ್ಲಿ ನಿಜಾಂ ಉಲ್ ಮುಲ್ಕ್‌ನು ಖೇರ್ಲಾವನ್ನು ಮುತ್ತಿಗೆ ಹಾಕಿದನು. ಖೇರ್ಲಾದ ಮುಖ್ಯಸ್ಥನು ಅಫ್ಘನ್ ಮತ್ತು ರಜಪೂತ್ ಸೈನಿಕರನ್ನು ಒಳಗೊಂಡ ಮಾಳ್ವ ಸೈನ್ಯದ ಸಹಾಯ ಕೋರಿದನು. ಆ ನೆರವು ಬರಲಿಲ್ಲವಾದ್ದರಿಂದ ಕದನದಲ್ಲಿ ಬೃಹತ್ ಪ್ರಮಾಣದ ನಷ್ಟ ಅನುಭವಿಸಬೇಕಾಯಿತು. ಐದು ಸಾವಿರಕ್ಕೂ ಹೆಚ್ಚು ಸೈನಿಕರು ಸಮರಾಂಗಣದಲ್ಲಿ ಅಸು ನೀಗಿದರು. ಮಾಳ್ವದ ಸೈನ್ಯಾಧಿಕಾರಿ ಸಿರಾಜ್ ಉಲ್ ಮುಲ್ಕ್‌ನನ್ನು ಸೆರೆ ಹಿಡಿದ ನಿಜಾಂ ಉಲ್ ಮುಲ್ಕ್‌ನು 23 ಆನೆಗಳನ್ನು ವಶಪಡಿಸಿಕೊಳ್ಳುವುದರೊಂದಿಗೆ ಖೇರ್ಲಾವನ್ನು ಪ್ರವೇಶಿಸಿದನು. ಮಾಳ್ವದ ಮುಖ್ಯಸೈನ್ಯವನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡಲಾಯಿತು. ಆಗ ನಿಜಾಂ ಉಲ್ ಮುಲ್ಕ್ ತೋರಿಸಿದ ಕರುಣೆಯಿಂದಾಗಿ ತನ್ನ ಪ್ರಾಣ ತೆರಬೇಕಾಯಿತು.

ದಖನ್ ಸೈನ್ಯವು ಖೇರ್ಲಾದ ಕೋಟೆಯನ್ನು ವಶಪಡಿಸಿಕೊಂಡ ನಂತರ ಕೋಟೆಯ ರಕ್ಷಣೆಗೆ ಇದ್ದ ಇಬ್ಬರು ರಜಪೂತ ಮುಖಂಡರು ನಿಜಾಂ ಉಲ್ ಮುಲ್ಕ್‌ನ ಕಾಲುಗಳ ಬಳಿ ಬಾಗಿ ನಮಸ್ಕರಿಸಲು ಅನುವು ಮಾಡಿಕೊಡಬೇಕು ಎಂದು ಮನವಿ ಮಾಡಿದರು. ಬಾಗಿ ಗೌರವಿಸುವ ಬದಲು ಕತ್ತಿಯಿಂದ ನಿಜಾಂ

ಉಲ್ಕ್ ಮುಲ್ಕ್‌ನ ಎದೆಯೊಳಕ್ಕೆ ಇರಿದರು. ಅವನು ಸ್ಥಳದಲ್ಲಿಯೇ ಅಸುನೀಗಿದನು. ನಿಜಾಂ ಉಲ್ ಮುಲ್ಕ್‌ನು ಇಬ್ಬರು ಯುವಕರನ್ನು ದತ್ತು ಪಡೆದಿದ್ದನು. ಅಬ್ದುಲ್ಲಾ ಯಗ್ರಾಶ್‌ಖಾನ್ ಹಾಗೂ ಫತುಲ್ಲಾಹ್ ವಫಾಖಾನ್‌ರನ್ನು ರಾಜಧಾನಿ ಬೀದರ್‌ಗೆ ಕಳುಹಿಸಲಾಯಿತು. ಅಲ್ಲಿ ಗೌರವದಿಂದ ಸ್ವಾಗತಿಸಿದ ನಂತರ ಹಜಾರಿಗಳನ್ನಾಗಿ ಮಾಡಿ ಆದಿಲ್‌ಖಾನ್ ಮತ್ತು ದರಿಯಾಖಾನ್ ಎಂಬ ಬಿರುದು ನೀಡಲಾಯಿತು. ಖೇರ್ಲಾದಲ್ಲಿ ನಡೆದ ಘಟನೆಯ ಮಾಹಿತಿ ದೊರೆಯುತ್ತಿದ್ದಂತೆಯೇ ಖಲ್ಜಿಯು ಅನಾರೋಗ್ಯದ ನಡುವೆಯೂ ಸ್ವತಃ ರಣರಂಗಕ್ಕೆ ಧಾವಿಸಿದ. ಅದೇ ಹೊತ್ತಿಗೆ ಮಹಮೂದ್ ಗಾವಾನ್‌ನು ದಖನಿ ಸೈನ್ಯದ ಜೊತೆಗಿನ ಸಂಪರ್ಕ ಕಡಿದು ಹೋಗುವ ಭೀತಿಯಿಂದ ಫತಾಬಾದ್‌ನಿಂದ ಹೊರಟನು. ಇದರಿಂದಾಗಿ ಖಲ್ಜಿಯು ಮಾಳ್ವದ ರಾಜಧಾನಿಗೆ ಮರಳಬೇಕಾಯಿತು. ಮಾಳ್ವದ ವಿರುದ್ಧದ ದಾಳಿಯು ದಖನಿ ಸೈನ್ಯಕ್ಕೆ ಗೆಲುವು ದೊರಕುವುದರಲ್ಲಿ ಅಂತ್ಯಗೊಂಡಿತು. ನಂತರ ಮಹಮೂದ್ ಗಾವಾನ್‌ನ ಜಾಣ್ಮೆ ಮತ್ತು ರಾಜತಾಂತ್ರಿಕ ಪ್ರಯತ್ನದ ಫಲವಾಗಿ ಮಾಳ್ವ ಮತ್ತು ಬಹಮನಿ ಸಾಮ್ರಾಜ್ಯದ ನಡುವಿನ ಭಿನ್ನಾಭಿಪ್ರಾಯ ಶಾಶ್ವತವಾಗಿ ಅಂತ್ಯ ಕಂಡಿತು. ಉಭಯ ರಾಜ್ಯಗಳ ನಡುವೆ ಶಾಂತಿ ಒಪ್ಪಂದ ನಡೆದು ಖೇರ್ಲಾವನ್ನು ಮಾಳ್ವಕ್ಕೂ ಬೆರಾರ್‌ನ್ನು ಬಹಮನಿಗೂ ಬಿಟ್ಟುಕೊಡುವ, ಸ್ನೇಹ ಸಂಬಂಧವನ್ನು ಮುಂದುವರೆಸಲು ನಿರ್ಧರಿಸಲಾಯಿತು. ಬಹಮನಿ ಸಾಮ್ರಾಜ್ಯದ ಅಸ್ತಿತ್ವ ಇರುವವರೆಗೂ ಈ ಒಪ್ಪಂದ ಜಾರಿಯಲ್ಲಿತ್ತು.

ಒರಿಸ್ಸಾದ ಕಪಿಲೇಶ್ವರನು ನಡೆಸಿದ ದೌರ್ಜನ್ಯದ ಕಾರಣದಿಂದಾಗಿ ನಡೆದ ಕದನದಲ್ಲಿ ಖ್ವಾಜಾ ಜಹಾನ್ ಟರ್ಕ್‌ನ ಕೈಯಲ್ಲಿ ಸೋಲು ಅನುಭವಿಸಬೇಕಾಗಿತ್ತು. 1470ರಲ್ಲಿ ವಿಜಯನಗರ ಮತ್ತು ಬಹಮನಿಗಳ ಜಂಟಿ ಸೈನ್ಯದ ವಿರುದ್ಧ ಮತ್ತೊಂದು ಸೋಲು ಅನುಭವಿಸುವ ಮೂಲಕ ಕೊನೆಯ ದಿನಗಳು ದುರ್ಭರಗೊಂಡವು. ವಿಜಯನಗರದ ದೊರೆ ವಿರೂಪಾಕ್ಷನನ್ನು ಸಿಂಹಾಸನದಿಂದ ಕೆಳಗಿಳಿಸಿ ಸಾಳುವ ನರಸಿಂಹ ಅಧಿಕಾರಕ್ಕೆ ಬಂದ. ಅದೇ ಹೊತ್ತಿಗೆ ಒರಿಸ್ಸಾದ ದೊರೆ ಅನಾರೋಗ್ಯದಿಂದ ಅಸುನೀಗಿದ ಸುದ್ದಿಯೊಂದಿಗೆ ಮಂಗಲ್ ರೈ ಪಿತೂರಿ ನಡೆಸಿ ಸಿಂಹಾಸನ ವಶಪಡಿಸಿಕೊಂಡ ಸುದ್ದಿಯು ಬೀದರ್ ತಲುಪಿತು. ನ್ಯಾಯಯುತವಾಗಿ ಅಧಿಕಾರಕ್ಕೆ ಬರಬೇಕಾಗಿದ್ದ ಹಮ್‌ವೀರ್ ತನಗೆ ಸಹಾಯ ಮಾಡಬೇಕು ಎಂದು ಕೋರಿ ಬಹಮನಿ ಸುಲ್ತಾನ್‌ನಿಗೆ ಪತ್ರ ಬರೆದನು. ಹುಮಾಯೂನ್‌ನ ಆಡಳಿತದ ಅವಧಿಯಲ್ಲಿ ತೆಲಂಗಾಣದಲ್ಲಿ ನಡೆದ ಕದನದ ಸಂದರ್ಭದಲ್ಲಿ ಬಹಮನಿ ಸೈನ್ಯಕ್ಕೆ ಹಿನ್ನಡೆ ಉಂಟಾಗುವಂತೆ ಮಾಡುವುದಕ್ಕಾಗಿ ಒರಿಸ್ಸಾದ ಕಪಿಲೇಶ್ವರನು ಲಿಂಗನ ಸಹಾಯಕ್ಕೆ ಇದೇ ಹಮ್‌ವೀರ್‌ನನ್ನು ಕಳುಹಿಸಿದ್ದ. ಅಲ್ಲಿಂದ ಈಚೆಗೆ ಬಹಮನಿ

ಸಾಮ್ರಾಜ್ಯದ ವರ್ಚಸ್ಸಿನಲ್ಲಿ ಭಾರೀ ಪ್ರಮಾಣದ ಬದಲಾವಣೆ ಉಂಟಾಗಿತ್ತು. ಅದಕ್ಕೆ ಗಾವಾನ್‌ನ ನೇತೃತ್ವದಲ್ಲಿ ದೊರೆತ ಸೈನಿಕ ವಿಜಯಗಳು, ವಿಜಯನಗರದ ಜೊತೆಗಿನ ಸೌಹಾರ್ದಯುತ ಸಂಬಂಧ ಕಾರಣವಾಗಿದ್ದವು. ಹಮ್‌ವೀರ್‌ನ ಪತ್ರ ತಲುಪುತ್ತಿದ್ದಂತೆಯೇ ಸುಲ್ತಾನ್‌ನು ಸಮರ ಸಭೆಯನ್ನು ಕರೆದನು. ಸುಲ್ತಾನ್‌ನಿಗೆ ಪ್ರಿಯನಾಗಿದ್ದ ಮಲಿಕ್ ಹಸನ್ ಬಾಸ್ರಿಯು ತಾನು ದಂಡೆತ್ತಿ ಹೋಗುವ ಇಂಗಿತ ವ್ಯಕ್ತಪಡಿಸಿದನು. ಗಾವಾನ್‌ನ ಸೂಚನೆಯ ಮೇರೆಗೆ ಬಾಸ್ರಿಗೆ ಓರಿಸ್ಸಾದ ಕಡೆಗೆ ಹೋಗಲು ಅನುಮತಿ ನೀಡಲಾಯಿತು. ಮಂಗಲ್ ರೈ ಒರಿಸ್ಸಾದಿಂದ ಓಡಿ ಹೋಗುವಂತೆ ಮಾಡಿ ಹಮ್‌ವೀರ್‌ನಿಗೆ ಸಿಂಹಾಸನದ ಹೊಣೆಗಾರಿಕೆ ವಹಿಸಲಾಯಿತು. ಅಲ್ಲಿಗೇ ನಿಲ್ಲದ ಬಾಸ್ರಿಯು ರಾಜಮಹೇಂದ್ರಿ ಹಾಗೂ ರೆಡ್ಡಿಗಳ ರಾಜಧಾನಿಯಾಗಿದ್ದ ಕೊಂಡವೀಡು ಕೋಟೆಯವರೆಗೂ ಮುಂದುವರೆದ. ಯಶಸ್ಸಿನೊಂದಿಗೆ ಮರಳಿದಾಗ ಸುಲ್ತಾನ್‌ನು ರಾಣಿ ನರ್ಗೀಸ್‌ಬೇಗಂ ಹಾಗೂ ಗಾವಾನ್‌ನ ಜೊತೆ ಸಮಾಲೋಚನೆ ನಡೆಸಿ ತೆಲಂಗಾಣದ ರಾಜ್ಯಪಾಲನನ್ನಾಗಿ ನೇಮಿಸಿದ. ಬಾಸ್ರಿಗೆ ನಿಜಾಂ ಉಲ್ ಮುಲ್ಕ್ ಬಿರುದು ನೀಡಿ ಗೌರವಿಸಲಾಯಿತು.

## ಪಶ್ಚಿಮದ ದಂಡಯಾತ್ರೆಗಳು

ಉತ್ತರ ಮತ್ತು ಪೂರ್ವದ ಗಡಿಗಳನ್ನು ಬಲಪಡಿಸಿದ ನಂತರ ಪಶ್ಚಿಮದ ಕರಾವಳಿ ತೀರದ ಕಡೆಗೆ ಗಮನ ಹರಿಸುವುದು ಅನಿವಾರ್ಯ ಆಯಿತು. ಕೊಂಕಣ ಮತ್ತು ದೇಶ್ ಪ್ರದೇಶಗಳು ನಾಮಕಾವಸ್ತೆ ಬಹಮನಿ ಸಾಮ್ರಾಜ್ಯಕ್ಕೆ ಸೇರ್ಪಡೆ ಆಗಿದ್ದವು. ವಾಸ್ತವಗಾಗಿ ಅವು ಸಂಪೂರ್ಣವಾಗಿ ಎಂದೂ ಬಹಮನಿಗೆ ಸೇರಿರಲಿಲ್ಲ. ಖಲಾಫ್ ಹಸನ್ ಬಾಸ್ರಿ ಮತ್ತು ಸಂಗಡಿಗರ ಮಾರಣಹೋಮದ ನಂತರ ಬಹಮನಿ ಸೈನ್ಯದ ಸಾಮರ್ಥ್ಯದ ಬಗ್ಗೆ ಶಂಕಿಸುವಂತಾಗಿತ್ತು. ಖೇಲ್ನಾ ಮತ್ತು ಸಂಗಮೇಶ್ವರದ ರಾಯ ದೊರೆಗಳು ಶಕ್ತಿಶಾಲಿಯಾಗಿ ಪ್ರಾಬಲ್ಯ ಮೆರೆಯುತ್ತಿದ್ದರು. ಅರಬ್ಬಿ ಸಮುದ್ರದ ಮೂಲಕ ನಡೆಯುತ್ತಿದ್ದ ವ್ಯಾಪಾರ ವಹಿವಾಟುಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವಂತೆ ವರ್ತಿಸುತ್ತಿದ್ದರು. ನೂರಾರು ದೋಣಿಗಳನ್ನು ಕಳುಹಿಸಿ ವ್ಯಾಪಾರಿ ಹಡಗುಗಳ ಜೊತೆ ಕದನಕ್ಕೆ ಇಳಿಯುತ್ತಿದ್ದರು. ಸಂಗಮೇಶ್ವರದ ರಾಯನೊಬ್ಬನೇ ಮೆಕ್ಕಾ ಯಾತ್ರೆಗೆ ತೆರಳುತ್ತಿದ್ದವರನ್ನು ದೋಚುವುದಕ್ಕಾಗಿ ಪ್ರತಿವರ್ಷ 130ಕ್ಕೂ ಹೆಚ್ಚು ದೋಣಿಗಳನ್ನು ಕಳುಹಿಸುತ್ತಿದ್ದ. ದುರಾಸೆಯ ಜನರಿಂದಾಗಿ ಯಾತ್ರೆಗೆ ತೆರಳುತ್ತಿದ್ದ ಸಾವಿರಾರು ಜನ ಸಂಕಷ್ಟಕ್ಕೆ ಈಡಾಗಬೇಕಾಗುತ್ತಿತ್ತು. ಕಡಲ್ಗಳ್ಳರ ಹಾವಳಿಯಿಂದಾಗಿ ವ್ಯಾಪಾರ ವಹಿವಾಟಿಗೆ ಹಿನ್ನೆಡೆ ಉಂಟಾಗಿತ್ತು. ಈ ದಾಳಿಗಳ ಮೂಲಕ ದೋಚುವುದರಿಂದ ಸ್ಥಳೀಯ ದೊರೆಗಳು ಸಿರಿವಂತರಾಗಿದ್ದರೂ ಜನ

ಕಷ್ಟಕ್ಕೆ ಸಿಲುಕಿದ್ದರು. ಹಲವಾರು ಬಾರಿ ಎಚ್ಚರಿಸಿದರೂ ಯಾವುದೇ ರೀತಿಯ ಪರಿಣಾಮ ಆಗಿರಲಿಲ್ಲ. ಪ್ರವಾಸಿಗಳು ಕೊಂಡೊಯ್ಯುತ್ತಿದ್ದ ವಸ್ತುಗಳನ್ನು ಸ್ಥಳೀಯ ರಾಯ ದೊರೆಗಳು ವಶಪಡಿಸಿಕೊಂಡಿದ್ದು ಕರಾವಳಿ ಮೇಲೆ ದಾಳಿ ನಡೆಸುವುದಕ್ಕೆ ತಕ್ಷಣದ ಕಾರಣ ಆಗಿತ್ತು.

ಮೊದಲನೇ ದಾಳಿಯ ನೇತೃತ್ವವನ್ನು ಸ್ವತಃ ಸುಲ್ತಾನ್‌ನೆ ವಹಿಸಿಕೊಂಡಿದ್ದ. ಹುಬ್ಬಳಿಯನ್ನು ವಶಪಡಿಸಿಕೊಂಡು ಅಪಾರ ಪ್ರಮಾಣ ಕಪ್ಪ ಕೊಡುವುದು ಅನಿವಾರ್ಯ ಆಗುವಂತೆ ಮಾಡಿದ್ದ. ನಂತರದ ಹಂತದಲ್ಲಿ ಪಶ್ಚಿಮದ ಕರಾವಳಿಯ ಮೇಲೆ ದಾಳಿ ನಡೆಸುವುದಕ್ಕೆ ಈ ಯಾತ್ರೆಯು ಪ್ರೇರಣೆ ಒದಗಿಸಿತು.

1469–70ರಲ್ಲಿ ಮಹಮೂದ್ ಶಹಾನೇ ಕೊಂಕಣದ ಮೇಲೆ ದಾಳಿ ನಡೆಸಿ ಶಾಂತಿ ಸ್ಥಾಪಿಸುವ ಇರಾದೆ ವ್ಯಕ್ತಪಡಿಸಿದ. ಹಿಂದಿನ ಬಾರಿಯಂತೆ ಸ್ವತಃ ಅರಸನೇ ದಾಳಿಯ ನೇತೃತ್ವ ವಹಿಸಲು ಬಯಸಿದ್ದ. ಆದರೆ, ಮಹಮೂದ್ ಗಆವಾನ್‌ನು ಅರಸ ಆ ಕಷ್ಟ ಮೈಮೇಲೆ ಎಳೆದುಕೊಳ್ಳದಂತೆ ಮನವರಿಕೆ ಮಾಡಿ, ತಾನೊಬ್ಬನೇ ದಂಡಯಾತ್ರೆ ಮುಂದುವರೆಸಲು ಅನುವು ಮಾಡಿಕೊಡುವಂತೆ ಕೋರಿದ. ಅರಸನ ಸೂಚನೆಯ ಮೇರೆಗೆ ತನ್ನ ಸೈನ್ಯದೊಂದಿಗೆ ಕೊಲ್ಹಾಪುರದತ್ತ ಪ್ರಯಾಣ ಬೆಳೆಸಿದ ಕೊಲ್ಹಾಪುರವನ್ನು ಕೇಂದ್ರವನ್ನಾಗಿ ಮಾಡಿಕೊಂಡು ದಾಳಿ ನಡೆಸಲು ಯೋಚಿಸಿದ. ಬಹಮನಿ ಸೈನ್ಯ ಆಗಮಿಸುತ್ತಿರುವುದರ ಸೂಚನೆ ಅರಿತ ರಾಯರು ಘಟ್ಟ ಪ್ರದೇಶವನ್ನು ಪ್ರವೇಶಿಸುವುದು ಸಾಧ್ಯವಾಗದಂತೆ ದಾರಿಗಳನ್ನು ಮುಚ್ಚಿಬಿಟ್ಟರು. ಬಹಮನಿ ಸೈನ್ಯ ಮುಂದುವರೆದರೆ ತಮ್ಮ ಆಡಳಿತದ ವ್ಯಾಪ್ತಿಯಲ್ಲಿ ಇರುವ ಎಲ್ಲ ಮುಸ್ಲಿಮ್‌ರನ್ನು ಕೊಂದು ಹಾಕುವುದಾಗಿ ಬೆದರಿಕೆ ಹಾಕಿದರು. ಬೆಟ್ಟ ಪ್ರದೇಶದಲ್ಲಿ ತನ್ನ ಪದಾತಿಗಳದಿಂದ ಯಾವುದೇ ರೀತಿಯ ಉಪಯೋಗ ಆಗುವುದಿಲ್ಲ ಎಂದು ಅರಿಯಲು ಗಾವಾನ್‌ನಿಗೆ ಹೆಚ್ಚು ಹೊತ್ತು ಬೇಕಾಗಲಿಲ್ಲ. ಅದಕ್ಕಾಗಿ ತನ್ನ ಸೈನ್ಯವನ್ನು ಮರಳಿ ಕಳುಹಿಸಿದ. ಬಿಜಾಪುರದ ಹೊಸ ಸೈನ್ಯದೊಂದಿಗೆ ಕೀಶ್ವರಖಾನ್ ಎಂದು ನಂತರ ಖ್ಯಾತನಾದ ಖುಷ್ ಕದಂನು ದಾಬುಲ್, ಕರ್‍ಹಾಡ್‌ನ ಸೈನ್ಯವನ್ನು ಸೇರಿಸಿದ. ಈ ಮಧ್ಯೆ ಅಸದ್‌ಖಾನ್‌ನ ಜುನ್ನಾರ್ ಮತ್ತು ಚಾಕಣದ ಸೈನ್ಯವು ಬಂದು ಸೇರಿಕೊಂಡಿತು. ಚೌಲ್, ವಾಯ್ ಮತ್ತು ಮನ್‌ದ ಸಹಾಯ ಕೂಡ ಜೊತೆಗೂಡಿತು. ದಟ್ಟ ಕಾಡಿನ ಪ್ರದೇಶದಲ್ಲಿ ಪ್ರಯಾಣ ಮುಂದುವರೆಸಬೇಕಿದ್ದರೆ ಮರಗಳನ್ನು ಕಡಿದು ದಾರಿ ಮಾಡಿಕೊಳ್ಳಬೇಕಿತ್ತು. ಆಗ ಮಲೆಗಳಲ್ಲಿ ವಾಸಿಸುತ್ತಿದ್ದ ವೈರಿಪಡೆಗಳು ಗೆರಿಲ್ಲಾ ಯುದ್ಧತಂತ್ರದ ಮೊರೆ ಹೋಗುತ್ತಿದ್ದರು. ಇದು ಹಲವು ವಾರಗಳ ಕಾಲ ಮುಂದುವರೆಯಿತು. ಮಳೆಗಾಲ ಆರಂಭವಾದದ್ದರಿಂದ ಗಾವಾನ್‌ನು ಕೊಲ್ಹಾಪುರಕ್ಕೆ ಮರಳಿ ಅಲ್ಲಿಯೇ ಉಳಿದುಕೊಂಡನು.

ಮಳೆ ಕಡಿಮೆಯಾಗುತ್ತಿದ್ದಂತೆಯೇ ಗಾವಾನ್‌ನು ರೈಗಣ ಕೋಟೆಯನ್ನು ವಶಪಡಿಸಿಕೊಂಡನು. ನಂತರದ ಸರದಿ ಮಾಚಲ ಕೋಟೆಯದಾಗಿತ್ತು. ಖೇಲ್ನಾ, ಜಾಹುರಿಗಳ ಗೆರಿಲ್ಲಾ ಮಾದರಿಯ ಯುದ್ಧದ ನಡುವೆಯೂ ಅವುಗಳನ್ನು ವಶಕ್ಕೆ ತೆಗೆದುಕೊಂಡ. ಜಾಖುರಿ, ಬಲ್ವಾರ, ಮಿರಿಯಾದ್, ನಗರ ಕೋಟೆಗಳು ಕೂಡ ಗಾವಾನ್‌ನವ ವಶವಾದವು. ಖಲಾಫ್ ಹಸನ್‌ನ ಹತ್ಯೆಗೆ ಕಾರಣನಾಗಿದ್ದ ಸಂಗಮೇಶ್ವರದ ಕೋಟೆಯನ್ನೂ ತನ್ನದಾಗಿಸಿಕೊಳ್ಳುವ ಮುನ್ನ ಹೆಚ್ಚಿನ ಸೈನ್ಯ ಕಳುಹಿಸುವಂತೆ ಕೋರಿ ರಾಜಧಾನಿಗೆ ಕಳುಹಿಸಿದ ಪತ್ರಕ್ಕೆ ಯಾವುದೇ ರೀತಿಯ ಆಶಾದಾಯಕ ಪ್ರತಿಕ್ರಿಯೆ ವ್ಯಕ್ತವಾಗಿರಲಿಲ್ಲ.

ವಿಜಯನಗರದ ಅರಸರ ವಶದಲ್ಲಿದ್ದ ಗೋವಾ ವಶಪಡಿಸಿಕೊಳ್ಳುವುದಕ್ಕೆ ಗಾವಾನ್ ನಿರ್ಧರಿಸಿದ. ಅರಬ್ಬಿ ಕುದುರೆಗಳನ್ನು ಬಹಮನಿ ಸೈನ್ಯಕ್ಕೆ ಮಾರಾಟ ಮಾಡಿದ ಕಾರಣಕ್ಕಾಗಿ ಹತ್ತು ಸಾವಿರ ಜನರ ಹತ್ಯೆ ಮಾಡಲಾಗಿತ್ತು. ವಿಜಯನಗರದ ಪ್ರಮುಖ ವ್ಯಾಪಾರಿ ಕೇಂದ್ರವಾಗಿದ್ದ ಗೋವಾ ವಶಪಡಿಸಿಕೊಳ್ಳುವ ಮೂಲಕ ತನ್ನ ಪ್ರಾಬಲ್ಯ ತೋರಿಸುವ ಇರಾದೆ ಗಾವಾನ್‌ನಿಗೆ ಇತ್ತು. ಅದಕ್ಕಾಗಿ ಕೇವಲ 14 ಮೈಲು ದೂರದಲ್ಲಿ ಬಿಡಾರ ಹೂಡಿದ್ದ. ತನ್ನ ಭೂಸೈನ್ಯ ಮಾತ್ರವಲ್ಲದೆ 120 ದೋಣಿಗಳನ್ನು ಸಮುದ್ರದ ಮುಖಾಂತರ ಕಳುಹಿಸಿದ್ದ. ಅರೇಬಿಯಾದ ಹುಲಿಗಳು, ಪರ್ಷಿಯಾದ ಸಿಂಹಗಳನ್ನು ಒಳಗಡೊಂಡಿದ್ದ ದೋಣಿಗಳು ಗೋವಾ ಕಡೆಗೆ ಪ್ರಯಾಣ ಬೆಳೆಸಿದ್ದವು. ಅಸದ್‌ಖಾನ್ ಮತ್ತು ಕೀಶ್ವರಖಾನ್ ನೇತೃತ್ವದ ಮುಖ್ಯಸೈನ್ಯ ದಾಳಿ ಆರಂಭಿಸಲು ಸನ್ನದ್ಧವಾಗಿತ್ತು. ವಿಜಯನಗರದ ಸೈನ್ಯದ ಗಮನ ಬೇರೆಡೆಗೆ ಸೆಳೆಯುವ ಉದ್ದೇಶದಿಂದ ಗಾವಾನ್‌ನು ತನ್ನ ಮಗ ಅಲಿ ಮಲಿಕ್‌ತುಜಾರ್ ನೇತೃತ್ವದ ಸೈನ್ಯ ಕಳುಹಿಸಿದ್ದ. ಹೆಚ್ಚಿನ ಪ್ರತಿರೋಧವಿಲ್ಲದೆ ಗೋವಾ ಬಹಮನಿ ಸಾಮ್ರಾಜ್ಯಕ್ಕೆ ಸೇರ್ಪಡೆಯಾಯಿತು. ಸತತ ಮೂರು ವರ್ಷಗಳಿಂದ ರಾಜಧಾನಿಯಿಂದ ದೂರವಿದ್ದ ಗಾವಾನ್ ಮರಳಿ ಬಂದ. ಅವನೇ ಆಶ್ಚರ್ಯ ಪಡುವಂತೆ ಅದ್ಧೂರಿ ಸ್ವಾಗತ ದೊರೆಯಿತು. ವಿಜಯೋತ್ಸವದ ಅಂಗವಾಗಿ ಏಳುದಿನಗಳ ಕಾಲ ನಗಾರಿ ಬಾರಿಸುವಂತೆ ಆದೇಶಿಲಾಯಿತು. ಸ್ವತಃ ಅರಸನೇ ಗಾವಾನ್‌ನ ಮನೆಗೆ ಭೇಟಿ ನೀಡಿ ತನ್ನ ಮೈಮೇಲಿನ ಪೋಷಾಕು ತೊಡಿಸಿದ. ಮಹಾರಾಣಿ ನರ್ಗಿಸ್‌ಬೇಗಂ ಮೊದಲ ಬಾರಿಗೆ ಪರದೆ ಧರಿಸಿದೇ ಗಾವಾನ್‌ನ ಮುಂದೆ ಬಂದು 'ನನ್ನ ಅಣ್ಣನ ಸಮಾನ' ಎಂದು ಕರೆದಳು. ಅಪಾರ ಪ್ರಮಾಣದ ಉಡುಗೊರೆಗಳನ್ನು ನೀಡಲಾಯಿತು. ಗಾವಾನ್ ಅದನ್ನೆಲ್ಲ ಬಡವರಿಗೆ ಹಂಚಿದ.

ಯುಸೂಫ್ ಆದಿಲ್‌ಖಾನ್‌ನನ್ನು ದೌಲತಾಬಾದ್ ಪ್ರಾಂತ್ಯದ ಗವರ್ನರ್ ಆಗಿ ನೇಮಿಸಲಾಯಿತು. ವಾಯುವ್ಯದ ಗಡಿಗಳಲ್ಲಿ ಹೆಚ್ಚಿದ ನುಸುಳುಕೋರರ

ಹಾವಳಿ ತಡೆಗಟ್ಟುವಂತೆ ಯುಸೂಫ್‌ನಿಗೆ ಸೂಚಿಸಲಾಯಿತು. ವೀರಖೇರ, ಅಂತೂರ್‌ಗಳು ಮರಾಠ ಮುಖ್ಯಸ್ಥರ ಕೈ ಸೇರಿದ್ದವು. ಅವುಗಳನ್ನು ಮರಳಿ ಪಡೆದ ಯುಸೂಫ್ ಅವರೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡ.

ಗೋವಾ ವಿಜಯದ ನಂತರ ವ್ಯಾಪಾರ ವಹಿವಾಟಿನ ಕೇಂದ್ರವನ್ನ ಕಳೆದುಕೊಂಡ ವಿಜಯನಗರದ ದೊರೆಗಳು ಅದನ್ನು ಮರಳಿ ಪಡೆಯಲು ಹೊಂಚು ಹಾಕಿದರು. ಅದಕ್ಕಾಗಿ ಬೆಳಗಾವಿ ಪರ್ಕೆತ ಮತ್ತು ಬಂಕಾಪುರದ ಸಾಮಂತರನ್ನು ಒಳಗೊಂಡ ಸೈನ್ಯವನ್ನು ಗೋವಾಕ್ಕೆ ಕಳುಹಿಸಿದರು. ಆಗ ಬಹಮನಿ ಸುಲ್ತಾನ್‌ನು ಸ್ವತಃ ಬೆಳಗಾವಿಯ ವಿರುದ್ಧ ದಂಡೆತ್ತಿ ಹೊರಟನು. 1473ರಲ್ಲಿ ನಡೆದ ಈ ಕದನದಲ್ಲಿ ಮೊದಲ ಬಾರಿಗೆ ಸಿಡಿಮದ್ದು ಬಳಸಲಾಯಿತು ಎಂದು ಫೆರಿಸ್ತಾ ದಾಖಲಿಸಿದ್ದಾನೆ. ಸತತ ಪ್ರಯತ್ನದ ನಂತರ ಬೆಳಗಾವಿ ವಿರುದ್ಧದ ಕದನದಲ್ಲಿ ಬಹಮನಿ ಸೈನ್ಯಕ್ಕೆ ಗೆಲುವು ದೊರೆಯತ್ತದೆ. ಸುಲ್ತಾನ್‌ನಿಗೆ 'ಲಷ್ಕರಿ' ಬಿರುದು ಪ್ರಾಪ್ತವಾಯಿತು. ಬೆಳಗಾವಿಯಿಂದ ಮರಳಿ ಬರುವ ಸಂದರ್ಭದಲ್ಲಿ ಮಹಾರಾಣಿ ನರ್ಗೀಸ್‌ಬೇಗಂ ಬಿಜಾಪುರದ ಬಳಿಯಲ್ಲಿ ಅಸು ನೀಗಿದಳು. ಅವಳ ಶವವನ್ನು ರಾಜಧಾನಿಗೆ ತಂದು ಅಷ್ಟೂರು ಗ್ರಾಮದ ಬಳಿ ಇರುವ ಬಹಮನಿ ಅರಸರ ಸಾಲಿನಲ್ಲಿ ಶವಸಂಸ್ಕಾರ ನಡೆಸಲಾಯಿತು.

ಗಾವಾನ್ ಆಡಳಿತಾತ್ಮಕ ಸುಧಾರಣೆಗಳನ್ನು ಜಾರಿಗೆ ತಂದನು. ನಿರ್ವಹಣೆ ಸುಲಭ ಮಾಡುವ ಉದ್ದೇಶದಿಂದ ನಾಲ್ಕು ಪ್ರಾಂತ್ಯಗಳನ್ನು ವಿಭಾಗಿಸಿ ಎಂಟು ಪ್ರಾಂತ್ಯಗಳನ್ನಾಗಿ ಮಾಡಿದನು. ಗಾವಾನ್‌ನ ಜನಪ್ರಿಯತೆಯನ್ನು ಸಹಿಸದ ಕೆಲವರು ಅವನ ವಿರುದ್ಧ ಪಿತೂರಿ ನಡೆಸಿದರು. ಗಾವಾನ್‌ನ ಆಪ್ತಕಾರ್ಯದರ್ಶಿಯನ್ನು ಪುಸಲಾಯಿಸಿ ಖಾಲಿ ಪತ್ರದ ಮೇಲೆ ಮುದ್ರೆ ಪಡೆದುಕೊಂಡರು. ಪತ್ರದಲ್ಲಿ ಒರಿಸ್ಸಾದ ದೊರೆಗೆ ಬಹಮನಿ ಸಾಮ್ರಾಜ್ಯದ ಮೇಲೆ ದಾಳಿ ನಡೆಸುವಂತೆ ಕೋರಿ ಗಾವಾನ್ ಬರೆದಂತೆ ವಿವರಗಳನ್ನು ದಾಖಲಿಸಿ ಅದನ್ನು ಕುಡಿದ ಅಮಲಿನಲ್ಲಿ ಇದ್ದ ಸುಲ್ತಾನ್‌ನಿಗೆ ತೋರಿಸಲಾಯಿತು. ತಕ್ಷಣ ಗಾವಾನ್‌ನನ್ನು ಕರೆಸಿದ ಸುಲ್ತಾನ್‌ನು 'ರಾಜದ್ರೋಹ ಸಾಬೀತಾದರೆ ಏನು ಶಿಕ್ಷೆ'? ಎಂದು ಪ್ರಶ್ನಿಸಿದ. ಅದಕ್ಕೆ ಗಾವಾನ್‌ನು ತಲೆದಂಡ ಎಂದು ಮಾರುತ್ತರ ನೀಡಿದ. ಆಗ ದೊರೆಯು ಪತ್ರವನ್ನು ಗಾವಾನ್‌ನ ಕೈಗೆ ನೀಡಿದ. 'ಪತ್ರದಲ್ಲಿ ಇರುವ ಮುದ್ರೆ ನನ್ನದು ವಿವರಗಳ ಬಗ್ಗೆ ತನಗೇನೂ ತಿಳಿದಿಲ್ಲ' ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ. ಆದರೆ, ಅಮಲಿನಲ್ಲಿ ಇದ್ದ ದೊರೆಯು ಅದನ್ನ ತಲೆಯಲ್ಲಿ ಹಾಕಿಕೊಳ್ಳದೆ ರಾಣಿವಾಸಕ್ಕೆ ತೆರಳಿದ. ಇದಕ್ಕಾಗಿಯೇ ಕಾಯುತ್ತಿದ್ದ ಹಬಶಿ ಗುಲಾಮನು ಗಾವಾನ್‌ನ ತಲೆ ಕಡಿದನು. ಅದರೊಂದಿಗೆ ಬಹಮನಿ ಸಾಮ್ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸಿದ

ಮಹಾನ್ ಚೇತನವೊಂದರ ಅಂತ್ಯವಾಯಿತು. ಅದು ಇಡೀ ಸಾಮ್ರಾಜ್ಯದ ಕುಸಿತಕ್ಕೆ ನಾಂದಿ ಹಾಡಿತು.

ನಂತರದ ದಿನಗಳಲ್ಲಿ ನಿಷ್ಪಾಪಿ ಗಾವಾನ್‌ನ ಹತ್ಯೆಯ ಮೂಲಕ ಮಾಡಿದ ತಪ್ಪು ದೊರೆಯ ಗಮನಕ್ಕೆ ಬರಲು ಹೆಚ್ಚು ಸಮಯ ಬೇಕಾಗಲಿಲ್ಲ. ತನ್ನ ತಪ್ಪಿನ ಅರಿವಾಗಿ ಸುಲ್ತಾನ್‌ನು ರಾಜ್ಯದ ಆಡಳಿತದ ಕಡೆಗೆ ನಿಗಾವಹಿಸದೇ ಫಿರೋಜಾಬಾದ್‌ಗೆ ಹೋಗಿ ಅಲ್ಲಿಯೇ ಉಳಿದುಕೊಂಡನು. ಗಾವಾನ್‌ನ ಹತ್ಯೆಯಾಗಿ ಒಂದು ವರ್ಷ ಪೂರೈಸಿದ ದಿನ ಮಾನಸಿಕವಾಗಿ ಅಸ್ವಸ್ಥನಾಗಿದ್ದ ಸುಲ್ತಾನ್ ಕೂಡ ಅಸು ನೀಗಿದ.

## ಶಿಹಾಬುದ್ದೀನ್ ಮಹಮೂದ್

(26 ಮಾರ್ಚ್1482 ರಿಂದ 7 ಡಿಸೆಂಬರ್ 1518)

ಎರಡುವರೆ ದಶಕಗಳಿಗಿಂತಲೂ ಹೆಚ್ಚು ಕಾಲ ಆಡಳಿತ ನಡೆಸಿದ ಶಿಹಾಬುದ್ದೀನ್ ಮಹಮೂದ್ ಶಹಾನ ಅವಧಿಯು ಸಾಮ್ರಾಜ್ಯವು ನಿಧಾನವಾಗಿ ಅವನತಿಯತ್ತ ಸಾಗಿರುವುದಕ್ಕೆ ಸಾಕ್ಷಿಯಾಯಿತು. ಆರಂಭದ ಶಕ್ತಿಶಾಲಿ ಅರಸರಿಂದಾಗಿ ಗುಲ್ಬರ್ಗ ಮತ್ತು ಪ್ರತಿಭಾಶಾಲಿ ಪ್ರಧಾನಿಗಳಿಂದ ಬೀದರ್‌ನಲ್ಲಿ ಬಹಮನಿ ಸಾಮ್ರಾಜ್ಯವು ಗಮನಾರ್ಹ ಸಾಧನೆ ಮಾಡಿತು. ಆದರೆ, ನಾಯಕತ್ವದ ಕೊರತೆಯಿಂದ ದಯನೀಯ ಸ್ಥಿತಿ ತಲುಪಿತು. ನಿಷ್ಠೆ ಮತ್ತು ದೇಶಪ್ರೇಮವು ಕಡಿಮೆಯಾಗುತ್ತ ವಿದಳನದತ್ತ ಮುಖ ಮಾಡಿತು. ಪ್ರಬಲರು ಮಹಮೂದ್ ಶಹಾನನ್ನು ನಿಯಂತ್ರಿಸಲು ಪ್ರಯತ್ನಿಸಿದರು. ಅದರ ಫಲವಾಗಿ ಪ್ರಾಬಲ್ಯವು ಕೇವಲ ರಾಜಧಾನಿಯ ಸುತ್ತಲಿನ ಪ್ರದೇಶ ಮಾತ್ರ ಸೀಮಿತವಾಯಿತು.

ಮಹಮೂದ್ ಸಿಂಹಾಸನ ಏರಿದಾಗ ಅವನಿಗೆ ಕೇವಲ 12 ವರ್ಷ ವಯಸ್ಸು. ಅಫಾಕಿಗಳಿಂದ ಅಧಿಕಾರ ಕಿತ್ತುಕೊಂಡು ದಖನ್ನಿಗಳು ಮಲಿಕ್ ನಾಯಬ್ ಹಸನ್ ನಿಜಾಂ ಉಲ್ ಮುಲ್ಕ್ ಬಹ್ರಿ ನೇತೃತ್ವದಲ್ಲಿ ಪ್ರಾಬಲ್ಯಕ್ಕೆ ಬಂದಿದ್ದರು. ಸುಲ್ತಾನ್ ಆರೋಹಣ ಮಾಡುವಾಗ ಎಂದಿನಂತೆ ಶಹಾ ಹಬೀಬ್ ಅಲ್ಲಾ ಮತ್ತು ಸೈಯದ್ ಹಬೀದ್ ಅರಸನ ಇಬ್ಬದಿಗಳಲ್ಲಿ ಜೊತೆಗಿದ್ದರು. ಇಬ್ಬರೂ ಧಾರ್ಮಿಕ ಮುಖಂಡರು ದೊರೆಗೆ ದೀರ್ಘ ಆಯಸ್ಸು ಮತ್ತು ಯಶಸ್ಸು ಸಿಗಲಿ ಎಂದು ಹಾರೈಸಿದರು. ಮಲಿಕ್ ನಾಯಬ್ ನೇತೃತ್ವದಲ್ಲಿ ಹಿರಿಯ ಖಿವಾಮ್ ಉಲ್ ಮುಲ್ಕ್, ಕಿರಿಯ ಖಿವಾಮ್ ಉಲ್ ಮುಲ್ಕ್, ಕಾಸಿಂ ಬರೀದ್ ಉಪಸ್ಥಿತರಿದ್ದು ಅರಸನಿಗೆ

ಶುಭ ಕೋರಿದರು. ಆದರೆ, ಯುಸೂಫ್ ಆದಿಲ್‌ಖಾನ್, ದರಿಯಾಖಾನ್, ಫತುಲ್ಲಾಹ್ ಇಮಾದ್ ಉಲ್ ಮುಲ್ಕ್, ಮಲ್ಲುಖಾನ್ ಸಿಂಹಾಸನ ಆರೋಹಣಕ್ಕೆ ಗೈರುಹಾಜರಾದದ್ದು ಎದ್ದು ಕಾಣಿಸುವಂತಿತ್ತು. ಗೈರುಹಾಜರಿಗೆ ಬಂದವರನ್ನು 'ಕೆಳಗಿಳಿಸುವ, ಕಟ್ಟಳೆ ವಿಧಿಸುವ' ಮಲಿಕ್ ನಾಯಬ್ ಹೊರಡಿಸಿದ್ದ ಆದೇಶ ಪ್ರಮುಖ ಕಾರಣ ಆಗಿತ್ತು.

ವಿಜಯನಗರದ ವಿರುದ್ಧ ಯುದ್ಧಕ್ಕೆ ಹೋಗಿದ್ದ ಯುಸೂಫ್ ಆದಿಲ್‌ಖಾನ್‌ನು ಸುಲ್ತಾನ್ ಮಹಮೂದ್ ನಿಧನದ ಸುದ್ದಿ ತಿಳಿಯುತ್ತಿದ್ದಂತೆಯೇ ಮಲ್ಲುಖಾನ್, ದರಿಯಾಖಾನ್, ಫಕ್ರುಲ್ ಮುಲ್ಕ್ ಅವರೊಂದಿಗೆ ರಾಜಧಾನಿಗೆ ಆಗಮಿಸಿದ. ಅವನಿಗೆ ಸಾವಿರ ಮೊಗಲ್ ಮತ್ತು ಟರ್ಕಿ ಯುವಕರ ಪಡೆ ಬೆಂಗಾವಲಿಗಿತ್ತು. ಪ್ರಧಾನಿ ನಿಜಾಮ್ ಉಲ್ ಮುಲ್ಕ್‌ನು ವಾರಂಗಲ್‌ನಲ್ಲಿ ಇದ್ದ ಫತ್ಹುಲ್ಲಾ ಇಮಾದ್ ಉಲ್ ಮುಲ್ಕ್‌ನಿಗೆ ಸಿದ್ಧವಾಗಿರುವಂತೆ ಸೂಚಿಸುವ ಸಂದೇಶವನ್ನು ಆದಿಲ್‌ಖಾನ್ ದಖನಿಯ ಮೂಲಕ ಕಳುಹಿಸಲಾಗಿತ್ತು. ರಾಜಧಾನಿಯ ಹೊರವಲಯದಲ್ಲಿ ಬಿಡಾರ ಹೂಡಿದ ಯುಸೂಫ್ ತನ್ನೆಲ್ಲ ಪರಿವಾರವನ್ನು ಅಲ್ಲಿಯೇ ಬಿಟ್ಟು ಅರಸನಿಗೆ ಗೌರವ ಸಲ್ಲಿಸುವುದಕ್ಕಾಗಿ ಅರಮನೆಯತ್ತ ನಡೆದ. ಅರಮನೆಯಲ್ಲಿ ದಾಳಿ ನಡೆಯಬಹುದು ಎಂಬ ಭಯದಿಂದ 200 ಜನ ಟರ್ಕಿರ್ಗಳ ಸಶಸ್ತ್ರಪಡೆಯನ್ನು ಜೊತೆಗಿರಿಸಿಕೊಂಡಿದ್ದ. ಮಲಿಕ್ ನಾಯಬ್ ಕೂಡ ಅರಮನೆಯೊಳಕ್ಕೆ 500 ಸೈನಿಕರ ಪಡೆಯನ್ನು ಜೊತೆಯಲ್ಲಿ ಕರೆತಂದಿದ್ದ. ಮಲಿಕ್ ನಾಯಬ್‌ನ ನೇತೃತ್ವದಲ್ಲಿ ಮೆರವಣಿಗೆ ಆರಂಭವಾಯಿತು. ಯುಸೂಫ್ ಅವನ ಹಿಂದೆ ಕಾಸಿಂ ಬರೀದ್ ಕೂಡ ಜೊತೆಯಲ್ಲಿದ್ದ. ತಖ್ತ್‌ಮಹಲ್‌ನಲ್ಲಿ ನಿಜಾಂ ಉಲ್ ಮುಲ್ಕ್‌ಗಿಂತ ಯುಸೂಫ್ ಆದಿಲ್‌ಖಾನ್‌ನಿಗೇ ಹೆಚ್ಚು ಪ್ರಾಮುಖ್ಯತೆ ದೊರೆಯಿತು. ಯುಸೂಫ್‌ನ ನಂತರ ದರಿಯಾಖಾನ್ ತಖ್ತ್‌ಮಹಲ್ ಪ್ರವೇಶಿಸಿದ. ಅವನ ನಂತರ ಚಾಕಣ ಮತ್ತು ಜುನ್ನಾರ್ ಪ್ರದೇಶದ ರಾಜ್ಯಪಾಲನನ್ನಾಗಿ ನೇಮಿಸಲಾದ ಮಲಿಕ್ ಅಹ್ಮದ್ ಆಗಮಿಸಿದ. ಯುಸೂಫ್ ಮತ್ತು ನಿಜಾಂ ಉಲ್ ಮುಲ್ಕ್ ಇಬ್ಬರೂ ತಮ್ಮ ಪ್ರಾಬಲ್ಯ ಮೆರೆಯಲು ದೊರಕಿದ ಅವಕಾಶವನ್ನು ಬಿಟ್ಟುಕೊಡಲಿಲ್ಲ. ಎಲ್ಲವೂ ಶಾಂತಿಯುತವಾಗಿ ಮುಗಿದದ್ದರಿಂದ ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು. ಅರಸ ನೀಡಿದ ಅಮೂಲ್ಯ ಉಡುಗೊರೆಗಳೊಂದಿಗೆ ಅರಮನೆಯಿಂದ ನಿರ್ಗಮಿಸಿದರು.

ಯುಸೂಫ್ ಆದಿಲ್ ಮತ್ತು ಫತ್ಹುಲ್ಲಾ ಇಮಾದ್ ಉಲ್ ಮುಲ್ಕ್ ಬೀದರ್‌ನ ಹೊರವಲಯದಲ್ಲಿ ಬಿಡಾರ ಹೂಡಿದ್ದರು. ಅರಮನೆಯಲ್ಲಿನ ಸಮಾರಂಭ ಮುಗಿದ ಮರುದಿನ ನಿಜಾಂ ಉಲ್ ಮುಲ್ಕ್‌ನು ಯುಸೂಫ್‌ನಿಗೆ ಅರಮನೆಗೆ

ಬಂದು ಆಡಳಿತದಲ್ಲಿ ಸಹಕಾರ ನೀಡುವಂತೆ ಕೋರಿ ಆಹ್ವಾನ ಕಳುಹಿಸಿದನು. ತನ್ನ ಸಾಮರ್ಥ್ಯದ ಅರಿವಿದ್ದ ಯುಸೂಫ್‌ನು ಸೈನ್ಯದ ವ್ಯವಹಾರದ ಬಗ್ಗೆ ಅರಿವು ಇರುವ ತನಗೆ ದಿನನಿತ್ಯ ನಡೆಸುವ ನಾಗರಿಕ ಆಡಳಿತದ ಬಗ್ಗೆ ಮಾಹಿತಿ ಇಲ್ಲದೇ ಇರುವುದರಿಂದ ಬರಲು ಆಗುವುದಿಲ್ಲ ಎಂದು ಮಾರುತ್ತರ ನೀಡಿದನು. ಇಬ್ಬರ ನಡುವೆ ಪ್ರೀತಿ-ವಿಶ್ವಾಸವೇನೂ ಇರಲಿಲ್ಲ. ಪತ್ರದ ವಿನಿಮಯ ಕೇವಲ ಔಪಚಾರಿಕವಾಗಿ ನಡೆಸಲಾಯಿತು. ವಾಸ್ತವವಾಗಿ ಇಮಾದ್ ಉಲ್ ಮುಲ್ಕ್‌ನು ಯುಸೂಫ್‌ನನ್ನು ಬಿಜಾಪುರದ ರಾಜ್ಯಪಾಲ ಹುದ್ದೆಯಿಂದ ತೆಗೆದು ಹಾಕಿ ಅವನ ಸ್ಥಳದಲ್ಲಿ ಆದಿಲ್‌ಖಾನ್ ದಖನಿಯನ್ನು ನೇಮಿಸಲು ಹೊಂಚು ಹಾಕಿದ್ದ. ಈ ಬಗ್ಗೆ ಆದೇಶ ಹೊರಡಿಸುವಂತೆ ರಾಜನಿಗೆ ಮನವಿ ಮಾಡಿ ಕಂದಾಯ ವಸೂಲಿಯ ಲೆಕ್ಕ ನೋಡುವುದಾಗಿ ತಿಳಿಸಿ ಅರಮನೆಯಿಂದ ಹೊರಟ. ಕೋಟೆಯ ಗೋಡೆಯ ಮೇಲೆ ಇರುವ ಮಾಳಿಗೆ (ಚಾವಣಿ)ಯಲ್ಲಿ ಕುಳಿತು ಯುಸೂಫ್ ಆದಿಲ್ ಹಾಗೂ ಇಮಾದ್ ಉಲ್ ಮುಲ್ಕ್‌ರನ್ನು ಕರೆಯಿಸಿದ. ಅವರಿಬ್ಬರಿಗೂ ಹಠಮಾರಿತನದಿಂದ ವರ್ತಿಸುವ ಟರ್ಕಿಯ ಸೈನ್ಯ ಜೊತೆಯಲ್ಲಿ ಕರೆತಂದದ್ದು ತನಗೆ ಇಷ್ಟವಾಗಲಿಲ್ಲ ಎಂದು ಹೇಳಿದ. ನಂತರ ಆದಿಲ್‌ಖಾನ್‌ನನ್ನು ಕರೆದ ರಾಜಧಾನಿಯಲ್ಲಿನ ಟರ್ಕಿಗಳ ಸಂಖ್ಯೆ ಕಡಿಮೆ ಮಾಡುವಂತೆ ಆದೇಶಿಸಿದ. ಬೀದರ್‌ನ ಕೋಟೆಯ ಬಾಗಿಲುಗಳನ್ನು ಮುಚ್ಚಲಾಯಿತು. ಟರ್ಕಿಗಳ ಮಾರಣಹೋಮ ಆರಂಭವಾಯಿತು. ಸಾಮೂಹಿಕ ಹತ್ಯೆಯಲ್ಲಿ ಸುಮಾರು ನಾಲ್ಕುಸಾವಿರಕ್ಕೂ ಹೆಚ್ಚುಜನ ಹತರಾದರು. ಕೆಲವು ಪ್ರಜ್ಞಾವಂತರು ಮಧ್ಯೆಪ್ರವೇಶಿಸಿದ್ದರಿಂದ ಹತ್ಯಾಕಾಂಡ ಕೊನೆಗೊಂಡಿತು. ಬೀದರ್‌ನ ತನಗೆ ಸುರಕ್ಷಿತವಾದ ಪ್ರದೇಶ ಅಲ್ಲ ಎನ್ನುವ ನಿರ್ಣಯಕ್ಕೆ ಬಂದ ಯುಸೂಫ್ ಆದಿಲ್ ಬಿಜಾಪುರದತ್ತ ಪ್ರಯಾಣ ಬೆಳೆಸಿದ. ರಾಜಧಾನಿಯು ಇಡೀಯಾಗಿ ನಿಜಾಂ ಉಲ್ ಮುಲ್ಕ್‌ನ ಹಿಡಿತದೊಳಕ್ಕೆ ಬಂತು.

ಆಡಳಿತ ವ್ಯವಸ್ಥೆಯನ್ನು ಚುರುಕುಗೊಳಿಸುವ ಇಚ್ಛೆಯಿಂದ ಮಹಮೂದ್ ಶಹಾ ಸಾಯುವ ಮುನ್ನ ನಿಯಮಿಸಿದ್ದ ರಾಜ್ಯಪ್ರತಿನಿಧಿ ಸಭೆಗೆ ಮರುಚಾಲನೆ ನೀಡಲಾಯಿತು. ವಜೀರ್ ನಿಜಾಂ ಉಲ್ ಮುಲ್ಕ್ ಹಾಗೂ ಅಮೀರ್ ಎ ಜುಮ್ಲಾ ಇಮಾದ್ ಉಲ್ ಮುಲ್ಕ್‌ರನ್ನು ಒಳಗೊಂಡ ಪ್ರತಿನಿಧಿ ಸಭೆಯ ಅಧ್ಯಕ್ಷತೆಯನ್ನು ಮಹಾರಾಣಿ ವಹಿಸುತ್ತಿದ್ದಳು. ಟರ್ಕಿಗಳ ಮಾರಣಹೋಮಕ್ಕೆ ನಿಜಾಂ ಉಲ್ ಮುಲ್ಕ್‌ನಿಗೆ ಸಹಕರಿಸಿದ ಕಾಸಿಂ ಬರೀದ್‌ನಿಗೆ ಬರೀದ್ ಉಲ್ ಮುಲ್ಕ್ ಗೌರವ ನೀಡಲು ರಾಜ್ಯಪ್ರತಿನಿಧಿ ಸಭೆಯು ನಿರ್ಧರಿಸಿತು. ಇಮಾದ್ ಉಲ್ ಮುಲ್ಕ್‌ನ ಪುತ್ರ ಅಲಾವುದ್ದೀನ್‌ನಿಗೆ ಬೆರಾರ್ ಆಡಳಿತದಲ್ಲಿ ಸಹಕರಿಸುವುದಕ್ಕಾಗಿ ಅವನ ಉಪಪ್ರಾಂತ್ಯಾಧಿಕಾರಿ ಎಂದು ನೇಮಿಸಲಾಯಿತು. ಯುವ ಇಮಾದ್ ಉಲ್

ಮುಲ್ಕ್‌ನಿಗೆ ಖ್ವಾಜಾ ಜಹಾನ್ ಬಿರುದು ನೀಡಲು ಪ್ರತಿನಿಧಿ ಸಭೆ ನಿರ್ಧಾರ ಕೈಗೊಂಡಿತು. ನಾಲ್ಕು ವರ್ಷಗಳ ಕಾಲ ಯಾವುದೇ ರೀತಿಯ ಸಮಸ್ಯೆ ಉಂಟಾಗದಂತೆ ವ್ಯವಸ್ಥೆ ನಡೆದುಕೊಂಡು ಹೋಯಿತು. 16ನೇ ವರ್ಷದವನಾದ ನಂತರ ಸುಲ್ತಾನ್‌ನು ಚಾಡಿ ಹೇಳುವವರಿಗೆ ಕಿವಿನೀಡಲು ಆರಂಭಿಸಿದನು. ರಾಜ್ಯಪ್ರತಿನಿಧಿ ಸಭೆಯು ದೊರೆಯನ್ನು ಕಡೆಗಣಿಸಿ ಆಡಳಿತ ನಡೆಸುತ್ತಿದೆ ಎಂಬ ದಿಲಾವರ್‌ಖಾನ್‌ನ ಮಾತಿಗೆ ಸುಲ್ತಾನ್ ಕಿವಿಯೊಡ್ಡಿದ. ನಿಜಾಂ ಉಲ್ ಮುಲ್ಕ್ ಹಾಗೂ ಇಮಾದ್ ಉಲ್ ಮುಲ್ಕ್‌ರನ್ನು ಕೊನೆಗಾಣಿಸುವಂತೆ ದಿಲಾವರ್‌ಖಾನ್‌ನಿಗೆ ಸುಲ್ತಾನ್ ಆದೇಶಿಸಿದ. ಸಂಚು ವಿಫಲಗೊಂಡಿದ್ದರಿಂದ ಅರಸು ಬಹಿರಂಗವಾಗಿ ಕ್ಷಮೆ ಕೋರಬೇಕಾಯಿತು. ಅಷ್ಟೇ ಅಲ್ಲದೆ ದಿಲಾವರ್‌ಖಾನ್‌ನನ್ನು ಕೊಲ್ಲಲು ಅನುಮತಿ ನೀಡಲಾಯಿತು. ಆಶ್ಚರ್ಯಕರ ರೀತಿಯಲ್ಲಿ ದಿಲಾವರ್‌ಖಾನ್ ಕೂಡ ತಪ್ಪಿಸಿಕೊಂಡು ಪಲಾಯನ ಮಾಡಿದ. ಇದೆಲ್ಲದರ ಫಲವಾಗಿ ಇಮಾದ್ ಉಲ್ ಮುಲ್ಕ್‌ನು ಬೀದರ್‌ನಲ್ಲಿ ಅದರಲ್ಲಿಯೂ ಮಲಿಕ್ ನಾಯಬ್‌ನ ಹತ್ತಿರ ಇರುವುದು ಸುರಕ್ಷಿತವಲ್ಲ ಎಂದು ಭಾವಿಸಿ ತನ್ನ ಪ್ರಾಂತ್ಯ ಬೆರಾರ್‌ಗೆ ಪ್ರಯಾಣ ಬೆಳೆಸಿದನು. ಮತ್ತೆಂದೂ ರಾಜಧಾನಿಯ ರಾಜಕೀಯದಲ್ಲಿ ಭಾಗವಹಿಸುವುದಕ್ಕಾಗಿ ಮರಳಲಿಲ್ಲ. ಇದರೊಂದಿಗೆ ರಾಜ್ಯಪ್ರತಿನಿಧಿ ಸಭೆಯು ಅಂತ್ಯ ಕಂಡಿತು.

ತೆಲಂಗಾಣದ ದಂಡಯಾತ್ರೆಯ ಸಂದರ್ಭದಲ್ಲಿ ಮಹಮೂದ್ ಗಾವಾನ್‌ನ ಹತ್ಯೆಯ ಸಂಚು ನಡೆದಿತ್ತು. ಕಾಕತಾಳೀಯ ಎನ್ನುವಂತೆ ನಿಜಾಂ ಉಲ್ ಮುಲ್ಕ್‌ನ ಹತ್ಯೆಯ ಸಂಚಿನ ಬೀಜ ಕೂಡ ತೆಲಂಗಾಣದ ದಂಡಯಾತ್ರೆಯ ಸಂದರ್ಭದಲ್ಲಿಯೇ ಮೊಳಕೆ ಒಡೆಯಿತು. 1486ರಲ್ಲಿ ವಾರಂಗಲ್‌ನ ರಾಜ್ಯಪಾಲ ಆದಿಲ್‌ಖಾನ್ ದಖನಿ ಮೃತಪಟ್ಟ. ಅದೇ ಹೊತ್ತಿಗೆ ರಾಜಮಹೇಂದ್ರಿಯಿಂದ ಕಿವಾಮುಲ್ ಮುಲ್ಕ್‌ನು ವಾರಂಗಲ್ ಮಾತ್ರವಲ್ಲದೆ ಇಡೀ ತೆಲಂಗಾಣವನ್ನು ವಶಕ್ಕೆ ತೆಗೆದುಕೊಂಡ. ದಾಳಿಯ ಹುಟ್ಟಡಗಿಸುವ ಉದ್ದೇಶದಿಂದ ನಿಜಾಂ ಉಲ್ ಮುಲ್ಕ್‌ನು ತೆಲಂಗಾಣದತ್ತ ಸೈನ್ಯದೊಂದಿಗೆ ಹೊರಟ. ರಾಜಧಾನಿಯಲ್ಲಿ ಇಲ್ಲದ ಅವಕಾಶವನ್ನು ಅವನ ವೈರಿಗಳು ಬಳಸಿಕೊಳ್ಳಲು ಯೋಚಿಸಿದರು. ಕಿವಾಮುಲ್ ಮುಲ್ಕ್ ಮತ್ತು ನಿಜಾಂ ಉಲ್ ಮುಲ್ಕ್‌ನ ನಡುವೆ ಮೈತ್ರಿ ಏರ್ಪಟ್ಟಿರುವ ಕುರಿತಂತೆ ಹಲವು ಕಥೆಗಳನ್ನು ತೇಲಿಬಿಟ್ಟು ಅವು ಸುಲ್ತಾನ್‌ನನ್ನು ತಲುಪುವಂತೆ ನೋಡಿಕೊಂಡರು. ದಿಲಾವರ್‌ಖಾನ್ ಪಾರಾದ ಘಟನೆಯಿಂದ ಬೇಸತ್ತಿದ್ದ ಹಬಶಿಗಳು ದಸ್ತೂರ್ ದಿನಾರ್‌ನ ನೇತೃತ್ವದಲ್ಲಿ ಕಾಸಿಂ ಬರೀದ್‌ನ ಬೆಂಬಲಕ್ಕೆ ನಿಂತರು. ಪ್ರಧಾನಿಯನ್ನು ಸಾಯಿಸುವಂತೆ ಆದೇಶಿಸಿದ ಫರ್ಮಾನು ಪಡೆಯುವಲ್ಲಿ ಯಶಸ್ವಿಯಾದರು. ಸುಲ್ತಾನ್‌ನ ಶಿಬಿರದಲ್ಲಿ ಇದ್ದ ನಿಜಾಂ ಉಲ್

ಮುಲ್ಕ್‌ನಿಗೆ ತನ್ನ ವಿರುದ್ಧ ನಡೆಯುತ್ತಿರುವ ಪಿತೂರಿಯ ಸಂಗತಿ ತಿಳಿಯಿತು. ಮಿತ್ರ ದಿಲ್‌ಪಸಂದ್‌ಖಾನ್‌ನ ಜೊತೆ ಬೀದರ್‌ನತ್ತ ತೆರಳಿದ. ಜುನ್ನಾರ್‌ನಲ್ಲಿ ಇದ್ದ ತನ್ನ ಮಗನಿಗೆ ಸೈನ್ಯ ಸಮೇತ ಆಗಮಿಸುವಂತೆ ಸೂಚನೆ ಕಳುಹಿಸಿದ. ಅದೇ ಹೊತ್ತಿಗೆ ರಾಜಬೊಕ್ಕಸದಿಂದ ಅಪಾರ ಪ್ರಮಾಣದ ಹಣ ತೆಗೆದುಕೊಂಡ. ಬೀದರ್‌ನಲ್ಲಿ ನಡೆಯುತ್ತಿದ್ದ ಬೆಳವಣಿಗೆಯ ಮಾಹಿತಿ ಪಡೆದ ಸುಲ್ತಾನ್‌ನು ಸೂಕ್ತ ಕ್ರಮಕ್ಕಾಗಿ ತೆಲಂಗಾಣದ ರಾಜ್ಯಪಾಲ ಕುತುಬ್ ಉಲ್ ಮುಲ್ಕ್ ದಖನಿಗೆ ಜವಾಬ್ದಾರಿ ವಹಿಸಿದ. ಅದಕ್ಕಿಂತ ಮೊದಲೇ ನಿಜಾಂ ಉಲ್ ಮುಲ್ಕ್‌ನ ಜೊತೆಗಿದ್ದ ದಿಲ್‌ಪಸಂದ್‌ಖಾನ್‌ನೇ ಸೇಡು ತೀರಿಸಿಕೊಂಡಿದ್ದ. ನಿಜಾಂ ಉಲ್ ಮುಲ್ಕ್‌ನನ್ನು ಕತ್ತು ಹಿಸುಕಿ ಕೊಂದು ಅವನ ತಲೆ ಕಡಿದು ರಾಜಧಾನಿಗೆ ಆಗಮಿಸಿದ ದೊರೆಗೆ ನೀಡಲಾಯಿತು. ಈ ಘಟನೆಯ ನಂತರ ಕೆಟ್ಟ ಯೋಚನೆ ಮಾಡುತ್ತಿದ್ದ ಪ್ರಧಾನಿಯನ್ನು ಮಟ್ಟ ಹಾಕಿದ ನೆಮ್ಮದಿ ಅರಸನದಾಯಿತು. ಸಂಭ್ರಮದಲ್ಲಿ ದೊರೆಯು ಮದಿರೆ, ಮಾನಿನಿ ಹಾಗೂ ಸಂಗೀತ ಗೋಷ್ಠಿಗಳಲ್ಲಿ ಮೈಮರೆತ. ಲೋಲುಪ ಜೀವನಕ್ಕಾಗಿ ಸಿಂಹಾಸನ ವಜ್ರವೈಢೂರ್ಯಗಳನ್ನು ಕಿತ್ತು ಮಾರಾಟ ಮಾಡಿದ. ಹಾಗೆಯೇ ಅಫಾಕಿಗಳಿಗೆ ಬೆಂಬಲ ನೀಡುವುದಕ್ಕೆ ಆರಂಭಿಸಿದ. ಶಹಾ ಹಬೀಬ್ ಅಲ್ಲಾನ ಕುಟುಂಬದ ಸದಸ್ಯರೊಂದಿಗೆ ತನ್ನ ಇಬ್ಬರ ಸಹೋದರಿಯರ ಮದುವೆ ಮಾಡಿಕೊಟ್ಟ.

ಬೀದರ್‌ನಲ್ಲಿ ನಡೆಯುತ್ತಿದ್ದ ಬೆಳವಣಿಗೆಗಳು ಜನರ ಮೇಲೆ ಪರಿಣಾಮ ಬೀರದೇ ಇರಲಿಲ್ಲ. ಸುಲ್ತಾನ್‌ನ ವಿರುದ್ಧ ಜನಾಭಿಪ್ರಾಯ ರೂಪುಗೊಳ್ಳತೊಡಗಿತ್ತು. 1487ರಲ್ಲಿ ದಖನಿಗಳು ಒಂದಾಗಿ ಸುಲ್ತಾನ್‌ನನ್ನು ಮುಗಿಸಲು ಸಂಚು ರೂಪಿಸಿದರು. ಹಲವು ದಿನಗಳ ಕಾಲ ಸಂಚಿನ ಕಿಡಿ ಜಾಗೃತವಾಗಿತ್ತು. ದಖನಿಗಳ ನೇತೃತ್ವದಲ್ಲಿ ಸಾರ್ವಜನಿಕರು ಕೋಟೆಯೊಳಕ್ಕೆ ಪ್ರವೇಶಿಸಿ ಒಳಗಡೆಯಿಂದ ಬಾಗಿಲು ಮುಚ್ಚಿಸಿದರು. ಇದರಿಂದಾಗಿ ಅಫಾಕಿಗಳು ಕೋಟೆಯೊಳಗೆ ಪ್ರವೇಶಿಸಿ ಸುಲ್ತಾನ್‌ನ ರಕ್ಷಣೆ ಧಾಮಿಸುವುದು ಸಾಧ್ಯವಾಗದಂತಾಯಿತು. ದೊರೆಯು ಮದ್ಯಪಾನ ಮಾಡುತ್ತ ಯುವತಿಯರೊಂದಿಗೆ ಚಕ್ಕಂದ ಆಡುತ್ತಿದ್ದ. ಆಗ ಅಜೀಜ್‌ಖಾನ್ ಟರ್ಕ್, ಹಸನ್ ಅಲಿ ಸಬ್ಜವಾರಿ, ಸೈಯದ್ ಮಿರ್ಜಾ ಮಷಾದಿ ಕೂಡ ಅಲ್ಲಿದ್ದರು. ಸಾವಿರಾರು ಜನ ಸಾಮಾನ್ಯರು ಅರಮನೆಯೊಳಕ್ಕೆ ನುಗ್ಗಿದರು. ಅರಸನ ಸಮ್ಮುಖದಲ್ಲಿಯೇ ನೆರೆದರು. ಬೆಂಗಾವಲುಗಾರರು ದೊರೆ ಮತ್ತು ಜನರ ಮಧ್ಯೆ ಬಂದು ಉಂಟಾಗಬಹುದಾಗಿದ್ದ ಅವಘಡ ತಪ್ಪಿಸಿದರು. ದೊರೆಯು ಅಲ್ಲಿಂದ ತಪ್ಪಿಸಿಕೊಂಡು ಶಹಾಬುರುಜ ಕಡೆಗೆ ಪಲಾಯನಗೈದನು. ಅಲ್ಲಿ ಅಫಾಕಿಗಳು ಮತ್ತು ದಖನಿಗಳ ನಡುವೆ ಕಿತ್ತಾಟ ಆರಂಭವಾಯಿತು. ಈ ಮಧ್ಯೆ ದಂಗೆಯ

ಸಂಗತಿಯು ನಗರದಲ್ಲೆಲ್ಲ ಹರಡಿತು. ಜಹಾಂಗೀರ್‌ಖಾನ್, ಫರ್ಹಾದ್‌ಖಾನ್, ಕಾಸಿಂ ಬರೀದ್, ಶೇರ್‌ಖಾನ್ ಅರ್ದಿಸ್ತಾನಿ, ಕೀಶ್ವರಖಾನ್‌ರು 12 ಸಾವಿರ ಸೈನಿಕರ ಪಡೆಯೊಂದಿಗೆ ಶಹಾ ಬುರಜಿನ ಕಡೆಗೆ ನಡೆದರು. ಅಲ್ಲಿ ದಂಗೆ ಎದ್ದವರು ಮತ್ತು ಸೈನ್ಯದ ನಡುವೆ ಕಾದಾಟ ನಡೆಯಿತು. ನಿರಾಯುಧರಾಗಿದ್ದ ಜನ ಸೈನ್ಯದ ಎದುರು ಸೋಲು ಒಪ್ಪಿಕೊಳ್ಳಬೇಕಾಯಿತು. ರಾತ್ರಿಯಿಡೀ ದಂಗೆ ಎದ್ದ ಜನರನ್ನು ಕೊಚ್ಚಿ ಕೊಲ್ಲಲಾಯಿತು. ಬೆಳಿಗ್ಗೆ ಆರು ಗಂಟೆಯವರೆಗೂ ಮಾರಣಹೋಮ ಮುಂದುವರೆಯಿತು. ಪರಿಸ್ಥಿತಿಯನ್ನು ಹತೋಟಿಗೆ ತಂದ ಸುಲ್ತಾನ್‌ನು ದಂಗೆ ಎದ್ದ ದಖನಿಗಳ ಅಳಿದುಳಿದವರನ್ನೂ ಕೊಲ್ಲುವಂತೆ ಆದೇಶಿಸಿದ. ಹಾಗೆಯೇ ಅವರಿಗೆ ಸೇರಿದ ಆಸ್ತಿಪಾಸ್ತಿಯನ್ನು ಪ್ರತ್ಯೇಕವಾಗಿ ಇರಿಸುವಂತೆ ಸೂಚಿಸಿದ. ಮಾರಣ ಹೋಮ ಮೂರು ದಿನಗಳ ಕಾಲ ಮುಂದುವರೆಯಿತು. ಅಫಾಕಿಗಳ ಗುಂಪಿಗೆ ಸೇರಿದ ಶಹಾ ಮುಹಿಬ್ ಅಲ್ಲಾ ಮಧ್ಯೆ ಪ್ರವೇಶಿಸಿದ ನಂತರವೇ ಹತ್ಯಾಕಾಂಡ ಕೊನೆಗೊಂಡಿತು.

ಕೂದಲೆಳೆಯ ಅಂತರದಿಂದ ಪ್ರಾಣಾಪಾಯದಿಂದ ಪಾರಾದ ಸುಲ್ತಾನ್‌ನು ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು. ಅವನಿಗೆ ಶುಭಕರವಾಗಿ ಪರಿಣಮಿಸಿದ್ದ ಶಹಾ ಬುರುಜಿನ ಮೇಲೆ ಹೊಸ ಅರಮನೆ ನಿರ್ಮಿಸುವಂತೆ ಆದೇಶಿಸಿದ. ಅರಮನೆಯು ಕುಡುಕರ ತಾಣವಾಗಿ ಪರಿಣಮಿಸಿತು. ಸ್ಥಿಮಿತ ಕಳೆದುಕೊಂಡದ್ದಲ್ಲದೆ ನೈತಿಕತೆಯೂ ಇಲ್ಲದಂತಾಯಿತು.

ಇದೇ ಹೊತ್ತಿಗೆ ವಿವಿಧ ರಾಜ್ಯಪಾಲರು ಮತ್ತು ಜಹಾಗೀರ್‌ದಾರರು ಬೀದರ್‌ಗೆ ಅಂಟಿದ್ದ ಆಲಸ್ಯ ಕೊಡವಿಹಾಕಲು ನಿರ್ಧರಿಸಿದರು. ಸಾಮ್ರಾಜ್ಯದ ಕೇಂದ್ರದ ಪ್ರಾಬಲ್ಯ ಕಡಿಮೆಯಾಗುತ್ತಿದೆ ಎಂದು ಅಂದಾಜು ಮಾಡಿ ಅದಕ್ಕಾಗಿ ತಮ್ಮ ಬಲ ಹೆಚ್ಚಿಸಿಕೊಳ್ಳಲು ನಿರ್ಧರಿಸಿದರು. ಕಂದಾರ್ ಮತ್ತು ಔಸಾ ಜಹಾಗೀರ್‌ಗಳನ್ನು ನೋಡಿಕೊಳ್ಳುತ್ತಿದ್ದ ಕಾಸಿಂ ಅವರ ಪೈಕಿ ಮೊದಲಿಗನಾಗಿದ್ದ. ಇದನ್ನು ಅರಿತ ಸುಲ್ತಾನ್‌ನು ದಿಲಾವರ್‌ಖಾನ್‌ನ ನೇತೃತ್ವದಲ್ಲಿ ಬೃಹತ್ ಸೈನ್ಯ ಕಳುಹಿಸಿದನು. ದಿಲಾವರ್‌ಖಾನ್‌ನಿಗೆ ಯಾವುದೇ ರೀತಿಯಲ್ಲಿಯೂ ಸಮನಾಗಿರದ ಕಾಸಿಂ ಬರೀದ್ ಬಾಲಕುಂದಾಕ್ಕೆ ಪಲಾಯನಗೈದನು. ದಿಲಾವರ್‌ಖಾನ್‌ನು ಅವನನ್ನು ಬೆನ್ನಟ್ಟಿ ಹೋದನು. ಬರೀದ್ ಸಂಪೂರ್ಣವಾಗಿ ಸೋಲುವ ಮುನ್ನವೇ ಮದಗಜವೊಂದು ದಿಲಾವರ್‌ಖಾನ್‌ನ ಮೇಲೆ ದಾಳಿ ನಡೆಸಿ ಕೊಂದು ಹಾಕಿತು. ಇದರಿಂದ ಗೆಲುವಿನ ಬದಲು ಸೋಲಿನಲ್ಲಿ ಸುಳಿಯಲ್ಲಿ ಸಿಲುಕಬೇಕಾಯಿತು. ಗೆಲುವು ಸಾಧಿಸಿದ ಕಾಸಿಂ ಬರೀದ್ ಬೀದರ್‌ಗೆ ಹೋಗಿ ತನ್ನನ್ನು ಪ್ರಧಾನಿಯಾಗಿ ಘೋಷಿಸುವಂತೆ ಸುಲ್ತಾನ್‌ನ ಮೇಲೆ ಒತ್ತಡ ಹೇರಿದ. ಕಾಸಿಂ ಬರೀದ್‌ನು

ಗಾವಾನ್ ಮತ್ತು ನಿಜಾಂ ಉಲ್ ಮುಲ್ಕ್‌ರು ಮಾಡಿದಂತೆ ಸುಲ್ತಾನ್‌ನ ಹೆಸರಿನಲ್ಲಿ ಆಡಳಿತ ನಡೆಸತೊಡಗಿದ. ಆದರೆ, ಅವನಿಗೆ ಆ ಯೋಗ್ಯತೆ ಮತ್ತು ಅರ್ಹತೆ ಎರಡೂ ಇರಲಿಲ್ಲ. ಸಾಮ್ರಾಜ್ಯದ ಎಲ್ಲ ಮೂಲೆಗಳಲ್ಲಿಯೂ ಅಸಮಾಧಾನ ತಲೆ ಎತ್ತಿತು. ಒಟ್ಟಾಗಿ ಬಂದ ಸೈನ್ಯವನ್ನು ಬೀದರ್ ಮತ್ತು ಉದ್ಗೀರ್ ನಡುವಿನ ದೇವಣಿ ಸಮೀಪ ಎದುರಿಸಿದ ಬರೀದ್ ಸೋತು ಪಲಾಯನ ಮಾಡಿದ. ಕುದುರೆಯ ಮೇಲಿನಿಂದ ಬಿದ್ದು ಗಾಯಗೊಂಡ ದೊರೆಯನ್ನು ಗೌರವದಿಂದ ಬೀದರ್‌ಗೆ ಕಳುಹಿಸಲಾಯಿತು.

ಅಮೀರ್‌ರ ಪೈಕಿ ಪ್ರಮುಖನಾಗಿದ್ದ ಜುನ್ನಾರ್‌ನ ಜಹಾಗೀರ್‌ದಾರ ಮಲಿಕ್ ಅಹ್ಮದ್ ನಿಜಾಂ ಉಲ್ ಮುಲ್ಕ್‌ನು ತನ್ನ ತಂದೆ ನಿಜಾಂ ಉಲ್ ಮುಲ್ಕ್‌ನ ನಂತರ ತನ್ನ ಪ್ರಾಬಲ್ಯ ಹೆಚ್ಚಿಸಿಕೊಂಡಿದ್ದ. ಗಾವಾನ್‌ನ ಕಾಲದಿಂದ ವಶವಾಗಿದ್ದ ಕೆಲವು ಮರಾಠರು ನಂತರ ಯಾವುದೇ ರೀತಿಯ ಕಪ್ಪ ಕಾಣಿಕೆ ಸಲ್ಲಿಸಿರಲಿಲ್ಲ. ಜುನ್ನಾರ್‌ನ ವ್ಯಾಪ್ತಿಗೆ ಸೇರಿದ ಶಿವನೇರಿ ಕೋಟೆಯ ಮುಖ್ಯಸ್ಥ ಕೂಡ ಹಣ ನೀಡಲು ನಿರಾಕರಿಸಿದ. ಇದರಿಂದಾಗಿ ಮಹತ್ವಾಕಾಂಕ್ಷಿಯಾಗಿದ್ದ ಮಲಿಕ್ ಅಹ್ಮದ್‌ನಿಗೆ ಸುಮ್ಮನೆ ಕುಳಿತು ಕೊಳ್ಳಲು ಆಗಲಿಲ್ಲ. ಮರಾಠ ಪ್ರದೇಶದ ಮೇಲೆ ದಾಳಿ ನಡೆಸಿದ ಮಲಿಕ್ ಅಹ್ಮದ್‌ನು ಇಡೀ ಕೊಂಕಣ ಪ್ರದೇಶವನ್ನು ತನ್ನ ವ್ಯಾಪ್ತಿಗೆ ಸೇರಿಸಿಕೊಂಡನು.

ದಂಡಯಾತ್ರೆ ಮುತ್ತಿಗೆಯ ಸಂದರ್ಭದಲ್ಲಿಯೇ ತನ್ನ ತಂದೆಯ ಹತ್ಯೆಯ ಸುದ್ದಿ ಕೇಳಿದ ಮಲಿಕ್ ಅಹ್ಮದ್‌ನು ತಾನೇ ನಿಜಾಂ ಉಲ್ ಮುಲ್ಕ್ ಎಂದು ಘೋಷಿಸಿಕೊಂಡಿದ್ದ. ನಂತರ ಮಾಹುರ್, ಬೀಡ್ ಮತ್ತು ಶಿವಗಾಂಗಳ ಮೇಲೆ ದಾಳಿ ನಡೆಸಿ ವಶಪಡಿಸಿಕೊಂಡಿದ್ದ. ಗೋದಾವರಿ ನದಿ ಕಣಿವೆಯ ವರೆಗಿನ ಪ್ರದೇಶವು ಮಲಿಕ್ ಅಹ್ಮದ್‌ನ ವಶಕ್ಕೆ ಸೇರಿತ್ತು. ಹಿಂದು ಮುಸ್ಲಿಮ್‌ರು ಮಾತ್ರವಲ್ಲದೆ ದಖನಿ, ಖುರಾಸಾನಿಗಳೂ ಮಲಿಕ್ ಅಹ್ಮದ್‌ನನ್ನು ಗೌರವಿಸಲು ಆರಂಭಿಸಿದ್ದರು. ದಂಡಯಾತ್ರೆಯ ನಂತರ ಬೀದರ್‌ಗೆ ಆಗಮಿಸಿದ ಮಲಿಕ್ ಅಹ್ಮದ್‌ನನ್ನು ಗೌರವದಿಂದ ಸ್ವಾಗತಿಸಿ ಗೆದ್ದಿದ್ದ ಪ್ರದೇಶಗಳನ್ನು ಜಹಾಗೀರ್ ಎಂದು ನೀಡಲಾಯಿತು.

ಈ ಯಶಸ್ಸು ದೊರೆತದ್ದು ಅಧಿಕಾರದಲ್ಲಿ ಇದ್ದ ಕಾಸಿಂ ಬರೀದ್‌ನಿಗೆ ಇಷ್ಟವಾಗಲಿಲ್ಲ. ದೊರೆಯ ಹೆಸರಿನಲ್ಲಿ ಫರ್ಮಾನು ಹೊರಡಿಸಿದ. ಯುಸೂಫ್ ಆದಿಲ್‌ಖಾನ್‌ನಿಗೆ ಜುನ್ನಾರ್ ಮೇಲೆ ದಾಳಿ ನಡೆಸುವಂತೆ ಫರ್ಮಾನಿನಲ್ಲಿ ಸೂಚಿಸಲಾಗಿತ್ತು. ಖ್ವಾಜಾ ಜಹಾನ್ ದಖನಿ ಹಾಗೂ ಯುಸೂಫ್ ತಲಾಶ್

ಅವರೊಂದಿಗೆ ಜುನ್ನಾರ್‌ನತ್ತ ತೆರಳಿ ಚಾಕಣದಲ್ಲಿ ಹೆಚ್ಚಿದ ಮಲಿಕ್ ಅಹ್ಮದ್ ಪ್ರಾಬಲ್ಯ ಕಡಿಮೆ ಮಾಡುವಂತೆ ಆದೇಶಿಸಲಾಗಿತ್ತು. ಆದರೆ, ಯುಸೂಫ್ ಆದಿಲ್‌ಖಾನ್‌ನು ಮಲಿಕ್ ಅಹ್ಮದ್ ಮೇಲೆ ದಾಳಿ ನಡೆಸುವ ಬದಲು ಅವನ ತಂದೆ ನಿಜಾಂ ಉಲ್ ಮುಲ್ಕ್‌ನ ಸಾವಿನ ಬಗ್ಗೆ ವಿಷಾದ ವ್ಯಕ್ತಪಡಿಸಿ ದೂತರ ಮೂಲಕ ಸಂದೇಶ ಕಳುಹಿಸಿದ. ಅದರಲ್ಲಿ ಇಂದುಪುರ ಕೋಟೆಯನ್ನು ಮಲಿಕ್ ಅಹ್ಮದ್‌ನಿಗೆ ಬಿಟ್ಟು ಕೊಡುವುದಾಗಿ ತಿಳಿಸಿದ್ದ.

ರಾಜಧಾನಿಯಲ್ಲಿ ಮಲಿಕ್ ಅಹ್ಮದ್‌ನ ವಿರುದ್ಧದ ಅಭಿಪ್ರಾಯ ಮುಂದುವರೆದಿತ್ತು. ಅಜ್ಮತ್ ಉಲ್ ಮುಲ್ಕ್‌ನ ನೇತೃತ್ವದಲ್ಲಿ ಬೃಹತ್ ಸೈನ್ಯ ಕಳುಹಿಸುವಂತೆ ಅರಸನ ಮನ ಒಲಿಸಲಾಯಿತು. ಈ ಬಾರಿ ಬುದ್ಧಿವಂತಿಕೆಯಿಂದ ವರ್ತಿಸಿದ ಮಲಿಕ್ ಅಹ್ಮದ್‌ನ ಬೆಟ್ಟ ಕಣಿವೆಗಳಿಂದ ಕೂಡಿದ ಖದೀರಾಬಾದ್ ಬಳಿ ವೈರಿ ಸೈನ್ಯ ನೆಲೆಯೂರುವಂತೆ ಮಾಡಿದ. ರಾಜನ ಸೈನ್ಯವನ್ನು ಹಿಮ್ಮೆಟ್ಟುವಂತೆ ಮಾಡಿದ. ನಂತರದ ದಿನಗಳಲ್ಲಿ ನಿಜಾಮ್ ಉಲ್ ಮುಲ್ಕ್‌ನು ಸುಂದರವಾದ ಅರಮನೆಯನ್ನು ಒಳಗೊಂಡ ಕೋಟೆಯನ್ನು ನಿರ್ಮಿಸಿ ಅದಕ್ಕೆ ತನ್ನದೇ ಹೆಸರು ಅಹ್ಮದ್‌ನಗರ ಎಂದು ನಾಮಕರಣ ಮಾಡಿದ.

ಪ್ರಧಾನಿ ಕಾಸಿಂ ಬರೀದ್‌ನು ಬೇರೆ ರಾಜ್ಯಪಾಲರು ತಮ್ಮ ಪ್ರಾಬಲ್ಯ ಹೆಚ್ಚಿಸಿಕೊಂಡು ಸ್ವತಂತ್ರವಾಗಿ ಬೆಳೆಯುತ್ತಿರುವುದನ್ನು ಲೆಕ್ಕ ಹಾಕುತ್ತ ರಾಜಧಾನಿಯಲ್ಲಿ ಕುಳಿತಿದ್ದ. ಪ್ರಧಾನಿಯಾದ ನಂತರ ಅರಸನು ಕಂದಾರ್, ಔಸಾ, ಉದ್ಗೀರ್ ಮತ್ತು ಕಲ್ಯಾಣಿಗಳ ಜಹಾಗೀರ್‌ನ್ನು ಕಾಸಿಂ ಬರೀದ್‌ನಿಗೆ ನೀಡಿದ್ದ. ಅದರಿಂದ ತೃಪ್ತನಾಗದ ಕಾಸಿಂನು ಅರಸ ಆದೇಶಕ್ಕೆ ವ್ಯತಿರಿಕ್ತವಾಗಿ ಕೆಲವು ಕೋಟೆಗಳ ಮೇಲೆ ದಂಡೆತ್ತಿ ಹೋಗಿದ್ದ. ಅರಸನು ಅಸಹಾಯಕನಾಗಿದ್ದರಿಂದ ಬುರ್ಹಾನಪುರದಿಂದ ಬಂದ ದಿಲಾವರ್‌ಖಾನ್ ಹಬಶಿಯು ಕಾಸಿಂನನ್ನು ಸೋಲಿಸಿದ. ಕಾಸಿಂ ಬರೀದ್ ಗೋಲ್ಕೊಂಡಾಕ್ಕೆ ಪಲಾಯನಗೈದ. ದಿಲಾವರ್‌ಖಾನ್‌ನ ಹಿಡಿತ ಬಿಗಿಯಾಗಿತ್ತು. ಹುಚ್ಚು ಆನೆಯೊಂದು ಕೌಲಾಸ್ ಬಳಿ ದಿಲಾವರ್‌ಖಾನ್‌ನನ್ನು ಕೊಲ್ಲದಿದ್ದರೆ ಚರಿತ್ರೆಯ ಚಿತ್ರಣವೇ ಬದಲಾಗುತ್ತಿತ್ತು. ದಿಲಾವರ್‌ಖಾನ್ ತನ್ನದೇ ಹೊಸ ಸಾಮ್ರಾಜ್ಯ ಸ್ಥಾಪಿಸಬಹುದಿತ್ತು. ಹಠಾತ್ ಬೆಳವಣಿಗೆಯ ನಂತರ ಕಾಸಿಂ ಬೀದರ್‌ಗೆ ಬಂದು ಪ್ರಧಾನಿಯಾಗಿ ಮತ್ತೆ ಘೋಷಿಸುವಂತೆ ನೋಡಿಕೊಂಡ.

ಕಾಸಿಂ ಬರೀದ್‌ನ ಮಹತ್ವಾಕಾಂಕ್ಷೆಗೆ ಮಿತಿಯೇ ಇರಲಿಲ್ಲ. ಅವನ ಪ್ರತಿಷ್ಠೆ ಮತ್ತು ಅಧಿಕಾರಕ್ಕೆ ಸಮನಾರು ಇರಲಿಲ್ಲ. ತನ್ನ ಮಹತ್ವಾಕಾಂಕ್ಷೆಯ ಕಾರಣದಿಂದ ದಖನ್‌ನ ವೈರಿಗಳೂ ತಳೆಯದಂತಹ ನಿಲುವು ಕಾಸಿಂನದಾಗಿತ್ತು.

ರಾಯಚೂರು ಮತ್ತು ಮುದಗಲ್ ಕೋಟೆಗಳನ್ನು ವಶಕ್ಕೆ ತೆಗೆದುಕೊಳ್ಳುವಂತೆ ವಿಜಯನಗರದ ಅರಸರಿಗೆ ಕಾಸಿಂ ಆಹ್ವಾನ ನೀಡಿದ. ದೊರೆ ತಿಮ್ಮದೇವ ಕಿರಿಯ ವಯಸ್ಸಿನವನಾಗಿದ್ದರಿಂದ ಪ್ರಧಾನಿ ನರಸನಾಯಕ ಬೃಹತ್ ಸೈನ್ಯ ಕಳುಹಿಸಿಕೊಟ್ಟ. ಸಮರದಲ್ಲಿ ಎದುರಾದ ಯುಸೂಫ್ ಆದಿಲ್‌ಖಾನ್‌ನು ರಾಯಚೂರು ಮತ್ತು ಮುದುಗಲ್ ಬಿಟ್ಟುಕೊಡುವುದು ಅನಿವಾರ್ಯ ಆಗುವಂತೆ ಮಾಡಿದ. ಇಡೀ ಘಟನೆಯಿಂದ ಕುಪಿತನಾದ ಯುಸೂಫ್ ಆದಿಲ್‌ಖಾನ್‌ನು ಕಾಸಿಂ ಬರೀದ್‌ನ ವಿರುದ್ಧ ತನ್ನ ಸೈನ್ಯ ತಿರುಗಿಸಿದ. ಬಹದ್ದೂರು ಗಿಲಾನಿ ವಶಪಡಿಸಿಕೊಂಡಿದ್ದ ಗೋವಾ, ಕೊಂಕಣ, ಪನ್ಹಳ, ಕಲ್ಹಾರ ಕೋಟೆಗಳನ್ನು ನೀಡುವುದಾಗಿ ತಿಳಿಸಿ ನಿಜಾಂ ಉಲ್ ಮುಲ್ಕ್‌ನ ಸಹಾಯ ಪಡೆಯುವಲ್ಲಿ ಕಾಸಿಂ ಬರೀದ್ ಯಶಸ್ವಿಯಾದನು. ಬೀದರ್‌ನಿಂದ ಐದು ಮೈಲಿ ದೂರದಲ್ಲಿ ನಡೆದ ಯುದ್ಧದಲ್ಲಿ ಕಾಸಿಂ ಬರೀದ್ ಮತ್ತು ಸುಲ್ತಾನ್ ಇಬ್ಬರೂ ಭಾಗವಹಿಸಿದ್ದರು. ಅವರ ಜೊತೆ ಫಕ್ರುಲ್ ಮುಲ್ಕ್ ದಖನಿ ಹಾಗೂ ನಿಜಾಂ ಉಲ್ ಮುಲ್ಕ್ ಕೂಡ ಇದ್ದರು.

ಯುಸೂಫ್ ಆದಿಲ್ ಖಾನ್ ಸೈನ್ಯದ ಮುಂಚೂಣಿಯಲ್ಲಿ ಇದ್ದರೆ ದರಿಯಾಖಾನ್ ಮತ್ತು ಫಕ್ರುಲ್ ಮುಲ್ಕ್ ಟರ್ಕ್ ಜೊತೆಗಿದ್ದರು. ದಿನದ ಅಂತ್ಯದ ವೇಳೆಗೆ ಕಾಸಿಂ ಬರೀದ್‌ನ ಬಣ್ಣ ಬಯಲಾಯಿತು. ಸುಲ್ತಾನ್ ರಾಜಧಾನಿ ಮರಳಬೇಕಾಯಿತು. ಬಿಜಾಪುರಕ್ಕೆ ಮರಳಿದ ಯುಸೂಫ್ ಬಹದ್ದೂರ ಗಿಲಾನಿಯೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡ. ಇದರಿಂದ ಸಂತುಷ್ಟನಾಗದ ಯುಸೂಫ್ ವಿಜಯನಗರದ ಅರಸರ ವಶವಾಗಿದ್ದ ರಾಯಚೂರು ಮತ್ತು ಮುದುಗಲ್ ಕೋಟೆಗಳನ್ನ ಮರಳಿ ಪಡೆಯಲು ನಿರ್ಧರಿಸಿ ಸೈನ್ಯದ ಸಮೇತ ಹೊರಟ. 1493ರಲ್ಲಿ ವಿಜಯನಗರದ ಸೈನ್ಯ ಸೋಲಿಸಿ ರಾಯಚೂರು ಮತ್ತು ಮುದುಗಲ್ ಕೋಟೆಗಳನ್ನು ಮರಳಿ ಬಹಮನಿ ಸಾಮ್ರಾಜ್ಯಕ್ಕೆ ಸೇರಿಸಿದ. ವಿಜಯದ ಫಲವಾಗಿ ಸುಲ್ತಾನ್‌ನಿಗೆ ಚಿನ್ನದ ಎಳೆಗಳಿಂದ ಮಾಡಿದ ಪೋಷಾಕು ಮತ್ತಿತರ ವಸ್ತುಗಳನ್ನು ಬೀದರ್‌ಗೆ ಉಡುಗೊರೆಯಾಗಿ ಕಳುಹಿಸಿದ.

ಮಹಮೂದ್ ಗಾವಾನ್‌ನು ಗೋವಾ ವಶಪಡಿಸಿಕೊಂಡ ನಂತರ ಅದರ ಮತ್ತು ಪಶ್ಚಿಮ ಕರಾವಳಿಯ ಉಸ್ತುವಾರಿಯನ್ನು ನಿಜಾಮುದ್ದೀನ್ ಗಿಲಾನಿಗೆ ವಹಿಸಿದ. ಬಿಜಾಪುರದಲ್ಲಿ ಖ್ವಾಜಾನ ಸಹಾಯಕನಾಗಿದ್ದ ಕಿಶ್ವರಖಾನ್‌ನನ್ನು ಗಿಲಾನಿಯ ಸಹಾಯಕನನ್ನಾಗಿ ಮಾಡಿದ್ದ. 1491ರಲ್ಲಿ ನಿಜಾಮುದ್ದೀನ್ ಗಿಲಾನಿಯ ಸಾವಿನ ನಂತರ ಗೋವಾದ ಕೋತ್ವಾಲ್‌ನಾಗಿದ್ದ ಬಹದ್ದೂರ್ ಗಿಲಾನಿ ಅಧಿಕಾರ ವಹಿಸಿಕೊಂಡ. ದಾಬೋಲ್ ವರೆಗಿನ ಎಲ್ಲ ಪ್ರದೇಶಗಳನ್ನು ತನ್ನ ವ್ಯಾಪ್ತಿಗೆ ಸೇರಿಸಿಕೊಂಡ. ಕೊಲ್ಹಾಪುರ, ಕಲ್ಹಾರ, ಪನ್ಹಳ, ಬೆಳಗಾವಿ, ಮಿರಜ್ ಮತ್ತು ಇತರ

ಕೋಟೆಗಳು ಗಿಲಾನಿಯ ವಶವಾದವು. ಉತ್ತರದಲ್ಲಿ ಚೌಲ್ ಬಂದರಿನವರೆಗೆ ಅವನ ವ್ಯಾಪ್ತಿ ಪಸರಿಸುವಂತೆ ನೋಡಿಕೊಂಡ. ಅಷ್ಟಕ್ಕೇ ಸುಮ್ಮನಾಗದೆ ಗುಜರಾತಿನ ವಶದಲ್ಲಿ ಮಾಹಿಮ್‌ಗೆ ತನ್ನ ಸಹಾಯಕ ಯಾಕೂಬ್ ಹಬಶಿಯನ್ನು ಕಳುಹಿಸಿ ದಾಳಿ ನಡೆಸಿದ. ಶಿಹಾಬುದ್ದೀನ್ ಅಹ್ಮದ್‌ನ ಕಾಲದಿಂದಲೂ ಮಾಹಿಮ್ ಗುಜರಾತಿನ ವಶದಲ್ಲಿತ್ತು. ಸುದ್ದಿ ತಿಳಿದ ಗುಜರಾತಿನ ದೊರೆ ಮಹಮೂದ್ ಶಹಾ ಬೆಗಾರ್‌ನು ಬಹದ್ದೂರ್ ಗಿಲಾನಿಯ ವಿರುದ್ಧ ಮಲಿಕ್ ಸಾರಂಗ್‌ಖಾನ್ ಕಿವಾಮುಲ್ ಮುಲ್ಕ್‌ನ ನೇತೃತ್ವದ ಸೈನ್ಯ ಕಳುಹಿಸಿದ. ಕಿವಾಮುಲ್ ಮುಲ್ಕ್‌ನ ಸೈನ್ಯವು ಅಗಾಸಿ, ಬಾಸಿನ್‌ಗಳನ್ನು ಮಾತ್ರ ದಾಟಲು ಸಾಧ್ಯವಾಯಿತು. ದಖನಿ ಪ್ರದೇಶವನ್ನು ಅತಿಕ್ರಮಿಸದೇ ಮುಂದೆ ಸಾಗಲು ದಾರಿ ಇಲ್ಲದಂತಾಯಿತು. ಮಾಳ್ವದ ಮಹಮೂದ್ ಖಿಲ್ಜಿ ಜೊತೆಗಿನ ಕದನದ ಸಂದರ್ಭದಲ್ಲಿ ದಖನ್ ಸುಲ್ತಾನ್‌ನ ಪ್ರಾಣ ಉಳಿಸಿ ಸ್ನೇಹ ಹಸ್ತ ಚಾಚಿದ ಗುಜರಾತಿನ ಸುಲ್ತಾನ್‌ನಿಗೆ ಅವನದೇ ಸಾಮ್ರಾಜ್ಯದ ಅಮೀರ್ ಉಂಟು ಮಾಡುತ್ತಿದ್ದ ಕಿರಿಕಿರಿ ಸಹಿಸುವುದು ಅಸಾಧ್ಯವಾಗಿತ್ತು. ಅದಕ್ಕಾಗಿ ಹಶೀಮ್ ತಬ್ರಿಜಿಯನ್ನು ಬೀದರ್‌ಗೆ ರಾಯಭಾರಿಯಾಗಿ ಕಳುಹಿಸಿದ. ಬೀದರ್ ಸುಲ್ತಾನ್‌ನಿಗೆ ಬರೆದ ಪತ್ರದಲ್ಲಿ ಬಹಮನಿ ಮತ್ತು ಗುಜರಾತ್ ನಡುವಿನ ಸ್ನೇಹ ಸಂಬಂಧವನ್ನು ಪ್ರಸ್ತಾಪಿಸಲಾಗಿತ್ತು. ಹಾಗೆಯೇ ಸಾಮ್ರಾಜ್ಯದ ಅಮೀರ್‌ನಿಂದಾಗಿ ಆಗಿರುವ ಸಮಸ್ಯೆಯನ್ನು ವಿವರಿಸಿದ್ದ.

ಗುಜರಾತಿನ 23 ವ್ಯಾಪಾರಿ ದೋಣಿಗಳನ್ನು ಸಾಮಾನು ಸರಂಜಾಮು ಸಮೇತ ಗಿಲಾನಿ ವಶಪಡಿಸಿಕೊಂಡಿದ್ದಾನೆ. ಮಾಹಿಮ್‌ನ ರಕ್ಷಣೆಗೆ ಗುಜರಾತಿನಿಂದ ಕಡಲಿನ ಮೂಲಕ ಸೈನ್ಯ ಕಳುಹಿಸುವುದು ಸಾಧ್ಯವಿಲ್ಲ. ಭೂಸೈನ್ಯವು ದಖನ್‌ನ ಪ್ರದೇಶವನ್ನು ದಾಟದೇ ಮುಂದೆ ಹೋಗಲು ಸಾಧ್ಯವಿಲ್ಲ. ಆದ್ದರಿಂದ ಬಹಮನಿಯ ಅಮೀರ್‌ನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಮಹಮೂದ್ ಶಹಾನಿಗೆ ಬರೆದ ಪತ್ರದಲ್ಲಿ ತಿಳಿಸಲಾಗಿತ್ತು.

ಸುಲ್ತಾನ್ ಮಹಮೂದ್ ಶಹಾನು ಅಬ್ದುಲ್ ಮಲಿಕ್ ಶುಸ್ತಾರಿಯನ್ನು ಯುಸೂಫ್ ಆದಿಲ್‌ಖಾನ್‌ನ ಬಳಿಗೆ ಕಳುಹಿಸಿ ಬಹದ್ದೂರ್ ಗಿಲಾನಿಯ ವಿರುದ್ಧ ದಂಡೆತ್ತಿ ಹೋಗುವಂತೆ ಆದೇಶಿಸಿದ. ಯುಸೂಫ್ ಆದಿಲ್‌ಖಾನ್‌ನು ಕಮಾಲ್‌ಖಾನ್ ದಖನಿಯ ನೇತೃತ್ವದಲ್ಲಿ ಬಹದ್ದೂರ್‌ನ ವಿರುದ್ಧ ಸೈನ್ಯ ಕಳುಹಿಸಿದ. ಸೈನ್ಯ ಜಮಖಂಡಿ ತಲುಪುತ್ತಿದ್ದಂತೆಯೇ ಅಲ್ಲಿಂದ ಬೆಳಗಾವಿಗೆ ತೆರಳಿದ. ಅದನ್ನೂ ವಶಪಡಿಸಿಕೊಳ್ಳಲಾಯಿತು. ಸುಲ್ತಾನ್‌ನು ಬಹದ್ದೂರ್ ಗಿಲಾನಿಯ ವಿರುದ್ಧದ ಸಮರಕ್ಕಾಗಿ ಸೈನ್ಯ ಕಳುಹಿಸುವಂತೆ ಎಲ್ಲ ಪ್ರಾಂತ್ಯಾಧಿಕಾರಿಗಳಿಗೆ ತಿಳಿಸಿದ. ನಿಜಾಂ ಉಲ್ ಮುಲ್ಕ್ ಮತ್ತು ಇಮಾದ್ ಉಲ್ ಮುಲ್ಕ್‌ರು ತಮ್ಮ ಬೃಹತ್ ಸೈನ್ಯ

ಕಳುಹಿಸಿಕೊಟ್ಟರು. ಆ ಸೈನ್ಯದೊಂದಿಗೆ ಸ್ವತಃ ಸುಲ್ತಾನ್‌ನೇ ಬೀದರ್ ಬಿಟ್ಟು ಬಿಜಾಪುರದತ್ತ ಪ್ರಯಾಣ ಬೆಳೆಸಿದ. ಸುಲ್ತಾನ್‌ನನ್ನು ಗೌರವಯುತವಾಗಿ ಸ್ವಾಗತಿಸಿ ಯುಸೂಫ್‌ನು ಹೊಸದಾಗಿ ನವೀಕರಣಗೊಳಿಸಲಾದ ಗಗನ್‌ಮಹಲ್‌ನಲ್ಲಿ ಉಳಿಸಿದ. ಹಾಗೆಯೇ ಸುಲ್ತಾನ್‌ನಿಗೆ ಅಮೂಲ್ಯ ಉಡುಗೊರೆಗಳನ್ನು ನೀಡಿದ. ಸಾಂಕೇತಿಕವಾಗಿ ಒಂದು ಆನೆಯನ್ನು ಮಾತ್ರ ಸ್ವೀಕರಿಸಿದ ಸುಲ್ತಾನ್‌ನು ಅವೆಲ್ಲವೂ ಕಾಸಿಂ ವಶವಾಗುವ ಸಾಧ್ಯತೆ ಇರುವುದರಿಂದ ಜೊತೆಗೆ ಒಯ್ಯದೆ ಯುಸೂಫ್‌ನಿಗೇ ಮರಳಿಸಿದನು. ಇದೇ ಹೊತ್ತಿಗೆ ಸುಲ್ತಾನ್‌ನು ಬಹದ್ದೂರ್‌ಖಾನ್‌ನಿಗೆ ಶಸ್ತ್ರಾಸ್ತ್ರ ತ್ಯಜಿಸುವುದಕ್ಕೆ ಗಡುವು ನೀಡಿ ಸಂದೇಶ ಕಳುಹಿಸಿದ. ಹಾಗೆಯೇ ಗುಜರಾತಿನ ದೋಣಿಗಳ ಜೊತೆಯಲ್ಲಿ ವಶಕ್ಕೆ ತೆಗೆದುಕೊಂಡ ಕಮಾಲರ್‌ಖಾನ್ ಮತ್ತು ಸಫ್ದರ್‌ಖಾನ್‌ರನ್ನು ಬಿಡುಗಡೆ ಮಾಡುವಂತೆ ಸೂಚಿಸಿದ. ಮಾರುತ್ತರ ಬಾರದೇ ಇರುವುದನ್ನು ಗಮನಿಸಿ ತೆಲಂಗಾಣದ ರಾಜ್ಯಪಾಲ ಕುತುಬ್‌ಉಲ್ ಮುಲ್ಕ್ ದಖನಿಯ ನೇತೃತ್ವದ ಸೈನ್ಯಕ್ಕೆ ಬಂದು ತನ್ನ ಸೈನ್ಯ ಸೇರಿಕೊಳ್ಳುವಂತೆ ಆದೇಶಿಸಿದ. ಅಷ್ಟೊತ್ತಿಗಾಗಲೇ ಕುತುಬ್ ಉಲ್ ಮುಲ್ಕ್‌ನು 'ಸುಲ್ತಾನ್ ಕುಲಿ ಕಮದಾನಿ' ಎಂಬ ಬಿರುದಿನೊಂದಿಗೆ ಖ್ವಾಸ್ ಸುಲ್ತಾನ್ ಎಂದು ಘೋಷಿಸಿಕೊಂಡಿದ್ದ. ಕುತುಬ್ ಉಲ್ ಮುಲ್ಕ್‌ನು ಬಹದ್ದೂರ್ ಗಿಲಾನಿಯ ವಿರುದ್ಧ ಹೋರಾಟ ನಡೆಸಿ ಸರಣಿ ಗೆಲುವು ತನ್ನದಾಗಿಸಿಕೊಂಡ. ಮಂಖಾರ್ ಕೋಟೆಯನ್ನು ಸ್ವತಃ ದೊರೆಯ ವಶಕ್ಕೆ ತೆಗೆದುಕೊಂಡ. ಆಗ ಖ್ವಾಜಾ ನಿಯಾಮತ್ ಅಲ್ಲಾ ತಬ್ರಿಜಿಯು ಮುಬಾರಕ್‌ಬಾದ್ ಮಿರಜ್‌ಗೆ ಆಗಮಿಸಿ ಬಹದ್ದೂರಖಾನ್ ಶಸ್ತ್ರತ್ಯಾಗ ಮಾಡಲು ಸಿದ್ಧನಿರುವ ಸಂದೇಶ ನೀಡಿದ. ಅದೇ ಹೊತ್ತಿಗೆ ಸುಲ್ತಾನ್‌ನೊಂದಿಗೆ ಬಂದಿದ್ದ ರಾಣಿಗೆ ಶಿಬಿರದಲ್ಲಿ ಗಂಡು ಮಗು ಹುಟ್ಟಿದ ಸುದ್ದಿಯೂ ಬಂತು.

ಎರಡು ಶುಭ ಸಂಗತಿಗಳಿಂದ ಸಂತೋಷಗೊಂಡ ಸುಲ್ತಾನ್‌ನು ಕೇವಲ ಎರಡು ಆನೆಗಳನ್ನು ನೀಡಿದರೆ ಅವನ ವಶಪಡಿಸಿಕೊಂಡ ಎಲ್ಲ ಪ್ರದೇಶಗಳ ಜಹಾಗೀರು ನೀಡುವುದಾಗಿ ಬಹದ್ದೂರ್ ಗಿಲಾನಿಗೆ ತಿಳಿಸಿದ. ಸುಲ್ತಾನ್‌ನ ಶಿಬಿರದಲ್ಲಿಯೇ ಇದ್ದ ಕೆಲವರ ಜೊತೆಗೆ ಗಿಲಾನಿಯ ಸಂಪರ್ಕ ಇತ್ತು. ಅವರ ಸೂಚನೆಯಿಂದಾಗಿ ಗಿಲಾನಿಯು ಸುಲ್ತಾನ್ ಆದೇಶ ಪಾಲಿಸಲು ಒಪ್ಪಲಿಲ್ಲ. ಸುಲ್ತಾನ್‌ನು ತಕ್ಷಣ ಮಿರಜ್ ವಶಪಡಿಸಿಕೊಂಡ. ಹಾಗೆಯೇ ಬಹದ್ದೂರ್‌ನ ದಾಬೋಲ್ ಆಡಳಿತಾಧಿಕಾರಿಯು ಸೋಲು ಒಪ್ಪಿ ಗೌರವ ವಂದನೆ ಸಲ್ಲಿಸುವಂತೆ ಮಾಡಿದ. ಕೊಂಕಣದ ಕೋಟೆಗಳಲ್ಲಿಯೇ ಅಭೇದ್ಯ ಎಂಬ ಖ್ಯಾತಿಗೆ ಪಾತ್ರವಾಗಿದ್ದ ಪನ್ಹಳದ ಕೋಟೆಯಲ್ಲಿ ಬಹದ್ದೂರ್ ಆಶ್ರಯ ಪಡೆದ. ಅದನ್ನು ಕೇಳಿದ ಸುಲ್ತಾನ್‌ನು ತನ್ನ ಸೈನ್ಯದೊಂದಿಗೆ ಕೊಲ್ಹಾಪುರದತ್ತ ಪ್ರಯಾಣ

ಬೆಳೆಸಿದ. ಕೊಲ್ಹಾಪುರ ತಲುಪುತ್ತಿದ್ದಂತೆಯೇ ಪನ್ಹಳದ ಜೊತೆಗೆ ಇದ್ದ ಎಲ್ಲ ಸಂಪರ್ಕದ ಸೇತುಗಳನ್ನು ಕಡಿದು ಹಾಕುವಂತೆ ಫಕ್ರುಲ್ ಮುಲ್ಕ್ ದಖನಿ ಮತ್ತು ಐನ್ ಉಲ್ ಮುಲ್ಕ್ ಕನಾನಿಗೆ ಸೂಚಿಸಿದ. ಯಾವುದೇ ರೀತಿಯ ನೆರವು ದೊರೆಯುವ ಭರವಸೆ ಇಲ್ಲದ ಬಹದ್ದೂರ್‌ನು ನಿಯಾಮತ್ ಅಲ್ಲಾ ತಬ್ರಿಜಿ ಮತ್ತು ಖ್ವಾಜಾ ಮಜುದುದ್ದೀನ್ ಮೂಲಕ ಸುಲ್ತಾನ್‌ನಿಗೆ ಮತ್ತೆ ಸಂದೇಶ ಕಳುಹಿಸಿದ. ಪ್ರಾಣ ಭೀಕ್ಷೆ ನೀಡುವುದಾಗಿ ಪ್ರಧಾನಿ ಕಾಸಿಂ ಬರೀದ್ ಸಹಿ ಮಾಡಿದ ಪತ್ರ ಕಳುಹಿಸಿದರೆ ಶಸ್ತ್ರ ಕೆಳಗಿಟ್ಟು ಸುಲ್ತಾನ್‌ನಿಗೆ ಗೌರವ ಸಲ್ಲಿಸುವುದಾಗಿ ತಿಳಿಸಿದ. ಸುಲ್ತಾನ್ ಮತ್ತೊಮ್ಮೆ ಔದಾರ್ಯ ತೋರಿಸಿ ಗುಜರಾತಿಗೆ ಸೇರಿದ ದೋಣಿಗಳನ್ನು ಮರಳಿಸಿದರೆ ಕ್ಷಮಾದಾನ ನೀಡುವುದಾಗಿ ಮಾರುತ್ತರ ನೀಡಿದ. ಆದರೆ, ಸಮ್ಮತಿಸದ ಬಹದ್ದೂರ್ ಶರಣಾಗತಿಗೆ ಕೆಲವು ಷರತ್ತುಗಳನ್ನು ಮುಂದಿಟ್ಟ. ಸುಲ್ತಾನ್ ಮಿರಜ್ ಬಿಟ್ಟು ಹಾಗೂ ಫಕ್ರುಲ್‌ಮುಲ್ಕ್ ಪನ್ಹಳ ಬಿಟ್ಟು ತೆರಳಿದರೆ ಮಾತ್ರ ಶರಣಾಗುವುದಾಗಿ ತಿಳಿಸಿದ. ಸುಲ್ತಾನ್‌ನಿಗೆ ಸೈನ್ಯ ಕಳುಹಿಸಿದೆ ಬೇರೆ ದಾರಿಯೇ ಇರಲಿಲ್ಲ. ಕುತುಬ್ ಉಲ್ ಮುಲ್ಕ್ ನೇತೃತ್ವದ ಸೈನ್ಯವನ್ನು ಪನ್ಹಳಕ್ಕೆ ಕಳುಹಿಸಿದ. ಎರಡು ಸಾವಿರ ಗಿಲಾನಿ, ಮಜಂದ್ರಾನಿ, ಇರಾಕಿ ಹಾಗೂ ಖುರಾಸಾನಿ ಪದಾತಿದಳದ ಜೊತೆಗೆ 15 ಸಾವಿರ ಸೈನ್ಯದೊಂದಿಗೆ ಕುತುಬ್ ಉಲ್ ಮುಲ್ಕ್‌ನು ಬಹದ್ದೂರ್‌ಖಾನ್‌ನನ್ನು ಎದುರಾದನು. ಸಮರದ ಸಂದರ್ಭದಲ್ಲಿ ತಗುಲಿದ ಬಾಣದಿಂದ ಬಹದ್ದೂರ್ ಗಿಲಾನಿಯು (1494) ಅಸು ನೀಗಿದನು.

ವಿಜಯದ ಸುದ್ದಿ ಕೇಳಿದ ಸುಲ್ತಾನ್‌ನು ಪನ್ಹಳಕ್ಕೆ ತೆರಳಿ ಅದನ್ನು ವಶಪಡಿಸಿಕೊಂಡನು. ಬಹದ್ದೂರ್‌ನಿಗೆ ಸೇರಿದ ಜಹಾಗೀರಿಯ ಕೆಲವು ಭಾಗವನ್ನು ಐನ್ ಉಲ್ ಮುಲ್ಕ್ ಕನಾನಿ ಹಾಗೂ ಕೆಲವು ಭಾಗವನ್ನು ನಿಜಾಂ ಉಲ್ ಮುಲ್ಕ್‌ನಿಗೂ ನೀಡಿದ. ಉಳಿದವುಗಳನ್ನು ಅಮೀರ್‌ರಿಗೆ ಹಂಚಿದ. ಸೈನ್ಯವನ್ನು ಬಿಜಾಪುರಕ್ಕೆ ಕಳುಹಿಸಿ ಮುಸ್ತಫಾಬಾದ್ ದಾಬೋಲ್ ಕಡೆಗೆ ನಡೆದ. ದಾಬೋಲ್‌ನಿಂದ ಬಿಜಾಪುರ, ಕಲ್‌ಬಾಗ್ ಮಾರ್ಗವಾಗಿ ರಾಜಧಾನಿಗೆ ಮರಳಿದ. ಹಲವು ದಿನಗಳ ಕಾಲ ವಿಸ್ತರಣೆಯಾದ ಅಧ್ಯಾಯ ಕೊನೆಗೂ ಅಂತ್ಯ ಕಂಡಿತು. ಚಿನ್ನ ಮತ್ತು ಬೆಳ್ಳಿಯ ಆಸನ, ಮಣಗಟ್ಟಲೆ ಮುತ್ತು, ಐದು ಆನೆ ಹಾಗೂ ಅಮೂಲ್ಯ ಹರಳುಗಳಿದ್ದ ಖಡ್ಗವನ್ನು ಗುಜರಾತಿನ ದೊರೆಗೆ ಉಡುಗೊರೆಯಾಗಿ ಕಳಿಹಿಸಿದ. ಹಾಗೆಯೇ ಬಹದ್ದೂರ್ ವಶಪಡಿಸಿಕೊಂಡಿದ್ದ ದೋಣಿಗಳನ್ನು ಕೂಡ ಮರಳಿಸಿದ.

ಮಲಿಕ್ ಅಹ್ಮದ್‌ನು ಸ್ವಂತ ಸಾಮ್ರಾಜ್ಯ ಸ್ಥಾಪಿಸುವಷ್ಟು ಪ್ರಭಾವಶಾಲಿಯಾಗಿ ಬೆಳೆಯುತ್ತಿದ್ದ. ಅದಕ್ಕಿಂತ ಮುಂಚೆ ದೌಲತಾಬಾದ್ ಪ್ರಾಂತ್ಯದ ಗವರ್ನರ್ ಮಲಿಕ್

ಅಶ್ರಫ್ ಸಾಹಸಕ್ಕೆ ಮುಂದಾದ. ಸುಲ್ತಾನ್ ಮಹಮೂದ್ ಬೇಗಾರ್ ಎಂಬ ಹೆಸರಿನೊಂದಿಗೆ ದೌಲತಾಬಾದ್‌ನ ಅರಸ ಎಂದು ಘೋಷಿಸಿಕೊಂಡ. 150 ವರ್ಷಗಳ ಹಿಂದೆ ಬಹಮನಿ ಸಾಮ್ರಾಜ್ಯದ ಸ್ವಾತಂತ್ರ್ಯ ಘೋಷಿಸಿದ್ದ ಕುತ್ಬುದ್ದೀನ್ ಮುಬಾರಕ್ ಶಹಾ ಖಲ್ಜಿ ಮಸೀದಿಯಲ್ಲಿಯೇ ಶುಕ್ರವಾರದ ಪ್ರಾರ್ಥನೆಯ ಸಂದರ್ಭದಲ್ಲಿ ಕುತ್ಬಾ ಓದಿದ. ಅವನು ನಿಜಾಂ ಉಲ್ ಮುಲ್ಕ್‌ನ ಜೊತೆಗಿನ ಮೊದಲ ಕದನದಲ್ಲಿ ಭಾಗವಹಿಸುವಷ್ಟು ದಿನ ಕೂಡ ಬದುಕಿರಲಿಲ್ಲ. ಮಲ್ಲಿಕ್ ಅಶ್ರಫ್‌ನ ನಿಧನದಿಂದಾಗಿ ದೌಲತಾಬಾದ್ ಮರಳಿ ವಶಕ್ಕೆ ತೆಗೆದುಕೊಳ್ಳುವುದು ಹೆಚ್ಚು ಕಷ್ಟವಾಗಲಿಲ್ಲ.

ಅಶ್ರಫ್‌ನಿಗಿಂತ ದಸ್ತೂರ್ ದಿನಾರ್ ಹಬಶಿ ಹೆಚ್ಚು ಸುದೈವಿಯಾಗಿದ್ದ. ಗುಲ್ಬರ್ಗ, ಸಗರ, ಅಳಂದ ಮತ್ತು ಗಂಗಾವತಿ ಪ್ರದೇಶಗಳ ಜಹಾಗೀರ್‌ದಾರ್‌ನಾಗಿದ್ದ ದಸ್ತೂರ್ ದಿನಾರ್‌ನು ಹೆಚ್ಚುವರಿಯಾಗಿ ದೊರೆತಿದ್ದ ತೆಲಂಗಾಣವನ್ನು ಕುತುಬ್ ಉಲ್ ಮುಲ್ಕ್‌ನಿಗೆ ಬಿಟ್ಟು ಕೊಡಬೇಕಾಯಿತು. ಆಗ ದಸ್ತೂರ್ ದಿನಾರ್‌ನಿಗೆ ತಾನು ಕೂಡ ಸ್ವಾತಂತ್ರ್ಯ ಘೋಷಿಸಿಕೊಳ್ಳಬೇಕು ಅನ್ನಿಸಿತು. ಅದಕ್ಕಾಗಿ ನಿಜಾಂ ಉಲ್ ಮುಲ್ಕ್‌ನ ಜೊತೆಗೂಡಿ ರಾಜನಿಂದ ನೇಮಿಸಲಾದ ಸಿಬ್ಬಂದಿಯನ್ನು ಕೆಲಸದಿಂದ ತೆಗೆದುಹಾಕಿದ. ಇದರಿಂದ ಕೋಪಗೊಂಡ ಸುಲ್ತಾನ್‌ನು ಸ್ವತಃ ಸೈನ್ಯದೊಂದಿಗೆ ಪ್ರಯಾಣ ಬೆಳೆಸಿ ಯುಸೂಫ್ ಆದಿಲ್‌ಖಾನ್ ಸಹಾಯ ಕೋರಿದನು. ಮಹೇಂದ್ರಿಯ ಬಳಿ ಎರಡು ಸೇನೆಗಳು ಮುಖಾಮುಖಿಯಾದವು. ಸುಲ್ತಾನ್‌ನ ಸೈನ್ಯದ ಬಲಬದಿಯಲ್ಲಿ ಯುಸೂಫ್ ಆದಿಲ್ ಮತ್ತು ಫಕ್ರುಲ್ ಮುಲ್ಕ್ ಹಾಗೂ ಎಡಭಾಗದಲ್ಲಿ ಕುತುಬ್ ಉಲ್ ಮುಲ್ಕ್ ಮತ್ತು ಜಹಾಂಗೀರ್‌ಖಾನ್ ಇದ್ದರು. ಸೋತ ದಸ್ತೂರ್‌ನ ತಲೆ ಕಡಿಯುವಂತೆ ಆದೇಶಿಸಲಾಯಿತು. ಆದರೆ, ನಂತರ ಕ್ಷಮಾದಾನ ನೀಡಿ ಗುಲ್ಬರ್ಗ ಮತ್ತು ಅಳಂದ ಜಹಾಗೀರು ಮರಳಿ ನೀಡಲಾಯಿತು.

ಗುಲ್ಬರ್ಗದಲ್ಲಿ 1497ರಲ್ಲಿ ಅರಸು ಪುತ್ರ ಬಾಲಕ ಅಹ್ಮದ್ ಮತ್ತು ಯುಸೂಫ್ ಆದಿಲ್‌ನ ಪುತ್ರಿ ಬೀಬಿ ಸಿಟ್ಟಿಗೂ ವಿವಾಹ ನಿಶ್ಚಿತಾರ್ಥ ಮಾಡಲಾಯಿತು. ಖಾಜಿ ಅಬ್ದುಲ್ ಸಮಿಯು ನಿಶ್ಚಿತಾರ್ಥ ಸಮಾರಂಭದ ನೇತೃತ್ವ ವಹಿಸಿದ್ದರು. ತನಗೆ ಇಷ್ಟವಿಲ್ಲದಿದ್ದರೂ ಕಾಸಿಂ ಬರೀದ್ ಫಕ್ರುಲ್ ಮುಲ್ಕ್‌ನ ಜೊತೆಗೂಡಿ ಬಂದು ಶುಭ ಕೋರಿದ. ಮದುಮಗ ನಾಲ್ಕು ಮತ್ತು ಮದುಮಗಳು ಮೂರು ವರ್ಷದವರಾಗಿದ್ದರು. ಆದ್ದರಿಂದ ಮದುಮಗಳನ್ನು ಆರು ವರ್ಷದ ನಂತರ ಕಳುಹಿಸಲು ನಿರ್ಧರಿಸಲಾಯಿತು. ಇಂತಹ ಶುಭಗಳಿಗೆಯಲ್ಲಿಯೇ ಆಂತರಿಕ ಕಚ್ಚಾಟ ಆರಂಭವಾಯಿತು. ಈ ಬಾರಿ ಯುಸೂಫ್ ಆದಿಲ್‌ಖಾನ್‌ನು

ಗುಲ್ಬರ್ಗ, ಗಂಗಾವತಿ, ಆಳಂದ ಮತ್ತು ಕಲ್ಯಾಣಿ ತನಗೆ ಸೇರಬೇಕು ಎಂದು ಪಟ್ಟು ಹಿಡಿದನು. ಅರಸು ಯಾವುದೇ ನಿರ್ಣಯ ಕೈಗೊಳ್ಳಲಾಗದಷ್ಟು ದುರ್ಬಲನಾಗಿದ್ದ. ನಿಶ್ಚಿತಾರ್ಥದ ವಿಧಿವಿಧಾನಗಳು ನಡೆಯುತ್ತಿರುವಾಗಲೇ ಯುಸೂಫ್ ಆದಿಲ್‌ಖಾನ್ ಮತ್ತು ಕುತುಬ್ ಉಲ್ ಮುಲ್ಕ್ ಹಮದಾನಿ ಒಂದಾಗಿ ದಸ್ತೂರ್ ದಿನಾರ್ ಜೊತೆಗೆ ಕದನಕ್ಕೆ ಇಳಿದರು. ದಿನಾರ್‌ನಿಗೆ ಕಾಸಿಂ ಬರೀದ್ ಹಾಗೂ ಫಕ್ರುಲ್ ಮುಲ್ಕ್ ದಖನಿಯ ಬೆಂಬಲವೂ ಇತ್ತು. ಕಚ್ಚಾಟದಲ್ಲಿ ಯುಸೂಫ್ ಆದಿಲ್‌ಖಾನ್‌ನಿಗೆ ಗೆಲುವು ಲಭಿಸಿತು. ಈ ವಿಜಯದೊಂದಿಗೆ ಯುಸೂಫ್‌ನ ಪ್ರತಿಷ್ಠೆ ಹೆಚ್ಚಿತು. ಯುಸೂಫ್ ಬಿಜಾಪುರಕ್ಕೆ ಮರಳುತ್ತಿದ್ದಂತಯೇ ಕಾಸಿಂ ಮತ್ತೊಮ್ಮೆ ಪ್ರಧಾನಿಯಾಗಿ ನೇಮಕಗೊಂಡ.

ನಂತರದ ದಿನಗಳಲ್ಲಿಯೂ ಯುಸೂಫ್‌ನು ದಸ್ತೂರ್ ದಿನಾರ್‌ನು ನೆಮ್ಮದಿಯಿಂದ ಇರಲು ಬಿಡಲಿಲ್ಲ. 1498ರಲ್ಲಿ ಸೈನ್ಯದೊಂದಿಗೆ ಗುಲ್ಬರ್ಗದ ಮೇಲೆ ದಾಳಿ ನಡೆಸಿದನು. ದಸ್ತೂರ್ ದಿನಾರ್‌ನು ನಿಜಾಂ ಉಲ್ ಮುಲ್ಕ್‌ನ ಬಳಿಗೆ ಪಲಾಯನಗೈದನು. ಯುಸೂಫ್‌ನು ನೇರವಾಗಿ ಬೀದರ್‌ಗೆ ತೆರಳಿ ನಿಜಾಂ ಉಲ್ ಮುಲ್ಕ್‌ನು ದಂಗೆಗೆ ಬೆಂಬಲ ನೀಡುತ್ತಿದ್ದಾನೆ ಎಂದು ದೂರು ನೀಡಿದನು. ದಸ್ತೂರ್ ದಿನಾರ್‌ನು ಹಲವು ದಿನಗಳ ಗುಲ್ಬರ್ಗ ಪ್ರಾಂತ್ಯವನ್ನು ನೋಡಿಕೊಳ್ಳುತ್ತಿರುವುದರಿಂದ ಅವನಿಗೆ ಸುಲ್ತಾನ್‌ನು ಅಡ್ಡಿಪಡಿಸಬಾರದು ಎಂದು ಆಗ ನಿಜಾಂ ಉಲ್ ಮುಲ್ಕ್‌ನು ಮನವಿ ಮಾಡಿದನು. ರಾಜನ ಮಧ್ಯಸ್ಥಿಕೆಯಿಂದಾಗಿ ಯುಸೂಫ್‌ನು ನಂತರ ದಸ್ತೂರ್ ದಿನಾರ್‌ನ ತಂಟೆಗೆ ಹೋಗಲಿಲ್ಲ.

1509ರಲ್ಲಿ ವಿಜಯನಗರದಲ್ಲಿ ಕೃಷ್ಣದೇವರಾಯ ಸಿಂಹಾಸನ ಆರೋಹಣ ಮಾಡುವ ವರೆಗೆ ಎಲ್ಲವೂ ಸುರಳಿತವಾಗಿತ್ತು. ಕೃಷ್ಣದೇವರಾಯ ನಡೆಸಿದ ದಂಡಯಾತ್ರೆಗಳು ಯಶಸ್ವಿಯಾಗಿದ್ದವು. ಯುಸೂಫ್ ಆದಿಲ್‌ಖಾನ್‌ನ ಪುತ್ರ ಇಸ್ಮಾಯಿಲ್‌ನಿಂದ ರಾಯಚೂರು ಮತ್ತು ಮುದಗಲ್ ಕೋಟೆಗಳನ್ನು ವಶಪಡಿಸಿಕೊಂಡ. 1515ರ ವೇಳೆಗೆ ವೇನುಕೊಂಡ, ಅಮರಾವತಿ, ರಾಜಮಹೇಂದ್ರಿ, ಕೊಂಡಪಲ್ಲಿ, ನಲಗೊಂಡ ವಿಜಯನಗರದ ವಶವಾಗಿದ್ದವು. ಅವುಗಳಲ್ಲಿ ಬಹುತೇಕ ಬಹಮನಿ ಮತ್ತು ಒರಿಸ್ಸಾದ ಗಜಪತಿ ಸಾಮ್ರಾಜ್ಯಕ್ಕೆ ಸೇರಿದವುಗಳಾಗಿದ್ದವು. 1517ರಲ್ಲಿ ಬಹಮನಿ ಸಾಮ್ರಾಜ್ಯದ ಪ್ರಮುಖರು ರಾಯಚೂರು ಮತ್ತು ಮುದಗಲ್ ಕೋಟೆಗಳನ್ನು ಮರಳಿ ಪಡೆಯಲು ನಿರ್ಧರಿಸಿದರು.

ಎಲ್ಲ ಅಮೀರ್‌ರು, ರಾಜ್ಯಪಾಲರನ್ನು ಒಳಗೊಂಡ ಸೈನ್ಯದ ನೇತೃತ್ವವನ್ನು ಸ್ವತಃ ಸುಲ್ತಾನ್‌ನೇ ವಹಿಸಿದ್ದ. ಜಂಟಿ ಕಾರ್ಯಾಚರಣೆಯೂ ಫಲಕಾರಿಯಾಗಲಿಲ್ಲ.

ತೀವ್ರವಾಗಿ ಗಾಯಗೊಂಡ ಸುಲ್ತಾನ್‌ನನ್ನು ಶಹಾ ಮುಹೀಬ್ ಅಲ್ಲಾನ ಪುತ್ರ ಮಿರ್ಜಾ ಲುಘ್ತುಲ್ಲಾ ಸೇನೆಯ ಶಿಬಿರಕ್ಕೆ ಸಾಗಿಸಿದ. ಸೋಲಿನಿಂದ ಹತಾಶಗೊಂಡ ಸೈನ್ಯ ಬೀದರ್‌ಗೆ ಮರಳಿತು.

ವಿಜಯನಗರದ ಜೊತೆಗಿನ ಸರಣಿ ಸಮರದ ಸಂದರ್ಭದಲ್ಲಿ ಕಾಸಿಂ ಬರೀದ್‌ನಿಗೆ ಯಾವುದೇ ರೀತಿಯ ಆದ್ಯತೆ ನೀಡಿರಲಿಲ್ಲ. (1503-04) ಅದಕ್ಕೆ ಅವನ ವಿರುದ್ಧ ಹಲವರು ದೂರು ಹೇಳಿದ್ದೇ ಕಾರಣವಾಗಿತ್ತು. ಕಾಸಿಂ ಬರೀದ್‌ನಿಂದ ಪ್ರಧಾನಿ ಹುದ್ದೆಯನ್ನು ಕಿತ್ತು ಖಾನ್ ಎ ಜಹಾನ್‌ನಿಗೆ ನೀಡಲಾಯಿತು. ಕದನ ಸಂಪೂರ್ಣವಾಗಿ ಮುಗಿದಾಗ ಬಹಮನಿ ಸೈನ್ಯ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿತ್ತು. ಕಾಸಿಂ ಬರೀದ್‌ನು ಹೊಂಚು ಹಾಕಿ ಪ್ರಧಾನಿಯ ಹತ್ಯೆ ಮಾಡಿಸುವಲ್ಲಿ ಯಶಸ್ವಿಯಾದನು. ಇದರಿಂದ ಕೋಪಗೊಂಡ ಸುಲ್ತಾನ್‌ನು ಕಾಸಿಂ ಬರೀದ್‌ನ ಪ್ರಾಬಲ್ಯ ಕಡಿಮೆ ಮಾಡುವುದಕ್ಕಾಗಿ ಪ್ರಮುಖ ಪ್ರಾಂತ್ಯಾಧಿಕಾರಿಗಳಾದ ಯುಸೂಫ್ ಆದಿಲ್, ಕುತುಬ್ ಉಲ್ ಮುಲ್ಕ್ ಹಾಗೂ ದಸ್ತೂರ್ ಉಲ್ ಮುಲ್ಕ್‌ರನ್ನು ಸೈನ್ಯ ಸಮೇತ ರಾಜಧಾನಿಗೆ ಬರುವಂತೆ ಸೂಚಿಸಿದ. ಮೂವರು ರಾಜ್ಯಪಾಲರು ಸೈನ್ಯ ಸಮೇತರಾಗಿ ಆಗಮಿಸಿದರು. ಕಾಸಿಂ ಬರೀದ್‌ನು ತನ್ನ ರಕ್ಷಣೆಗಾಗಿ ಬಂದವರ ವಿರುದ್ಧವೇ ಸುಲ್ತಾನ್‌ನನ್ನು ರಣರಂಗಕ್ಕೆ ಇಳಿಸುವಲ್ಲಿ ಯಶಸ್ವಿಯಾದನು. ಸಮರದಲ್ಲಿ ಸೋಲು ಸಮೀಪಿಸುತ್ತಿದೆ ಎನ್ನುವಾಗ ಕಾಸಿಂ ಬರೀದ್ ಪಲಾಯನಗೈದ. ರಣರಂಗದಲ್ಲಿ ಒಂಟಿಯಾಗಿ ನಿಂತ ಸುಲ್ತಾನ್‌ನಿಗೆ ವಿಜೇತ ರಾಜ್ಯಪಾಲರು ಗೌರವ ಸಲ್ಲಿಸಿ ಮರಳಿದರು.

1503-04ರಲ್ಲಿ ಯುವರಾಜ ಅಹ್ಮದ್ ಮತ್ತು ಯುಸೂಫ್ ಆದಿಲ್‌ನ ಮಗಳು ಬೀಬಿ ಸಿಟ್ಟಿಯ ವಿವಾಹ ಗುಲ್ಬರ್ಗದಲ್ಲಿ ಅದ್ದೂರಿಯಿಂದ ನಡೆಯಿತು. 1505ರಲ್ಲಿ ಸುಲ್ತಾನ್‌ನು ತಾಂಡೂರಿನ ಶಿಬಿರದಲ್ಲಿ ಇದ್ದ ಸಂದರ್ಭದಲ್ಲಿ ಅಲ್ಲಿಗೆ ಬಂದ ಕಾಸಿಂ ಬರೀದ್‌ನು ಗೌರವ ವಂದನೆ ಸಲ್ಲಿಸಿದನು. ಎಲ್ಲ ಕಳೆದುಕೊಂಡ ಹತಾಶೆಯಲ್ಲಿದ್ದ ಕಾಸಿಂ ಬರೀದ್‌ನು ಯುಸೂಫ್ ಆದಿಲ್‌ನ ಜೊತೆ ಜಗಳಕ್ಕೆ ಇಳಿದನು. ಆ ಗಲಾಟೆಯಲ್ಲಿ ಐನ್ ಉಲ್ ಮುಲ್ಕ್‌ನನ್ನು ಕಾಸಿಂ ಬರೀದ್‌ನ ಸಂಗಡಿಗರು ಕೊಂದು ಹಾಕಿದರು. ತಾಂಡೂರಿನಿಂದ ಹೊರಟ ಕಾಸಿಂನು ಬೀದರ್ ತಲುಪಿದನು. ಸುಲ್ತಾನ್‌ನು ಹೊಸದಾಗಿ ಮದುವೆಯಾದ ಯುವರಾಜ ಮತ್ತು ಯುವರಾಣಿಯರ ಜೊತೆಗೆ ರಾಜಧಾನಿಗೆ ಆಗಮಿಸಿದಾಗ ಕಾಸಿಂ ಬರೀದ್‌ನು 5000 ಅಶ್ವದಳದೊಂದಿಗೆ ಬಂದು ಗೌರವ ಸಲ್ಲಿಸಿದನು. ಅವನನ್ನು ನಾಯಬ್ ಬಾರ್ಬೇಕ್ ಎಂದು ನೇಮಕ ಮಾಡಿ ನಗರದ ಆಡಳಿತದ ಉಸ್ತುವಾರಿಯನ್ನು ವಹಿಸಲಾಯಿತು. 1505ರಲ್ಲಿ ಕಾಸಿಂ ಬರೀದ್‌ನು ಅಸು ನೀಗಿದನು. ಅವನ

ಮಗ ಅಮೀರ್ ಬರೀದ್ ಪ್ರಧಾನಿಯಾಗಿ ನೇಮಕಗೊಂಡನು. ಕ್ಯಾಲಿಗ್ರಫಿ ಮತ್ತು ಸಂಗೀತದಲ್ಲಿ ಪರಿಣಿತನಾಗಿದ್ದ ಅಮೀರ್ ಬರೀದ್‌ನು ಬಹಮನಿ ಸಾಮ್ರಾಜ್ಯದ ಅಧಿಕಾರಕ್ಕೆ ಅಂತ್ಯ ಹಾಡಿದನು. ಶಕ್ತಿಶಾಲಿಯಾಗಿದ್ದ ಪ್ರಾಂತ್ಯದ ರಾಜ್ಯಪಾಲರು ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳುತ್ತಿದ್ದರಿಂದ ಅರಮನೆಗೆ ಹತ್ತಿರದಲ್ಲಿ ಇದ್ದು ತನ್ನ ಬೇಳೆ ಬೇಯಿಸಿಕೊಳ್ಳಲು ನಿರ್ಧರಿಸಿದ. ತನ್ನ ರಾಜಕೀಯ ಜೀವನದುದ್ದಕ್ಕೂ ಅರಮನೆ ರಾಜಕೀಯದಿಂದ ದೂರ ಹೋಗಲಿಲ್ಲ. ಇದರಿಂದ ಬಹಮನಿ ಸಂಪೂರ್ಣ ನಾಶದ ಅಂಚು ತಲುಪಿತು. ಗುಂಪು ಕಲಹಗಳು ವ್ಯಾಪಕವಾದ ಅದಕ್ಕೆ ಯಾವುದೇ ಕಾರಣಗಳಿರಲಿಲ್ಲ. ವ್ಯಕ್ತಿಗತ ಪ್ರತಿಷ್ಠೆಯೇ ಪ್ರಮುಖ ಕಾರಣವಾಗಿತ್ತು. ಕಾಸಿಂ ಬರೀದ್ ಮೃತಪಟ್ಟಾಗ ದುರ್ಬಲನಾಗಿದ್ದ ಸುಲ್ತಾನ್‌ನ ಬೆಂಬಲಕ್ಕೆ ಯಾವ ಸ್ನೇಹಿತರೂ ಇರಲಿಲ್ಲ.

1508ರಲ್ಲಿ ಅಹ್ಮದ್ ನಿಜಾಂ ಉಲ್ ಮುಲ್ಕ್‌ನ ನಿಧನದೊಂದಿಗೆ ಬಹಮನಿ ಸಾಮ್ರಾಜ್ಯದ ಪ್ರಮುಖ ಪಾತ್ರಧಾರಿಯೊಬ್ಬ ತೆರೆಯ ಮರೆಗೆ ಸರಿದಂತಾಯಿತು. ಅವನ ಪುತ್ರ ಬುರ್ಹಾನ್ ಅಧಿಕಾರಕ್ಕೆ ಬಂದ. ಅದಾದ ಎರಡು ವರ್ಷಗಳ ನಂತರ ಯುಸೂಫ್ ಆದಿಲ್ ಕೋವಿಲ್‌ಕೊಂಡದಲ್ಲಿ, ಫತ್ತುಲ್ಲಾ ಇಮಾದ್ ಉಲ್ ಮುಲ್ಕ್ ಎಲಿಚಿಪುರದಲ್ಲಿ ಮೃತಪಟ್ಟರು. ಸುಲ್ತಾನ್‌ನು ಆದಿಲ್‌ಖಾನ್ ಬಿರುದನ್ನು ಯುಸೂಫ್‌ನ ಮಗ ಇಸ್ಮಾಯಿಲ್‌ನಿಗೆ ನೀಡಿದ. ಇಮಾದ್ ಉಲ್ ಮುಲ್ಕ್ ಸ್ಥಾನವನ್ನು ಫತ್ತುಲಾನ ಪುತ್ರ ಅಲಾವುದ್ದೀನ್ ದರಿಯಾಖಾನ್‌ನಿಗೆ ಕೊಟ್ಟ. ಇಬ್ಬರಿಗೂ ಅವರ ತಂದೆಗೆ ಇದ್ದ ಜಹಾಗೀರ್‌ಗಳನ್ನು ಮುಂದುವರೆಸಿದ.

1517ರಲ್ಲಿ ಅಂದರೆ ಸುಲ್ತಾನ್ ಕೊನೆಯುಸಿರು ಎಳೆಯುವ ಒಂದು ವರ್ಷ ಮೊದಲು ಅಹ್ಮದ್‌ನಗರದಿಂದ ನಿಜಾಂ ಉಲ್ ಮುಲ್ಕ್, ಪರಿಂಡಾದಿಂದ ಖ್ವಾಜಾ ಜಹಾನ್, ಬಿಜಾಪುರದಿಂದ ಇಸ್ಮಾಯಿಲ್ ಆದಿಲ್, ಗೋಲ್ಕೊಂಡಾದಿಂದ ಕುತುಬ್ ಉಲ್ ಮುಲ್ಕ್, ಬೆರಾರ್‌ನಿಂದ ಇಮಾದ್ ಉಲ್ ಮುಲ್ಕ್ ಸೈನ್ಯ ಸಮೇತರಾಗಿ ಬಂದು ಸಾಮ್ರಾಟನಿಗೆ ಗೌರವ ಸಲ್ಲಿಸಿದ್ದರು. ಇದೆಲ್ಲ ನಡೆಯುತ್ತಿರುವಾಗ ಅಮೀರ್ ಬರೀದ್‌ನು ತನ್ನ ಖಾಸಗಿ ಬೊಕ್ಕಸ ತುಂಬಿಸಿಕೊಳ್ಳುವ ಕೆಲಸದಲ್ಲಿ ನಿರತನಾಗಿದ್ದನು. ದಸ್ತೂರ್ ದಿನಾರ್‌ನ ನಿಧನದ ನಂತರ ಅವನ ಪುತ್ರ ಜಹಾಂಗೀರ್‌ಖಾನ್‌ನಿಗೆ ಪ್ರಾಂತ್ಯದ ಅಧಿಕಾರ ವಹಿಸಲಾಯಿತು. ಅಮೀರ್‌ನು ತನಗೆ ಬೇಕಾದವರನ್ನು ನೇಮಿಸುತ್ತ ಆಡಳಿತದ ಮೇಲೆ ಬಿಗಿ ಹಿಡಿತ ಸಾಧಿಸುತ್ತ ಹೋದನು. ಸಗರದಿಂದ ನಳದುರ್ಗದ ವರೆಗಿನ ಕೋಟೆಗಳನ್ನು ಗೆದ್ದುಕೊಂಡ ಇಸ್ಮಾಯಿಲ್‌ನ ಹೆಚ್ಚುತ್ತಿರುವ ಪ್ರಾಬಲ್ಯ ಕಂಡು ಕರುಬಿದ ಅಮೀರ್‌ನು ಸುಲ್ತಾನ್‌ನಿಗೆ ಚಾಡಿ ಹೇಳಿ ದಂಡೆತ್ತಿ ಹೋಗುವಂತೆ ಪುಸಲಾಯಿಸಿದ. ಎರಡೂ ಸೈನ್ಯಗಳು

ಅಳಂದಪುರದ ಬಳಿ ಮುಖಾಮುಖಿಯಾದವು. ದಿನದ ಅಂತ್ಯಕ್ಕೆ ಸುಲ್ತಾನ್ ಮತ್ತು ಯುವರಾಜನನ್ನು ರಣರಂಗದಲ್ಲಿಯೇ ಬಿಟ್ಟು ಅಮೀರ್ ಪರಾರಿಯಾದನು. ಗಾಯಗೊಂಡ ಸುಲ್ತಾನ್‌ನನ್ನು ಗೌರವಯುತವಾಗಿ ಬಿಜಾಪುರಕ್ಕೆ ಕರೆದುಕೊಂಡು ಹೋಗಲಾಯಿತು. ಸುಲ್ತಾನ್ ರಾಜಧಾನಿಗೆ ಮರಳಲು ಬಯಸಿದಾಗ ಐದು ಸಾವಿರ ಮೊಗಲ್‌ರ ಪಡೆಯೊಂದಿಗೆ ಗೌರವಯುತವಾಗಿ ಕಳುಹಿಸಿಕೊಟ್ಟನು. ಇದೇ ಸಂದರ್ಭದಲ್ಲಿ ಯುವರಾಜ ಅಹ್ಮದ್‌ನ ಪತ್ನಿ ಬೀಬಿ ಸಿಟ್ಟಿಯನ್ನು ಕೂಡ ಕಳುಹಿಸಿಕೊಡಲಾಯಿತು.

ಸುಲ್ತಾನ್ ಕೊನೆಯ ವರ್ಷಗಳು ಹಲವು ದಂಗೆ, ಪ್ರತಿದಂಗೆಗಳಿಗೆ ಸಾಕ್ಷಿಯಾದವು. 1517ರಲ್ಲಿ ಖುದಾವಂದ್‌ಖಾನ್ ಮಾಹೂರ್‌ನಲ್ಲಿ ಬಂಡೆದ್ದಾಗ ಸ್ವತಃ ಸುಲ್ತಾನ್‌ನೇ ಅಲ್ಲಿಗೆ ತೆರಳಬೇಕಾಯಿತು. ಬಂಡೆದ್ದ ಖುದಾವಂದ್‌ಖಾನ್ ತಲೆ ಕಡಿದು ಹಾಕಲಾಯಿತು. ಅವನ ಜಹಾಗೀರುಗಳನ್ನು ಅವನ ಪುತ್ರ ಮಹಮೂದ್‌ಖಾನ್‌ನಿಗೆ ವಹಿಸಲಾಯಿತು.

1518ರ ಡಿಸೆಂಬರ್ 27ರಂದು ಸುಲ್ತಾನ್ ಶಿಹಾಬುದ್ದೀನ್ ಮಹಮೂದ್ ಕೊನೆಯುಸಿರು ಎಳೆದ. ಸುಲ್ತಾನ್‌ನ ಸಾವಿನೊಂದಿಗೆ ಪ್ರಾಂತ್ಯದ ಅಧಿಕಾರಿಗಳು ತಾವು ಸ್ವತಂತ್ರ ಎಂದು ಘೋಷಿಸಿಕೊಂಡರು. ತನ್ನ ಅರಮನೆ ತಾನೇ ಬಂದಿ ಆಗಿರುವುದಾಗಿ ಹೇಳುತ್ತಿದ್ದ ಮಹಮೂದ್‌ನ ಕೈಯಲ್ಲಿ ಯಾವ ಅಧಿಕಾರವೂ ಇರಲಿಲ್ಲ. ಯಾರ ಕೈ ಮೇಲಾಗುತ್ತದೋ ಅವರ ಕೈಯಲ್ಲಿ ಅಧಿಕಾರ ಎನ್ನುವ ಸ್ಥಿತಿ ರಾಜಧಾನಿಯಲ್ಲಿ ನಿರ್ಮಾಣವಾಗಿತ್ತು. ಅತಿಯಾದ ಲೋಲುಪತೆಯಲ್ಲಿ ಮುಳುಗಿದ ಸುಲ್ತಾನ್ ಅದರಲ್ಲಿ ರಾಜ್ಯದ ಆಡಳಿತ ಮರೆತ. ತನ್ನ ಸಿಂಹಾಸನದ ವಜ್ರ, ವೈಢೂರ್ಯ, ಹವಳಗಳಂತಹ ಅಮೂಲ್ಯ ವಸ್ತುಗಳನ್ನು ಮಾರಾಟ ಮಾಡಬೇಕಾಯಿತು. ಬೀದರ್‌ನಲ್ಲಿ ಪ್ರಭಾವಶಾಲಿಯಾದ ಪ್ರಧಾನಿ ಇದ್ದಿದ್ದರೆ ಪ್ರಾಂತ್ಯಗಳಲ್ಲಿ ಹೆಚ್ಚುತ್ತಿದ್ದ ಅಧಿಕಾರಕ್ಕೆ ಕಡಿವಾಣ ಹಾಕಬಹುದಾಗಿತ್ತು. ಕಾಸಿಂ ಅಥವಾ ಅಮೀರ್ ಇಬ್ಬರೂ ಮಲಿಕ್ ಹಸನ್ ನಿಜಾಂ ಉಲ್ ಮುಲ್ಕ್‌ನ ದರ್ಜೆಗೆ ಸೇರಿದವರಾಗಿರಲಿಲ್ಲ. ಯುಸೂಫ್ ಮತ್ತು ಮಲಿಕ್ ಹಸನ್ ಇಬ್ಬರೂ ಅರ್ಹರಾಗಿದ್ದರು. ಅವರಿಬ್ಬರು ಮನಸ್ಸು ಮಾಡಿದ್ದರೆ ಬೀದರ್‌ನಲ್ಲಿ ಇದ್ದು ಪ್ರಾಬಲ್ಯ ಮೆರೆಯಬಹುದಿತ್ತು. ಸಾಮ್ರಾಜ್ಯದ ಕೇಂದ್ರದ ಆಡಳಿತ ಮತ್ತು ಪ್ರಾಂತ್ಯದ ಆಡಳಿತ ಅಧಿಕಾರಿಗಳ ನಡುವೆ ಭಿನ್ನಾಭಿಪ್ರಾಯ ಇದ್ದರೂ ಸುಲ್ತಾನ್ ಬದುಕಿರುವ ವರೆಗೆ ಯಾರೊಬ್ಬರೂ ಸ್ವಾತಂತ್ರ್ಯ ಘೋಷಿಸಲಿಲ್ಲ.

## ಅಹ್ಮದ್ IV

(27 ಡಿಸೆಂಬರ್ 1518 ರಿಂದ 15 ಡಿಸೆಂಬರ್ 1520)

ರಾಜಧಾನಿಯಲ್ಲಿ ಅಮೀರ್ ಬರೀದ್ ಪ್ರಭಾವಶಾಲಿಯಾಗಿದ್ದ. ಸ್ವತಃ ತಾನೇ ಅಧಿಕಾರಕ್ಕೆ ಬರಲು ಹೊಂಚು ಹಾಕಿದ್ದ. ಬಿಜಾಪುರ ಮತ್ತು ಅಹ್ಮದ್‌ನಗರದಿಂದ ಪ್ರತಿರೋಧ ಬರಬಹುದು ಎಂದು ಅಂದಾಜು ಮಾಡಿ ಮಹಮೂದ್‌ನ ಪುತ್ರ ಅಹ್ಮದ್‌ನನ್ನು ಸಿಂಹಾಸನದ ಮೇಲೆ ಕೂಡಿಸಿದ. ಅಹ್ಮದ್ ಅಧಿಕಾರದಲ್ಲಿ ಇದ್ದಷ್ಟು ದಿನವೂ ಪ್ರಧಾನಿಯ ಕಪಿಮುಷ್ಟಿಯೊಳಗೇ ಇರಬೇಕಾಯಿತು. ಅರಸ ಅರಮನೆಯಿಂದ ಹೊರಗೇ ಬರದಂತೆ ವ್ಯವಸ್ಥೆ ಮಾಡಲಾಗಿತ್ತು. ಸಾರ್ವಜನಿಕರು ಅರಸನನ್ನು ಭೇಟಿ ಮಾಡಲು ಅವಕಾಶ ಇಲ್ಲದಂತೆ ನೋಡಿಕೊಳ್ಳಲಾಗುತ್ತಿತ್ತು. ವಿಲಾಸಿ ಜೀವನಕ್ಕೆ ಅಗತ್ಯವಾಗಿರುವ ಸಂಗತಿಗಳು ಹಾಗೂ ಸಂಗೀತಗಾರರು, ನರ್ತಕಿಯರು ಮಾತ್ರ ಅರಸನನ್ನು ಕಾಣಬಹುದಿತ್ತು. ಮಹಮೂದ್ ಶಹಾನ ಕುತುಬ್ ಉಲ್ ಮುಲ್ಕ್ ಮಾತ್ರ ಗಣನೀಯ ಪ್ರಮಾಣದ ವಾರ್ಷಿಕ ಕಪ್ಪ ಸಲ್ಲಿಸುತ್ತಿದ್ದ. ಸುಲ್ತಾನ್ ದುರ್ಬಲನಾಗಿ, ರಾಜಕೀಯದ ದಾಳ ಮಾತ್ರ ಆಗಿ ಉಳಿದಿರುವುದನ್ನು ಗಮನಿಸಿದ ಕುತುಬ್ ಪೇಶ್‌ಕಶ್ ಕಳುಹಿಸುವುದನ್ನು ನಿಲ್ಲಿಸಿದ.

ಆಗ ಸುಲ್ತಾನ್‌ನು ಬಹುಬೆಲೆ ಬಾಳುವ ಬಹಮನಿ ಸಿಂಹಾಸನದ ಬೆಲೆ ಬಾಳುವ ರತ್ನಗಳು, ವಸ್ತುಗಳನ್ನು ಕತ್ತರಿಸಿ ತೆಗೆದು ಮಾರಾಟ ಮಾಡಿ ತನ್ನ ನಿತ್ಯದ ಲೋಲುಪತೆಯ ಅಗತ್ಯಗಳನ್ನು ತೀರಿಸಿಕೊಳ್ಳಬೇಕಾಯಿತು. ಇದನ್ನು ಕೇಳಿದ ಅಮೀರ್ ಬರೀದ್ ಕೋಪೋದ್ರಿಕ್ತನಾಗಿ ಖರೀದಿಸಿದವರನ್ನು ಕೊಲ್ಲಿಸಿದ. ಅಷ್ಟೊತ್ತಿಗಾಗಲೇ ಕಿರೀಟದ ಅಮೂಲ್ಯ ಹರಳುಗಳನ್ನು ಬೇರೆ ಕಡೆಗೆ ಸಾಗಿಸಲಾಗಿತ್ತು. ಪ್ರಧಾನಿಯ ಕೈಗೊಂಬೆಯಾಗಿ ಅಸಹಾಯಕ ಜೀವನ ನಡೆಸುತ್ತಿದ್ದ ಅರಸ ಒಂದು ದಿನ ತನ್ನ ದಯನೀಯ ಸ್ಥಿತಿಯನ್ನು ವಿವರಿಸಿ ಸಹೋದರಿಯ ಪತಿಯಾದ ಬಿಜಾಪುರದ ಇಸ್ಮಾಯಿಲ್ ಆದಿಲ್‌ಖಾನ್‌ನಿಗೆ ಪತ್ರ ಬರೆದಿದ್ದ. ಅದು ಬಿಜಾಪುರ ತಲುಪುವ ಮುನ್ನವೇ ಸುಲ್ತಾನ್ ಕೊನೆಯುಸಿರು ಎಳೆದಿದ್ದ.

## ಅಲಾವುದ್ದೀನ್ ಶಹಾ

(15 ಡಿಸೆಂಬರ್ 1520 ರಿಂದ 5 ಮಾರ್ಚ್ 1523)

ಅಹ್ಮದ್‌ನ ಸಾವಿನ ನಂತರ ಅಮೀರ್‌ನಿಗೆ ಮತ್ತೆ ಸಿಂಹಾಸನದ ಮೇಲೆ ಕುಳಿತುಕೊಳ್ಳುವ ಆಸೆ ಗರಿಗೆದರಿತು. ಅವನ ಸಹಚರ ಸಚಿವರು ಕೂಡ ಸಿಂಹಾಸನ

ಆರೋಹಣ ಮಾಡುವಂತೆ ಸಲಹೆ ಮಾಡಿದರು. ಆದರೆ, ತಪ್ಪು ಸಂದೇಶ ಹೋಗುವ ಭಯದಿಂದ ಹಿಂದೇಟು ಹಾಕಿದ. ಹದಿನೈದು ದಿನಗಳ ಕಾಲ ಕಾದು ನೋಡಿದ ಅಮೀರ್ ತಾನು ಸಿಂಹಾಸನ ಏರುವುದಕ್ಕೆ ಕಾಲ ಸನ್ನಿಹಿತವಾಗಿಲ್ಲ ಎಂದು ನಿರ್ಧರಿಸಿ ಅಹ್ಮದ್‌ನ ಪುತ್ರ ಅಲಾವುದ್ದೀನ್‌ನಿಗೆ ಪಟ್ಟ ಕಟ್ಟಿದ. (28 ಡಿಸೆಂಬರ್ 1523). ನೂತನ ಸುಲ್ತಾನ್‌ನು ತನ್ನ ತಂದೆ ಹಾಗೂ ಅಜ್ಜನಿಗಿಂತ ಭಿನ್ನವಾಗಿ ಯೋಚಿಸುವವನಾಗಿದ್ದ. ಅಮೀರ್‌ನನ್ನು ಕರೆದು ಲೋಲುಪ ಜೀವನ ನಡೆಸದೆ ಪ್ರಾಮಾಣಿಕವಾಗಿ ಆಡಳಿತದ ಜವಾಬ್ದಾರಿ ನಿರ್ವಹಿಸುವುದಾಗಿ ಹೇಳಿದ. ತನ್ನ ಸುತ್ತ ಬೇಹುಗಾರರಿಂದ ಉಂಟಾಗಿರುವ ಉಸಿರುಗಟ್ಟಿಸುವಂತಹ ಸ್ಥಿತಿಯಿಂದ ಬಿಡುಗಡೆ ಮಾಡಬೇಕು ಇಲ್ಲವೇ ಮೆಕ್ಕಾಗೆ ಯಾತ್ರೆ ತೆರಳಲು ಅನುವು ಮಾಡಿಕೊಡಬೇಕು ಎಂದು ಕೋರಿದ. ಅಮೀರ್ ಅವನನ್ನು ಬಿಡುಗಡೆ ಮಾಡಿದ. ಅಲಾವುದ್ದೀನ್ ಅತೀ ಬುದ್ಧಿವಂತಿಕೆ ತೋರಿಸಲು ಹೊರಟು ಮೂರ್ಖನಾದ. ಅಮೀರ್ ಬರೀದ್‌ನನ್ನು ಮಾತ್ರವಲ್ಲದೆ ಇಡೀ ಸಂತತಿಯನ್ನು ಕೊನೆಗೊಳಿಸಲು ನಿರ್ಧರಿಸಿದ. ನಿತ್ಯದ ವ್ಯವಹಾರದಲ್ಲಿ ಅಮೀರ್‌ನಿಗೆ ಇದ್ದ ಹಿಡಿತ ಅರಿಯುವಲ್ಲಿ ಅರಸನಿಗೆ ಸಾಧ್ಯವಾಗಲಿಲ್ಲ. ಅವನ ಯೋಜನೆ ಅಮೀರ್‌ನಿಗೆ ಗೊತ್ತಾಯಿತು. ಸುಲ್ತಾನ್‌ನ ಪರವಾಗಿ ಇದ್ದವರನ್ನು ಕ್ರೂರವಾಗಿ ಹಿಂಸಿಸಿ ಸಾಯಿಸಲಾಯಿತು. ಕೈಗೊಂಬೆಯಾಗಿ ಮುಂದುವರೆಯಲು ಬಯಸದ ಅಲಾವುದ್ದೀನ್ ಸ್ವತಃ ತಾನೇ ಸಿಂಹಾಸನದಿಂದ ಕೆಳಗಿಳಿದ.

## ವಲಿಯುಲ್ಲಾ
(5 ಮಾರ್ಚ್ 1513 ರಿಂದ 1526)

ಅಮೀರ್ ಬರೀದ್‌ನು ಸುಲ್ತಾನ್ ಮಹಮೂದ್‌ನ ಕಿರಿಯ ಪುತ್ರ ವಲಿಯುಲ್ಲಾನನ್ನು ಅಲುಗಾಡುತ್ತಿದ್ದ ಸಿಂಹಾಸನದ ಮೇಲೆ ಕೂಡಿಸಿದ. ಅಮೀರ್ ಹೆಣೆದ ಬಲೆಯಿಂದ ಹೊರಬರಲು ವಲಿಯುಲ್ಲಾ ಪ್ರಯತ್ನಿಸಿದ. ಅದರ ಫಲವಾಗಿ ಅವನು ತನ್ನ ರಾಣಿವಾಸದಲ್ಲಿಯೇ ಸೆರೆಯಾಳು ಆಗಬೇಕಾಯಿತು. ಅವನಿಗೆ ಅಲ್ಲಿಯೇ ಆಹಾರ, ನೀರು ಒದಗಿಸಲಾಗುತ್ತಿತ್ತು. ಅರಮನೆಗೆ ಬಂದು ಹೋಗುವುದು ಸುಲಭವಾಗಲಿ ಎನ್ನುವ ಕಾರಣಕ್ಕಾಗಿ ಅಹ್ಮದ್‌ನ ವಿಧವೆ ಪತ್ನಿ 22ರ ಹರಯದ ಬೀಬಿ ಸಿಟ್ಟಿಯನ್ನು ಮದುವೆಯಾದ. ಅದರಿಂದ ರಾಣಿವಾಸ ಪ್ರವೇಶಿಸುವುದು ಅಮೀರ್‌ನಿಗೆ ಸುಲಭವಾಯಿತು. ಮೋಹದ ಬಲೆಯಲ್ಲಿ ಸಿಲುಕಿದ ಅಮೀರ್‌ನು ದೊರೆ ವಲಿಯುಲ್ಲಾನ ಸಮ್ಮುಖದಲ್ಲಿಯೇ ರಾಣಿಯೊಂದಿಗೆ ಸರಸಕ್ಕೆ ತೊಡಗಿದ.

ಇದಕ್ಕೆ ಪ್ರತಿರೋಧ ಒಡ್ಡಿದಾಗ ವಿಷ ಹಾಕಿ ವಲಿಯುಲ್ಲಾನನ್ನು ಕೊಲ್ಲಲಾಯಿತು. ಬೀದರ್‌ನಲ್ಲಿ ಇಂತಹ ಬೆಳವಣಿಗೆ ನಡೆಯುತ್ತಿರುವಾಗ ದಖನ್‌ನ ಉಳಿದ ಭಾಗದಲ್ಲಿ ಬಹಮನಿಯ ಪರಂಪರೆ ಮುಂದುವರೆದಿತ್ತು. ಬಿಜಾಪುರದ ಮೇಲೆ ಬಹಮನಿಯ ಯಾವುದೇ ಪ್ರಭಾವ ಇರಲಿಲ್ಲ. ಆದರೂ ಇಸ್ಮಾಯಿಲ್ ತನ್ನನ್ನು ವಲೀಯುಲ್ಲಾನ ಪ್ರಧಾನಿ ಎಂದು ಕರೆದುಕೊಳ್ಳುತ್ತಿದ್ದ. ಸಗರದಲ್ಲಿ ಮಸೀದಿ ಆರಂಭಿಸಿದಾಗ ಬರೆಸಿದ ಶಾಸನವು ಇದನ್ನು ದೃಢಪಡಿಸುತ್ತದೆ.

## ಕಲೀಮುಲ್ಲಾ
(1526ರಿಂದ 1538)

ವಲೀಯುಲ್ಲಾನ ಸಹೋದರ ಕಲೀಮುಲ್ಲಾ ಬಹಮನಿ ಸಾಮ್ರಾಜ್ಯದ ಕೊನೆಯ ಅರಸು. ಅವನನ್ನು ಸಿಂಹಾಸನದ ಮೇಲೆ ಕೂಡಿಸಿದರೂ ಸುತ್ತ ಪಹರೆ ಹಾಕಲಾಗಿತ್ತು. ಅದೇ ಹೊತ್ತಿಗೆ ಜಹೀರುದ್ದೀನ್ ಮೊಹಮ್ಮದ್ ಬಾಬರ್ ಭಾರತದ ನಕಾಶೆಯಲ್ಲಿ ಕಾಣಿಸಿಕೊಂಡ. ಪಾಣಿಪತ್ ಕದನದಲ್ಲಿ (1526 ಏಪ್ರಿಲ್ 22) ಬಾಬರ್‌ನು ಇಬ್ರಾಹಿಂ ಲೋದಿಯನ್ನು ಸೋಲಿಸಿ ದೆಹಲಿಯನ್ನು ವಶಪಡಿಸಿಕೊಂಡ. ಬಾಬರ್‌ನಿಗೆ ಶುಭ ಕೋರಿ ಬಿಜಾಪುರ, ಅಹ್ಮದ್‌ನಗರ, ಬೆರಾರ್ ಮತ್ತು ಬುರ್ಹಾನಪುರದಿಂದ ಸಂದೇಶ ಕಳುಹಿಸಲಾಗಿತ್ತು. ಕಲೀಮುಲ್ಲಾ ಕೂಡ ಬಾಬರ್‌ನಿಗೆ ಸಂದೇಶ ಕಳುಹಿಸಿ ಬರೀದಿಗಳ ಹಿಡಿತದಿಂದ ಬಿಡಿಸಿದರೆ (ತನ್ನ ವಶದಲ್ಲಿ ಇಲ್ಲದಿದ್ದರೂ) ಬೆರಾರ್ ಮತ್ತು ದೌಲತಾಬಾದ್‌ಗಳನ್ನು ಬಿಟ್ಟು ಕೊಡುವುದಾಗಿ ತಿಳಿಸಿದ್ದ. ಸಂದೇಶದ ಮಾಹಿತಿ ಬಹಿರಂಗ ಆಗುತ್ತಿದ್ದಂತೆಯೇ ಪ್ರಾಣಾಪಾಯದ ಭೀತಿಯಿಂದ ಸುಲ್ತಾನ್‌ನು ಬಿಜಾಪುರಕ್ಕೆ ಪಲಾಯನಗೈದ. ಅಲ್ಲಿ ಇಸ್ಮಾಯಿಲ್ ಆಡಳಿತ ಇದ್ದರೂ ಕಲೀಮುಲ್ಲಾನಿಗೆ ಒಳ್ಳೆಯ ಸ್ವಾಗತ ದೊರೆಯಲಿಲ್ಲ. ಅಲ್ಲಿಂದ ಅಹ್ಮದ್‌ನಗರಕ್ಕೆ ಹೋಗಬೇಕಾಯಿತು.

ಬೀದರ್ ವಶಪಡಿಸಿಕೊಳ್ಳುವುದಕ್ಕಾಗಿ ಕಲೀಮುಲ್ಲಾನನ್ನು ದಾಳವಾಗಿ ಬಳಸಿಕೊಳ್ಳಬಹುದು ಎಂದು ಯೋಚಿಸಿದ ಬುರ್ಹಾನ್ ನಿಜಾಂ ಉಲ್ ಮುಲ್ಕ್‌ನು ಕಲೀಮುಲ್ಲಾನನ್ನು ಬರಮಾಡಿಕೊಂಡ. ಅವನನ್ನು ಸಿಂಹಾಸನದ ಮೇಲೆ ಕೂಡಿಸಿ ಕೈ ಕಟ್ಟಿ ನಿಂತಿದ್ದ. ಕಲೀಮುಲ್ಲಾನಿಗೆ ಗೌರವ ಕೊಡುವುದರಿಂದ ಪ್ರತಿಷ್ಠೆ ಕಡಿಮೆಯಾಗಿ ಹಿಡಿತ ಸಡಿಲಗೊಳ್ಳುವುದಾಗಿ ಆಸ್ಥಾನಿಕರು ಸಲಹೆ ನೀಡಿದರು.

ಅದಾದ ಮೇಲೆ ಕಲೀಮುಲ್ಲಾ ದರ್ಬಾರ್‌ನಲ್ಲಿ ಬರದಂತೆ ನೋಡಿಕೊಳ್ಳಲಾಯಿತು. ಕಲೀಮುಲ್ಲಾ ಅಹ್ಮದ್‌ನಗರದಲ್ಲಿಯೇ ಮೃತಪಟ್ಟ. ಅದು ಸಹಜ ಸಾವೋ ಅಥವಾ ವಿಷಪ್ರಾಶನ ಮಾಡಿಲಾಯಿತೊ ಎಂಬುದು ಖಚಿತವಾಗಿಲ್ಲ. ಕಲೀಮುಲ್ಲಾನ ಶವವನ್ನು ಬೀದರ್‌ಗೆ ಕಳುಹಿಸಲಾಯಿತು. ಅಷ್ಟೂರಿನಲ್ಲಿ ಇರುವ ಬಹಮನಿ ಅರಸರ ಗೋರಿಗಳ ಸಾಲಿನಲ್ಲಿ ಹೂಳಲಾಯಿತು.

ಕಲೀಮುಲ್ಲಾನ ಸಾವಿನ ನಂತರ ಅವನ ಪುತ್ರ ಇಲ್ಹಾಮುಲ್ಲಾ ಬೀದರ್ ತನಗೆ ಸೂಕ್ತವಾದ ಪ್ರದೇಶ ಅಲ್ಲ ಎಂದು ಭಾವಿಸಿ ವೇಷ ಮರೆಸಿಕೊಂಡು ಮೆಕ್ಕಾ ಕಡೆಗೆ ಪ್ರಯಾಣ ಬೆಳೆಸಿದ. ಮತ್ತೆಂದೂ ಮರಳಿ ಬರಲಿಲ್ಲ. ಇದರೊಂದಿಗೆ 191 ವರ್ಷಗಳ ಕಾಲ ದಖನ್ ಪ್ರದೇಶವನ್ನು ಆಳಿದ ಬಹಮನಿ ಸಾಮ್ರಾಜ್ಯ ಅಂತ್ಯ ಕಂಡಿತು. ಅದರ ಆಡಳಿತದ ವ್ಯಾಪ್ತಿಯಲ್ಲಿದ್ದ ಪ್ರದೇಶಗಳು ಹಲವು ಪ್ರತ್ಯೇಕ ರಾಜ್ಯಗಳಾಗಿ ಸ್ವಾತಂತ್ರ್ಯ ಘೋಷಿಸಿಕೊಂಡವು. ಬಿಜಾಪುರದಲ್ಲಿ ಆದಿಲ್‌ಷಾಹಿ, ಅಹ್ಮದ್‌ನಗರದಲ್ಲಿ ನಿಜಾಂಷಾಹಿ, ಗೊಲ್ಕೊಂಡಾದಲ್ಲಿ ಕುತುಬ್‌ಷಾಹಿ, ಬೆರಾರ್‌ನಲ್ಲಿ ಇಮಾದ್‌ಷಾಹಿ, ಬೀದರ್‌ನಲ್ಲಿ ಬರೀದ್‌ಷಾಹಿ ಅರಸು ಮನೆತನಗಳು ಸ್ವತಂತ್ರ ರಾಜ್ಯಗಳಾಗಿ ಅಧಿಕಾರ ನಡೆಸಿದವು.

# 2. ಆಡಳಿತ–ವ್ಯವಸ್ಥೆ– ಸಾರ್ವಜನಿಕ ಬದುಕು

ಬಹಮನಿ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ಎರಡು ವಿಭಿನ್ನ ಸಂಸ್ಕೃತಿಗಳು ಪರಸ್ಪರ ಮುಖಾಮುಖಿ ಆದವು. ಅದಕ್ಕಿಂತ ಮೊದಲು ದೆಹಲಿಯಲ್ಲಿ ಹೀಗೆ ಒಟ್ಟಾಗಿ ಬಾಳುವ ರೀತಿ ಆರಂಭವಾಗಿತ್ತು. ಅದಕ್ಕೊಂದು ಸ್ವರೂಪ ಬಂದದ್ದು ದಖನ್‌ನಲ್ಲಿ. ಆದರೆ, ಬೆಳೆದದ್ದು ಮೊಗಲ್‌ರ ಆಳ್ವಿಕೆಯಲ್ಲಿ. ಹೊಸ ಆಡಳಿತ ವ್ಯವಸ್ಥೆಯು ಹಲವು ಸುಧಾರಣೆ– ಬದಲಾವಣೆಗಳಿಗೆ ನಾಂದಿ ಹಾಡಿತು. ಗಾವಾನ್ ಆರಂಭಿಸಿದ ಭೂಸುಧಾರಣೆ ಅಕ್ಬರ್‌ನ ಕಾಲದ ವರೆಗೂ ಮುಂದುವರೆಯಿತು. ರಾಜಾ ತೋಡರ್‌ಮಲ್‌ನ ಭೂಸುಧಾರಣೆಗಳಿಗೆ ಹಿನ್ನೆಲೆ ಒದಗಿಸಿದ್ದು ಗಾವಾನ್‌ನ ಭೂಮಿ ಅಳೆಯುವ ಮತ್ತು ತೆರಿಗೆ ನಿರ್ಧರಿಸುವ ವಿಧಾನ.

## ದರ್ಬಾರ್ ಮತ್ತು ದಿವಾನ್

ಪ್ರತಿಶುಕ್ರವಾರ ಬೆಳಿಗ್ಗೆ ಅಂದರೆ ಮಧ್ಯಾಹ್ನಕ್ಕೆ ಮುನ್ನ ನಡೆಯುತ್ತಿದ್ದ ದರ್ಬಾರ್‌ನಲ್ಲಿ ಸಚಿವರು, ಗಣ್ಯರು, ಅಧಿಕಾರಿಗಳು ಮತ್ತು ಧಾರ್ಮಿಕರು ಸೇರಿದಂತೆ ಸಂಖ್ಯೆಯಲ್ಲಿ ಬಹಳಷ್ಟು ಇರುತ್ತಿದ್ದರು. ಆದರೆ ದಿವಾನ್‌ನಲ್ಲಿ ಕೇವಲ ಸಚಿವರು ಮಾತ್ರ ಭಾಗವಹಿಸುತ್ತಿದ್ದರು. ದಿನನಿತ್ಯ ನಡೆಯುತ್ತಿದ್ದ ದಿವಾನ್‌ನಲ್ಲಿ ರಾಜನಿಗೆ ಆಡಳಿತಾತ್ಮಕ ನಿರ್ಣಯ ತೆಗೆದುಕೊಳ್ಳಲು ಅನುವಾಗುವಂತೆ ಸಲಹೆ–ಸೂಚನೆ ನೀಡಲಾಗುತ್ತಿತ್ತು.

ಸಚಿವರು: ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿಯನ್ನು ವಕೀಲ್–ಅಸ್–ಸುಲ್ತಾನತ್ ಎಂದು ಕರೆಯಲಾಗುತ್ತಿತ್ತು. ಸೈಫುದ್ದೀನ್ ಘೋರಿ ಮೊದಲ

ಪ್ರಧಾನಿಯಾಗಿದ್ದನು. ಅಲಾವುದ್ದೀನ್ ಬಹಮನ್ ಶಹಾನ ಕಾಲದಿಂದ ಹಿಡಿದು ಎರಡನೇ ಮುಹಮ್ಮದ್‌ನವರೆಗೆ ಐದು ದಶಕಗಳ ಕಾಲ ಘೋರಿ ಪ್ರಧಾನಿಯಾಗಿದ್ದನು. ಘೋರಿ ಹಾಗೂ ಧಾರ್ಮಿಕ ಮುಖಂಡ ಸದ್ರ್-ಎ-ಶರೀಫ್‌ನಿಗೆ ಮಾತ್ರ ದರ್ಬಾರ್‌ನಲ್ಲಿ ಕುಳಿತುಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿತ್ತು. ಸೈಫುದ್ದೀನ್ ಘೋರಿಯು ಬಹಮನಿ ಸಾಮ್ರಾಜ್ಯದ ಆಡಳಿತಾತ್ಮಕ ಸ್ವರೂಪ ನಿರ್ಧರಿಸಿದನು. ಅದೇ ಕಾರಣಕ್ಕಾಗಿ 'ಸಂವಿಧಾನ'ವನ್ನು ರೂಪಿಸಿದವ ಎಂದು ಗುರುತಿಸಲಾಗುತ್ತದೆ. ಘೋರಿಯ 'ನಸೈಹುಲ್-ಮುಲ್ಕ್' ಗ್ರಂಥವು ಆಡಳಿತದ ಸೂತ್ರಗಳನ್ನು ಒಳಗೊಂಡಿದೆ. ಘೋರಿ ರೂಪಿಸಿದ ವ್ಯವಸ್ಥೆಯು ಬಹಮನಿ

'ಬಹಮನಿಗಳಲ್ಲಿ ಪ್ರಾಂತೀಯವಾದ ಆಡಳಿತ ವ್ಯವಸ್ಥೆಯಿದ್ದು, ಅದು ಆರಂಭಗೊಂಡದ್ದು ಸಾಮ್ರಾಜ್ಯದ ಸ್ಥಾಪಕನಿಂದಲೇ. ಅಲಾವುದ್ದೀನ್ ಬಹಮನ್ ಶಹಾನು ರಾಜ್ಯವನ್ನು ನಾಲ್ಕು ವಿಭಾಗ ಮಾಡಿ, ಒಂದೊಂದಕ್ಕೂ ಒಬ್ಬ ಅಧಿಕಾರಿಯನ್ನು ನೇಮಿಸಿದ್ದ. ಆತನ ಮಗ ಮುಹಮ್ಮದ್‌ನ ಕಾಲದಲ್ಲಿ ಈ ವಿಭಾಗಳಿಗೂ ಅಧಿಕಾರಿಗಳಿಗೂ ತರಫ್‌ಗಳು ಹಾಗೂ ತರಫ್‌ದಾರರು ಎಂಬ ಹೆಸರು ಬಂದಿತು' ಎಂದು ಫೆರಿಸ್ತಾ ಬರೆಯುತ್ತಾನೆ.

'ಈ ವಿಭಾಗ ನಾಯಕರಿಗೆ ತಂತಮ್ಮ ವಿಭಾಗದಲ್ಲಿ ಪರಮಾಧಿಕಾರ ಇತ್ತು. ಅವರೇ ತೆರಿಗೆ ವಸೂಲಿ ಮಾಡುತ್ತಿದ್ದರು, ಸೇನೆಯನ್ನು ಬೆಳೆಸಿ ನಿಯಂತ್ರಿಸುತ್ತಿದ್ದರು ಹಾಗೂ ತಮ್ಮ ಸಂಸ್ಥಾನದಲ್ಲಿ ಸೈನ್ಯದ ಮತ್ತು ಸರ್ಕಾರಿ ಹುದ್ದೆಗಳೆಲ್ಲದಕ್ಕೂ ತಾವೇ ನೇಮಕಾತಿ ಮಾಡುತ್ತಿದ್ದರು. ಸಹಜವಾಗಿಯೇ ಅವರು ಕ್ರಮೇಣ ಹೆಚ್ಚೆಚ್ಚು ಶಕ್ತಿ ಪ್ರಭಾವ ಗಳಿಸುತ್ತಿದ್ದರು. ಆದರೆ ಬಹಮನಿಗಳ ಆಳ್ವಿಕೆಯ ಆರಂಭ ಕಾಲದಲ್ಲಿ, ಅವರನ್ನು ಅಂಕೆಯಲ್ಲಿ ಇಡಲು ರಾಜನ ಪ್ರಬಲ ವ್ಯಕ್ತಿತ್ವವೇ ಸಾಕಾಗುತ್ತಿತ್ತು. ಪ್ರತಿ ವರ್ಷವೂ ರಾಜನು ಎಲ್ಲ ಪ್ರಾಂತ್ಯಗಳಿಗೆ ಭೇಟಿ ನೀಡಿ, ಅಧಿಕಾರಿಗಳ ಹಾಗೂ ಆಡಳಿತದ ಮೇಲ್ವಿಚಾರಣೆ ಮಾಡುತ್ತಿದ್ದ. ಅಲ್ಲದೆ, ತರಫ್‌ದಾರರನ್ನು ಒಂದು ವಿಭಾಗದಿಂದ ಮತ್ತೊಂದಕ್ಕೆ ವರ್ಗಾವಣೆ ಮಾಡಲಾಗುತ್ತಿತ್ತು. ಬಹಮನಿ ಸಾಮ್ರಾಜ್ಯವು ವಿಸ್ತಾರವಾದಂತೆ ಅರಸ ಹತೋಟಿ ಮಾಡುವುದು ಕಷ್ಟವಾಗತೊಡಗಿತು. ಮೂರನೇ ಮುಹಮ್ಮದ್‌ನ ಕಾಲದಲ್ಲಿ ಪ್ರಧಾನಿಯಾಗಿದ್ದ ಮಹಮೂದ್ ಗಾವಾನ್‌ನು ರಾಜ್ಯವನ್ನು ಎಂಟು ಸರ್‌ಲಷ್ಕರ್‌ಗಳಾಗಿ ಮರುವಿಂಗಡಿಸಿದ. ಈ ವಿಂಗಡಣೆ ಹಾಗೂ ವರ್ಗಾವಣೆಗಳ ಉದ್ದೇಶವೆಂದರೆ ತರಫ್‌ದಾರರ ಪ್ರಭಾವ ನಿಯಂತ್ರಿಸುವುದು. ಆದರೆ, ಅಂತರ್ಗತವಾಗಿದ್ದ ಸಮಸ್ಯೆಗಳನ್ನು ಪರಿಹರಿಸಲು ಇದರಿಂದ ಸಾಧ್ಯವಾಗದೆ, ಅಂತರ್ಯುದ್ಧಗಳಿಂದ ಅವು ಮತ್ತಷ್ಟು ಉಲ್ಬಣಗೊಂಡವು' ಎಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ.

ಮುಸ್ಲಿಮ್ ಸುಲ್ತಾನರ ಆಡಳಿತ ವ್ಯವಸ್ಥೆಯಲ್ಲಿ ಭೂ ಕಂದಾಯವನ್ನು ಖರಜ್ (ಕಪ್ಪ) ಎಂದು ಲೆಕ್ಕ ಹಾಕುತ್ತಿದ್ದರು. ಅದನ್ನು ಹೊಲದಲ್ಲಿಯೇ ಕೊಡಬೇಕಾಗುತ್ತಿತ್ತು. ಇವರ ಕಾಲದಲ್ಲಿ ಭೂ ಹಿಡುವಳಿದಾರರು ನೀಡುತ್ತಿದ್ದ ಕಂದಾಯವನ್ನು ಹೆಚ್ಚಿಸಲಾಯಿತು. ಕಂದಾಯ ವಸೂಲಿಯ ಕ್ರಮದಲ್ಲಿ ಅನೇಕ ಮಾರ್ಪಾಡುಗಲನ್ನು ತರಲಾಯಿತಲ್ಲದೇ ಕಂದಾಯದ ಕೆಲವು ಭಾಗ ಅಥವಾ ಸಂಪೂರ್ಣ ಕಂದಾಯವನ್ನು ನಗದು ರೂಪದಲ್ಲಿ ವಸೂಲು ಮಾಡುವ ಪದ್ಧತಿಯನ್ನು ಜಾರಿಗೆ ತರಲಾಯಿತು.

'ಬಹಮನಿ ಅರಸರ ಕಾಲದಲ್ಲಿ ಕಂದಾಯ ವ್ಯವಸ್ಥೆಯಲ್ಲಿ ಭೂಮಿಯನ್ನು ಸರಿಯಾಗಿ ಅಳತೆ ಮಾಡುವುದಲ್ಲದೇ ಫಲವತ್ತತೆಯ ಆಧಾರದ ಮೇಲೆ ಭೂಮಿಯನ್ನು ನಾಲ್ಕು ಬಗೆಯಲ್ಲಿ ವಿಂಗಡಿಸಿ ಭೂಕಂದಾಯ ವಿಧಿಸುವ ವ್ಯವಸ್ಥೆಯನ್ನು ರೂಢಿಗೆ ತರಲಾಯಿತು. ಬಹಮನಿ ಅರಸರ ಕಾಲದಲ್ಲಿ ಭೂಮಿಯ ಅಳತೆಯನ್ನು ಕೂರಿಗೆ ಎಂಬ ಅಳತೆಯ ಮೂಲ ಮಾನದಿಂದ ಅಳೆಯುತ್ತಿದ್ದರು. (ಕೂರಿಗೆ ಎನ್ನುವುದು ಬಿತ್ತನೆಗೆ ಉಪಯೋಗಿಸುವ ವ್ಯವಸಾಯದ ಉಪಕರಣವೂ ಹೌದು) ಒಂದು ಕೂರಿಗೆ ಅಂದಾಜು ನಾಲ್ಕು ಎಕರೆಗೆ ಸಮನಾಗಿರುತ್ತಿತ್ತು.

ಒಂದು ಕೂರಿಗೆ ವ್ಯಾಪ್ತಿಯ ಜಮೀನನ್ನು ಈ ರೀತಿಯಲ್ಲಿ ವಿವರಿಸಬಹುದಾಗಿತ್ತು. ಒಂದು ದಿನದಲ್ಲಿ ಮೂರು ಜನರು ಆರು ಎತ್ತಗಳ (ಮೂರು ಕೂರಿಗೆ) ಸಹಾಯದಿಂದ ಮೂರು ಸೇರು ಜೋಳದ ಬೀಜವನ್ನು ಬಿತ್ತುವ ವಿಸ್ತೀರ್ಣದ ಪ್ರದೇಶ. ಭೂ ಕಂದಾಯವನ್ನು ಭೂಮಿಯ ಮಣ್ಣಿನ ಫಲವತ್ತತೆಗೆ ಅನುಗುಣವಾಗಿ ನಿರ್ಧರಿಸಲಾಗುತ್ತಿತ್ತು.

ಅವುಗಳೆಂದರೆ ರೇಗಾರ (ಕಪ್ಪು ರೇವೆ ಮಣ್ಣಿನ ಭೂಮಿ), ಮಿಲವಾ (ಕಪ್ಪು ಮತ್ತು ಕೆಂಪು ಮಿಶ್ರಿತ), ಮಸಾರಿ (ಕೆಂಪು ಮಣ್ಣು), ಶೋರೆ ಸವಲು (ಅಲ್ಕಲೀನ್) ಅಂದಿನ ಕಾಲದಲ್ಲಿ ಒಂದು ಕೂರಿಗೆ ಮೊದಲನೇ ದರ್ಜೆಯ ಭೂಮಿಗೆ ಕಂದಾಯ ಐದರಿಂದ ಹತ್ತು ರೂಪಾಯಿ ವರೆಗೆ ಆಗಿದ್ದರೆ, ಎರಡನೇ ದರ್ಜೆಯ ಭೂಮಿಗೆ ಮೂರರಿಂದ ಎಂಟು ರೂಪಾಯಿ, ಮೂರನೇ ದರ್ಜೆಗೆ ಒಂದರಿಂದ ಐದು ರೂಪಾಯಿ, ನಾಲ್ಕನೇ ದರ್ಜೆಗೆ ಎಂಟಾಣೆಯಿಂದ ಎರಡುವರೆ ರೂಪಾಯಿ ವರೆಗೆ ನಿಗದಿ ಪಡಿಸಲಾಗುತ್ತಿತ್ತು. ನೀರಾವರಿಗೆ ಸಂಬಂಧ ಪಟ್ಟಂತೆ ನೀರಿನ ಲಭ್ಯತೆಯ ಅನುಸಾರ ಒಂದು ಕೂರಿಗೆಗೆ ಎರಡರಿಂದ 150 ರೂಪಾಯಿ ವರೆಗೆ ಕಂದಾಯ ಗೊತ್ತುಪಡಿಸಲಾಗುತ್ತಿತ್ತು. ಕಬ್ಬು, ಭತ್ತ ಬೆಳೆಯುವ ಭೂಮಿಯ ಕಂದಾಯದ ದರ ಸಾಮಾನ್ಯ ಕಂದಾಯಕ್ಕಿಂತ ಶೇಕಡಾ 50ರಷ್ಟು ಹೆಚ್ಚು ಇರುತ್ತಿತ್ತು.

ಬಹಮನಿ ಅರಸರ ಕಾಲದಲ್ಲಿ ಭೂಕಂದಾಯವನ್ನು ಹಣದ ರೂಪದಲ್ಲಿ ಸಂಗ್ರಹಿಸುವ ಪದ್ಧತಿಯು ರೂಢಿಯಲ್ಲಿ ಬಂದಿತು. ವಸ್ತುವಿನಿಮಯ ಪದ್ಧತಿಯನ್ನು ಬಹುಮಟ್ಟಿಗೆ ಕಡಿಮೆ ಮಾಡಿದ್ದರಿಂದ ಹಣದ ಚಲಾವಣೆ ಹೆಚ್ಚಾಗಿ ವಿವಿಧ ಲೋಹದ ನಾಣ್ಯಗಳನ್ನು ಜಾರಿಗೆ ತರಲಾಯಿತು. ಈ ಅರಸರು ಗುಲ್ಬರ್ಗ, ಬೀದರ್, ಫತೇಹಬಾದ್‌ಗಳಲ್ಲಿ ಟಂಕಸಾಲೆಗಳನ್ನು ಹೊಂದಿದ್ದಾಗಿ ತಿಳಿದುಬರುತ್ತದೆ. ಈ ಅರಸರ ಕಾಲದಲ್ಲಿ ಅರ್ಥ ವ್ಯವಸ್ಥೆಯು ವಸ್ತುವಿನಿಮಯ ಪದ್ಧತಿಯಿಂದ ಹಣದ ಚಲಾವಣೆಯತ್ತ ಮುನ್ನಡೆದ ಸಂಧಿಕಾಲವಾಗಿತ್ತು. ಇದರಿಂದ ವ್ಯಾಪಾರಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಬಹಮನಿ ಸುಲ್ತಾನರು ಬಂಗಾರ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಹೊರಡಿಸಿದರು. ಬಂಗಾರದ ನಾಣ್ಯಗಳು ವಿರಳವಾಗಿದ್ದವು. ತಾಮ್ರದ ನಾಣ್ಯ ಹೆಚ್ಚು ಬಳಕೆಯಲ್ಲಿದ್ದವು. ಈ ಮನೆತನದ 18 ಅರಸರುಗಳಲ್ಲಿ ಒಂಬತ್ತು ರಾಜರು ಬಂಗಾರದ ನಾಣ್ಯಗಳನ್ನು ಹೊರಡಿಸಿದ್ದರು. ಈ ಮನೆತನದ ಬಹುಪಾಲು ರಾಜರ ನಾಣ್ಯಗಳು ದೆಹಲಿ ಸುಲ್ತಾಣ ಟಂಕಾದ ಪ್ರಮಾಣದ ತೂಕವನ್ನು 170ಗ್ರೇನ್ಸ್ ಮತ್ತು ದಿನಾರ ಎಂಬ ಚಿನ್ನದ ನಾಣ್ಯ 197 ಗ್ರೇನ್ಸ್ ತೂಕವನ್ನುಹೊಂದಿದ್ದವು. ಬಹಮನಿ ಮನೆತನದ ಮೊದಲಿನ ಅರಸರು ದೆಹಲಿ ಸುಲ್ತಾನರ ನಾಣ್ಯಗಳನ್ನು ಅನುಸರಿಸಿದರು'. (ಪುಟ 292, ಗುಲ್ಬರ್ಗ ಜಿಲ್ಲಾ ಗ್ಯಾಸೆಟಿಯರ್)

ಬಹಮನಿ ಅರಸು ಮನೆತನದ ಮೂರನೇ ಮಹಮದ್ ರಾಜನಾಗಿದ್ದ. ಇಸ್ಲಾಮಿಕ್ ಕಾನೂನಿನಲ್ಲಿ ಪರಿಣಿತನಾಗಿದ್ದ ವ್ಯಕ್ತಿಗೆ ಮುಖ್ಯ ನ್ಯಾಯಮೂರ್ತಿ (ಕ್ವಾದಿ ಅಲ್‌ಕ್ವಾದತ್) ಹುದ್ದೆ ನೀಡಲು ಅರಸ ಬಯಸಿದ. ಸಮಕಾಲೀನ ವಿದ್ವಾಂಸರಲ್ಲಿ ಹೆಸರುವಾಸಿಯಾಗಿದ್ದ ಶೇಕ್ ಇಬ್ರಾಹಿಂ ಮುಲ್ತಾನಿ ಅವರನ್ನು ರಾಜ್ಯದ ಮುಖ್ಯನ್ಯಾಯಮೂರ್ತಿಯ ಹುದ್ದೆಗೆ ಒಪ್ಪಿಕೊಳ್ಳುವಂತೆ ಅರಸ ಕೋರಿದ. ಹುದ್ದೆ ಒಪ್ಪಿಕೊಳ್ಳುವ ಮುನ್ನ ಇಬ್ರಾಹಿಂ ಅರಸನಿಗೆ ಷರತ್ತು ವಿಧಿಸಿದ. ಅರಸನೂ ಸೇರಿದಂತೆ ತಪ್ಪಿತಸ್ಥರೆಲ್ಲರ ವಿರುದ್ಧ ವಿಚಾರಣೆ ನಡೆಸುವ 'ಪರಮಾಧಿಕಾರ' ನೀಡಿದರೆ ಮಾತ್ರ ನ್ಯಾಯಮೂರ್ತಿ ಆಗುವುದಾಗಿ ಹೇಳಿದ. ಅದಕ್ಕೆ ಅರಸು ಕೂಡ ಒಪ್ಪಿಕೊಂಡ. ನಂತರ ನ್ಯಾಯಮೂರ್ತಿ ಆಗಿದ್ದ ಅವಧಿಯ್ದುದಕ್ಕೂ ಕಾನೂನು ವಿಷಯಗಳಿಗೆ ಸಂಬಂಧಿಸಿದಂತೆ ಅರಸ ಸಾಮಾನ್ಯ ವ್ಯಕ್ತಿಯಂತೆಯೇ ಇರಬೇಕಾಯಿತು.

ಹೀಗೆ ನ್ಯಾಯಮೂರ್ತಿಗೆ ಪರಮಾಧಿಕಾರ ನೀಡಿದಾಗ ಅರಸ ಕೇವಲ ಹತ್ತು ವರ್ಷದ ಬಾಲಕನಾಗಿದ್ದ. ಆಗ ಬಹಮನಿ ಸಾಮ್ರಾಜ್ಯದ ನಿಜವಾದ ಆಡಳಿತ 'ರಾಜಪ್ರತಿನಿಧಿ ಸಭೆ' (ಕೌನ್ಸಿಲ್ ಆಫ್ ರಿಜೆನ್ಸಿ)ಯದಾಗಿತ್ತು. ಅರಸನ ತಾಯಿ

'ಮಕ್ದುಮ್–ಏ– ಜಹಾನ್' (ಲೋಕದ ಒಡತಿ) ನರ್ಗಿಸ್ ಬೇಗಂ, ಪ್ರಧಾನಿಗಳಾದ ಖ್ವಾಜಾ ಜಹಾನ್ ಟರ್ಕ್ ಮತ್ತು ಖ್ವಾಜಾ ಮಹಮೂದ್ ಗಾವಾನ್ ಆ ಸಭೆಯಲ್ಲಿ ಇದ್ದರು. ಶೇಕ್ ಇಬ್ರಾಹಿಂ ಮುಲ್ತಾನಿ ಅವರ ಜ್ಞಾನ, ವಿದ್ವತ್ತು ಮತ್ತು ಕಾನೂನಿನ ಅರಿವು, ನ್ಯಾಯ ನಿರ್ಣಯ ಮಾಡುವ ಸಾಮರ್ಥ್ಯಗಳ ಅರಿವಿದ್ದ ರಾಣಿ ನರ್ಗಿಸ್‌ಬೇಗಂ ನೇತೃತ್ವದ ರಾಜಪ್ರತಿನಿಧಿ ಸಭೆಯು ಪರಮಾಧಿಕಾರ ನೀಡಲು ನಿರ್ಣಯಿಸಿತ್ತು. ಅದು ಈಗಿನ ಸಚಿವ ಸಂಪುಟದ ನಿರ್ಧಾರಕ್ಕೆ ಸಮ. ಅದಕ್ಕೂ ಮುನ್ನ ಇಬ್ರಾಹಿಂ ಮುಲ್ತಾನಿ ಅವರು ಅರಸನಿಗೆ ಕಾನೂನಿನ ಪಾಠ ಹೇಳಿಕೊಡುವ ಗುರುವಾಗಿದ್ದರು ಕೂಡ.

ಇಬ್ರಾಹಿಂ ಮುಲ್ತಾನಿ ಅವರು ಬೀದರಿಗೆ ಬಂದದ್ದು ಮತ್ತು ಉಳಿದುಕೊಂಡದ್ದು ಕೂಡ ಒಂದು ರೋಚಕ ಅಧ್ಯಾಯ. ಸತ್ಯದ ಹುಡುಕಾಟ ನಡೆಸುತ್ತ 'ಅಲೆಮಾರಿ' ತಂದೆಯ ಜೊತೆಗೆ ಯುವಕನೊಬ್ಬ ಸಾವಿರಾರು ಕಿ.ಮೀ. ದೂರ ನಡೆದು ಬಂದಿದ್ದ. ಅಫ್ಘಾನಿಸ್ತಾನದ ಮುಲ್ತಾನ್‌ನಿಂದ ಹೊರಟ ತಂದೆ ಮಕ್ಕಳಿಬ್ಬರು ಬೀದರಿಗೆ ಬಂದು ತಲುಪಿದರು. ಬೀದರಿನಲ್ಲಿಯೇ ತಂದೆ ಅಕಸ್ಮಾತ್ ಮೃತಪಟ್ಟ. ಗೊತ್ತು ಪರಿಚಯದ ಯಾರೂ ಇರದ ಊರಿನಲ್ಲಿ ತಂದೆಯ ಹಠಾತ್ ಸಾವಿನಿಂದ ಯುವಕ ಕಂಗಾಲಾಗಿದ್ದ. ದೂರದ ತನ್ನೂರಿಗೆ ಮರಳುವುದಕ್ಕಾಗಿ ಕೈಯಲ್ಲಿ ಕಾಸು ಕೂಡ ಇರಲಿಲ್ಲ. ಅರಸನನ್ನು ಭೇಟಿ ಮಾಡಿ ದಾರಿಯ ಖರ್ಚಿಗೆ ಒಂದಷ್ಟು ಹಣ ಹೊಂದಿಸಬೇಕು ಎಂದು ವಿಫಲ ಯತ್ನ ನಡೆಸಿದ.

ಯುವಕ ಊರಿಗೆ ಹೋಗುವ ಬೇರೆ ದಾರಿ ಕಾಣದೆ ಅಧ್ಯಯನದ ಮೊರೆ ಹೊಕ್ಕ. ಇಬ್ರಾಹಿಂ ಮುಲ್ತಾನಿ ಪಟ್ಟು ಹಿಡಿದು ಕುಳಿತು ಹಸ್ತಪ್ರತಿಯೊಂದನ್ನು ಸಿದ್ಧಪಡಿಸಿದ. ಆಗ ಬೀದರಿನಲ್ಲಿ ಎರಡನೇ ಅಲಾವುದ್ದೀನ್ ಅರಸನಾಗಿದ್ದ. ಶುಕ್ರವಾರದ ನಮಾಜಿನಲ್ಲಿ ಭಾಗವಹಿಸುವುದಕ್ಕಾಗಿ ಅಲಾವುದ್ದೀನ್ ಸಾರ್ವಜನಿಕ ಮಸೀದಿಗೆ ಆಗಮಿಸುತ್ತಿದ್ದ. ಪ್ರಾರ್ಥನೆಗಾಗಿ ಮಸೀದಿಗೆ ಬಂದ ಅರಸನಿಗೆ ಹಸ್ತಪ್ರತಿ ತಲುಪಿಸುವಲ್ಲಿ ಇಬ್ರಾಹಿಂ ಯಶಸ್ವಿಯಾದ.

ಹದಿನಾಲ್ಕು ವೈಜ್ಞಾನಿಕ ಸಂಗತಿಗಳಿಗೆ ವ್ಯಾಖ್ಯಾನ ಬರೆದಿದ್ದ ಮಹತ್ವದ ಗ್ರಂಥ ಅದಾಗಿತ್ತು. ಇಬ್ರಾಹಿಂನ ಜ್ಞಾನದ ಮಹತ್ವ ಅರಿತ ಅಲಾವುದ್ದೀನ್ ಇಬ್ರಾಹಿಂನಿಗೆ ಅರಬ್ಬಿಯಲ್ಲಿ ಕೆಲವು ಪ್ರವಚನದ ಸಾಲುಗಳನ್ನು ಬರೆಯುವಂತೆ ಸೂಚಿಸಿದ. ಇಬ್ರಾಹಿಂ ಬರೆದುಕೊಟ್ಟ. ಅವನ ಬರವಣಿಗೆಯನ್ನು ನೋಡಿ ಮನಸೋತ ಅರಸ ಹದಿನಾಲ್ಕು ಹಳ್ಳಿಗಳನ್ನು ಇನಾಮಾಗಿ ನೀಡಿದ. ಜೊತೆಗೆ ಇಬ್ರಾಹಿಂ ಇಷ್ಟಪಟ್ಟಾಗಲೆಲ್ಲ ಅರಮನೆ ಪ್ರವೇಶಿಸಲು ಮುಕ್ತ ಅವಕಾಶ ಕಲ್ಪಿಸಿದ. ಇದರಿಂದಾಗಿ ಇಬ್ರಾಹಿಂ ಬೀದರ್‌ನಲ್ಲಿಯೇ ಉಳಿಯುವಂತಾಯಿತು.

ಇಬ್ರಾಹಿಂ ಮುಲ್ತಾನಿ ಬರೆದ 14 ವೈಜ್ಞಾನಿಕ ಸಂಗತಿಗಳ ವ್ಯಾಖ್ಯಾನ ಇರುವ ಪುಸ್ತಕದ ಶೀರ್ಷಿಕೆ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯ ಇದೆ. ಇಬ್ರಾಹಿಂನ ಮರಿಮೊಮ್ಮಗ ಅಬ್ದುಲ್ ಖದೀರ್ ಉರ್ದುವಿನಲ್ಲಿ ಅನುವಾದಿಸಿದ 'ಮದಾನ್ ಅಲ್‌ಜವಾಹರ್' ಪುಸ್ತಕದಲ್ಲಿ 'ಅಲಾಯಿ' ಎಂದು ದಾಖಲಿಸಲಾಗಿದೆ. ಕಾನೂನು ಗ್ರಂಥ 'ಮಿಷ್ಕತ್ ಅನ್‌ನುಬುವಾಹ್'ನಲ್ಲಿಯೂ ಇಬ್ರಾಹಿಂನ ಪುಸ್ತಕದ ಶೀರ್ಷಿಕೆ 'ಅಲಾಯಿ' ಎಂದಿದೆ. ತಮ್ಮ ಬಳಿ ಇಬ್ರಾಹಿಂ ಬರೆದ ಪುಸ್ತಕದ ಪ್ರತಿ ಇತ್ತು ಎಂದು ತಿಳಿಸುವ ಮಹತ್ವದ ಇತಿಹಾಸಕಾರ ಅಬ್ದುಲ್ ಜಬ್ಬಾರ್ ಮಲ್ಕಾಪುರಿ ಅವರು ಅದರ ಶೀರ್ಷಿಕೆ 'ಮಾರೀಫ್ ಅಲ್‌ಉಲುಮ್' ಎಂದಾಗಿತ್ತು ಎಂದು ದಾಖಲಿಸಿದ್ದಾರೆ. ಮಲ್ಕಾಪುರೆ ಅವರ ಬಳಿ ಇದ್ದ ಈ ಪುಸ್ತಕ 'ಮೂಸಾ'ನದಿಯ ಪ್ರವಾಹ ಸಂದರ್ಭದಲ್ಲಿ ಕೊಚ್ಚಿಹೋಯಿತು ಎಂದು ದಾಖಲೆಗಳು ತಿಳಿಸುತ್ತವೆ.

1466ರ ವೇಳೆಗೆ ರಷ್ಯದ ವ್ಯಾಪಾರಿಯೊಬ್ಬ 'ಹಣ ಗಳಿಸುವ' ಉದ್ದೇಶದಿಂದ ತ್ವೇರ್ ನಗರದಿಂದ ಪ್ರಯಾಣ ಬೆಳೆಸಿದ. ಹೀಗೆ ವ್ಯಾಪಾರದ ಉದ್ದೇಶದಿಂದ ಹೊರಟ ಅಫನಾಸಿ ನಿಕಿಟನ್‌ಗೆ ಡೈರಿ ಬರೆಯುವ ಹವ್ಯಾಸವೂ ಇತ್ತು. ದೋಣಿಯ ಮೂಲಕ ರಷ್ಯದ ವೋಲ್ಗಾ ನದಿಗುಂಟ ಸಾಗಿದ ನಿಕಿಟಿನ್ 'ಡರ್ಬಂಟ್' ಮತ್ತು 'ಬಾಕು' ನಗರಗಳ ಮಾರ್ಗವಾಗಿ ಮುಂದುವರೆದ. ಕ್ಯಾಸ್ಪಿಯನ್ ಸಮುದ್ರದ ಮೂಲಕ ಪರ್ಷಿಯಾ ತಲುಪಿದ. 1469ರ ವಸಂತದಲ್ಲಿ ಓರ್ಮಸ್ ನಗರದಿಂದ ಹೊರಟು ಅರಬ್ಬಿ ಸಮುದ್ರದ ಮೂಲಕ ಪ್ರಯಾಣಿಸಿ ಭಾರತದ ಪಶ್ಚಿಮ ಕರಾವಳಿಯ 'ಚೌಲ್' ಬಂದರು ತಲುಪಿದ.

ಯುರೋಪಿಯನ್ ದೇಶಗಳಿಂದ ಭಾರತಕ್ಕೆ ಬಂದ ಮೊದಲಿಗರ ಪೈಕಿ ನಿಕಿಟಿನ್ ಕೂಡ ಒಬ್ಬ. ಭಾರತದಲ್ಲಿ ಉತ್ತಮ ತಳಿಯ ಕುದುರೆಗಳಿಗೆ ಭಾರಿ ಬೇಡಿಕೆ ಇದೆ ಎನ್ನುವ ಸಂಗತಿ ಅರಿತ ನಿಕಿಟಿನ್ ತನ್ನಲ್ಲಿದ್ದ ಕುದುರೆ ಮಾರಿ ಅದರಿಂದ ಬಂದ ಹಣದಿಂದ ರಷ್ಯದಲ್ಲಿ ಮಾರಾಟ ಮಾಡಬಹುದಾದ ವಸ್ತುಗಳನ್ನು ಕೊಂಡೊಯ್ಯುವ ಬಯಕೆ ಅವನದಾಗಿತ್ತು. ಹೀಗೆ ಭಾರತಕ್ಕೆ ಬಂದ ನಿಕಿಟನ್ ನಾಲ್ಕು ವರ್ಷಗಳ ಕಾಲ ಉಳಿದಿದ್ದ. ಆ ಪೈಕಿ ಬಹುತೇಕ ದಿನಗಳನ್ನು ಬೀದರ್‌ನಲ್ಲಿ ಕಳೆದ. ಆಗ, ಬೀದರ್ ರಾಷ್ಟ್ರದ ರಾಜಧಾನ ದೆಹಲಿಗಿಂತಲೂ ಹೆಚ್ಚು ಪ್ರಾಮುಖ್ಯತೆ ಪಡೆದಿತ್ತು. ಬೀದರ್‌ನ್ನು ರಾಜಧಾನಿ ಆಗಿಸಿಕೊಂಡಿದ್ದ ಬಹಮನಿ ಅರಸರ ಪ್ರಾಬಲ್ಯ ಅತ್ಯುನ್ನತ ಹಂತಕ್ಕೆ ತಲುಪಿದ ದಿನಗಳವು. ಇಡೀ ಮಧ್ಯಪ್ರಾಚ್ಯದ ದೇಶಗಳ ವಿದ್ವಾಂಸರು, ಕವಿಗಳು, ಸೂಫಿಸಂತರು, ಖಗೋಳಶಾಸ್ತ್ರಜ್ಞರು, ಗಣಿತಜ್ಞರು, ವ್ಯಾಪಾರಿಗಳು ಭಾರತದತ್ತ ಅದರಲ್ಲೂ ಬೀದರ್‌ನತ್ತ ಮುಖಮಾಡಿದ್ದ ದಿನಗಳವು. ದೆಹಲಿ- ದೇವಗಿರಿಗಳ ನಡುವೆ ರಾಜಧಾನಿಗಳ ಸ್ಥಳಾಂತರದ ಅವಾಂತರಕ್ಕೆ

ಕಾರಣನಾದ ಮಹಮ್ಮದ್ ಬಿನ್ ತುಘಲಕ್‌ನ ಪತನದ ದಕ್ಷಿಣದಲ್ಲಿ ವಿಜಯನಗರ ಮತ್ತು ಬಹಮನಿ ಸಾಮ್ರಾಜ್ಯಗಳು ಅಸ್ತಿತ್ವಕ್ಕೆ ಬಂದವು.

ಸಾಂಸ್ಕೃತಿಕ ಕಾರಣಗಳಿಗಾಗಿ ಮಹತ್ವದ ಅರಸನಾದ ಎರಡನೇ ಪ್ರೌಢದೇವರಾಯನ ಕಾಲದಲ್ಲಿ ಬಹಮನಿಯ ಫಿರೋಜ್ ಆಳ್ವಿಕೆ ನಡೆಸುತ್ತಿದ್ದ. ವಿಜಯನಗರದಲ್ಲಿ ದುರ್ಬಲ ಅರಸರು ಇದ್ದರು. ದೆಹಲಿಯಲ್ಲಿ ಕೂಡ. ಆ ಅವಧಿಯಲ್ಲಿ ಅಂದರೆ ಸುಮಾರು 50ವರ್ಷ ಕಾಲ ಬೀದರ್ ರಾಷ್ಟ್ರದ ರಾಜಧಾನಿಯ ಸಮಾನ ಬರುವ ಸ್ಥಾನದಲ್ಲಿತ್ತು. ಅದೆಲ್ಲ ಹಳೆಯ ಕಥೆ.

ಹೀಗೆ ವ್ಯಾಪಾರದ ಉದ್ದೇಶದಿಂದ ಬಂದ ನಿಕಿಟನ್‌ಗೆ ಮಾರುಕಟ್ಟೆಯ ಕಾರಣದಿಂದ ಆಕರ್ಷಕವಾಗಿ ಕಂಡದ್ದು ಬೀದರ್. ನಿಕಿಟಿನ್‌ಗೆ ಬೇರೆ ವ್ಯಾಪಾರಿಗಳ ಹಾಗೆ ಕೇವಲ ಹಣ ಗಳಿಸುವ ಉದ್ದೇಶ ಮಾತ್ರ ಇರಲಿಲ್ಲ. ಅವನು ರಷ್ಯದಿಂದ ಹೊರಗೆ ಪ್ರಯಾಣ ಬೆಳೆಸಿದ ಮೊದಲ ಪ್ರವಾಸಿಗ. ದಿನಚರಿ ಬರೆಯುವ ಹವ್ಯಾಸ ಅವನನ್ನು ಬೇರೆ ವ್ಯಾಪಾರಿಗಳಿಗಿಂತ ಭಿನ್ನನನ್ನಾಗಿಸುತ್ತದೆ. ನಿಕಿಟನ್‌ನ ಪ್ರವಾಸ ಕಥನ ರಷ್ಯಾ ಸಾಹಿತ್ಯದ ಆರಂಭಿಕ ಮೈಲುಗಲ್ಲುಗಳಲ್ಲಿ ಒಂದು. 'ಮೂರು ಸಮುದ್ರಗಳಾಚೆ' (ಬಿಯಾಂಡ್ ತ್ರೀ ಸೀಸ್) ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರಕಟವಾಗಿದೆ.

ನಿಕಿಟನ್‌ನ ಪ್ರವಾಸಕಥನ ಅಥವಾ ದಿನಚರಿ ಕೇವಲ ಐತಿಹಾಸಿಕ ಕಾರಣಗಳಿಗಾಗಿ ಮಾತ್ರವಲ್ಲದೆ ಸಾಹಿತ್ಯ, ಜನ, ಸಂಸ್ಕೃತಿಗಳನ್ನು ಅರಿಯುವ ನಿಟ್ಟಿನಲ್ಲಿ ಮಹತ್ವದ ದಾಖಲೆಯಾಗಿದೆ. ನಿಕಿಟಿನ್ ಶಾಲೆಗೆ ಹೋಗಿ ಹೆಚ್ಚು ಕಲಿತವನಾಗಿರಲಿಲ್ಲ. ಆದರೆ, ಜೀವನಾನುಭವ ಕಲಿಸಿದ ಪಾಠದಿಂದ ಬೆಳೆದು ನಿಂತು ಸುತ್ತಲಿನ ಜಗತ್ತನ್ನು ನೋಡಿ ಅದನ್ನು ಅಕ್ಷರದಲ್ಲಿ ದಾಖಲಿಸಿದ. ನಿಕಿಟಿನ್ ಅನುಭವ ಕಥನ ಸೊಗಸಾದ ಓದಿಗೆ ಅವಕಾಶ ಕಲ್ಪಿಸುತ್ತದೆ. ಭಾರತದ ಜೀವನ ವಿಧಾನ, ಆರ್ಥಿಕ, ಸಾಮಾಜಿಕ, ಆಡಳಿತಾತ್ಮಕ, ಸೈನಿಕ ಕಾರ್ಯಾಚರಣೆಯ ಸಂಗತಿಗಳನ್ನು ಕಣ್ಣಿಗೆ ಕಟ್ಟುವ ಹಾಗೆ ವಿವರಿಸಿದ್ದಾನೆ. ಹಾಗೆಯೇ ಪ್ರವಾಸದ ಸಂದರ್ಭದಲ್ಲಿ ಎದುರಿಸಿದ ಕಷ್ಟಗಳ ನೋವು, ಅಸಹಾಯಕತೆ, ಒಂಟಿತನಗಳನ್ನು ಅಕ್ಷರಗಳಲ್ಲಿ ಹಿಡಿದಿಟ್ಟಿರುವ ನಿಕಿಟನ್‌ನ ಬರಹದ ಶೈಲಿ ಮೋಹಕವಾಗಿದೆ. ನುರಿತ ಲೇಖಕನ ಸ್ಪರ್ಶ ಇಲ್ಲದಿದ್ದರೂ ಅನುಭವದ ತಾಜಾತನ ತಕ್ಷಣ ತನ್ನತ್ತ ಸೆಳೆದುಕೊಳ್ಳುತ್ತದೆ.

'ಮಹಮ್ಮದೀಯ ಭಾರತದಲ್ಲಿ ಪ್ರಮುಖ ನಗರ' ಎಂದು ಬೀದರ್‌ನ್ನು ಕರೆಯುವ ನಿಕಿಟಿನ್ ಇಲ್ಲಿನ ಜನರ ಉಡುಗೆ– ತೊಡುಗೆ, ನಂಬಿಕೆಗಳು, ಮತ್ತಿತರ

ಸಂಗತಿಗಳನ್ನು ಕಣ್ಣಿಗೆ ಕಂಡಂತೆ ಅಕ್ಷರಕ್ಕೆ ಇಳಿಸಿದ್ದಾನೆ. ಅವನು ಬೀದರ್‌ನಲ್ಲಿ ಇದ್ದ ಕಾಲದಲ್ಲಿ ಪ್ರಧಾನಿಯಾಗಿದ್ದ ವಿದ್ವಾಂಸ, ಕವಿ, ಸೇನಾನಿ ಮಹಮೂದ್ ಗಾವಾನ್ ಬಗೆಗೂ ಡೈರಿಯಲ್ಲಿ ವಿವರವಾದ ಪ್ರಸ್ತಾಪವಿದೆ. ಗುಲ್ಬರ್ಗ, ಆಳಂದ ಮತ್ತಿತರ ಪ್ರಮುಖ ನಗರಗಳಿಗೆ ಭೇಟಿ ನೀಡಿದ್ದ ನಿಕಿಟಿನ್ ವಿಜಯನಗರದ ಅರಸರ ಬಗೆಗೂ ಪ್ರಸ್ತಾಪಿಸಿದ್ದಾನೆ.

ಆದರೆ, ಅವನು ಹಂಪಿಗೆ ಭೇಟಿ ನೀಡಿರಲಿಲ್ಲ. ಬೀದರ್‌ನಿಂದ ಹೊರಟು ಆಫ್ರಿಕಾದ ದೇಶಗಳಲ್ಲಿ ಸಂಚರಿಸಿ ಕಪ್ಪುಸಮುದ್ರದ ಮೂಲಕ ಮಸ್ಕತ್ ತಲುಪಿದ. ಅಲ್ಲಿಂದ ರಷ್ಯಾಗೆ ಮರಳುವ ಮಾರ್ಗದಲ್ಲಿ ಅಸು ನೀಗಿದ. ನಿಕಿಟಿನ್‌ನ ಜೊತೆಗಾರರು ಅವನಗೆ ಸೇರಿದ ಡೈರಿ ಮತ್ತಿತರ ವಸ್ತುಗಳನ್ನು 'ಮನೆ'ಗೆ (?) ತಲುಪಿಸಿದರು. ಸಾವಿನ ನಂತರ ನಿಕಿಟಿನ್ ನಾಪತ್ತೆಯಾಗಿಬಿಟ್ಟ. ಇತಿಹಾಸದಲ್ಲಿ ಆಸಕ್ತರಾದ ಕೆಲವರಿಗೆ ಮಾತ್ರ ಸೀಮಿತನಾದ.

'ಬೀದರ್ ಮಹಮ್ಮದೀಯ ಇಂಡಿಯಾದಲ್ಲಿ ಮುಖ್ಯನಗರ. ಬೀದರ್‌ನಾಡು ಜನಭರಿತವಾಗಿದೆ. ಪಟ್ಟಣಗಳಲ್ಲಿ ವಾಸ ಮಾಡುವ ಶ್ರೀಮಂತರು ಅಷ್ಟೈಶ್ವರ್ಯದಲ್ಲಿ ಮೆರೆಯುತ್ತಿದ್ದಾರೆ. ಹಳ್ಳಿಯಲ್ಲಿ ಇರುವವರು ಬಹಳ ಬಡತನದಲ್ಲಿ ಬೇಯುತ್ತಿದ್ದಾರೆ. ಶ್ರೀಮಂತರು ಬೆಳ್ಳಿಯ ಹಾಸುಗೆಗಳಲ್ಲಿ ಕುಳಿತು ಹೊರಿಸಿಕೊಂಡು ಹೋಗುತ್ತಾರೆ. ಹಿಂದೆ ಚಿನ್ನದ ಹೊದಿಕೆ 20 ಅಶ್ವಗಳು, 300 ಅಶ್ವಾರೋಹಿಗಳು, 500 ಪದಾತಿಗಳು ಹೋಗುತ್ತಾರೆ. ಅಲ್ಲದೆ ಕೊಂಬು ಕಹಳೆಯವರೂ ಹತ್ತು ಜನ ದೀವಟಿಗೆಯವರೂ ಮತ್ತು ಹತ್ತು ಜನ ವಾದ್ಯಗಾರರೂ ಇರುತ್ತಾರೆ' ಎಂದು ನಿಕಿಟಿನ್ ದಾಖಲಿಸಿದ್ದಾನೆ.

ಮನುಷ್ಯನ ಅಮಾನುಷ ಕ್ರೌರ್ಯಕ್ಕೆ ಮಿತಿಯೇ ಇಲ್ಲ. ದೇವರ ಹೆಸರಿನಲ್ಲಿ ನಡೆಯುವ 'ಬಲಿ'ಯಂತಹ ಆಚರಣೆಗಳು ಹಿಂಸೆಯ ಪರಮಾವಧಿಯನ್ನು ಸೂಚಿಸುತ್ತವೆ. ಹೊಟ್ಟೆಪಾಡಿಗಾಗಿ ಪ್ರಾಣಿಗಳನ್ನು ಕಡಿದು ತಿನ್ನುವುದಕ್ಕೆ ಸಂಬಂಧಿಸಿದಂತೆ ತಕರಾರಿಲ್ಲ. ಆದರೆ, ದೇವರ ಹೆಸರಿನಲ್ಲಿ ಮಾರಣಹೋಮ ನಡೆಸುವುದನ್ನು ಒಪ್ಪಲಾಗದು. ಆಚರಣೆಯನ್ನು ಕಡ್ಡಾಯ ವಿಧಿಯಾಗಿಸುವ ಮೂಲಕ ಅದೊಂದು ವ್ಯವಸ್ಥೆಯಾಗುವಂತೆ ನೋಡಿಕೊಳ್ಳುವಲ್ಲಿ ಸಂಪ್ರದಾಯಸ್ಥರು ಯಶಸ್ವಿಯಾಗ್ದಿದಾರೆ. ಹೀಗಾಗೆಯೇ ದೇವರು ಮತ್ತು ದೈವದ ಹೆಸರಿನಲ್ಲಿ ನಿತ್ಯ ನೂರಾರು ಜೀವಗಳು ಕೊನೆಯುಸಿರು ಎಳೆಯುತ್ತಿವೆ.

ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಘೋಡವಾಡಿಯಲ್ಲಿ ಸೂಫಿ ಸಂತ ಇಸ್ಮಾಯಿಲ್ ಖಾದ್ರಿಯ ದರ್ಗಾ ಇದೆ. ಬಹಮನಿ ಅರಸರಲ್ಲಿಯೇ

ಅತ್ಯಂತ ಕ್ರೂರಿಯಾಗಿದ್ದ ಹುಮಾಯೂನ್ ಶಹಾನ ಅವಧಿಯಲ್ಲಿ ಜೀವಿಸಿದ್ದ ಇಸ್ಮಾಯಿಲ್ ಖಾದ್ರಿಯ ಬದುಕು ಕ್ರೌರ್ಯ ಮತ್ತು ಹಿಂಸೆಯ ವಿರುದ್ಧ ಹೋರಾಟ ಆಗಿತ್ತು. 'ಜಾಲೀಂ' (ಕ್ರೂರಿ) ಎಂದೇ ಗುರುತಿಸಲಾಗುತ್ತಿದ್ದ ಹುಮಾಯುನ್ ಶಹಾ ಅಧಿಕಾರ ನಡೆಸಿದ್ದು ಕ್ರಿ.ಶ. 1458ರಿಂದ 1461ರ ನಡುವಿನ ಅವಧಿ. ತನ್ನ ಮತ್ತು ಅರಸೊತ್ತಿಗೆ ವಿರುದ್ಧ ಸೊಲ್ಲೆತ್ತುವವರು ಯಾರೂ ಇರಬಾರದು ಎಂದು ಅರಸ ನಿರ್ಧರಿಸಿದ್ದ. ಬಂಡಾಯದ ಸಣ್ಣ ಸೂಚನೆ ದೊರೆತರೂ ಕಂಡು ಕೇಳರಿಯದ ಶಿಕ್ಷೆ ನೀಡುತ್ತಿದ್ದ. ಕೇವಲ ಬಂಡುಕೋರರನ್ನು ಮಾತ್ರ ಶಿಕ್ಷೆಗೆ ಒಳಪಡಿಸದೆ ಅವರ ಸಂಬಂಧಿಗಳನ್ನೂ ಬಿಡುತ್ತಿರಲಿಲ್ಲ. ಅಷ್ಟೇ ಅಲ್ಲ ಬಂಧುಗಳ ಮನೆಯಲ್ಲಿನ ಕೆಲಸದ ಆಳುಗಳೂ ಶಿಕ್ಷೆಗೆ ಗುರಿಯಾಗಬೇಕಾಗುತ್ತಿತ್ತು.

ಒಮ್ಮೆ ಇಸ್ಮಾಯಿಲ್ ಖಾದ್ರಿಯು ದೊರೆ ಇಷ್ಟಪಟ್ಟ ಯುವತಿಯೂ ಸೇರಿದಂತೆ ತನ್ನ ಕುಟುಂಬದ ಸದಸ್ಯರೊಂದಿಗೆ ನಗರದ ಪಲಾಯನ ಮಾಡಿದ. ಸುದ್ದಿ ತಿಳಿದು ಕೋಪೋದ್ರಿಕ್ತನಾದ ಅರಸ ತನ್ನ ಸೈನ್ಯದೊಂದಿಗೆ ಬೆನ್ನು ಹತ್ತಿದ. ಇಸ್ಮಾಯಿಲ್ ಖಾದ್ರಿಯ ಬೆಂಬಲಿಗರು ಮತ್ತು ಅರಸನ ಸೇನೆಯ ನಡುವೆ ನಾಲ್ಕಾರು ಕಡೆಗಳಲ್ಲಿ ಕಾದಾಟ ನಡೆದವು. ಸ್ವತಃ ಅರಸನೇ ಬಂದರೂ ಖಾದ್ರಿಯನ್ನು ಸೋಲಿಸಲು ಆಗಲಿಲ್ಲ. ನೈತಿಕವಾಗಿ ಕುಸಿದಿದ್ದ ಅರಸ ಸೋಲಿನಿಂದ ಕಂಗೆಟ್ಟು ಪಲಾಯನಗೈದ.

ಗುಲ್ಬರ್ಗದ ಸೂಫಿ ಸಂತ ಖ್ವಾಜಾ ಬಂದೇನವಾಜರ ಶಿಷ್ಯ ಪರಂಪರೆಗೆ ಸೇರಿದ ಇಸ್ಮಾಯಿಲ್ ಖಾದ್ರಿಯ ಗೋರಿಗೆ ಪ್ರತಿ ಗುರುವಾರ ನೂರಾರು ಕುರಿಯ ತಲೆಗಳ ನೈವೇದ್ಯ ಮಾಡಲಾಗುತ್ತದೆ. ಹೈಕೋರ್ಟ್ ಬಲಿ ನಿಷೇಧಿಸಿ, ಆಚರಣೆ ನಡೆಸದಂತೆ ಸೂಚಿಸಿದೆ. ಆದ್ದರಿಂದ ಕುರಿಗಳನ್ನು ಬೇರೆ ಕಡೆಗೆ ಕಡಿಯಲಾಗುತ್ತದೆ. ನಂತರ ಕುರಿಯ ತಲೆಯನ್ನು ತಟ್ಟೆಯಲ್ಲಿಟ್ಟುಕೊಂಡು ಮೆರವಣಿಗೆಯ ಮೂಲಕ ದರ್ಗಾವರೆಗೂ ತೆಗೆದುಕೊಂಡು ಹೋಗಲಾಗುತ್ತದೆ. ಜಿಲ್ಲೆಯ ಬಹುತೇಕ ಎಲ್ಲ ಸಮುದಾಯದ ಭಕ್ತರ ಜೊತೆಗೆ ನೆರೆಯ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಿಂದಲೂ ಜನ ಆಗಮಿಸುತ್ತಾರೆ.

ಗುರುವಾರ ಹರಕೆ ತೀರಿಸಲು ನಿಗದಿಯಾದ ವಿಶೇಷ ದಿನ. ಪ್ರತಿ ಗುರುವಾರ ನೂರಾರು ಕುರಿಗಳ ಮಾರಣಹೋಮ ನಡೆಯುತ್ತದೆ. ಹಿಂಸೆ– ಕ್ರೌರ್ಯದ ವಿರುದ್ಧ ಹೋರಾಡಿದ ಸಂತನಿಗೆ ನೂರಾರು ಜೀವಗಳ ಬಲಿ ನೀಡಲಾಗುತ್ತದೆ. ವ್ಯವಸ್ಥೆಯ ವ್ಯಂಗ್ಯ– ವಿರೋಧಾಭಾಸ ಅಂದರೆ ಇದೇ ಅಲ್ಲವೆ?

ಬರಗಾಲಕ್ಕೆ ಸಂಬಂಧಿಸಿದಂತೆ ಮತ್ತೊಂದು ಘಟನೆಯೂ ಸಾಮಾಜಿಕ ಜೀವನ ಹೇಗಿತ್ತು ಎಂಬುದನ್ನು ತೋರಿಸುತ್ತದೆ. ಬೀದರ್ 'ಬರದ ನಾಡು'

ಎಂದೇ ರಾಜ್ಯಕ್ಕೆಲ್ಲ ಚಿರಪರಿಚಿತ. ಬೀದರ್‌ಗೆ ನೆರೆಯ ಜಿಲ್ಲೆಗಳಾಗಿರುವ ಗುಲ್ಬರ್ಗ, ವಿಜಾಪುರ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯ ವಾತಾವರಣವೇ ಬೀದರ್‌ನಲ್ಲಿಯೂ ಇದೆ ಎಂಬುದು ಬಹುತೇಕ ಜನರ ತಪ್ಪು ಗ್ರಹಿಕೆ. ವರ್ಷದ ಎಲ್ಲ ಕಾಲದಲ್ಲಿಯೂ ಸತತವಾಗಿ ಹರಿಯುವ ಝರಿಗಳು ಇರುವ ಬೀದರ್‌ನಲ್ಲಿ ಬರ ಬರುವುದು ಅಪರೂಪ.

ರಾಜ್ಯಕ್ಕೆ, ದೇಶಕ್ಕೆ ಬರಗಾಲ ಬಂದ ಸಂದರ್ಭಗಳಲ್ಲಿ ಮಾತ್ರ ಬೀದರ್‌ಗೆ ಬರ ಬರುತ್ತದೆ. ಬಹಮನಿ ಅರಸರ ಕಾಲದಲ್ಲಿ ಬಂದ್ದಿದ ಭೀಕರ ಬರಗಾಲದಲ್ಲಿ ಎಲ್ಲೆಲ್ಲೂ ತಲೆಬುರುಡೆಗಳೇ ಕಾಣಿಸುತ್ತಿದವಂತೆ. ಆಗ ನಡೆದ ಘಟನೆಯೊಂದು 'ಕಥೆ'ಯಾಗಿ ಬೆಳೆದಿದೆ.

ಆ ಕಥೆ ನಡೆದ ಕಾಲ ಕ್ರಿ.ಶ. 1460. ಆಗ ಬೀದರ್‌ನಲ್ಲಿ ಬಹಮನಿ ಅರಸರು ಆಳ್ವಿಕೆ ನಡೆಸುತ್ತಿದರು. ತನ್ನ ಹೆಸರಿನ ಜೊತೆಗೇ ಜಾಲೀಂ (ಕ್ರೂರಿ) ಎಂಬ ಉಪನಾಮ ಕಾಣಿಸಿಕೊಳ್ಳುವುದಕ್ಕೆ ಕಾರಣನಾದ ಹುಮಾಯೂನ ಶಹಾ ಅರಸನಾಗ್ದಿದ. ಕೇವಲ ಮೂರು ವರ್ಷಗಳ ಆಳ್ವಿಕೆ ನಡೆಸಿದ ಹುಮಾಯೂನನ ಅದರಲ್ಲಿ ಕೊನೆಯ ಅರ್ಧ ವರ್ಷ ಹಿಂಸಿಸುವ ಹಲವು ಬಗೆ ಬಗೆಯ ವಿಧಾನಗಳ ಶೋಧ ನಡೆಸ್ದಿದ. ಅವನು ನೀಡುತ್ತಿದ ಹಿಂಸೆ ವೈವಿಧ್ಯಮಯ ಶಿಕ್ಷೆಗಳನ್ನು ಕೇಳಿದರೇ ಭಯ ಭೀತರಾಗಬಹುದು. ಈ ಘಟನೆ ನಡೆದ್ದದು ಹುಮಾಯೂನ್ ಜಾಲೀಂ ಆಗುವ ಮುಂಚಿನ ಅವಧಿಯಲ್ಲಿ. ಅದೇ ಅವಧಿಯಲ್ಲಿ ಖ್ಯಾತ ಶಿಕ್ಷಣ ತಜ್ಞ ಮಹಮೂದ್ ಗವಾನ್ ಪ್ರಧಾನಿಯಾಗಿದ್ದ.

ಭೀಕರ ಬರಗಾಲ ಬಂತು. ಅದೆಂತಹ ಬರಗಾಲ ಎಂದರೆ ನೋಡಿದಲ್ಲೆಲ್ಲ ಒಣ ಮರುಭೂಮಿಯಂತೆ ಕಾಣಿಸುವ ನೆಲ. ರಸ್ತೆಗಳ ಮೇಲೆ ನೋಡಲೂ ಜನ ಸಿಗುತ್ತಿರಲಿಲ್ಲ. ಎಲ್ಲೆಲ್ಲೂ ತಲೆ ಬುರುಡೆಗಳು, ಅಸ್ತಿಪಂಜರಗಳು ಕಾಣಿಸುತ್ತಿದ್ದವು. ಎರಡ್ಮೂರು ವರ್ಷಗಳ ನಂತರ ಮಳೆ ಬಂದ ಮೇಲೆ ಬಿತ್ತನೆ ಮಾಡಲು ಜನ ಇರಲಿಲ್ಲ. ಅಷ್ಟೇ ಅಲ್ಲ ಬಿತ್ತುವುದಕ್ಕೆ ಬೀಜ ಕೂಡ ಇರಲಿಲ್ಲ.

ಅಂತಹ ದಿನಗಳಲ್ಲಿಯೇ ಬೀದರ್‌ನಿಂದ ಸುಮಾರು 250 ಕಿ.ಮೀ. ದೂರದಲ್ಲಿ ಇರುವ ಮಂಗಳವೇಢೆಯಲ್ಲಿ ರಾಜ್ಯದ ಉಗ್ರಾಣ ಇತ್ತು. ಅದರ ಮೇಲ್ವಿಚಾರಣೆಯನ್ನು ದಾಮಾಜಿ ಪಂತ್ ನೋಡಿಕೊಳ್ಳುತ್ತಿದ್ದ. ಜನರ ಕಷ್ಟ ನೋಡಲಾಗದ ಪಂತ್ ಉಗ್ರಾಣದ ಬಾಗಿಲುಗಳನ್ನು ತೆರೆದು ಬಿಟ್ಟ. ಹಸಿವಿನಿಂದ ಕಂಗಾಲಾಗಿದ್ದ ಬ್ರಾಹ್ಮಣರು ಮತ್ತು ಜನರು ಉಗ್ರಾಣದಲ್ಲಿದ್ದ ಕಾಳು ಕಡಿ ತುಂಬಿಕೊಂಡು ಹೋದರು. ಸುದ್ದಿ ರಾಜಧಾನಿ ತಲುಪಲು ತಡವಾಗಲಿಲ್ಲ.

ಸಹಜವಾಗಿಯೇ ಬಾದಶಹನಿಗೆ ಕೋಪ ಬಂತು. ವಿಚಾರಣೆ ನಡೆಸುವಂತೆ ಆದೇಶಿಸಿದೆ. ಅದಕ್ಕಾಗಿ ಬುಲಾವ್ ಬಂತು. ಬೀದರ್‌ನಲ್ಲಿ ತನಗೇನು ಕಾದಿದೆಯೋ ಎಂಬ ಆತಂಕದಲ್ಲಿ ಪಂತ್ ಹೊರಟ. ದಾರಿಯುದ್ದದಕ್ಕೂ ಆರಾಧ್ಯದೈವ ಪಾಂಡುರಂಗನ ಧ್ಯಾನ ಮಾಡುತ್ತಲೇ ಇದ್ದ.

ಬೀದರ್ ತಲುಪಿ ತನ್ನ ವಿಭಾಗದ ಅಧಿಕಾರಿಗಳನ್ನು ವಿಚಾರಿಸಿದರೆ ಅವರು 'ನಿನ್ನ ಮೇಲೆ ಯಾವುದೇ ಆರೋಪ ಇಲ್ಲ' ಎಂದು ಹೇಳಿದರು. ಭೀತನಾಗಿದ್ದ ದಾಮಾಜಿ ಪಂತ್ ಇದ್ದಕ್ಕಿದ್ದಂತೆ ನಿರುಮ್ಮಳನಾಗಿ, ಆಶ್ಚರ್ಯಚಕಿತನಾದ. ಮತ್ತೆ ಕೇಳಿದರೆ ಫಂಡರಪುರದಿಂದ ಬಂದ ಮಹಾರ್ ಜಾತಿಗೆ ಸೇರಿದ ಒಬ್ಬ ವ್ಯಕ್ತಿ ಉಗ್ರಾಣದಲ್ಲಿದ್ದ ಕಾಳಿಗೆ ಸಮನಾದ ಹಣವನ್ನು ಪಾವತಿ ಮಾಡಿದ್ದಾನೆ ಎಂದು ವಿವರಿಸಿದರು. ಅಷ್ಟೊಂದು ಬೃಹತ್ ಪ್ರಮಾಣದ ಹಣ ನೀಡುವ ಸಾಮರ್ಥ್ಯ ಪಾಂಡುರಂಗ ವಿಠಲನಿಗಲ್ಲದೇ ಬೇರೆಯವರಿಗಿಲ್ಲ ಎಂಬ ನಂಬಿಕೆ ದಾಮಾಜಿ ಪಂತ್‌ನದ್ದು. ಅಲ್ಲಿಯೇ ನೆಲದ ಮೇಲೆ ಬಿದ್ದು ದಾಮಾಜಿ ಪಂತ್ ಗೋಳಾಡಿ ಅಳಲು ಆರಂಭಿಸಿದ. 'ನಾನು ಆಳುವ ಬಾದಶಹನಿಗಿಂತ ಕನಿಷ್ಠವೇ? ದಂಡ ಕಟ್ಟುವ ನೆಪದಲ್ಲಿ ದರ್ಶನ ಕೊಟ್ಟೆ, ನನ್ನನ್ನೇಕೆ ಅನಾಥ ಮಾಡಿಬಿಟ್ಟೆ' ಎಂದು ದುಃಖಿಸಿದ. ಆಗ ಬೀದರ್ ಕೋಟೆಯ ಗುಂಬಜ್ ದರ್ವಾಜ ಬಳಿ ಮತ್ತು ಶಹಾಗಂಜ್ ದರ್ವಾಜ ಬಳಿ ಪಾಂಡುರಂಗ ಪಾದ ಮೂಡಿದವು ಎಂಬ ನಂಬಿಕೆಯಿದೆ.

ಇಡೀ ಘಟನೆಯನ್ನು ಕರ್ನಲ್ ಎಥರಿಡ್ಜ್ ತನ್ನ 1868ರ 'ಬರದ ವರದಿ'ಯಲ್ಲಿ ದಾಖಲಿಸಿದ್ದಾನೆ. ಆ ಬರವನ್ನು 'ದಾಮಾಜಿ ಪಂತ್ ಬರ' ಎಂದು ಸೋಲಾಪುರ ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ದಾಖಲಾಗಿದೆ. ಇದು ಇತಿಹಾಸದ ಮಾತಾಯಿತು. ಪಾಂಡುರಂಗ ವಿಠಲ ಬೀದರ್‌ಗೆ ಬಂದ ದಿನವನ್ನು ಜನ ಜಾತ್ರೆಯಾಗಿ ಆಚರಿಸುತ್ತಾರೆ.

ನಗರದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಮೆರವಣಿಗೆ. ಎಲ್ಲಕ್ಕೂ ಮುಂದೆ ಪಾಂಡುರಂಗ ವಿಠಲನ ಮಹಿಮೆ ಸಾರುವ ಹಾಡುಗಳು. ಅದರ ಹಿಂದೆ ಮಹಾರಾಷ್ಟ್ರದ ವಿವಿಧ ಭಜನಾ ತಂಡಗಳ ಮರಾಠಿ ಅಭಂಗಗಳ ಗಾಯನ. ನಂತರ ಜಗನ್ನಾಥ ಮಹಾರಾಜರ ಆವೇಶ ಭರಿತ ಚಕ್ರಿಭಜನೆ ಮತ್ತು ಕುಣಿತ. ಖುಷಿ, ಸಂತಸ, ಸಂಭ್ರಮ, ಭಕ್ತಿಯ ಪರಾಕಾಷ್ಠೆ ಮುಗಿಲು ಮುಟ್ಟಿದ ಅನುಭವ. ಯುವಕರು ಪರಸ್ಪರ ಕೈ ಕೈ ಹಿಡಿದು ಸಕ್ಕಸರಿಗೆ ಆಡುತ್ತಿದ್ದರೆ ಅದರ ಸೊಬಗನ್ನು ನೋಡಿಯೇ ಸವಿಯಬೇಕು. ಪಲ್ಲಕ್ಕಿಯ ಹಿಂದೆ ವರ್ಣರಂಜಿತ ಸೀರೆ, ಬಟ್ಟೆ

ಧರಿಸಿದ ಹೆಂಗಳೆಯರು. ಊರೆಲ್ಲ ಮೆರವಣಿಗೆ ಮುಗಿಸಿ ಸಂಜೆಯ ವೇಳೆಗೆ ಶಹಾಗಂಜ್ ದರ್ವಾಜ ಹತ್ತಿರ ಇರುವ ಪಾಂಡುರಂಗ ಪಾದದ ಬಳಿ ಜನ ಸೇರುತ್ತಾರೆ. ಅಲ್ಲಿನ ಸಡಗರವೇ ಸಡಗರ. ಕೋಟೆಯ ಬಾಗಿಲಿನ ಮೇಲ್ಭಾಗದಲ್ಲಿ ಕಟ್ಟಲಾದ ಮೊಸರ ಗಡಿಗೆ ಒಡೆಯುವ ಪ್ರಕ್ರಿಯೆಯು ನೋಡುಗನ ಕಣ್ಮನ ತಣಿಸುತ್ತದೆ.

ಆಷಾಢ ಪೌರ್ಣಿಮೆಯ ಮರುದಿನ ದಿಂಡಿ ಮೆರವಣಿಗೆ ಮತ್ತು ಮೊಸರು ಗಡಿಗೆ ಒಡೆಯುವ ವಿಧಿ ನಡೆಯುತ್ತದೆ. ಇಡೀ ಘಟನೆಯನ್ನು ದಾಖಲಿಸುವ 'ಮಹಾರ ಝಾಲ ಪಾಂಡುರಂಗ' ಎಂಬ ಮರಾಠಿ ಅಭಂಗ ಕೂಡ ಇದೆ. ಅದರ ಮರುದಿನ ಬರಿ ಮಹಿಳೆಯರೇ ಸೇರಿ ವಿಠೋಬನ ದೇವಸ್ಥಾನದಲ್ಲಿ ಮೊಸರು ಗಡಿಗೆ ಒಡೆಯುತ್ತಾರೆ. ಎಂತಹುದ್ದೇ ಬರಗಾಲ ಇದ್ದರೂ ದಿಂಡಿ ಮೆರವಣಿಗೆಯ ದಿನ ಬೀದರ್‌ನಲ್ಲಿ ನಾಲ್ಕಾರು ಹನಿ ಸುರಿಯುತ್ತದೆ ಎಂಬ ನಂಬಿಕೆ ಜನಜನಿತವಾಗಿದೆ.

ಇದು ಬೀದರ್‌ನಲ್ಲಿ ನಡೆಯುವ 'ಪಾಂಡುರಂಗ ದೇವರ ದಿಂಡಿ' ಜಾತ್ರೆಯ ಚಿತ್ರ. ಈ ಜಾತ್ರೆ ಇತಿಹಾಸ, ನಂಬಿಕೆ ಮತ್ತು ಐತಿಹ್ಯಗಳ ಮಿಶ್ರಣದಂತಿದೆ. ಇದರ ಹಿಂದೆ ಒಂದು ಐತಿಹಾಸಿಕ ಕಥೆ ಇದೆ. ಅದರ ಜೊತೆಗೆ ಐತಿಹ್ಯ ಮತ್ತು ಹಲವು ನಂಬಿಕೆಗಳು ಸೇರಿಕೊಂಡಿವೆ. ಪೂರಕವಾಗಿ ಮರಾಠಿ ಸಾಹಿತ್ಯದ ಹಾಡು– ಅಭಂಗಗಳು ಕೂಡ ಇವೆ. ಪಾಂಡುರಂಗ ವಿಠಲ ಬೀದರ್ ಬಂದ ಘಳಿಗೆಯನ್ನು ಜನ ಸಮೃದ್ಧಿಯ ಸಂಕೇತ ಎಂದು ಭಾವಿಸುತ್ತಾರೆ. ಅದಕ್ಕಾಗಿಯೇ ಮೊಸರು ಗಡಿಗೆ ಒಡೆಯುವ ಮೂಲಕ ಅದು ಎಲ್ಲೆಡೆ ಹರಡಲಿ ಎಂಬ ಆಶಯ ವ್ಯಕ್ತಪಡಿಸುತ್ತಾರೆ.

ಬೀದರ್‌ನ 'ಹಬಶಿಕೋಟೆ'ಯ ಆವರಣದಲ್ಲಿ ಇರುವ ಸ್ಮಾರಕಗಳು ಇಂಡಿಯಾದಲ್ಲೇ ಅಪರೂಪ. ಆದರೆ, ಅಷ್ಟೇ ನಿರ್ಲಕ್ಷಿತ. ನಗರದ ಪೂರ್ವದ ಹೊರವಲಯದಲ್ಲಿ ಇರುವ ಸದ್ಯ 'ಹಬಶಿಕೋಟೆ' ಎಂದು ಕರೆಯುವ ಪ್ರದೇಶವು ಅಲ್ಲಿರುವ ಸರ್ಕಾರಿ 'ಪ್ರವಾಸಿ ಮಂದಿರ'ದ ಕಾರಣಕ್ಕಾಗಿ ಜನಪ್ರಿಯ. ಮೊದಲ ಪ್ರಧಾನಿ ಜವಾಹರಲಾಲ್ ನೆಹರು ತಂಗಿದ್ದರು ಎಂಬ ಖ್ಯಾತಿ ಇರುವ ಈ ಪ್ರವಾಸಿ ಮಂದಿರದ ಮೇಲೆ ನಿಂತು ಕಣಿವೆಯ ನಡುವಿನ ಹಸಿರು ವನರಾಶಿಯನ್ನು ವೀಕ್ಷಿಸುವುದೇ ಒಂದು ವಿಶಿಷ್ಟ ಅನುಭವ. ಅಲ್ಲಿಂದ ಕಡುಕೆಂಪು ಬಣ್ಣದ ಸೂರ್ಯನ ಉದಯ ಕೂಡ ಸೊಗಸಾಗಿರುತ್ತದೆ. ದೂರದ ಕೆರೆಯಲ್ಲಿ ಸೂರ್ಯನ ಹೊಂಗಿರಣಗಳು ಉಂಟು ಮಾಡುವ ವರ್ಣರಂಜಿತ ದೃಶ್ಯ ನಯನ ಮನೋಹರ.

## ನಿಗ್ರೋಗಳಿಗೂ ಆದ್ಯತೆ–ಮನ್ನಣೆ

'ಹಬಶ್' ಎನ್ನುವುದು ಅರಬ್ಬಿ ಭಾಷೆಯ ಪದ. ಆಫ್ರಿಕಾದ ಅಬಿಸೀನಿಯನ್ ಪ್ರದೇಶವನ್ನು ಅರಬ್ಬಿಗಳು 'ಹಬಶ್' ಎನ್ನುತ್ತಾರೆ. ಆಫ್ರಿಕಾದ ಕಪ್ಪು ನಿಗ್ರೋಗಳನ್ನು 'ಹಬಶಿ' ಎಂದು ಕರೆಯಲಾಗುತ್ತದೆ. ಮಾರುಕಟ್ಟೆಯಲ್ಲಿ ಪಶುಗಳನ್ನು ಮಾರುವ ಹಾಗೆ ಹಬಶಿಗಳ ಮಾರಾಟ ಕೂಡ ನಡೆಯುತ್ತಿತ್ತು. ಖರೀದಿಸಿದ ಒಡೆಯ 'ಗುಲಾಮ'ರನ್ನಾಗಿ ಮಾಡಿಕೊಳ್ಳುತ್ತಿದ್ದ. ಕಠಿಣವಾದ ಕೆಲಸಗಳನ್ನು ನಿರಾಯಾಸವಾಗಿ ಮಾಡುತ್ತಿದ್ದ ಈ ಕಪ್ಪುವರ್ಣೀಯರು ಹೇಳಿದ ಕೆಲಸ–ಕಾರ್ಯಗಳನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದರು. ಬಹುತೇಕ ಜನರಿಗೆ 'ಗುಲಾಮಗಿರಿ'ಯಿಂದ ಹೊರಬರಲು ಆಗುತ್ತಿರಲಿಲ್ಲ. ಅದು ಸಾಧ್ಯವೂ ಆಗಿರಲಿಲ್ಲ. ಆದರೆ, ಕೆಲವರು ತಮ್ಮ ಕೌಶಲ್ಯ ಮತ್ತು ಅಪಾರ ಪರಿಶ್ರಮದಿಂದ ಒಡೆಯನ ಮೆಚ್ಚುಗೆ ಗಳಿಸಿ 'ಬಿಡುಗಡೆ' ಪಡೆದು ಉನ್ನತ ಸ್ಥಾನ ಅಲಂಕರಿಸಿದ ಉದಾಹರಣೆಗಳೂ ಉಂಟು. ಬೀದರ್‌ನ ಬಹಮನಿ ಅರಸರ ಕಾಲದಲ್ಲಿ ಹಬಶಿಗಳು ಸ್ಥಳೀಯ ದಖನಿ ಮುಸ್ಲಿಮರ ಜೊತೆ ಗುರುತಿಸಿಕೊಂಡಿದ್ದರು. ಬಹಮನಿ ಮತ್ತು ಬರೀದ್ ಅರಸರ ಕಾಲದಲ್ಲಿ ಪ್ರಾಂತ್ಯದ ಆಡಳಿತ ನೋಡಿಕೊಳ್ಳುವ 'ಗವರ್ನರ್' ಆಗಿ ಕೂಡ ಕಾರ್ಯನಿರ್ವಹಿಸಿದ ಉದಾಹರಣೆಗಳಿವೆ.

ಅಬಿಸೀನಿಯಾದ ನಿಗ್ರೋಗಳು ವಾಸಿಸುತ್ತಿದ್ದ ಅಥವಾ ಅವರಿಗಾಗಿ ಕಟ್ಟಿದ ಕೋಟೆಯೇ ಹಬಶಿಕೋಟೆ. ಈ ಪ್ರದೇಶದಲ್ಲಿ ಕೆಲವು ಮಹತ್ವದ ಸ್ಮಾರಕಗಳಿವೆ. ಎತ್ತರದ ಗುಡ್ಡದ ಮೇಲೆ ಇರುವ ಕಟ್ಟಡ ತನ್ನ ವಿಶಿಷ್ಟ ಶೈಲಿಯಿಂದ ಗಮನ ಸೆಳೆಯುತ್ತದೆ. ಸುತ್ತ ನಾಲ್ಕು ಕಡೆಗಳಲ್ಲಿಯೂ ಹಲವು ಕಮಾನುಗಳಿಂದ ಕೂಡಿದ ಗೋಡೆಗಳಿವೆ. ಒಳಗಡೆ ಸಣ್ಣದಾದ ಗುಂಬಜ್ ಇದೆ. ಅದರ ಆವರಣದಲ್ಲಿಯೇ ರೊಟ್ಟಿ ಸಿದ್ಧಪಡಿಸುವ 'ತವಾ' ಅಥವಾ ಬೃಹತ್ ಒಲೆಯಿದೆ. ಈ ಸ್ಮಾರಕಗಳ ಸುತ್ತ ಕೆಂಪು ಲ್ಯಾಟ್ರೈಟ್ ಕಲ್ಲಿನ ಗಣಿಗಾರಿಕೆ ನಡೆಯುತ್ತಿರುವ ಅವು ಸದ್ಯ ಅಳಿವಿನ ಅಂಚಿನಲ್ಲಿವೆ. ಕೆಲವೇ ದಿನಗಳಲ್ಲಿ ಸಂಪೂರ್ಣವಾಗಿ 'ಇಲ್ಲ'ವಾಗಿ ಬಿಡಬಹುದು.

ಹಬಶಿಕೋಟೆಯ ಈ ಸ್ಮಾರಕಗಳ ಸುತ್ತ ಇರುವ ದಂತಕತೆಗಳು ರೋಚಕವಾಗಿವೆ. ರಾತ್ರಿಯ ವೇಳೆ ಕಪ್ಪುವ್ಯಕ್ತಿಯೊಬ್ಬ ಈಗಲೂ ರೊಟ್ಟಿ ಬೇಯಿಸುತ್ತಾನೆ ಎಂಬ ನಂಬಿಕೆಯಿದೆ. ಹಾಗೆಯೇ ಈ ಪ್ರದೇಶದ ಚಿನ್ನದ ನಿಕ್ಷೇಪ ಹುಡುಕುವವರಿಗೆ ಪ್ರೇರಣೆ ನೀಡುವಂತಹ ಕಥೆಯೊಂದಿದೆ. ಹೀಗೆ ಹಲವು ದಂತಕತೆಗಳಿಗೆ ಕಾರಣವಾಗಿರುವ ಸ್ಮಾರಕಗಳೇ ಮುಂದೊಂದು ದಿನ ಕಾಲನ ಮನೆ ಸೇರಿದರೆ ಅಚ್ಚರಿಯಿಲ್ಲ.

ಆರಂಭದಲ್ಲಿ ಈ ಸ್ಮಾರಕಗಳನ್ನು ರೇಲ್ವೆಯಲ್ಲಿ ಕುಳಿತು ನೋಡುವ ಬಗ್ಗೆ ಪ್ರಸ್ತಾಪಿಸಲಾಗಿದೆ. ರೇಲ್ವೆಗೂ ಈ ಸ್ಮಾರಕಗಳಿಗೂ ಒಂದು ನಂಟಿದೆ. ಬೀದರ್‌ನಲ್ಲಿ ರೇಲ್ವೆ ಹಳಿಗಳನ್ನು ಹಾಕುವ ಸಂದರ್ಭದಲ್ಲಿ ಟ್ರೇನ್‌ನಲ್ಲಿಯೇಕುಳಿತು ಸ್ಮಾರಕಗಳನ್ನು ನೋಡಲು ಅನುವಾಗುವಂತೆ ಹಳಿಗಳ ಜಾಡನ್ನೇ ಬದಲಾಯಿಸಲಾಯಿತು. ಆಗಿನ ಪುರಾತತ್ವ ಇಲಾಖೆಯ ಅಧಿಕಾರಿಗಳ ಮನವಿಯ ಮೇರೆ ರೇಲ್ವೆ ಎಂಜಿನಿಯರ್‌ಗಳು ಹಬಶಿಕೋಟೆಯ 'ವಿಹಂಗಮ ನೋಟ' ಕಾಣಿಸುವಂತೆ ಹಳಿಗಳನ್ನು ಹಾಕಿದ್ದರು. ಈಗಲೂ ಕೂಡ ಈ ಸ್ಮಾರಕಗಳನ್ನು ರೈಲಿನಲ್ಲಿ ಕುಳಿತು ನೋಡುವುದೇ ಒಂದು ಸೊಗಸು.

# ೩. ಧರ್ಮ– ಕಲಹ– ಸಾಮರಸ್ಯ

ಸಹಬಾಳ್ವೆಯು ಕೇವಲ ಹಿಂದು–ಮುಸ್ಲಿಮ್ ಸಮುದಾಯಗಳಿಗೆ ಮಾತ್ರ ಸೀಮಿತವಾಗಲಿಲ್ಲ. ಹೊಂದಾಣಿಕೆಗೆ ಬರುವ ಮುನ್ನ ಎರಡೂ ಸಮುದಾಯಗಳು ಪರಸ್ಪರ ಸವಾಲು ಎದುರಿಸಿದವು. ತಮ್ಮ ಧರ್ಮದೊಳಗಿನ ಭಿನ್ನ ಅಭಿಪ್ರಾಯಗಳನ್ನು ಒಪ್ಪಿಕೊಳ್ಳುವ– ಒಪ್ಪಿಕೊಳ್ಳದವರ ನಡುವೆ ದೊಡ್ಡ ಸಿವಿಲ್ ವಾರ್ ಕೂಡ ನಡೆಯಿತು. ಸೂಫಿ ಪರಂಪರೆಯು ಈ ಕಾಲಘಟ್ಟದ ಮಹತ್ವದ ಅಂಶ. ಉತ್ತರ ಭಾರತದಿಂದ ಬಂದ ಚಿಸ್ತಿ ಪರಂಪರೆಯ ಜೊತೆಗೆ ಇರಾನ್‌ನಿಂದ ನೇರವಾಗಿ ಬೀದರಿಗೆ ಬಂದ ನಿಯಾಮತ್ ಅಲ್ಲಾ ಸಂಪ್ರದಾಯ ಹಾಗೂ ಖಾದರಿಯಾ ಪರಂಪರೆಗಳು ವಿಶೇಷ ಉಲ್ಲೇಖಕ್ಕೆ ಪಾತ್ರವಾಗುತ್ತವೆ.

ಹಿಂದೂ ಮತ್ತು ಮುಸ್ಲಿಂ ನಾಗರಿಕತೆಗಳು ಪರಸ್ಪರ ಮುಖಾಮುಖಿಯಾಗಿ, ಸಂಧಿಸಿ–ಬೆರೆತುಕೊಂಡ ರೀತಿ ಅನನ್ಯವಾದದು. ಎರಡು ವಿಭಿನ್ನ ಸಂಸ್ಕೃತಿಗಳು ಮತ್ತು ಧಾರ್ಮಿಕ ಕಾರಣಗಳಿಗಾಗಿ ವ್ಯಾಪಕ ಭಿನ್ನಾಭಿಪ್ರಾಯಗಳ ನಡುವೆಯೂ ಪರಸ್ಪರ ಪ್ರಭಾವ ಬೀರಿದವು ಎಂದು ಸರ್ ಜಾನ್ ಮಾರ್ಷಲ್ ಅಭಿಪ್ರಾಯ ಪಡುತ್ತಾರೆ.

ದೊರೆ ಅಹ್ಮದ್ ಸ್ಥಳೀಯ ಹಿಂದುಗಳ ಜೊತೆಗೆ ನೇರ ಒಡನಾಟ ಇಟ್ಟುಕೊಂಡಿದ್ದ. ತನ್ನ ಸಹೋದರ ಫಿರೋಜ್‌ನ ಜೊತೆಗೆ ಭಿನ್ನಾಭಿಪ್ರಾಯ–ಕದನ ಏರ್ಪಟ್ಟಾಗ ಅವನ ನೆರವಿಗೆ ಬಂದದ್ದು ಸೂಫಿ ಸಂತ ಗೇಸು ದರಾಜ್ ಮತ್ತು ಸ್ಥಳೀಯ ಹಿಂದು ಸಮುದಾಯ. ಹಿಂದೂ ಮತ್ತು ಮುಸ್ಲಿಂ ಸಮುದಾಯಗಳು ಜೊತೆಯಲ್ಲಿಯೇ ಬದುಕಲು ಆರಂಭಿಸಿ ತುಂಬ ದಿನಗಳಾಗಿದ್ದವು. ಆದರೆ, ಕೊಡುಕೊಳುವ ಸಂಬಂಧ ದಖನ್ ಪ್ರದೇಶ ಕಂಡಷ್ಟು ವ್ಯಾಪಕ ಪ್ರಮಾಣದಲ್ಲಿ

ಆಗಿರಲಿಲ್ಲ. ಅಹ್ಮದ್‌ನ ಆಸಕ್ತಿ, ಕಾಳಜಿಗಳ ಫಲವಾಗಿ ಎರಡು ಸಮುದಾಯಗಳು ಸ್ನೇಹ- ಸೌಹಾರ್ದದಿಂದ ಬದುಕ ತೊಡಗಿದವು.

ಅರಬ್ಬಿ ದೇಶದಲ್ಲಿ ಹುಟ್ಟಿದ ಇಸ್ಲಾಂ ಧರ್ಮವು ಈಗಿನ ಇರಾನ್ ಅಂದರೆ ಹಿಂದಿನ ಪರ್ಷಿಯಾದ ಸಂಸ್ಕೃತಿಯೊಂದಿಗೆ ಮುಖಾಮುಖಿಯಾಯಿತು. ಅದರ ಫಲವಾಗಿ ಹುಟ್ಟಿಕೊಂಡ ಇಸ್ಲಾಮ್‌ನ ಅನುಭಾವಿ ಪರಂಪರೆಯೇ ಸೂಫಿ.

'ಅಫಘಾನಿಸ್ತಾನದ ಚಿಸ್ತ್ ಎಂಬ ಹಳ್ಳಿಯಲ್ಲಿ ಹುಟ್ಟಿದ ಅಬೂ ಅಬ್ದುಲ್ಲಾ ಚಿಸ್ತಿ (966)ಯಿಂದ ಆರಂಭವಾದದ್ದು ಚಿಸ್ತಿಯಾ, ಇರಾನ್‌ನ ಜಿಲಾನ್ ನಗರದ ಅಬ್ದುಲ್ ಖಾದರ್ ಜಿಲಾನಿ (1166) ಸ್ಥಾಪಿಸಿದ್ದು ಖಾದ್ರಿಯಾ, ಹೀಗೇ ಇರಾಕಿನ ಅಲಾ ಅಲ್ ರಫಾಯಿ (1182)ಯಿಂದ ರಫಾಯಿಯಾ ಸಿಲ್‌ಸಿಲಾ (ಪಥ) ಆರಂಭವಾಯಿತು. ಭಾರತದಲ್ಲಿ ಚಿಸ್ತಿಯಾ ಖಾದ್ರಿಯಾ ಹೆಚ್ಚು ಜನಪ್ರಿಯವಾದ ಶಾಖೆಗಳು. ಅದರಲ್ಲೂ ಕರ್ನಾಟಕದಲ್ಲಿ ಬಹುಸಂಖ್ಯಾತರಾಗಿರುವುದು ಖಾದ್ರಿಯಾ ಸೂಫಿಗಳು. ಆದರೆ, ಸಾಂಸ್ಕೃತಿಕವಾಗಿ ಕರ್ನಾಟಕದ ಚಿಸ್ತಿಯಾ ಸೂಫಿಗಳ ಪ್ರಭಾವವೇ ಹೆಚ್ಚು ಆಳವಾದದು. ಬಂದೇನವಾಜ್, ಲಾಡ್ಲೆ ಮಶಾಯಿಕ್, ಶಾಮಿರಾಂಜಿ, ಅಮೀನುದ್ದೀನ್, ಖಾದರಲಿಂಗ, ಹೊನ್ನೂರಸ್ವಾಮಿ, ಮಹಮದ್ ಬಹ್ರಿ, ಇವರೆಲ್ಲ ಕರ್ನಾಟಕದ ಚಿಸ್ತಿ ಸೂಫಿಗಳು' ಎಂದು ರಹಮತ್ ತರೀಕೆರೆ ಅವರು ವಿವರಿಸುತ್ತಾರೆ.

ಹಾಗೆಯೇ ಮುಂದುವರೆದು ಕರ್ನಾಟಕದಲ್ಲಿ ಸೂಫಿಗಳು ಬಂದ ವಿಧಗಳನ್ನು ರಹಮತ್ ತರೀಕೆರೆ ಹೀಗೆ ಗುರುತಿಸುತ್ತಾರೆ 'ಭಾರತ ಹಾಗೂ ಕರ್ನಾಟಕಗಳಿಗೆ ಸೂಫಿಸಂ ಬಂದುದನ್ನು ನಾಲ್ಕು ಬಗೆಯಲ್ಲಿ ವಿವರಿಸಬಹುದು ಅನಿಸುತ್ತದೆ. 1) ಕಡಲ ವ್ಯಾಪಾರಿಗಳ ಜತೆಯಲ್ಲಿ ಮಿಶನರಿಗಳ ರೂಪದಲ್ಲಿ ಆಗಮನ, 2) ಸೈನಿಕ ದಂಡಯಾತ್ರೆಗಳ ಜತೆಗೆ ಧರ್ಮಯೋಧರ ರೂಪದಲ್ಲಿ ಆಗಮನ, 3) ರಾಜಕೀಯ ಆಹ್ವಾನ ಅಥವಾ ಒತ್ತಡದಿಂದ ರಾಜಗುರುಗಳ ರೂಪದಲ್ಲಿ ಆಗಮನ, 4) ಜ್ಞಾನವನ್ನೋ ಗುರುವನ್ನೊ ಹುಡುಕಿಕೊಂಡು ತತ್ವಾರ್ಥಿಗಳಾಗಿ ಆಗಮನ'. ಭಾರತದ ಆಗ್ನೇಯ ದಿಕ್ಕಿನಿಂದ ಬಂದ ಎರಡನೇ ಬಗೆಯ ಸೂಫಿಗಳ ಬಗ್ಗೆ ರಹಮತ್ ತರೀಕೆರೆ ಅವರ ಅಭಿಪ್ರಾಯ ಇಂತಿದೆ 'ಖಡ್ಗ ಮತ್ತು ಕುದುರೆ ಗೊರಸುಗಳ ಜತೆಯಲ್ಲಿ ಸೂಫಿಗಳ ಕಂಬಳಿಯೂ ಭಿಕ್ಷಾಪಾತ್ರೆಯೂ ಜತೆಗೂಡಿ ಬಂದವು ಎಂಬ ಸಂಗತಿ ವಿಚಿತ್ರವಾದರೂ ನಿಜವಾಗಿದೆ. ಅಫಘಾನಿಸ್ತಾನದ ಘಜನಾದಿಂದ ಬಂದ ಶೇಕ್ ಅಬುಲ್ ಹಸನ್ ಹುಜವೇರಿಯು ಭಾರತಕ್ಕಾಗಮಿಸಿದ (1070) ಮೊದಲ ಸೂಫಿ ಎನ್ನಬಹುದು'.

ಹೀಗೆ ಬಂದವರ ಪೈಕಿ ದೆಹಲಿಯಲ್ಲಿ ಚಿಸ್ತಿಯಾ ಸಿಲ್‌ಸಿಲಾಕ್ಕೆ ಸೇರಿದ ನಿಜಾಮುದ್ದೀನ್ ಔಲಿಯಾನು ಅಲಾವುದ್ದೀನ್ ಖಿಲ್ಜಿಯು ದಕ್ಷಿಣದ ಕಡೆಗೆ ದಂಡಯಾತ್ರೆ ಮಾಡುವ ಮುನ್ನವೇ 700 ಜನ ಸೂಫಿ ಸಂತರನ್ನು ದಖನ್ ಕಡೆಗೆ ಕಳುಹಿಸಿದ್ದ. ಮಹಮದ್ ಬಿನ್ ತುಘಲಕ್ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ ಸ್ಥಳಾಂತರ ಮಾಡಿದಾಗ ಅವನ ಜೊತೆಗೆ ಬಂದವರಲ್ಲಿ ಸೂಫಿಗಳೂ ಸೇರಿದ್ದರು. ಬಂದೇ ನವಾಜ್ ಎಂದೇ ಗುಲ್ಬರ್ಗದಲ್ಲಿ ಜನಪ್ರಿಯರಾಗಿರುವ ಗೇಸುದರಾಜ್ ಅವರು ಹುಟ್ಟಿದ್ದು ದೌಲತಾಬಾದ್ ಸಮೀಪದ ಖುಲ್ದಾಬಾದ್‌ನಲ್ಲಿ. ನಂತರ ಮತ್ತೆ ದೆಹಲಿಗೆ ಹೋದ ಗೇಸು ದರಾಜ್ ಅವರು ತಮ್ಮ 64ನೇ ವಯಸ್ಸಿನ ವರೆಗೂ ಅಲ್ಲಿಯೇ ಇದ್ದರು. ನಾಸಿರುದ್ದೀನ್ ಶಹಾನ ದಾಳಿಯ ಮುನ್ಸೂಚನೆ ಅರಿತ ಗೇಸು ದರಾಜ್ ದಖನ್‌ನತ್ತ ಪ್ರಯಾಣ ಬೆಳೆಸಿದರು. ಖುಲ್ದಾಬಾದ್‌ನಲ್ಲಿದ್ದ ತಮ್ಮ ತಂದೆಯ ಸಮಾಧಿಗೆ ಗೌರವ ಸಲ್ಲಿಸುವುದಕ್ಕಾಗಿ ಉಳಿದ ದಿನಗಳಲ್ಲಿಯೇ ಗುಲ್ಬರ್ಗದಲ್ಲಿದ್ದ ಬಹಮನಿ ದೊರೆ ಫಿರೋಜ್ ಶಹಾನು ಆಹ್ವಾನ ನೀಡಿದನು. ಫಿರೋಜ್‌ನ ಆಹ್ವಾನದ ಮೇರೆಗೆ ಗುಲ್ಬರ್ಗಕ್ಕೆ ಬಂದ ಗೇಸು ದರಾಜ್ ಅವರು ಅಲ್ಲಿಯೇ ಉಳಿದುಕೊಂಡರು. ಫಿರೋಜ್ ಆಹ್ವಾನದ ಮೇಲೆ ಆಗಮಿಸಿದರೂ ಗೇಸುದರಾಜ್ ಮತ್ತು ಫಿರೋಜ್ ನಡುವಿನ ಸೌಹಾರ್ದದ ಸಂಬಂಧ ಹೆಚ್ಚು ದಿನ ಮುಂದುವರೆಯಲಿಲ್ಲ. ಫಿರೋಜ್‌ನು ತನ್ನ ಏಕಾಂತಕ್ಕೆ ಧಕ್ಕೆ ಬರುತ್ತದೆ ಎಂಬ ನೆಪ ಹೇಳಿ ಕೋಟೆಯ ಪ್ರದೇಶದ ಹತ್ತಿರದಲ್ಲಿದ್ದ ಖಾನ್‌ಕಾ ಬೇರೆಡೆಗೆ ಸಾಗಿಸುವಂತೆ ಸೂಚಿಸಿದ ಮೇಲೆಯಂತೂ ಅಂತರ ಮತ್ತಷ್ಟು ಹೆಚ್ಚಿತು. ಫಿರೋಜ್‌ನ ನಂತರ ದೊರೆ ಯಾರಾಗಬೇಕು ಎಂಬ ವಾರಸುದಾರಿಕೆಯ ಪ್ರಶ್ನೆ ಉದ್ಭವಿಸಿತು. ಫಿರೋಜ್‌ನಿಗೆ ತನ್ನ ಮಗನನ್ನು ದೊರೆ ಮಾಡಬೇಕು ಎಂಬ ಬಯಕೆ. ಆದರೆ, ಅದಕ್ಕೆ ಅವನ ಸಹೋದರ ಅಹ್ಮದ್‌ನ ಮಹತ್ವಾಕಾಂಕ್ಷೆ ಅಡ್ಡಿಯಾಗಿತ್ತು. ಅಹ್ಮದ್‌ನಿಗೆ ಗೇಸು ದರಾಜ್ ಅವರ ನೈತಿಕ ಬೆಂಬಲವೂ ಇತ್ತು. ಅದೆಲ್ಲದರ ಫಲವಾಗಿ ಫಿರೋಜ್ ಮತ್ತು ಅಹ್ಮದ್‌ರ ನಡುವಿನ ಕದನದಲ್ಲಿ ಅಹ್ಮದ್‌ನ ಕೈ ಮೇಲಾಯಿತು. ತಮ್ಮನಿಗೆ ಸಿಂಹಾಸನ ಬಿಟ್ಟುಕೊಟ್ಟ ಫಿರೋಜ್ ಹೆಚ್ಚು ದಿನ ಬದುಕಲಿಲ್ಲ. ಫಿರೋಜ್ ಮೃತಪಟ್ಟ ಎರಡೇ ವಾರಗಳಲ್ಲಿ ಗೇಸು ದರಾಜ್ ಅವರೂ ಅಸು ನೀಗಿದರು. ಅಹ್ಮದ್ ರಾಜಧಾನಿಯನ್ನು ಗುಲ್ಬರ್ಗದಿಂದ ಬೀದರ್‌ಗೆ ಸ್ಥಳಾಂತರ ಮಾಡಲು ನಿರ್ಧರಿಸಿದ.

ಸೂಫಿಗಳನ್ನು ದೊರೆಗಳು ಆಹ್ವಾನಿಸುತ್ತಿದ್ದ ಕುರಿತು ರಹಮತ್ 'ತಮ್ಮ ವೈಯಕ್ತಿಕ ಶ್ರದ್ಧೆ ಭಕ್ತಿಗಳಿಗಾಗಿ ಸೂಫಿಗಳನ್ನು ಕರೆಸಿಕೊಳ್ಳುತ್ತಿದ್ದ ದೊರೆಗಳಿದ್ದರು. ಆದರೆ ಇವುಗಳಲ್ಲಿ ರಾಜಕೀಯ ಉದ್ದೇಶಗಳೂ ಅಡಗಿರುತ್ತಿದ್ದವು. ತಾವು ಗೆದ್ದು

ಪಡೆದುಕೊಂಡ ಹೊಸ ರಾಜ್ಯದಲ್ಲಿ ತಮ್ಮ ಆಡಳಿತಕ್ಕೆ ಅನುಕೂಲಕರವಾದ ಧಾರ್ಮಿಕ ವಾತಾವರಣ ನಿರ್ಮಿಸಲು ಮಿಶನರಿ ಸೂಫಿಗಳನ್ನು ಕರೆಸಿಕೊಳ್ಳಲಾಗುತ್ತಿತ್ತು. ಸೂಫಿಗಳಾದರೂ ಸ್ವಯಂ ಆಕರ್ಷಣೆಯಿಂದ ಇಂತಹ ರಾಜಪ್ರಭುತ್ವಗಳನ್ನು ಅರಸಿಕೊಂಡು ದೇಶಾಂತರ ಬರುತ್ತಿದ್ದರು. ತಮ್ಮ ಆಡಳಿತಕ್ಕಾಗಿ ಅಧಿಕಾರಿಗಳನ್ನು, ಸೇನಾಪತಿಗಳನ್ನು, ಪರ್ಷಿಯಾದಿಂದ ಕರೆಸಿಕೊಳ್ಳುವ ನೀತಿ ಅನುಸರಿಸುತ್ತಿದ್ದ ಬಹಮನಿಗಳು, ಸೂಫಿಗಳನ್ನೂ ಕರೆಸಿಕೊಳ್ಳುತ್ತಿದ್ದರು. ಅಹಮದ್ ಶಹಾ ಬಹಮನಿಯು ಪರ್ಷಿಯಾದಿಂದ ನಿಯಾಮತ್ ಅಲ್ಲಾ ಖಾದ್ರಿಯನ್ನು ಕರೆಸಿಕೊಳ್ಳಲು ಮೂರು ಸಲ ನಿಯೋಗ ಕಳಿಸುತ್ತಾನೆ. ಗೋಗಿಯ ಮಹಮದ್ ಬಫ್ರಿ, ಸಗರದ ಶೇಕ್ ಐನುದ್ದೀನ್ ಮುಂತಾದವರು ಕೂಡ ಬಹಮನಿ ರಾಜ್ಯ ಸ್ಥಾಪನೆಯಾದ ನಂತರ ಬೇರೆ ಬೇರೆ ಕಡೆಯಿಂದ ಬಂದವರು' ಎಂದು ಬರೆಯುತ್ತಾರೆ.

ಬಹಮನಿ ಅರಸರ ಪೈಕಿ ಒಂಭತ್ತನೆಯವನಾದ ಅಹಮದ್ ಶಹಾ ಅಲಿ 'ವಲಿ'ಯು (ಸಂತ) ಹಿತಕರವಾದ ವಾತಾವರಣ ಮತ್ತು ಸುರಕ್ಷತೆಯ ದೃಷ್ಟಿಯಿಂದ 1424ರಲ್ಲಿ ಗುಲ್ಬರ್ಗದಿಂದ ಬೀದರ್‌ಗೆ ರಾಜಧಾನಿಯನ್ನು ವರ್ಗಾಯಿಸಿದ. ಬಹಮನಿ ಅರಸು ಮನೆತನದಲ್ಲಿ ಅಧಿಕಾರಕ್ಕಾಗಿ ನಡೆಯುತ್ತಿದ್ದ ರಕ್ತದ ಚೆಲ್ಲಾಟ ಮತ್ತು ಅರಮನೆಯ ಪಿತೂರಿ ರಾಜಕೀಯದಿಂದ ಬಿಡುಗಡೆ ಪಡೆಯುವುದು ರಾಜಧಾನಿಯ ವರ್ಗಾವಣೆಗೆ ಪ್ರಮುಖ ಕಾರಣವಾಗಿತ್ತು. ಇದೆಲ್ಲದರ ಜೊತೆಗೆ ಅಣ್ಣ ಫಿರೋಜ್ ಶಹಾನಿಂದ ಅರಸೊತ್ತಿಗೆ ಕಿತ್ತುಕೊಳ್ಳುವ ಸಂದರ್ಭದಲ್ಲಿ ಬೆಂಬಲಕ್ಕೆ ನಿಂತಿದ್ದ ಸೂಫಿ ಸಂತ ಬಂದೇ ನವಾಜ್ ಕೂಡ ಅಸು ನೀಗಿದ್ದರು. ಈ ಹಿನ್ನೆಲೆಯಲ್ಲಿ ಅಹಮದ್ ಶಹಾನಿಗೆ ಗುಲ್ಬರ್ಗದ ಜೊತೆಗಿದ್ದ ಭೌತಿಕ– ಮಾನಸಿಕ ಸಂಬಂಧಗಳನ್ನು ಕಡಿದುಕೊಳ್ಳುವುದು ಅನಿವಾರ್ಯ ಮತ್ತು ಅಗತ್ಯವಾಗಿತ್ತು.

ರಾಜಧಾನಿಯನ್ನು ಬೀದರ್‌ಗೆ ವರ್ಗಾಯಿಸಿದ ನಂತರ ಅಹಮದ್ ಶಹಾನಿಗೆ ಶುಕ್ರದೆಸೆ ಆರಂಭವಾಯಿತು. ದಂಡಯಾತ್ರೆ ಮಾಡಿದಲ್ಲೆಲ್ಲ ಗೆಲುವು. ಎಲ್ಲೆಡೆ ಸಮೃದ್ಧಿ. ಗುಲ್ಬರ್ಗದಲ್ಲಿದ್ದ ಬಹುತೇಕ ಕೊರತೆಗಳು ಇಲ್ಲವಾಗಿದ್ದವು. ಜೊತೆಗೆ ಆರ್ಥಿಕ ಸಬಲತೆ ಕೂಡ ಬಂದಿತ್ತು. ಆಧ್ಯಾತ್ಮಿಕ ಮಾರ್ಗದರ್ಶನ ಮಾಡುವವರ ಕೊರತೆ ಬಾದಶಹನಿಗೆ ಕಾಡುತ್ತಿತ್ತು. ಆಗ ಬಂದೇ ನವಾಜ್‌ರ ಸ್ಥಾನ ತುಂಬುವ ಮತ್ತೊಂದು ಚೇತನ ಗೋಚರವಾಗಲಿಲ್ಲ. ಆಗಲೇ ಅಹಮದ್‌ನಿಗೆ ದೂರದ ಇರಾನ್‌ನ ಕಿರ್ಮಾನ್ ಪ್ರಾಂತ್ಯದಲ್ಲಿ ಇದ್ದ ಸಂತಕವಿ ಶಹಾ ನಿಯಾಮತುಲ್ಲಾ ಕಿರ್ಮಾನಿಯನ್ನು ರಾಜಧಾನಿಗೆ ಕರೆಸಿ ಗೌರವ ಸಲ್ಲಿಸುವ ಆಸೆ– ಕನಸು ಚಿಗುರೊಡೆಯಿತು. ಅದಕ್ಕೆ ಪ್ರಶಸ್ತವಾದ ವಾತಾವರಣವೂ ನಿರ್ಮಾಣವಾಗಿತ್ತು.

ಇಡೀ ಮಧ್ಯಪ್ರಾಚ್ಯದ ದೇಶಗಳು ಶ್ರೀಮಂತ ಬೀದರ್‌ನ ಕಡೆಗೆ ಮುಖ ಮಾಡಿದ್ದ ದಿನಗಳವು. ಬಹಮನಿ ಅರಸ ಕಳುಹಿಸಿದ ಮನವಿಯನ್ನು 'ವಯಸ್ಸಿನ ಕಾರಣಕ್ಕಾಗಿ ಬರುವುದು ಸಾಧ್ಯವಿಲ್ಲ' ಎಂದು ನಯವಾಗಿ ತಿರಸ್ಕರಿಸಿದ ಶಹಾ ನಿಯಾಮತುಲ್ಲಾ ಕಿರ್ಮಾನಿ ಅವರು ತಮ್ಮ ಮೊಮ್ಮಗ ಮೀರ್ ನುರುಲ್ಲಾ ಹುಸೇನಿಯನ್ನು ಕಳುಹಿಸುತ್ತಾರೆ.

ಸಂತನ ಪ್ರತಿನಿಧಿಯನ್ನು ಬರುವಿಕೆಗಾಗಿಯೇ ನಗರದ ಹೊರವಲಯದಲ್ಲಿ ಮಾಂಜ್ರಾ ನದಿಯ ದಂಡೆಯ ಮೇಲೆ 'ನ್ಯಾಮತಾಬಾದ್' ಎನ್ನುವ ಪುಟ್ಟ ನಗರವನ್ನು ನಿರ್ಮಿಸಲಾಗುತ್ತದೆ. ಸ್ವಾಗತಿಸುವುದಕ್ಕಾಗಿ ಅರಸ ಅಹಮದ್ ಶಹಾ ಸ್ವತಃ ತನ್ನ ಮಕ್ಕಳನ್ನು ಕಳುಹಿಸಿರುತ್ತಾನೆ. ವಿಜೃಂಭಣೆಯಿಂದ ಸ್ವಾಗತಿಸಿದ ನಂತರ ಕೂಡಿಸುವುದಕ್ಕಾಗಿ ವಿಶೇಷ ಸಿಂಹಾಸನ ತಖ್ತ್ ತಯಾರಿಸಲಾಗಿರುತ್ತದೆ. ಅರಸ ಅಹಮದ್ ಶಹಾ ತನ್ನ ಮಗಳನ್ನು ಮೀರ್ ನುರುಲ್ಲಾ ಹುಸೇನಿಗೆ ಕೊಟ್ಟು ಮದುವೆ ಮಾಡುತ್ತಾನೆ.

ಶಹಾ ನಿಯಾಮತುಲ್ಲಾ ಕಿರ್ಮಾನಿಯ ನಿಧನದ ನಂತರ (ಕ್ರಿ.ಶ. 1431) ಅವರ ಮಗ ಹಜರತ್ ಖಲೀಲುಲ್ಲಾ ಸೇರಿದಂತೆ ಇಡೀ ಕುಟುಂಬ ಬೀದರ್‌ಗೆ ಬಂದು ನೆಲೆಸುತ್ತದೆ. ಅರಸು ಮನೆತನದ ಜೊತೆಗಿನ ವೈವಾಹಿಕ ಸಂಬಂಧ ಮತ್ತು ಧಾರ್ಮಿಕ ಕಾರಣಗಳಿಗಾಗಿ ದೊರೆತ ಸ್ಥಾನಮಾನಗಳು ಶಹಾ ನಿಯಾಮತುಲ್ಲಾ ಕಿರ್ಮಾನಿ ಕುಟುಂಬದ ಘನತೆ ಹೆಚ್ಚುವಂತೆ ಮಾಡುತ್ತವೆ. ನಿಯಾಮತುಲ್ಲಾ ಪರಂಪರೆಗೆ ಸೇರಿದ ಸೂಫಿ ಸಂತರು ರಾಜ ಕುಟುಂಬದ ಸದಸ್ಯರ ಜೊತೆಗೆ ವೈವಾಹಿಕ ಸಂಬಂಧ ಆರಂಭಿಸಿದರು. ಅಹ್ಮದ್ ಶಹಾ ತನ್ನ ಮಗಳನ್ನು ನಿಯಾಮತುಲ್ಲಾನ ಮೊಮ್ಮಗನಿಗೆ ಕೊಟ್ಟು ಮದುವೆ ಮಾಡಿದ್ದ. ಹಾಗೆಯೇ ಅಲಾವುದ್ದೀನ್ ಕೂಡ ತನ್ನ ಪುತ್ರಿಯರನ್ನು ನಿಯಾಮತುಲ್ಲಾನ ಪುತ್ರ ಹಾಗೂ ಮೊಮ್ಮಗನೊಂದಿಗೆ ಮದುವೆ ಮಾಡಿದ್ದ. ಪ್ರಭುತ್ವದ ಜೊತೆಗೆ ನೇರ ಒಡನಾಟ ಇದ್ದದ್ದರಿಂದ ಈ ಪರಂಪರೆಯ ಸೂಫಿ ಸಂತರು ಸಾಮಾನ್ಯರಿಂದ ದೂರವೇ ಉಳಿದರು.

## ಹಳಬರು ಮತ್ತು ಹೊಸಬರು

(ದಖನಿಗಳು ಮತ್ತು ಅಫಾಕ್ವಿಗಳು = ತುರ್ಕಿಗಳು ಮತ್ತು ಫಾರಸಿಗಳು)

ಏನಿದು ಹಳಬರು ಮತ್ತು ಹೊಸಬರು ಎನ್ನುವ ಗೊಂದಲ ಎಂದು ಅನ್ನಿಸುವುದು ಸಹಜ. ಇಡೀ ಬಹಮನಿ ಸಾಮ್ರಾಜ್ಯದ ಆಂತರಿಕ ಕಿತ್ತಾಟ,

ಸಾವಿರಾರು ಜನರ ಮಾರಣಹೋಮಗಳಿಗೆ ಹಳಬರು ಮತ್ತು ಹೊಸಬರ ನಡುವಿನ ಭಿನ್ನಾಭಿಪ್ರಾಯವೇ ಕಾರಣವಾಗಿದೆ.

ದೆಹಲಿಯ ಸುಲ್ತಾನ್ ಅಲ್ಲಾವುದ್ದೀನ್ ಖಿಲ್ಜಿಯ ದಕ್ಷಿಣ ಭಾರತದ ದಂಡಯಾತ್ರೆಯ ಜೊತೆಗೇ ಮುಸ್ಲಿಮರು ದಕ್ಷಿಣ ಭಾರತದಲ್ಲಿ ನೆಲೆ ಕಂಡುಕೊಳ್ಳಲು ಆರಂಭಿಸಿದರು. ಖಿಲ್ಜಿಯ ದಂಡನಾಯಕ ಮಲ್ಲಿಕಾಫರ್ ಸೇರಿದಂತೆ ಆಗಿನ ಬಹುತೇಕ ಮುಸ್ಲಿಮರು ಅಫ್ಘಾನ್, ಈಗಿನ ಪಾಕಿಸ್ತಾನ, ಸಿಂಧ್ ಪ್ರಾಂತ್ಯದ ಮೂಲಕ ಅಂದರೆ ಕುದುರೆ ಸವಾರಿ ಮಾಡುತ್ತ ಒಂದೊಂದೇ ಪ್ರದೇಶವನ್ನು ಗೆಲ್ಲುತ್ತ, ತಮ್ಮದಾಗಿಸಿಕೊಳ್ಳುತ್ತ ಭಾರತವನ್ನು ಪ್ರವೇಶಿಸಿದವರಾಗಿದ್ದರು. ಅವರಲ್ಲಿ ಬಹುತೇಕ ಜನ ತುರ್ಕಿಗಳು ಮತ್ತು ಮಂಗೋಲಿಯನ್‌ರಾಗಿದ್ದರು. ಹಾಗೆಯೇ ಅವರು ಸುನ್ನಿಗಳು ಕೂಡ ಆಗಿದ್ದರು. ಅರಬ್ ದೇಶಗಳಿಂದ ದೆಹಲಿಯ ವರೆಗೆ ಮತ್ತು ಅಲ್ಲಿಂದ ದಕ್ಷಿಣದ ಪ್ರದೇಶಗಳವರೆಗೆ ನೆಲದ ಗುಂಟ ಬಂದಿದ್ದರು. ಹೀಗೆ ದಕ್ಷಿಣಕ್ಕೆ ಬಂದವರ ಪೈಕಿ ಕೆಲವರು ಇಲ್ಲಿಯೇ ಉಳಿದರು. ಹಾಗೆಯೇ ಮಹಮದ್ ಬಿನ್ ತುಘಲಕ್ ದೆಹಲಿಯಿಂದ ದೇವಗಿರಿಗೆ ರಾಜಧಾನಿಯನ್ನು ಸ್ಥಳಾಂತರಿಸಿದ ಸಂದರ್ಭದಲ್ಲಿ ದೆಹಲಿಯಲ್ಲಿದ್ದ ಬಹುತೇಕ ಜನ ದಕ್ಷಿಣದತ್ತ ಹರಿದು ಬಂದಿದ್ದರು. ತುಘಲಕ್ ದೇವಗಿರಿಯಿಂದ ಮತ್ತೆ ದೆಹಲಿಗೆ ರಾಜಧಾನಿ ವರ್ಗಾವಣೆ ಮಾಡಿದ ಸಂದರ್ಭದಲ್ಲಿ ಕೆಲವರು ಅವನ ಜೊತೆ ತೆರಳಲಿಲ್ಲ. ಈಗ ದೌಲತಾಬಾದ್ ಎಂದು ಕರೆಯುವ ದಖನ್‌ನ ಹಲವು ಪ್ರಾಂತ್ಯಗಳಲ್ಲಿ ಹರಡಿಹೋದರು ಮಾತ್ರವಲ್ಲ, ಇಲ್ಲಿಯೇ ಉಳಿದು ಬಿಟ್ಟರು. ಹೀಗೆ ಉಳಿದ ಅಧಿಕಾರಿಗಳು ಮತ್ತು ಸಣ್ಣಪುಟ್ಟ ಸೈನಿಕರು ತಮ್ಮದೇ ಸ್ವಂತ ಅಸ್ತಿತ್ವವನ್ನು ತುಘಲಕ್ ವಿರುದ್ಧದ ದಂಗೆಯ ಸಂದರ್ಭದಲ್ಲಿ ಕಂಡುಕೊಂಡರು.

ತುಘಲಕ್ ಸಾಮ್ರಾಜ್ಯದ ಕುಸಿತದ ಪ್ರತಿಕ್ರಿಯೆಯಾಗಿಯೇ ಹಂಪಿಯಲ್ಲಿ ವಿಜಯನಗರ ಸ್ಥಾಪನೆ ಆಯಿತು. ಅದಾದ ಕೆಲವೇ ವರ್ಷಗಳಲ್ಲಿ ಮುಸ್ಲಿಂ ಸರದಾರರು ಕೂಡ ದೆಹಲಿಯಿಂದ ಸ್ವಾತಂತ್ರ್ಯ ಪಡೆಯುವ ಕನಸು ಕಂಡರು. ಹೀಗೆ ಕಂಡ ಕನಸು ದೌಲತಾಬಾದ್‌ನಲ್ಲಿ ಬಹಮನಿ ಸಾಮ್ರಾಜ್ಯದ ಮೊದಲ ಅರಸು ಹಸನ್ ಗಂಗು ಬಹಮನ್ ಶಹಾ ಅಧಿಕಾರದ ಗದ್ದುಗೆ ಏರಲು ಸಾಧ್ಯವಾಯಿತು. ಆಗ ಹಸನ್‌ಗಂಗು ಈಗಿನ ಗುಲ್ಬರ್ಗ ಜಿಲ್ಲೆಯ ಶಹಾಪುರ ತಾಲ್ಲೂಕಿನ ಸಗರ ಪ್ರಾಂತ್ಯದ ಆಡಳಿತಾಧಿಕಾರಿ ಆಗಿದ್ದ. ತುಘಲಕ್ ವಿರುದ್ದ ಬಂಡೆದ್ದ 60 ಜನ ಸರದಾರರು ಹಸನ್‌ಗಂಗುವನ್ನು ತಮ್ಮ ನಾಯಕನನ್ನಾಗಿ ಆಯ್ಕೆ ಮಾಡಿದರು. ಹೀಗೆ ಆಯಾಚಿತವಾಗಿ ಬಂದ ಅಧಿಕಾರವನ್ನು ಸ್ವೀಕರಿಸಿದ ಹಸನ್‌ಗಂಗೂ ತನಗೆ ಚಿರಪರಿಚಿತ ಇರುವ ಗುಲ್ಬರ್ಗ ನಗರವನ್ನು ರಾಜಧಾನಿಯನ್ನಾಗಿ

ಮಾಡಿಕೊಳ್ಳಲು ನಿರ್ಧರಿಸಿದ. ಹೀಗೆ ಮುಸ್ಲಿಂ ಅರಸರಿಗೆ ಕೇಂದ್ರವಾಗಿದ್ದ ದೌಲತಾಬಾದ್‌ನ ಕೇಂದ್ರಸ್ಥಾನ ಗುಲ್ಬರ್ಗಕ್ಕೆ ವರ್ಗಾವಣೆಗೊಂಡಿತು. ಹೀಗೆ ಗುಲ್ಬರ್ಗದಲ್ಲಿ ಉಳಿದವರು ಮತ್ತು ನಂತರ ಬೀದರ್‌ಗೆ ರಾಜಧಾನಿ ಸ್ಥಳಾಂತರ ಆದ ನಂತರ ಬಂದವರನ್ನು 'ಹಳಬರು' ಅಥವಾ 'ಮೊದಲು ಬಂದವರು' ಎಂದು ಕರೆಯಲಾಗುತ್ತದೆ. ಇವರಲ್ಲಿ ಕೆಲವರು ಮುಸ್ಲಿಂ ಧರ್ಮಕ್ಕೆ ಮತಾಂತರ ಹೊಂದಿದ ಸ್ಥಳೀಯರು ಬಹುಸಂಖ್ಯೆಯಲ್ಲಿದ್ದರು. ಅದಕ್ಕಾಗಿಯೇ ಈ ಗುಂಪಿನ ಜನರನ್ನು 'ದಖನಿಗಳು' ಎಂದು ಕೂಡ ಗುರುತಿಸಲಾಗುತ್ತಿದೆ.

ಬಹಮನಿ ಅರಸರ ಪೈಕಿ ಎಂಟನೆಯವನಾದ ಫಿರೋಜ್ ಶಹಾನ ಕಾಲದಲ್ಲಿ ಸಾಮ್ರಾಜ್ಯವು ಸಮೃದ್ಧವಾಗಿ ಬೆಳೆದು ನಿಂತಿತ್ತು. ಅರಮನೆಯ ಒಳಗಿನ ಪಿತೂರಿಗಳು ಇದ್ದವಾದರೂ ತನ್ನ ಪ್ರಬಲ ಸೈನ್ಯದ ಬೆಂಬಲದೊಂದಿಗೆ ದಖನ್ ಪ್ರದೇಶದ ಬಹುಪಾಲ ನೆಲವನ್ನು ಫಿರೋಜ್ ತನ್ನ ಆಳ್ವಿಕೆಗೆ ಸೇರಿಸಿಕೊಂಡಿದ್ದ. ಕಲೆ, ಸಂಗೀತ, ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ್ದ ಸುಸಂಸ್ಕೃತನಾಗಿದ್ದ ಫಿರೋಜ್ ಅದಕ್ಕಾಗಿ ಪರ್ಷಿಯಾದ ವಿದ್ವಾಂಸರು, ಕವಿಗಳು, ಕಲಾವಿದರು, ಸಂಗೀತಗಾರರನ್ನು ಆಹ್ವಾನಿಸಿದ. ಹಾಗೆಯೇ ಸಮೃದ್ಧವಾಗಲು ಆರಂಭಿಸಿದ ನಾಡಿನ ದೊರೆಯಾಗಿದ್ದ ಫಿರೋಜ್ ಮಧ್ಯಪ್ರಾಚ್ಯದ ದೇಶಗಳ ಜೊತೆಗಿನ ವ್ಯಾಪಾರ- ವಹಿವಾಟಿನ ಮೂಲಕ ಹೊಸಲೋಕ ತೆರೆದಿಟ್ಟ. ಹೀಗೆ ಫಿರೋಜ್‌ನ ಆಹ್ವಾನದ ಮೇರೆಗೆ ಪರ್ಷಿಯಾದಿಂದ ಸಾವಿರಾರು ಜನ ಆಗಮಿಸಿದರು. ಫಿರೋಜ್‌ನ ಸಹೋದರ ಅಹ್ಮದ್ ಶಹಾ ಅಲಿ ವಲಿಯ ಅವಧಿಯಲ್ಲಿ ಹೀಗೆ ಪರ್ಷಿಯಾದಿಂದ ಬರುವವರ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಯಿತು. ಅದಕ್ಕೆ ಅರಸನ ಬಯಕೆ ಇಂಗಿತಗಳೇ ಪ್ರಮುಖ ಕಾರಣವಾಗಿದ್ದವು. ಕಾನ್‌ಸ್ಟಾಂಟಿನೋಪಲ್ ನಗರವನ್ನು ಟರ್ಕಿಗಳು ವಶಪಡಿಸಿಕೊಂಡದ್ದರಿಂದ ಭಾರತಕ್ಕೆ ಬರುವ ನೆಲಮಾರ್ಗ ಮುಚ್ಚಿಹೋಗಿತ್ತು. ಸಮುದ್ರದಲ್ಲಿ ದೋಣಿಗಳನ್ನು ಪ್ರಯಾಣ ಮಾಡಿ ಭಾರತಕ್ಕೆ ಬರುವ ಅನಿವಾರ್ಯತೆ ಇತ್ತು. ದೋಣಿಗಳ ಮೂಲಕ ಭಾರತದ ಪಶ್ಚಿಮದ ಕರಾವಳಿಗೆ ಬಂದ ಫಾರ್ಸಿಗಳು ತಮ್ಮ ಸಾಹಸ, ವ್ಯಾಪಾರಿ ಮನೋಭಾವ, ಬುದ್ಧಿಮತ್ತೆ, ಕಲಾಪ್ರೌಢಿಮೆಯಿಂದ ಬಹಮನಿ ಸಂಸ್ಥಾನದಲ್ಲಿ ಮಹತ್ವದ ಸ್ಥಾನ ಪಡೆಯಲು ಆರಂಭಿಸಿದರು. ಅವರನ್ನು 'ಹೊಸಬರು' ಅಥವಾ 'ಹೊಸದಾಗಿ ಬಂದವರು' ಎಂದು ಕರೆಯಲಾಗುತ್ತದೆ. ಬಹುತೇಕ ಶಿಯಾ ನಂಬಿಕೆಗಳಿದ್ದ ಇವರನ್ನು 'ಅಫಾಕ್ವಿ' ಎಂದು ಕೂಡ ಗುರುತಿಸಲಾಗುತ್ತದೆ. ಸುನ್ನಿ ಮತ್ತು ಶಿಯಾಗಳ ನಡುವಿನ ಭಿನ್ನಭಿಪ್ರಾಯವು ಬೀದರ್‌ನಲ್ಲಿ 'ದಖನಿ- ಅಫಾಕ್ವಿ'ಗಳನ ನಡುವಿನ ಶೀತಲ ಸಮರಕ್ಕೂ ಕಾರಣವಾಯಿತು. ಬೀದರ್‌ನಲ್ಲಿದ್ದ ಅಸಮಾಧಾನಕ್ಕೆ ಧಾರ್ಮಿಕ ಕಾರಣಗಳಿಗಿಂತ

ಸ್ಥಾನಮಾನ ಮತ್ತು ಪ್ರತಿಷ್ಠೆಗಳೇ ಪ್ರಮುಖವಾಗಿದ್ದವು. ಹೊಸಬರಿಗೆ ಹೆಚ್ಚಿನ ಆದ್ಯತೆ ದೊರೆಯಲು ಆರಂಭಿಸಿದ್ದು ಮೊದಲಿನಿಂದಲೂ ಇಲ್ಲಿಯೇ ಇದ್ದ ಹಳಬರ ಅಸಮಾಧಾನಕ್ಕೆ ಕಾರಣವಾಯಿತು. ಅಲ್ಲಾವುದ್ದೀನ್ ಶಹಾ ಬಹಮನಿಯ ಕಾಲದಲ್ಲಿ ಈ ಶೀತಲ ಸಮರ ತಾರಕಕ್ಕೆ ಏರಿತು. ಎರಡೂ ಗುಂಪುಗಳನ್ನು ಪ್ರತಿನಿಧಿಸುವ ಜನ ಪರಸ್ಪರ ಹೊಂದಿಕೊಂಡು ಜೊತೆಯಲ್ಲಿ ಇರಲಾರರು ಎಂದು ಭಾವಿಸಿದ ಅರಸ ಅಲ್ಲಾವುದ್ದೀನ್ ತನ್ನ ಆಸ್ಥಾನದಲ್ಲಿ ದಖನಿಗಳು ಎಡಗಡೆಯಲ್ಲಿಯೂ ಅಫಾಕ್ವಿಗಳು ಬಲಗಡೆಯಲ್ಲಿ ಕುಳಿತುಕೊಳ್ಳುವಂತಹ ವ್ಯವಸ್ಥೆ ಮಾಡಿದ. ಅಷ್ಟು ಮಾತ್ರವಲ್ಲದೇ, ಸೈನ್ಯ ರೂಪಿಸುವಾಗ ಕೂಡ ಹಳಬರು ಎಡಗಡೆಗೆ ಮತ್ತು ಹೊಸಬರು ಬಲಗಡೆಗೆ ನಿಲ್ಲುವಂತೆ ಸೂಚಿಸಿದ. ಎಡಗಡೆ ಕಡಿಮೆಯದು ಎಂದು ಭಾವಿಸಿದ ದಖನಿಗಳು ಹೊಸಬರ ವಿರುದ್ಧ ಕತ್ತಿ ಮಸೆಯಲು ಆರಂಭಿಸಿದರು.

ಈ ಭಿನ್ನಾಭಿಪ್ರಾಯಕ್ಕೆ ಧಾರ್ಮಿಕ ಕಾರಣಗಳೂ ಇದ್ದವು. ಸಾಮಾನ್ಯವಾಗಿ ದಖನಿಗಳು ಸುನ್ನಿ ಪಂಗಡಕ್ಕೆ ಸೇರಿದವರಾಗಿದ್ದರು. ಹೊಸದಾಗಿ ನೇರವಾಗಿ ಪರ್ಷಿಯಾ ಮೂಲಕ ದಖನ್‌ಗೆ ಬಂದ ಅಫಾಕಿಗಳು ಶಿಯಾ ಪಂಗಡಕ್ಕೆ ಸೇರಿದ್ದರು. ಶಿಯಾ-ಸುನ್ನಿಗಳ ಜಗಳ ದಖನ್‌ನಲ್ಲಿ ದಖನಿ-ಅಫಾಕಿ ರೂಪದಲ್ಲಿ ಬೆಳೆದು ನಿಂತಿತು. ಒಂದೇ ಸೈನ್ಯದಲ್ಲಿನ ಸೈನಿಕರು ಪರಸ್ಪರ ಕಾದಾಡುವಂತೆ, ತನ್ನದೇ ಸೈನ್ಯದ ಸೈನಿಕರ ಮಾರಣ ಹೋಮ ನಡೆಯುವಾಗ ಸಂಬಂಧವಿಲ್ಲದಂತೆ ನಿರ್ಲಿಪ್ತನಾಗುವಂತೆ ಮಾಡಿತು. ಈ ಅಫಾಕಿ-ದಖನಿ ಜಗಳದ ಅತ್ಯಂತ ಕೆಟ್ಟ ಪರಿಣಾಮ ಎಂದರೆ ಪ್ರಧಾನಿಯಾಗಿದ್ದ ಮಹಮೂದ್ ಗಾವಾನ್‌ನ ಹತ್ಯೆ. ಜಾಲಿಂ ಎಂದು ಇತಿಹಾಸಕಾರರಿಂದ ಟೀಕೆಗೆ ಒಳಗಾಗಿದ್ದರೂ ಹುಮಾಯೂನ್ ಶಹಾ ಈ ಎರಡು ಪಂಗಡಗಳ ನಡುವಿನ ಭಿನ್ನಾಭಿಪ್ರಾಯ ಕಡಿಮೆ ಮಾಡಲು ಪ್ರಯತ್ನಿಸಿದ ಆದರೆ ಅದು ಬೆಸೆಯಲಾಗದಷ್ಟು ಬೇರ್ಪಟ್ಟಿತ್ತು. ಪ್ರಧಾನಿ ಮಹಮೂದ್ ಗಾವಾನ್ ಕೂಡ ಅಫಾಕಿ-ದಖನಿಗಳ ನಡುವಿನ ಅಸಮಾಧಾನ ಕಡಿಮೆ ಮಾಡುವುದಕ್ಕಾಗಿ ಎರಡೂ ಪಂಗಡಗಳಿಗೆ ಸಮಾನ ಅವಕಾಶ ಕಲ್ಪಿಸಿದ. ಪ್ರಾಂತ್ಯಗಳ ವಿಂಗಡಣೆ ಮಾಡಿದ ಸಂದರ್ಭದಲ್ಲಿ ದಖನಿ ಪ್ರಮುಖರಿಗೂ ಸ್ಥಾನ ನೀಡಿದ್ದ. ಎಂಟು ಪ್ರಾಂತ್ಯಗಳ ಪೈಕಿ ಐವರು ಅಫಾಕಿಗಳಾಗಿದ್ದು ಅಸಮಾಧಾನಕ್ಕೆ ಕಾರಣವಾಯಿತು. ಉಭಯ ಬಣಗಳು ಪರಸ್ಪರ ಕಿತ್ತಾಡುವುದಕ್ಕಾಗಿ ಕಾರಣಗಳನ್ನು ಹುಡುಕಾಡುತ್ತಿದ್ದರು. ಆದ್ದರಿಂದ ಸಮಸ್ಯೆ ಬಗೆ ಹರಿಸುವದಕ್ಕೆ ಯತ್ನಿಸಿದವರೇ ಅದಕ್ಕೆ ಬಲಿ ಆಗಬೇಕಾಯಿತು.

ಎರಡನೇ ಅಲಾವುದ್ದೀನ್‌ನ ಕಾಲದಲ್ಲಿ ಅಫಾಕಿ-ದಖನಿಗಳ ಜಗಳ ತಾರಕಕ್ಕೆ ಏರಿತು. ಚಾಕಣದಲ್ಲಿ ವಿರೋಧಿ ಸೈನಿಕರು ಅಫಾಕಿಗಳ ಪಂಗಡದ ಮುಖ್ಯಸ್ಥ

ಮತ್ತು ಆಗಿನ ಪ್ರಧಾನಿಯಾಗಿದ್ದ ಖಲಾಫ್ ಹಸನ್ ಮತ್ತವರ ಬೆಂಬಲಿಗರ ಮಾರಣಹೋಮ ನಡೆಸುತ್ತಿರುವಾಗ ದಖನಿಗಳು ಅವರ ಸಹಾಯಕ್ಕೆ ಧಾವಿಸಲಿಲ್ಲ ಕೂಡ. ಅಷ್ಟೇ ಅಲ್ಲ, ತಪ್ಪಿಸಿಕೊಂಡು ಬಂದವರನ್ನು ಹಿಂಸೆಗೆ ಗುರಿ ಮಾಡಿದರು. ಅಲ್ಲಿಂದ ತಪ್ಪಿಸಿಕೊಂಡ ಒಂದಿಬ್ಬರು ಅರಸನಿಗೆ ಮಾಹಿತಿ ಒದಗಿಸಿದರು. ಇದರಿಂದ ಕೋಪಗೊಂಡ ಅಲಾವುದ್ದೀನ್ ದಖನಿ ಪಡೆಯ ಮುಖ್ಯಸ್ಥರ ಮೇಲೆ ಶಿಸ್ತುಕ್ರಮ ತೆಗೆದುಕೊಂಡ. ಹೀಗೆ ಬೆಳೆಯುತ್ತ ಹೋದ ಅಫಾಕಿ-ದಖನಿಗಳ ಕದನವು ಇಡೀ ಸಾಮ್ರಾಜ್ಯ ಕುಸಿಯುವುದಕ್ಕೇ ಕಾರಣವಾಯಿತು.

ಬಹಮನಿ ಅರಸರ ಕಾಲದಲ್ಲಿ ಹಿಂದು-ಮುಸ್ಲಿಂ ಕದನ ನಡೆದ ಉದಾಹರಣೆಗಳಿಲ್ಲ. ಸಾಮ್ರಾಜ್ಯ ವಿಸ್ತರಣೆಯ ಸಂದರ್ಭದಲ್ಲಿ ಕೊಂಕಣ ಮತ್ತಿತರ ನೆರೆಯ ಪ್ರದೇಶಗಳಲ್ಲಿ ಬಹಮನಿಗಳು ನಡೆಸಿದ ದಾಳಿಯ ಸಂದರ್ಭದಲ್ಲಿ ನಡೆದ ಹತ್ಯೆಗಳನ್ನು ಮುಸ್ಲಿಂ ಅರಸರ ಹಿಂದುಗಳ ಮೇಲಿನ ದಾಳಿ ಎಂದು ವ್ಯಾಖ್ಯಾನಿಸುವುದು ಸರಿಯಲ್ಲ. ಬಹಮನಿ ಅರಸರ ಈ ದಾಳಿಯ ಸಂದರ್ಭದಲ್ಲಿ ಅವರಿಗೆ ಬೆಂಗಾವಲಾಗಿ ನಿಂತವರು ಹಿಂದು ಸಾಮಂತರು. ಬಹಮನಿ ಅವಧಿಯಲ್ಲಿ ಸೂಫಿ ಸಂತರು ಶಾಂತಿ-ಸಹಬಾಳ್ವೆ ಸುಗಮವಾಗುವಂತೆ ನೋಡಿಕೊಂಡಿದ್ದರು. ಅಲ್ಲದೇ ಬ್ರಿಟಿಷ್ ಅವಧಿಯಲ್ಲಿ ಮಾಡಿದಂತೆ ಭಾರತೀಯ ಹಿಂದೂ ಸಮಾಜದ ಸುಧಾರಣೆಗೂ ಮುಸ್ಲಿಂ ದೊರೆಗಳು ಪ್ರಯತ್ನಿಸಲಿಲ್ಲ. ಜಾತಿ ವ್ಯವಸ್ಥೆಯಿಂದ ಸಂಕೀರ್ಣವಾಗಿದ್ದ ಹಿಂದೂ ಸಮಾಜ ಸುಧಾರಣೆಗೆ ಕೈಹಾಕುವುದು ಜೇನುಗೂಡಿಗೆ ಕಲ್ಲು ಎಸೆದಂತೆ ಎಂದು ಮುಸ್ಲಿಂ ದೊರೆಗಳು ಭಾವಿಸಿರಬಹುದು. ಇರುವ ವ್ಯವಸ್ಥೆಯನ್ನೇ ಮುಂದುವರೆಸಿಕೊಂಡು ಹೋಗುವ ನಿರ್ಧಾರ ತಳೆದರು. ಮೇಲಿನ ಹಂತದಲ್ಲಿ ಮುಸ್ಲಿಂ ಪ್ರಧಾನಿ, ಆಡಳಿತಗಾರರೇ ಹೆಚ್ಚಾಗಿದ್ದರೂ ಕೆಳಗಿನ ಹಂತದಲ್ಲಿ ಅಂದರೆ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಬಹುತೇಕ ಆಡಳಿತ ವ್ಯವಸ್ಥೆಯನ್ನು ಹಿಂದು ಜಹಾಗೀರದಾರರೇ ನೋಡಿಕೊಳ್ಳುತ್ತಿದ್ದರು. ಅಷ್ಟೂರಿನಲ್ಲಿ ಇರುವ ಅಹ್ಮದ್‌ನ ಸಮಾಧಿಗೆ ಹಿಂದು-ಮುಸ್ಲಿಂರ ಸಮಾನ ಗೌರವ ನೀಡುವುದು, ಸೂಫಿ ಸಂತ ಗೇಸು ದರಾಜ್ ಅವರಿಗೆ ಎರಡೂ ಸಮುದಾಯದ ಜನ ಶ್ರದ್ಧೆಯಿಂದ ನಡೆದುಕೊಳ್ಳುತ್ತಾರೆ.

ಫಾರಸಿಗಳು ವ್ಯಾಪಕವಾಗಿ ದಖನ್‌ಗೆ ವಲಸೆ ಬಂದದ್ದರಿಂದ ಈ ಪ್ರದೇಶದಲ್ಲಿ ಶಿಯಾ ಮುಸ್ಲಿಂರು ಹೆಚ್ಚು ಸಂಖ್ಯೆಯಲ್ಲಿ ಕಾಣಿಸಿಕೊಂಡರು. ಅದರ ಫಲವಾಗಿ ಮೊಹರಂ, ಅಲಾವಿ ಪದ್ಯಗಳಿಗೆ ಆದ್ಯತೆ ದೊರೆಯಿತು. ಮುಸ್ಲಿಂರಿಲ್ಲದ ಊರುಗಳಲ್ಲಿಯೂ ಮೊಹರಂ ಆಚರಣೆ ಸಾಮಾನ್ಯವಾಯಿತು.

# 4. ಇಂಡೋ–ಸರಾಸೆನಿಕ್ –ಬಹಮನಿ ವಾಸ್ತುಶಿಲ್ಪ

ಬಹಮನಿ ಅರಸರ ಕಾಲದಲ್ಲಿ ನಿರ್ಮಾಣ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಬಲುದೊಡ್ಡ ಬದಲಾವಣೆಗೆ ಈ ಯುಗ ಸಾಕ್ಷಿಯಾಯಿತು. ಕಮಾನುಗಳ ಅಳವಡಿಕೆ, ಗಚ್ಚು ಬಳಸುವ ವಿಧಾನಗಳು ಹೆಚ್ಚು ಕಾಲ ಬಾಳಿಕೆ ಬರುವ ಕಟ್ಟಡ ನಿರ್ಮಾಣ ರೀತಿಗೆ ಕಾರಣವಾದವು. ಈ ಕಾಲದಲ್ಲಿ ನಿರ್ಮಾಣವಾದ ಕೋಟೆ, ಸ್ಮಾರಕ, ಮಸೀದಿ, ಸಮಾಧಿಗಳು, ಸೂಕ್ಷ್ಮ ಪ್ರತಿರೂಪದ ಗಾರೆಚಿತ್ರಗಳು ಅಧ್ಯಯನ ಯೋಗ್ಯವಾಗಿವೆ.

ದಖನಿ ಸ್ಮಾರಕಗಳು ಸಾಮಾನ್ಯ ಭಾರತದ ಮುಸ್ಲಿಮ್ ವಾಸ್ತುಶಿಲ್ಪದ ಕೇಂದ್ರಗಳಾದ ದೆಹಲಿ, ಮಾಂಡು, ಗುಜರಾತ್ ಮತ್ತು ಮುಲ್ತಾನ್‌ನ ಸ್ಮಾರಕಗಳನ್ನು ಹೋಲುತ್ತವೆಯಾದರೂ ಕೆಲವು ಕಟ್ಟಡಗಳು ಹಾಗೂ ಲಿಪಿಗಳು ನೇರವಾಗಿ ಪರ್ಶಿಯಾದ ಕಲಾ ಪರಂಪರೆಯಿಂದ 'ಆಮದು' ಮಾಡಿಕೊಂಡವುಗಳಾಗಿವೆ. ಎದ್ದು ಕಾಣುವ ಪರ್ಶಿಯಾದ ಪ್ರಭಾವಗಳೆಂದರೆ ಕ್ಯಾಲಿಗ್ರಫಿ. ಅಲಂಕರಣ ವಿಧಾನ, ಹೊಳೆಯುವಂತೆ ಮಾಡುವ ಕಲಾತ್ಮಕ ತಂತ್ರ. ರಾಜಕೀಯ ವಲಸೆ ಬಂದವರಲ್ಲಿ ಕೆಲವರು ಈ ತಂತ್ರಗಳಲ್ಲಿ ನುರಿತವರಾಗಿದ್ದದು ಹೊಸ ಕಲಾಪರಂಪರೆಯ ಸೃಷ್ಟಿಗೆ ಕಾರಣವಾಯಿತು.

ಇರಾನ್‌ನಿಂದ ನೇರವಾಗಿ ಆಮದು ತಂದವರಂತೆ ಇರುವ ಗುಲ್ಬರ್ಗದ ಜಾಮಿ ಮಸೀದಿ, ಬೀದರ್‌ನ ಮದರಸಾ, ತಖ್ತ್ ಎ ಕಿರ್ಮಾನಿ, ಚೌಕಂಡಿ ಮತ್ತಿತರ ಕಟ್ಟಡಗಳು ಹೊಸ ನೆಲೆಯಲ್ಲಿ ಯೋಚನೆ–ಯೋಜನೆಗೆ ತೊಡಗಿಸಿದವು. ಇರಾನ್‌ನ ನಗರಗಳಿಂದ ಪ್ರೇರಣೆ ಪಡೆದ ನಗರ ಯೋಜನೆಯು ದಕ್ಷಿಣ

ಭಾರತದಲ್ಲಿ ಬೆಳೆಯುವುದಕ್ಕೆ ಆರಂಭವಾದದ್ದು ಈ ಕಾಲಘಟ್ಟದಲ್ಲಿ. ದಖನ್ನಿನ ಆರಂಭದ ಸ್ಮಾರಕಗಳು ದೆಹಲಿಯಲ್ಲಿನ ಸ್ಮಾರಕಗಳ ಮುಂದುವರಿಕೆಗಳಾಗಿದ್ದವು. ದೌಲತಾಬಾದ್‌ನಲ್ಲಿ ನಿರ್ಮಿಸಲಾದ ಮಸೀದಿ ಅದಕ್ಕೆ ಉತ್ತಮ ಉದಾಹರಣೆ. ಗುಲ್ಬರ್ಗದಲ್ಲಿ 14ನೇ ಶತಮಾನದಲ್ಲಿ ನಿರ್ಮಾಣವಾದ ಬಹಮನಿ ಅರಸರ ಗೋರಿಗಳು ತುಘಲಕ್ ಸಮಾಧಿ ಸ್ಮಾರಕಗಳನ್ನು ಹೋಲುತ್ತವೆ. ನೆಲದಿಂದ ಏರುತ್ತಿದ್ದಂತೆ ದಪ್ಪ ಕಡಿಮೆಯಾಗುವ, ಹಿಂದಕ್ಕೆ ಓಲಿದಂತೆ ಇರುವ ಗೋಡೆಗಳು ಸಣ್ಣ ಗುಂಬಜ್‌ಗಳು ತುಘಲಕ್ ಸ್ಮಾರಕಗಳ ಪ್ರಮುಖ ಲಕ್ಷಣಗಳಾಗಿದ್ದವು. ಆರಂಭದ ಬಹಮನಿ ಅರಸರ ಗೋರಿಗಳಲ್ಲಿ ಈ ಲಕ್ಷಣಗಳು ಸಾಮಾನ್ಯವಾಗಿವೆ. ಆದರೆ, 15ನೇ ಶತಮಾನದಲ್ಲಿ ದಖನಿ ಸಂಸ್ಕೃತಿಯು ಜಗದ್ವ್ಯಾಪಕ (ಕಾಸ್ಮೊಪಾಲಿಟನ್) ಸ್ವರೂಪ ಪಡೆದುಕೊಂಡಿತು. ಅದರಲ್ಲಿಯೂ ವಿಶೇಷವಾಗಿ ಅಹ್ಮದ್ ಶಹಾ ಬಹಮನಿಯ ಕಾಲದಲ್ಲಿ ಬೀದರ್ ರಾಜಧಾನಿಯಾದ ಮೇಲೆ ಅದರ ಪ್ರಮಾಣ ವ್ಯಾಪಕವಾಗಿ ಹೆಚ್ಚಿತು.

ಬೀದರ್‌ನಲ್ಲಿ ನಿರ್ಮಿಸಲಾದ ಭವ್ಯ ಅರಮನೆಗಳು ಹಾಗೂ ಸಮಾಧಿ ಕಟ್ಟಡಗಳು ಸೇರಿದಂತೆ ಬಹುತೇಕ ಎಲ್ಲ ಸ್ಮಾರಕಗಳಲ್ಲಿ ಪರ್ಷಿಯಾದ ವಾಸ್ತುಶಿಲ್ಪದ ಪ್ರಭಾವ ಎದ್ದು ಕಾಣಿಸುತ್ತದೆ. ಶಹಾ ನಿಯಾಮತ್ ಅಲ್ಲಾ ವಲಿ ಕಿರ್ಮಾನಿಯ ಸೂಫಿ ಪರಂಪರೆಗೆ ಸೇರಿದ ಅಹ್ಮದ್ ಶಹಾ ಕೇವಲ ಧಾರ್ಮಿಕವಾಗಿ ಮಾತ್ರವಲ್ಲದೆ ಕೌಟುಂಬಿಕ ಸಂಬಂಧವನ್ನೂ ಬೆಳೆಸಿದ್ದ. ಕಿರ್ಮಾನ್‌ನಲ್ಲಿ ನಿಯಾಮತ್ ಶಹಾನ ಸಮಾಧಿ ನಿರ್ಮಾಣಕ್ಕಾಗಿ ಹಣಕಾಸಿನ ನೆರವು ಒದಗಿಸಿದ್ದ ಅಹ್ಮದ್ ಶಹಾ ಅದಕ್ಕಾಗಿ ಅಮೂಲ್ಯ ಉಡುಗೊರೆಗಳನ್ನು ಕೂಡ ಕಳುಹಿಸಿದ್ದ. ಅಲ್ಲಿ ಕೆಲಸ ಮಾಡಿದ ಬಹುತೇಕ ಪರ್ಷಿಯಾದ ಕುಶಲಕರ್ಮಿಗಳು ದಖನ್‌ಗೆ ಬರಲು ಉತ್ಸುಕತೆ ತೋರಿಸಿದರು. ನಿಯಾಮತ್ ಶಹಾನ ನಿಧನದ ನಂತರ ಅವನ ಕುಟುಂಬದ ಸದಸ್ಯರು ಮಾತ್ರವಲ್ಲದೆ, ಬೆಂಬಲಿಗರು, ಶಿಷ್ಯರು, ಕಲಾವಿದರು, ಲೇಖಕರೂ ಬೀದರ್‌ಗೆ ವಲಸೆ ಬಂದರು. ಇದು ಬೀದರ್‌ನಲ್ಲಿ ಪರ್ಷಿಯಾ ಕಲಾಪರಂಪರೆ ಬೆಳೆಯಲು ಅನುವು ಮಾಡಿಕೊಟ್ಟಿತು.

ಬಹಮನಿ ವಾಸ್ತುಶಿಲ್ಪದ ಮೇಲೆ ಆಗಿರುವ ಪರ್ಷಿಯಾ ಶೈಲಿಯ ದಟ್ಟ ಪ್ರಭಾವವು ಉತ್ತರ ಭಾರತದ ಮುಸ್ಲಿಂ ಸ್ಮಾರಕಗಳಿಗಿಂತ ಭಿನ್ನವಾಗಿದೆ. ಬಾಹ್ಯ ಅಲಂಕರಣ ಅದರಲ್ಲಿಯೂ ವಿಶೇಷವಾಗಿ, ಸುಂದರ ಲಿಪಿ (ಕ್ಯಾಲಿಗ್ರಫಿ)ಗಳ ಬಳಕೆಯ ಮೂಲಕ ಸ್ಮಾರಕಗಳ ಹೊರಭಾಗವನ್ನು ಸಿಂಗರಿಸುವ ರೀತಿ ವಿಶಿಷ್ಟವಾಗಿದೆ. ಪರ್ಷಿಯಾ ವಾಸ್ತುಶಿಲ್ಪದ ಪ್ರಮುಖ ಲಕ್ಷಣವಾಗಿರುವ ಹೊರನೋಟಕ್ಕೆ ಗಮನ ಸೆಳೆಯುವಂತೆ ಸುಂದರವಾಗಿ ಅಲಂಕರಿಸುವ ರೀತಿಯು

ಬೀದರ್‌ನ ಸ್ಮಾರಕಗಳಲ್ಲಿ ಎದ್ದು ಕಾಣಿಸುತ್ತದೆ. ಪರ್ಷಿಯಾದ ಖಜ್ವಿನ್‌ನ ನುರಿತ ವಾಸ್ತುಶಿಲ್ಪಿ ರಫಿಯ ನೇತೃತ್ವದಲ್ಲಿ ನಿರ್ಮಾಣವಾದ (1367) ಗುಲ್ಬರ್ಗದ ಜಾಮಿ ಮಸೀದಿಯು ಪರ್ಷಿಯಾ ವಾಸ್ತುಶಿಲ್ಪವು ದಖನ್‌ನಲ್ಲಿ ದಾಖಲಾದ ಅನನ್ಯ ಉದಾಹರಣೆಯಾಗಿದೆ. ಹಾಗೆಯೇ ಗುಲ್ಬರ್ಗದ ಗೇಸು ದರಾಜ್‌ರ ಬೃಹತ್ ಸಮಾಧಿಯು ಬಹಮನಿ ವಾಸ್ತುಶಿಲ್ಪವನ್ನು ಪರ್ಷಿಯಾ ಕಲೆಯು ಪ್ರಭಾವಿಸಿದ ರೀತಿಯ ಅತ್ಯುತ್ತಮ ಉದಾಹರಣೆ. ಹಾಗೆಯೇ ಗುಲ್ಬರ್ಗ ಮತ್ತು ಬೀದರ್‌ನ ಅಷ್ಟೂರಿನಲ್ಲಿ ಇರುವ ಬಹಮನಿ ದೊರೆಗಳು ಸಮಾಧಿ ಕಟ್ಟಡಗಳಲ್ಲಿ ಪರ್ಷಿಯಾದ ದಟ್ಟ ಪ್ರಭಾವವನ್ನು ಗುರುತಿಸಬಹುದು. ಗುಮ್ಮಟಗಳ ಹಾಗೂ ಕಮಾನುಗಳ ನಿರ್ಮಾಣ, ಬಣ್ಣದ ಟೈಲುಗಳ ಬಳಕೆ, ಸುಂದರ ಲಿಪಿಗಳ ಉಪಯೋಗ ಹಾಗೂ ಪ್ಲಾಸ್ಟರ್ ಅಲಂಕರಣ ಚಿತ್ರಗಳು ಪರ್ಷಿಯಾದ ವಾಸ್ತುಶಿಲ್ಪದ ನೇರ ಪ್ರಭಾವವನ್ನು ಸೂಚಿಸುತ್ತವೆ. ಪರ್ಷಿಯಾದ ರಾಜಲಾಂಛನ ಆಗಿದ್ದ ಉದಯಿಸುತ್ತಿರುವ ಸೂರ್ಯನ ಜೊತೆಗೆ ಸಿಂಹ ಇರುವ ಚಿತ್ರವನ್ನು ಬೀದರ್ ತಖ್ತ್‌ಮಹಲ್‌ನಲ್ಲಿ ಸ್ಥಳೀಯ ಬದಲಾವಣೆಗಳೊಂದಿಗೆ ದಾಖಲಿಸಲಾಗಿದೆ. ದಖನ್‌ನಲ್ಲಿ ಸಿಂಹಗಳು ಇಲ್ಲದ ಕಾರಣದಿಂದಾಗಿ 'ಉದಯಿಸುತ್ತಿರುವ ಸೂರ್ಯನ ಜೊತೆಗೆ ಹುಲಿ' ಇರುವಂತಹ ರಾಜಲಾಂಛನ ಸಿದ್ಧಪಡಿಸಲಾಗಿದೆ.

'ಉತ್ತರ ಭಾರತದ ಸಮಕಾಲೀನ ಕಟ್ಟಡಗಳ ಮೇಲೆ ಆಗಿರುವ ಪರ್ಷಿಯಾದ ಪ್ರಭಾವಕ್ಕಿಂತ ದಖನ್ ವಾಸ್ತುಶಿಲ್ಪದ ಬೆಳವಣಿಗೆಯಲ್ಲಿ ಪರ್ಷಿಯಾದ ಪ್ರಭಾವ ಹೆಚ್ಚು ದಟ್ಟವಾಗಿದೆ ಮತ್ತು ಭಿನ್ನವಾಗಿದೆ' ಎಂದು ಗುಲಾಂ ಯಜ್ದಾನಿ ಅಭಿಪ್ರಾಯಪಡುತ್ತಾರೆ.

ಗುಲ್ಬರ್ಗ-ಬೀದರ್‌ಗಳಲ್ಲಿನ ಕಲೆ ವಿಶಿಷ್ಟವಾದದ್ದು. ಹೊಸ ಧರ್ಮ ಮತ್ತು ಅದರ ಸಂಸ್ಕೃತಿಯ ಜೊತೆಗೆ ಬಂದ ನೂತನ ವಿನ್ಯಾಸ ಮತ್ತು ತಂತ್ರಜ್ಞಾನಗಳು ಸ್ಥಳೀಯ ಅಂಶಗಳೊಂದಿಗೆ ಬೆರೆತು ಹೊಸ ಸಂಸ್ಕೃತಿ ನಿರ್ಮಾಣಕ್ಕೆ ಕಾರಣವಾದವು. ಹೊರಗಿನಿಂದ ಬಂದ ಮುಸ್ಲಿಂ ತಂತ್ರಜ್ಞರು ರೂಪಿಸಿದ ಕಟ್ಟಡಗಳನ್ನು ನಿರ್ಮಿಸುವ ಹಂತದಲ್ಲಿ ಸ್ಥಳೀಯ ಕುಶಲಕರ್ಮಿಗಳನ್ನು ಬಳಸಿಕೊಂಡಿದ್ದರಿಂದ ಎರಡೂ ಪರಸ್ಪರ ಬೆರೆತು ಹೊಸ ಮಾದರಿ ಸೃಷ್ಟಿಯಾಯಿತು. ಅದನ್ನೇ ಇಂಡೋ-ಸಾರಸೆನಿಕ್ ಎಂದು ಕರೆಯುತ್ತಾರೆ.

ಮೂಲತಃ ಇಸ್ಲಾಮಿಕ್ ವಾಸ್ತುಶಿಲ್ಪವು ವಸ್ತುನಿಷ್ಠವಾದದ್ದು. ಮಸೀದಿಗಳ ನಿರ್ಮಾಣದಲ್ಲಿ ಅದನ್ನು ಗಮನಿಸಬಹುದು. ಮಸೀದಿಯ ಮೂಲ ವಿನ್ಯಾಸವು ಜಗತ್ತಿನಾದ್ಯಂತ ಒಂದೇ ಆಗಿದೆ. ಕಮಾನು, ಗುಮ್ಮಟ, ಮಿನಾರು, ಮಿಹ್ರಾಬ್‌ಗಳು

ಎಲ್ಲ ಕಡೆ ಒಂದೇ ರೀತಿ ಇರುತ್ತವೆ. ಆದರೆ, ಅವುಗಳಿಗೆ ಬಳಕೆಯಾದ ವಸ್ತುಗಳು ಮತ್ತು ವಿಧಾನ ಭಿನ್ನವಾಗಿರುತ್ತವೆ.

ಗುಲ್ಬರ್ಗದ ಕೋಟೆಯಲ್ಲಿ ಇರುವ ಜಾಮಿ ಮಸೀದಿಯನ್ನು ಬಡಾ ಮಸೀದಿ ಎಂದು ಕರೆಯಲಾಗುತ್ತದೆ. ಫಾರಸಿ ತಂತ್ರಜ್ಞಾನ ಬಳಸಿ ನಿರ್ಮಿಸಲಾದ ಭಾರತದ ಮೊದಲ ಕಟ್ಟಡ ಎಂದು ಯಜ್ದಾನಿ ಅಭಿಪ್ರಾಯಪಡುತ್ತಾರೆ. ಈ ಮಸೀದಿಯಲ್ಲಿ ಬಳಸಲಾದ ಕಮಾನುಗಳನ್ನು ಪಾಯಿಂಟೆಡ್ ಆರ್ಚ್ ಎಂದು ಕರೆಯಲಾಗುತ್ತದೆ. ಓಜೀ ಕಮಾನು, ,” ಆಕಾರದ ತಿರುವುಗಳನ್ನ ಅಗ್ರದಲ್ಲಿ ಸೇರಿಸಿ ಮಾಡಿದ (ಚಾವಣಿಯ) ಕಮಾನು. ಈ ಕಮಾನುಗಳು ರೋಮ್‌ನಿಂದ ಪರ್ಷಿಯಾದ ಮೂಲಕ ಭಾರತಕ್ಕೆ ಬಂದವು. ಅವು ಮೊದಲ ಬಾರಿಗೆ ದಾಖಲಾಗಿದ್ದು ಈ ಮಸೀದಿಯಲ್ಲಿ. ‘ಬಹಮನಿ ಕಮಾನು’ ಎಂದು ಹರೂನ್‌ಖಾನ್ ಶೇರ್ವಾನಿ ಅವರು ಗುರುತಿಸಿರುವ ಈ ಕಮಾನುಗಳು ನಂತರದಲ್ಲಿ ನಿರ್ಮಾಣವಾದ ದಖನ್‌ನ ಎಲ್ಲ ಕಟ್ಟಡಗಳಲ್ಲಿಯೂ ನೋಡಸಿಗುತ್ತವೆ. ಬಹಮನಿ ಸ್ಮಾರಕಗಳಲ್ಲಿ ಬಳಕೆಯಾದ ಈ ಕಮಾನುಗಳು ನಂತರದ ದಿನಗಳಲ್ಲಿ ವಿಜಯನಗರದ ಅರಸರು ನಿರ್ಮಿಸಿದ ಕಟ್ಟಡಗಳಲ್ಲಿಯೂ ಕಾಣಿಸಿದವು. ಬಹಮನಿ ನಂತರದ ಸಾಮ್ರಾಜ್ಯಗಳಾದ ಆದಿಲ್‌ಷಾಹಿ, ಕುತುಬ್‌ಷಾಹಿ ಮತ್ತು ನಿಜಾಂಷಾಹಿ ಅರಸರು ಕೂಡ ಇದೇ ಮಾದರಿಯ ಕಮಾನುಗಳನ್ನು ಬಳಸಿದರು. ಮೊಗಲ್ ಅರಸರ ಕಾಲದಲ್ಲಿ ಈ ಕಮಾನಿನ ಸುಧಾರಿತ ರೂಪಗಳು ಕಾಣಿಸಿಕೊಂಡವು.

ಆರಂಭದ ದಿನಗಳಲ್ಲಿ ಈ ಕಮಾನುಗಳನ್ನು ನಿರ್ಮಿಸುವ ತಂತ್ರಜ್ಞಾನ ಕರಗತ ಆಗಿರಲಿಲ್ಲ. ಆ ದಿನಗಳಲ್ಲಿ ಕೆತ್ತಿದ ಕಲ್ಲುಗಳನ್ನು ಜೋಡಿಸಿ ಕಮಾನು ಮಾದರಿಯಲ್ಲಿ ಕಾಣಿಸುವಂತೆ ಮಾಡಲಾಗುತ್ತಿತ್ತು. ಗುಲ್ಬರ್ಗದ ಪ್ರವೇಶದ್ವಾರದಲ್ಲಿನ ಕಮಾನಿನಲ್ಲಿ ಇದನ್ನು ಸ್ಪಷ್ಟವಾಗಿ ನೋಡಬಹುದು. ನಂತರದ ದಿನಗಳಲ್ಲಿ ಅದೇ ಕೋಟೆಯಲ್ಲಿ ನಿರ್ಮಾಣವಾದ ಜಾಮಿ ಮಸೀದಿಯಲ್ಲಿ ಎತ್ತರ ಮತ್ತು ಅಗಲಗಳಲ್ಲಿ ಕಮಾನುಗಳನ್ನು ನಿರ್ಮಿಸಿ ಅದನ್ನು ಅಳವಡಿಸಿಕೊಂಡ ರೀತಿ ಗಮನಾರ್ಹವಾಗಿದೆ. ದಖನ್‌ನಲ್ಲಿ ನಿರ್ಮಾಣವಾದ ಬೃಹತ್ ಕಟ್ಟಡವಿದು. ಇಡೀ ಮಸೀದಿಯನ್ನು ಆವರಿಸಿರುವ ಛಾವಣಿಯು ಭಾರತದಲ್ಲಿ ಬೇರೆಲ್ಲೂ ಇಲ್ಲ.

ಬಹಮನಿಯ ಮೊದಲ ಅರಸರ ಗೋರಿಗಳು ತುಘಲಕ್ ಶೈಲಿಗೆ ಸೇರಿದವುಗಳಾಗಿವೆ. ಗುಲ್ಬರ್ಗ ಕೋಟೆಯ ದಕ್ಷಿಣಕ್ಕೆ ಇರುವ ಅಲಾವುದ್ದೀನ್ ಬಹಮನ್ ಶಹಾ, ಮೊದಲನೇ ಮುಹಮ್ಮದ್ ಮತ್ತು ಎರಡನೇ ಮುಹಮ್ಮದ್ ಅವರ ಗೋರಿಗಳ ಮೇಲೆ ನಿರ್ಮಿಸಲಾಗಿರುವ ಕಟ್ಟಡಗಳು ಬಹಮನಿ

ವಾಸ್ತುಶಿಲ್ಪ, ನಿರ್ಮಾಣದ ಸ್ವರೂಪ ಆರಂಭದ ದಿನಗಳಲ್ಲಿ ಹೇಗಿತ್ತು ಎಂಬುದನ್ನು ತೋರಿಸುತ್ತವೆ. ನೆಲದಿಂದ ಏರುತ್ತಿದ್ದಂತೆ ಹಿಂದಕ್ಕೆ ಓಲಿರು, ಓರೆಯಾಗಿರು, ನೆಲದಿಂದ ಏರುತ್ತಿದ್ದಂತೆ ದಪ್ಪ ಕಡಿಮೆಯಾಗುವ, ಹಿಂದಕ್ಕೆ ಓಲಿದಂತೆ ಇರುವ, ಗೊಡೆಯ ಹೊರಮುಖದ ಓರೆಯಾಗಿರುವ ಗೋಡೆಗಳು, ಅರ್ಧಗೋಲಾಕೃತಿಯ ಗುಂಬಜ್‌ಗಳು ಬಹಮನಿ ಕಲೆಯ ಶೈಶವಾವಸ್ಥೆಯನ್ನು ಬಿಂಬಿಸುತ್ತವೆ.

ಹಫ್ತ್‌ಗುಂಬಜ್ ಆವರಣದಲ್ಲಿ ಇರುವ ಕಟ್ಟಡಗಳು ಬಹಮನಿ ವಾಸ್ತುಶಿಲ್ಪದ ಬೆಳವಣಿಗೆ ಅಧ್ಯಯನ ಮಾಡುವವರಿಗೆ ತರಗತಿ ಪಾಠದಂತಿವೆ. ಆರಂಭಿಕ ಅರಸರ ತುಘಲಕ್ ಮಾದರಿಯ ಕಟ್ಟಡಗಳ ಪಕ್ಕದಲ್ಲಿಯೇ ಸುಧಾರಿತ ಪರ್ಷಿಯಾದ ಪ್ರೇರಣೆ ಇರುವ ಸ್ಮಾರಕಗಳು ಗಮನ ಸೆಳೆಯುತ್ತವೆ. ಫಿರೋಜ್ ಶಹಾ ಸಮಾಧಿಯ ಸುತ್ತಲಿನ ಅಲಂಕರಣವು ಬಹಮನಿ ಶೈಲಿಯ ಮುಂದುವರಿಕೆಯನ್ನು ಸೊಗಸಾಗಿ ಹಿಡಿದಿಟ್ಟಿದೆ. ಈ ಕಟ್ಟದಲ್ಲಿ ಬಳಸಿದ ಗುಮ್ಮಟವು ಅರ್ಧಗೋಲಾಕೃತಿಯಿಂದ ಟರ್ನಿಪ್ ರೂಪ ಪಡೆದುಕೊಂಡಿದೆ. ಬಲ್ಬ್ ಮಾದರಿ ಜಾರಿಗೆ ಬರುವ ಮುನ್ನಿನ ರೂಪ ಇದು. ಗುಮ್ಮಟ ನಿರ್ಮಿಸುವುದಕ್ಕೆ ಒಳಭಾಗದಲ್ಲಿ (ಚೌಕಕಟ್ಟಡದ ಮೇಲೆ ಗುಮ್ಮಟ ಮೊದಲಾದುವನ್ನು ಕಟ್ಟುವಾಗ ಹಾಕುವ) ಚೌಕಮೂಲೆಯ ಅಡ್ಡ ಕಟ್ಟಡ, ಅಡ್ಡಕಮಾನುಗಳನ್ನು ಬಳಸಿಕೊಳ್ಳಲಾಗಿದೆ. ಈ ಅಡ್ಡಕಮಾನುಗಳ ಬಳಕೆಯನ್ನು ಶೋಧಿಸಿದ ಹಿರಿಮೆ ಪರ್ಷಿಯಾದ ವಾಸ್ತುತಜ್ಞರಿಗೆ ಸಲ್ಲುತ್ತದೆ. ಗಣಿತದ ಅದರಲ್ಲೂ ವಿಶೇಷವಾಗಿ ಜ್ಯಾಮಿತಿಯ ಸಹಕಾರದಿಂದ ಗುಮ್ಮಟ ನಿರ್ಮಿಸಲು ಅನುಕೂಲ ಆಗುವಂತೆ ಮಾಡಲಾಗಿದೆ.

ಗುಲ್ಬರ್ಗದಿಂದ ಬಹಮನಿ ರಾಜಧಾನಿಯು ಬೀದರ್ ನಗರಕ್ಕೆ ವರ್ಗಾವಣೆ ಆದ ನಂತರ ಪರ್ಷಿಯಾದ ಪ್ರಭಾವ-ಪ್ರೇರಣೆಗಳು ತನ್ನ ವಿರಾಟ್ ರೂಪ ತೋರಿಸಿದವು. ಬೀದರ್ ಕೋಟೆಯ ಸುತ್ತ ಅಗೆದ ಮೂರು ಕಂದಕಗಳು ಕೋಟೆಗೆ ವಿಶೇಷ ರಕ್ಷಣೆ ಒದಗಿಸಿದವು. ಜಗತ್ತಿನಲ್ಲಿ ರೋಮ್ ಹೊರತು ಪಡಿಸಿದರೆ ಮೂರು ಕಂದಕಗಳು ಇರುವ ಮತ್ತೊಂದು ಕೋಟೆ ಬೀದರಿನಿದ್ದು. ಲ್ಯಾಟ್ರೈಟ್ ನೆಲವನ್ನು ಅಗೆದು, ಕಡಿದು ನಿರ್ಮಿಸಿದ ಕಂದಕಗಳಿಗೆ ಪರ್ಷಿಯಾದ ತಂತ್ರಜ್ಞಾನವೇ ಪ್ರೇರಣೆಯಾಗಿತ್ತು.

ಬೀದರ್ ಕೋಟೆಯ ಗುಂಬಜ್ ದರ್ವಾಜವು ಬಹಮನಿ ಗುಮ್ಮಟ ಮತ್ತು ಕಮಾನು ಮಾದರಿಯ ನಿರ್ಮಾಣದ ಅತ್ಯುತ್ತಮ ರೀತಿಯಾಗಿದೆ. ಭವ್ಯ ತಖ್ತ್‌ಮಹಲ್, ಸೋಲಹಾ ಕಂಭ ಮಸೀದಿ ಮತ್ತು ಇತರ ಕಟ್ಟಡಗಳಲ್ಲಿ ಗುಲ್ಬರ್ಗದಲ್ಲಿ ಆರಂಭವಾದ ಕಮಾನುಗಳೇ ಮುಂದುವರೆದಿವೆ. ಆದರೆ, ಸುಧಾರಿತ

ರೂಪದಲ್ಲಿ. ಬೀದರ್‌ನಲ್ಲಿ ಮಾತ್ರ ಓಜೀ ಆರ್ಚ್ ಮಾತ್ರವಲ್ಲದೆ 'ಸ್ಪಿಲ್ಟೆಡ್ ಆರ್ಚ್' ಕೂಡ ಕಾಣಿಸಿಕೊಂಡಿವೆ. ಅರ್ಧಗೋಲಾಕೃತಿಯ ಈ ಕಮಾನುಗಳನ್ನು ಹಜಾರ್ ಕೋಟ್ರಿಯಲ್ಲಿ ಬಳಸಲಾಗಿದೆ.

ಅಷ್ಟೂರು ಬಹಮನಿ ಅರಸರ ಗುಂಬಜ್‌ಗಳು ಫಿರೋಜ್ ಶಹಾನ ಸಮಾಧಿ ಕಟ್ಟಡದ ಮಾದರಿಯಲ್ಲಿಯೇ ಇವೆ. ಅಹ್ಮದ್ ಶಹಾ ಅಲಿಯ ಸಮಾಧಿಯ ಒಳಗಡೆ ಇರುವ ಪೇಂಟಿಂಗ್‌ಗಳು ವಿಶೇಷ. ಎರಡನೇ ಅಲಾವುದ್ದೀನ್‌ನ ಸಮಾಧಿಯ ಹೊರಗಡೆ ಬಣ್ಣದ ಟೈಲುಗಳನ್ನು ಅಳವಡಿಸಲಾಗಿದೆ. ಹಾಗೆಯೇ ಈ ಕಟ್ಟಡದ ಸುತ್ತ ಹಸಿರು ಗ್ರಾನೈಟ್‌ಗಳಲ್ಲಿನ ಆಕರ್ಷಕ ಚಿತ್ತಾರಗಳು ಪರ್ಷಿಯಾದ ಕಲಾಕೃತಿಯ ಮಾದರಿಯವುಗಳಾಗಿವೆ.

ಹಜರತ್ ಖಲೀಲುಲ್ಲಾ ಅವರ ಸಮಾಧಿ ಸ್ಥಳವೇ ಈಗಿರುವ 'ಚೌಕಂಡಿ'. 'ಚೌಕಂಡಿ' ಎಂದರೆ ನಾಲ್ಕು ಅಂತಸ್ತುಗಳ ಕಟ್ಟಡ ಎಂದರ್ಥ. ಅಷ್ಟಕೋನ ಆಕೃತಿಯಲ್ಲಿ ಇರುವ ಚೌಖಂಡಿ ವಾಸ್ತವವಾಗಿ ಕೇವಲ ಎರಡು ಅಂತಸ್ತುಗಳ ಕಟ್ಟಡ. ನೋಡುವುದಕ್ಕೆ ಕಿರೀಟದ ರೀತಿಯಲ್ಲಿ ಕಾಣಿಸುವ ಚೌಖಂಡಿಯು ದೂರದಿಂದಲೇ ನೋಡುಗನ ಗಮನ ಸೆಳೆಯುತ್ತದೆ. ಹತ್ತಿರ ಹೋದಂತೆ ಕಟ್ಟಡದ ಮೇಲೆ ಕಪ್ಪುಕಲ್ಲಿನಲ್ಲಿ ಕಲಾತ್ಮಕವಾಗಿ ಕೆತ್ತಲಾಗಿರುವ ಶಾಸನಗಳು ಕಣ್ಮನ ತಣಿಸುವಂತಿವೆ. ಬರವಣಿಗೆಯ ಲಾಲಿತ್ಯ ಮತ್ತು ಕೌಶಲ್ಯ ಎಂತಹವರನ್ನೂ ಮೋಡಿ ಮಾಡುತ್ತವೆ. ಅಷ್ಟಕೋನ ಆಕೃತಿಯ ಈ ಕಟ್ಟಡ ಗಮನ ಸೆಳೆಯುತ್ತದೆ. ತಖ್ತ್ ಎ ಕಿರ್ಮಾನಿ ಕಟ್ಟಡದಲ್ಲಿನ ಪರ್ಷಿಯಾದ ಕುಸುರಿ ಅಲಂಕರಣ ಸೊಗಸಾಗಿದೆ.

## ಮಹಮೂದ್ ಗಾವಾನ್ ಮದರಸಾ

ಬಹಮನಿ ಸಾಮ್ರಾಜ್ಯದ ಅತ್ಯಂತ ಜನಪ್ರಿಯ ವ್ಯಕ್ತಿ ಮಹಮೂದ್ ಗಾವಾನ್. ಮೂವರು ಅರಸರಿಗೆ ಪ್ರಧಾನಿಯಾಗಿದ್ದ ಮಹಮೂದ್ ಗಾವಾನ್ ತನ್ನ ಸ್ವಂತ ವೆಚ್ಚದಲ್ಲಿ ನಿರ್ಮಿಸಿದ ಮದರಸಾದ ವಾಸ್ತುಶಿಲ್ಪ, ವಿನ್ಯಾಸ ಮಹೋನ್ನತವಾದದು. ಭಾರತದಲ್ಲಿ ಅದಕ್ಕೆ ಸರಿಸಾಟಿಯಾದ ಮತ್ತೊಂದು ಸ್ಮಾರಕ ಇಲ್ಲ. ಮಧ್ಯಕಾಲೀನ ಯುಗದಲ್ಲಿ ಮಹತ್ವದ ವಿದ್ಯಾಕೇಂದ್ರ ಆಗಿದ್ದ ಈ ಮದರಸಾದ ನಿರ್ಮಾಣದಲ್ಲಿ ಕಲಾವಿದರು, ತಂತ್ರಜ್ಞರು ತೋರಿಸಿದ ಆಸಕ್ತಿ ಬೆರಗುಗೊಳಿಸುವಂತಹದ್ದು. ಕಟ್ಟಡದ ಮೇಲ್ಭಾಗದಲ್ಲಿ ನೀರಿನ ಅಂಶ ಹೋಗಿ ಶಿಥಿಲವಾಗಬಾರದು ಎನ್ನುವ ಕಾರಣದಿಂದ ಗೋಡೆಯ ತಳಭಾಗದಲ್ಲಿ ಗ್ರಾಫೈಟ್ ಶೀಟ್‌ಗಳನ್ನು ಅಳವಡಿಸಲಾಗಿದೆ.

ಮೊರಕ್ಕೊದ ಫೆಜ್ ಮತ್ತು ಸಮರ್‌ಖಂಡ್ ಮದರಸಾದ ನೀಲಿನಕ್ಷೆಯನ್ನು ಬಹುವಾಗಿ ಹೋಲುವ ಈ ಕಟ್ಟಡದ ಇಕ್ಕೆಲಗಳಲ್ಲಿಯೂ ಮಿನಾರುಗಳಿದ್ದವು. ಮೊರಾಕ್ಕೋದ ಫೆಜ್ ಮದರಸಾದಲ್ಲಿಯೂ ಮಿನಾರ್ ಇದೆ. ಬೀದರ್ ಮದರಸಾದಲ್ಲಿನ ಮಿನಾರು ಇಸಫಾನ್‌ನ ಮದರಸಾವನ್ನು ಅಕ್ಷರಶಃ ಹೋಲುವಂತಿದೆ. ಇರಾನ್‌ನಿಂದ ತಂದು ಇರಿಸಿದಂತೆ ಕಾಣಿಸು ಈ ಕಟ್ಟಡದ ಸೊಬಗನ್ನು ನೋಡಿಯೇ ತಣಿಯಬೇಕು.

ಬಹಮನಿ ಸುಲ್ತಾನರು ಮೂಲತಃ ಪರ್ಷಿಯಾ ಅಥವಾ ಟರ್ಕಿ ಮೂಲದವರು. ಈ ಸುಲ್ತಾನ್‌ರ ಕಾಲದಲ್ಲಿ ನಿರ್ಮಾಣವಾದ ಬೀದರ್‌ನ ನಗರ ಯೋಜನೆಯಲ್ಲಿ ಪರ್ಷಿಯಾ ಅಥವಾ ಮಧ್ಯ ಏಷಿಯಾದ ಪ್ರಮುಖ ನಗರಗಳ ವಿನ್ಯಾಸದ ಅನುಕರಣೆಯನ್ನು ಕಾಣಬಹುದು. ಮಧ್ಯ ಏಷಿಯಾದ ಪ್ರಮುಖ ನಗರವಾದ 'ಹೇರಾತ್' ನಗರದ ರಚನೆಯ ಪ್ರಭಾವ ಬೀದರ್ ನಗರದ ಮೇಲೆ ಆಗಿರುವುದು ಕಂಡು ಬರುತ್ತದೆ ಎಂದು ಇತಿಹಾಸ ತಜ್ಞ ಶಿವಶರಣ ಅರುಣಿ ಅಭಿಪ್ರಾಯಪಡುತ್ತಾರೆ.

ಸುಲ್ತಾನ್‌ರು ವಾಸಿಸುವ ಹಾಗೂ ರಾಜ್ಯದ ಆಡಳಿತದ ಅನುಕೂಲಕ್ಕಾಗಿ ಬೇಕಾಗುವ ದರ್ಬಾರ್, ಅರಮನೆಗಳು ಹಾಗೂ ಇತರ ಸಾರ್ವಜನಿಕ ಕಟ್ಟಡಗಳಿಂದ ಕೂಡಿದ ಅರಮನೆ ಆವರಣ (ಸಿಟಡೆಲ್ ಕಾಂಪ್ಲೆಕ್ಸ್) ಹಾಗೂ ನಾಗರಿಕರಿಗೆ ವಾಸಿಸುವುದಕ್ಕಾಗಿ ವಿಶಾಲವಾದ 'ನಗರ' ಎಂಬ ಎರಡು ಭಾಗಗಳು ಬೀದರ್ ನಗರ ಯೋಜನೆಯಲ್ಲಿ ಕಂಡು ಬರುತ್ತದೆ. ಈ ಎರಡು ಭಾಗಗಳನ್ನು ಬೆಸೆಯುವ ಶಾರ್ಜಾ ಮತ್ತು ಗುಂಬಜ್ ದರ್ವಾಜಾಗಳಿಂದ ಕೂಡಿದ ಕೋಟೆ ಗೋಡೆಯು ಪ್ರಾಮುಖ್ಯತೆ ಪಡೆದಿದೆ. 'ಅರಮನೆ ಆವರಣ' ಹಾಗೂ ನಾಗರಿಕರ ವಾಸದ 'ನಗರ' ಎಂಬ ಎರಡು ವಿಭಿನ್ನ ಭಾಗಗಳನ್ನು ರಚಿಸುವ ಸಂಪ್ರದಾಯ ಮಧ್ಯಕಾಲೀನ ಅವಧಿಯಲ್ಲಿ ಕಂಡು ಬರುವ ಲಕ್ಷಣ. ನಗರದ ನಾಗರಿಕರಿಂದ ಬೇರ್ಪಡಿಸಿ ಅರಸರಿಗೆ ದಿನನಿತ್ಯದ ಸರ್ಕಾರಿ ಕಾರ್ಯಗಳಿಗೆ ಅಡಚಣೆ ಆಗದಂತೆ ಮಾಡುವುದು ಇದರ ಉದ್ದೇಶ ಎಂದು ಅರುಣಿ ವಿವರಿಸುತ್ತಾರೆ.

# ೫. ಭಾಷೆಯ ಪ್ರಭಾವ– ಪ್ರೇರಣೆ

ಫಾರಸಿ ಭಾಷಿಕರು ಕನ್ನಡ ಮಾತನಾಡುವ ಜನರ ಜೊತೆಗೆ ಬೆರೆಯಲು ಆರಂಭಿಸಿದ್ದರಿಂದ ಉಭಯ ಭಾಷೆಗಳಲ್ಲಿಯೂ ಪದಗಳ ವಿನಿಮಯ ನಡೆಯಿತು. ಇದು ಕೇವಲ ಪರಸ್ಪರ ಎರವಲು ಪಡೆಯುವುದಕ್ಕೆ ಮಾತ್ರ ಸೀಮಿತವಾಗಲಿಲ್ಲ. ಅರೆಬಿಕ್, ಮರಾಠಿ ಮತ್ತು ಸಂಸ್ಕೃತದಂತಹ ಭಾಷೆಯ ಜೊತೆ ಸೇರಿ ಹೊಸ ಭಾಷೆ ಉರ್ದು (ದಖನಿ) ಹುಟ್ಟುವುದಕ್ಕೆ ಕಾರಣವಾಯಿತು. ದಖನಿಯ ಮೊದಲ ಸಾಹಿತ್ಯ ಕೃತಿಗಳು ಈ ಅಂಶವನ್ನು ರುಜುವಾತು ಪಡಿಸುತ್ತವೆ.

ಪರ್ಶಿಯಾದ ಮತ್ತು ಭಾರತದ ನಡುವಿನ ಸಾಂಸ್ಕೃತಿಕ ಮತ್ತು ವಾಣಿಜ್ಯ ಸಂಬಂಧ ಸಮೃದ್ಧವಾಗಿತ್ತು. ಕ್ರಿ.ಶ. 1206ರಲ್ಲಿ ದೆಹಲಿಯಲ್ಲಿ ಗುಲಾಮಿ ಸಾಮ್ರಾಜ್ಯ ಸ್ಥಾಪನೆಯ ನಂತರ 1857ರಲ್ಲಿ ಮೊಗಲ್ ಸಾಮ್ರಾಜ್ಯದ ಪ್ರಭುತ್ವ ಕೊನೆಗೊಳ್ಳುವವರೆಗೆ ಫಾರಸಿ ಭಾರತದ ಆಡಳಿತ ಭಾಷೆಯಾಗಿತ್ತು. ಬ್ರಿಟಿಷರು ಆಡಳಿತ ಆರಂಭಿಸಿದ ನಂತರವೂ ಅಂದರೆ ವಿಲಿಯಂ ಬೆಂಟಿಂಕ್ ಬರುವವರೆಗೂ ಫಾರಸಿ ಆಡಳಿತ ಭಾಷೆಯಾಗಿ ಮುಂದುವರೆದಿತ್ತು. 'ಲಿಂಗ್ವಾ ಫ್ರಾಂಕಾ ಆಫ್ ಇಂಡಿಯಾ' ಎಂದು ಗುರುತಿಸಲಾಗುತ್ತಿತ್ತು. ಭಾರತವು ಫಾರಸಿ ಭಾಷೆ, ಸಂಸ್ಕೃತಿ, ನಾಗರಿಕತೆ, ಕಲೆ, ವಾಸ್ತುಶಿಲ್ಪದ ಬೆಳವಣಿಗೆಗೆ ಫಲವತ್ತಾದ ನೆಲೆಯನ್ನು ಒದಗಿಸಿತು. ಇದರಿಂದಾಗಿ ಬಹುಮುಖಿ ಸಂಸ್ಕೃತಿ ಬೆಳೆಯಿತು.

'ಪಾರ್ಸಾ' ಸಮುದಾಯ (ಬುಡಕಟ್ಟು) ಜನರು ಆಡುತ್ತಿದ್ದ ಭಾಷೆ 'ಪಾರ್ಸಿ'. ಅರಬ್ಬರ ದಾಳಿಯ ನಂತರ ಅದು 'ಫಾರಸಿ' ಎಂದಾಯಿತು. ಇಂಗ್ಲಿಷಿನಲ್ಲಿ 'ಪರ್ಶಿಯನ್' ಎಂದು ಕರೆಯಲಾಗುತ್ತದೆ. ಅಖೆಮೆನಿಡ್ ಕಾಲದಲ್ಲಿ (ಹಳೆ ಫಾರಸಿ') ಚಾಲ್ತಿಯಲ್ಲಿದ್ದ ಲಿಪಿಯನ್ನು 'ಕ್ಯುನಿಫಾರ್ಮ್' ಎಂದು ಗುರುತಿಸಲಾಗುತ್ತಿತ್ತು.

ಅಗ್ನಿಪೂಜಕರು ಇದ್ದ ಪರ್ಶಿಯಾವನ್ನು ಮುಸ್ಲಿಮರು ವಶಪಡಿಸಿಕೊಳ್ಳುವವರೆಗೆ ಸಸಾನಿದ್ ಸಾಮ್ರಾಜ್ಯ ಆಡಳಿತ ನಡೆಸುತ್ತಿತ್ತು. ಆಗ 'ಪಹಲ್ವಿ' ಲಿಪಿ('ನಡುಫಾರಸಿ') ಬಳಕೆಯಲ್ಲಿತ್ತು. ಅರಬ್ಬರು ಇರಾನ್ ಮೇಲೆ ದಾಳಿ ನಡೆಸಿ ವಶಪಡಿಸಿಕೊಂಡ ನಂತರ ಅರಬ್ಬಿ ಲಿಪಿಯ ಬಳಕೆ ಜಾರಿಗೆ ಬಂದಿತು. ಅಲ್ಲಿಂದ ಆರಂಭವಾಗಿ ಈಗಲೂ ಅರಬ್ಬಿ ಲಿಪಿ ಚಾಲ್ತಿಯಲ್ಲಿದೆ. ಅರಬ್ಬಿ ಲಿಪಿಯಲ್ಲಿ 30 ಅಕ್ಷರಗಳಿದ್ದವು. ಫಾರಸಿಯಲ್ಲಿ ಅದರ ಜೊತೆಗೆ ನಾಲ್ಕು ಹೊಸ ಅಕ್ಷರಗಳು (ಫ, ಚ, ಝ, ಗ) ಸೇರಿಕೊಂಡವು. ಆದ್ದರಿಂದ ಫಾರಸಿಯಲ್ಲಿ 34 ಅಕ್ಷರಗಳಿವೆ.

ಇರಾನ್‌ನಲ್ಲಿ ಒಂಬತ್ತನೆ ಮತ್ತು ಹತ್ತನೇ ಶತಮಾನದಲ್ಲಿ ಫಾರಸಿ ಶಾಸ್ತ್ರೀಯ ಭಾಷೆಯಾಗಿ ರೂಪುಗೊಂಡಿತ್ತು. ಆಗ, ಫಾರಸಿಯಲ್ಲಿ ಕಾವ್ಯ, ಗದ್ಯದ ಬರವಣಿಗೆ ಆರಂಭವಾದವು. 'ಪಹಲ್ವಿ' ಲಿಪಿ ಉಳಿಸುವುದಕ್ಕಾಗಿ ಕವಿ ಫಿರ್ದೋಸಿ ವಿಫಲ ಯತ್ನ ಮಾಡಿದ.

'ಉರ್ದು' ಪದದ ಅರ್ಥ ಸೈನಿಕರ ಶಿಬಿರ. ಟರ್ಕಿಗಳು, ಅರಬ್ಬರು, ಅಫಘಾನಿಗಳು, ಭಾರತೀಯರು ಸೇರಿ ಆರಂಭಿಸಿದ ಹೊಸ ಭಾಷೆ. ಭಾರತೀಯ ಮತ್ತು ಮಧ್ಯಪ್ರಾಚ್ಯದ ಭಾಷೆಗಳ ಸಮ್ಮಿಲನದಿಂದ ಹುಟ್ಟಿದ ಉರ್ದು ಅಪ್ಪಟ ಅಂದರೆ ಪ್ರತಿಶತ ನೂರಕ್ಕೆ ನೂರು ಭಾರತೀಯ ಭಾಷೆ. ಉರ್ದು ಬರೆಯುವುದಕ್ಕಾಗಿ ಅರಬ್ಬಿ-ಫಾರಸಿ ಲಿಪಿಯನ್ನೇ ಬಳಸಲಾಗುತ್ತದೆ. ಉರ್ದು ಲಿಪಿಯಲ್ಲಿ ಫಾರಸಿ ಲಿಪಿಯಲ್ಲಿದ್ದ (34) ಅಕ್ಷರಗಳ ಜೊತೆಗೆ ಹೊಸದಾಗಿ ಮೂರು ಅಕ್ಷರಗಳು (ತ,ಟ,ಡ) ಸೇರಿಕೊಂಡದ್ದರಿಂದ ಒಟ್ಟು 37 ಅಕ್ಷರಗಳಾದವು.

'ಪರ್ಷಿಯಾ' ಆಗಿದ್ದ ಪ್ರದೇಶವು ಅರಬ್ಬರು ದಾಳಿ ನಡೆಸಿ ವಶಕ್ಕೆ ತೆಗೆದುಕೊಂಡ 'ಇರಾನ್' ಎಂದಾಯಿತು. ಅರಬ್ಬರ ವಶಕ್ಕೆ ಬಂದ ನಂತರ ಫಾರಸಿ ಭಾಷೆಯ ಲಿಪಿಯ ಬಳಕೆಯಲ್ಲಿ ಆರಂಭವಾದದ್ದರ ಜೊತೆಯಲ್ಲಿಯೇ ಹಲವಾರು ಅರಬ್ಬಿ ಪದಗಳೂ ಸೇರಿಕೊಂಡವು. ಇಂಡೋ-ಯುರೋಪಿಯನ್ ಭಾಷಾ ಕುಟುಂಬಕ್ಕೆ ಸೇರಿದ ಭಾಷೆ. ಉರ್ದು ಭಾಷೆಗೆ ಬಳಕೆಯಾಗುವ ನಸ್ತಾಲಿಕ್ ಲಿಪಿಯು ಪರ್ಷಿಯಾದಲ್ಲಿ ಚಾಲ್ತಿಯಲ್ಲಿ ಇರುವಂತಹದ್ದು. ಬಹಮನಿ ಅರಸರ ಕಾಲದಲ್ಲಿ ಉರ್ದು ರೂಪುಗೊಂಡಿತೆಂದೂ ಇದರ ಮೂಲ 'ರೇಖ್ತಾ' ಎಂದೂ ಅಭಿಪ್ರಾಯವಿದೆ. ಅರಬ್ಬಿ, ಕನ್ನಡ ಹಾಗೂ ಮರಾಠಿ ಪದಗಳ ಫಾರಸಿ ಉಚ್ಚಾರದಿಂದ 'ರೇಖ್ತಾ' ಬಳಕೆಗೆ ಬಂತು ಎಂದು ಅಮೀನಾ ಖಾತೂನ್ ಫಜ್ಲುಲ್ ಹಸನ್ ಅವರು ಪ್ರತಿಪಾದಿಸುತ್ತಾರೆ. ಮೂಲ ಪರ್ಷಿಯನ್ ಅಥವ ಅರಬ್ಬಿ ಭಾಷೆಗಳು ಸ್ಥಳೀಯ ಭಾಷಾ ಸಂಪರ್ಕ ಹೊಂದಿಗೆ ದಖ್ಖನಿ, ಉರ್ದು

ಇತ್ಯಾದಿ ರೂಪ ಪಡೆದುಕೊಂಡಿದೆ' ಎಂದು ಗುಲ್ಬರ್ಗ ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ಅಭಿಪ್ರಾಯಪಡಲಾಗಿದೆ.

ಭಾಷೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದವನು ಫಿರೋಜ್ ಶಹಾ ಬಹಮನಿ. ಪಾಂಡಿತ್ಯದಲ್ಲಿ ಮಹಮದ್ ಬಿನ್ ತುಘಲಕ್‌ಗೆ ಸಮನಾಗಿದ್ದ ಎಂಬ ಹೆಗ್ಗಳಿಕೆ ಹೊಂದಿದ್ದ ಫಿರೋಜ್ ಬಹಮನಿ ಅರಸರ ಪೈಕಿ ಅತ್ಯಂತ ಜನಪ್ರಿಯನಾದವನು. ಫಿರೋಜನ ಉತ್ತಮ ತಿಳುವಳಿಕೆಯುಳ್ಳ ಪ್ರಬುದ್ಧ ರಾಜನಾಗಿದ್ದ. ಫಿರೋಜನು ಒಳ್ಳೆಯ ಭಾಷಾ ತಜ್ಞನೂ ಆಗಿದ್ದ. ಕ್ಯಾಲಿಗ್ರಫಿಯಲ್ಲಿ ಗಣನೀಯ ಸಾಧನೆ ಮಾಡಿದ್ದ ಫಿರೋಜ್ ಸ್ವತಃ ಕವಿಯೂ ಆಗಿದ್ದ.

## ಉರ್ದು ಮತ್ತು ಧಾರ್ಮಿಕ ಸಾಹಿತ್ಯ

ದಖನಿಯ ಮೊದಲ ಬರವಣಿಗೆಯು ಧಾರ್ಮಿಕವಾದ ವಿಷಯಗಳನ್ನು ಕುರಿತಾದದ್ದಾಗಿತ್ತು. ಅನುಭಾವ, ಆಧ್ಯಾತ್ಮಕ್ಕೆ ಸಂಬಂಧಿಸಿದ ವಿಚಾರಗಳನ್ನು ಜನಸಾಮಾನ್ಯರಿಗೆ ಅವರದೇ ಭಾಷೆಯಲ್ಲಿ ತಿಳಿಸುವ ಉದ್ದೇಶದಿಂದ ಧಾರ್ಮಿಕ ಮುಖಂಡರು ದಖನಿ ಭಾಷೆಯ ಮೊರೆ ಹೋದರು. ಪರ್ಷಿಯಾದ ಶ್ರೀಮಂತ ಸಾಹಿತ್ಯ ಪರಂಪರೆಯಿಂದ ಪಡೆದ ಪ್ರೇರಣೆಯು ದಖನಿ ಸಾಹಿತ್ಯದ ಗುಣಮಟ್ಟ ಉನ್ನತ ಮಟ್ಟ ತಲುಪುವುದಕ್ಕೆ ಕಾರಣವಾಯಿತು. ಈ ಅವಧಿಯಲ್ಲಿ ರಚಿತವಾದ ಸಾಹಿತ್ಯದಲ್ಲಿ ಸೂಫಿ ಪರಂಪರೆಗೆ ಸೇರಿದ ಪಾರಿಭಾಷಿಕ ಪದಗಳು ವ್ಯಾಪಕವಾಗಿ ಬಳಕೆಯಾದವು. ಸಲಾಕಿ, ಕರಾಮತ್, ಪೀರ್, ಮುರೀದ್, ಮುರ್ಷಿದ್, ವಹ್ದತ್, ಕಸ್ರತ್ ಮುಂತಾದ ಪದಗಳು ಕಾಣಸಿಗುತ್ತವೆ.

ಗುಲ್ಬರ್ಗದಲ್ಲಿದ್ದ ಸೂಫಿ ಸಂತ ಗೇಸು ದರಾಜ್ ಅವರು ಇಹದಲ್ಲಿದ್ದು ಪರದ ಸೌಭಾಗ್ಯ ಪಡೆಯುವ ಸನ್ಮಾರ್ಗದ ಏಣಿ ಎನಿಸಿರುವ ಗ್ರಂಥ 'ಮೆ ರಾಜುಲ್ ಆಶಿಕಿನ್', ಸರ್ವಧರ್ಮಗಳ ಸಹಿಷ್ಣುತೆ ಸ್ನೇಹಭಾವ ಬೋಧಿಸುವ 'ಜವಾಮೆ ಉಲ್ ಕಲಿಮ', ಮಾನವ ಹಾಗೂ ಭಗವಂತನ ಸಂಬಂಧ ಕುರಿತ 'ಮಕ್ತೂಬಾತ್' ಗ್ರಂಥಗಳನ್ನು ರಚಿಸಿದರು. ಅವರ ಪದ್ಯಗ್ರಂಥಗಳಲ್ಲಿ ಶ್ರೇಷ್ಠ ಎನ್ನಿಸಿರುವ ದಿವಾನ್ (ಅನೀಸುಲ್ ಉಷ್ಟಾಖ್) ಮತ್ತು ಷಿಕಾರ್‌ನಾಮ, ಅನುವಾದಿತ ಗ್ರಂಥವಾದ ರಿಸಾಲೆ ಹುಕ್ಷೇರಿಯಾಗಳಲ್ಲದೆ ಅದಾಬುಲ್ ಮುರೀದೀನ, ಅಸ್‌ಅರುಲ್ ಅಸ್‌ರಾರ್, ಖಿಲಾಫತ್‌ನಾಮ, ಖಾತಿದು, ಚಿಕ್ಕಿನಾಮ, ಮಕ್ತುಬಾತ್ ತಿಲಾವತುಲ್ ವಜೂದ್ ಇತ್ಯಾದಿಗಳು ಪ್ರಮುಖವಾಗಿವೆ.

'ಮೆ ರಾಜುಲ್ ಆಶಿಕಿನ್' ಗ್ರಂಥ ಉರ್ದು ಭಾಷೆಯಲ್ಲಿಯೇ ಪ್ರಥಮ ಗದ್ಯ ಕೃತಿ ಎಂದು ಅಭಿಪ್ರಾಯವಿದೆ. ಗೇಸು ದರಾಜ್ ಅವರ ಕೃತಿಗಳನ್ನು ಅಭ್ಯಾಸ ಮಾಡಿರುವ ಸೈಯದ್ ಶಹಾ ಖುಸ್ರೊ ಹುಸೇನಿ ಅವರು ಗೇಸು ದರಾಜ್ ಅವರ ಕೃತಿಗಳನ್ನು ವ್ಯಾಖ್ಯಾನಗಳು, ಸ್ವಂತ ವಿಚಾರಧಾರೆಗಳು, ಸಾಹಿತ್ಯಾತ್ಮಕ ಕೃತಿಗಳು ಹಾಗೂ ಇತರ ವರ್ಗದವು ಎಂದು ವರ್ಗೀಕರಿಸಿದ್ದಾರೆ.

ಸೈನ್ಯದಲ್ಲಿ ಇರುವವರು, ವ್ಯಾಪಾರಿಗಳು, ಧಾರ್ಮಿಕ ಪ್ರವಚನಕಾರರು, ಸೂಫಿಗಳು ಮತ್ತು ಸ್ಥಳೀಯರು ಪರಸ್ಪರ ವ್ಯವಹರಿಸಲು ಫಾರಸಿ, ಅರಬ್ಬಿಗಳ ಜೊತೆಗೆ ಸ್ಥಳೀಯ ಭಾಷೆಗಳ ಪದಗಳ ಬಳಕೆ ಇರುವ ಸಂಪರ್ಕ ಭಾಷೆ ಬಳಸುತ್ತಿದ್ದರು. ಸಹಜವಾಗಿಯೇ ಸಂಪರ್ಕದ ಸೇತುವಾಗಿದ್ದ ಭಾಷೆಗೆ ಹಲವು ಪ್ರಾದೇಶಿಕ ಉಪಭಾಷೆಗಳಿದ್ದವು. ಸಹಚರ ಭಾಷೆಗಳ ಜೊತೆಗಿನ ಒಡನಾಟದಿಂದಾಗಿ ಸಂಪರ್ಕ ಭಾಷೆಯೂ ಸ್ಥಳೀಯ ರೂಪ ಪಡೆದು ಕೊಂಡಿತು.

ಮಾತನಾಡುವ ಪ್ರದೇಶ ಆಧರಿಸಿ ಸ್ವರೂಪವೂ ಬದಲಾಯಿತು. ಪಾಕಿಸ್ತಾನದಲ್ಲಿ ಪಾಷ್ತೊ, ಪಂಜಾಬಿ, ಸಿಂಧಿ ಭಾಷೆಯ ಪದಗಳು ಮತ್ತು ಉಚ್ಚಾರಣೆಯ ಪ್ರಭಾವದಿಂದ ಪಾಕಿಸ್ತಾನಿ ಸ್ಪರ್ಶ ದೊರೆಯಿತು. ಹಾಗೆಯೇ ದಕ್ಷಿಣ ಭಾರತದಲ್ಲಿ ಕೂಡ ಅಲ್ಲಿನ ಭಾಷೆಗಳ ಒಡನಾಟದಿಂದ ದಖನಿ ಆಗಿ ಪರಿವರ್ತನೆಗೊಂಡಿತು. ಈ ಸಂಪರ್ಕ ಭಾಷೆಯನ್ನು ಹಿಂದವಿ, ದೆಹಲ್ವಿ, ಹಿಂದುಸ್ತಾನಿ, ಜಬಾನ್ ಎ ಉರ್ದು (ಸೈನಿಕ ಶಿಬಿರದ ಭಾಷೆ), ದಖನಿ ಹೆಸರುಗಳಿಂದ ಕರೆಯಲಾಗುತ್ತಿತ್ತು.

ದಖನಿ, ರೇಖ್ತಾ, ಖಡಿಬೋಲಿ, ದಖ್ನಿ ಎಂಬ ಉಪಭಾಷೆಗಳಿವೆ. ದಖನಿಯನ್ನು ದಕನಿ, ಡೆಕ್ಕನಿ, ದೇಸಿಯಾ, ಮೈಗ್ರಾನ್ ಎಂದೂ ಕರೆಯಲಾಗುತ್ತದೆ. ದಕ್ಷಿಣ ಭಾರತದಲ್ಲಿ ಚಾಲ್ತಿಯಲ್ಲಿರುವ ಭಾಷೆ ಇದು. ಮರಾಠಿ, ತೆಲುಗು ಮತ್ತು ಕನ್ನಡ ಪದಗಳನ್ನು ತನ್ನದಾಗಿಸಿಕೊಂಡು ಮೈದಳೆದಿದೆ. ಹಾಗೆಯೇ ಅದರಲ್ಲಿ ಫಾರಸಿ, ಅರಬ್ಬಿ, ಟರ್ಕಿ ಪದಗಳೂ ಸಾಕಷ್ಟು ಸಂಖ್ಯೆಯಲ್ಲಿ ಇರುತ್ತವೆ. ಆಯಾ ಪ್ರದೇಶದ ಜನರ ಉಚ್ಚಾರಣೆಯಿಂದ ತಕ್ಷಣ ಅವರು ಉಪಯೋಗಿಸುವ ಭಾಷೆಯ ಸ್ವರೂಪ ಗಮನಕ್ಕೆ ಬರುತ್ತದೆ. ಮಹಾರಾಷ್ಟ್ರ, ಕರ್ನಾಟ, ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಲ್ಲಿ ದಖನಿ ಹೆಚ್ಚು ಚಾಲ್ತಿಯಲ್ಲಿದೆ.

ಪಾನಿ ಮತ್ತು ಆಬ್ ಎರಡೂ ಪದಗಳ ಅರ್ಥ ನೀರು. ಹಾಗೆಯೇ ಆದ್ಮಿ ಮತ್ತು ಮರ್ದ್ ಎಂದರೆ ವ್ಯಕ್ತಿ/ಮನುಷ್ಯ. ಪಾನಿ ಮತ್ತು ಆದ್ಮಿ ಪದಗಳು ಭಾರತೀಯ ಮೂಲದ ಆಡುನುಡಿಗೆ ಸೇರಿದವು. ಆದರೆ, ಆಬ್ ಮತ್ತು ಮರ್ದ್ ಪದಗಳು ಫಾರಸಿ ಮೂಲದ ಪದಗಳು ಕಾವ್ಯಾತ್ಮಕವಾಗಿ, ಔಪಚಾರಿಕವಾಗಿ ಬಳಕೆ ಆಗುವಂತಹವುಗಳು. ಉರ್ದು ಭಾಷೆಯಲ್ಲಿ ಬಳಸುವ ಪದಗಳು ಅರಬ್ಬಿ

ಅಥವಾ ಫಾರಸಿ ಮೂಲದ ಪದಗಳಾಗಿದ್ದರೆ ಅವು ಹೆಚ್ಚು ಔಪಚಾರಕವೂ, ಆಡಂಬರದಿಂದ ಕೂಡಿದವು ಆಗಿರುತ್ತವೆ. ಉರ್ದು ಹುಟ್ಟಿ ಭಾಷೆ ಅದರಲ್ಲಿ ಸಾಹಿತ್ಯ ರಚನೆಯಾಗಿದ್ದಕ್ಕೂ ಭಾರತದ ಸೂಫಿಗಳಿಗೂ ಇರುವ ನಂಟು ವಿಚಿತ್ರ.

'ಭಾರತದಲ್ಲಿ ಮುಸ್ಲಿಂ ದೊರೆಗಳು ಸಂಪ್ರದಾಯವಾದಿ ಇಸ್ಲಾಮಿನ ಹಿಡಿತದಿಂದ ಬಿಡಿಸಿಕೊಂಡು ತಮ್ಮ ರಾಜಕಾರಣಕ್ಕೆ ಸ್ವತಂತ್ರ ನೆಲೆ ಕಂಡುಕೊಳ್ಳುವ ತುರ್ತಿನಲ್ಲಿದ್ದರು. ಇದೇ ಹೊತ್ತಲ್ಲಿ ಸನಾತನವಾದಿ ಇಸ್ಲಾಮಿನ ಹಿಡಿತದಿಂದ ಅನುಭಾವ ತತ್ವವನ್ನು ಬಿಡುಗಡೆ ಮಾಡುವ ಹೋರಾಟದಲ್ಲಿ ಸೂಫಿಗಳೂ ಇದ್ದರು. ಇಬ್ಬರೂ ಹೀಗಾಗಿ ಸಾಮಾನ್ಯ ಎದುರಾಳಿಯ ಬಗ್ಗೆ ಒಬ್ಬರಿಗೊಬ್ಬರು ಸಹಾಯ ಪಡೆದುಕೊಳ್ಳತೊಡಗಿದರು. ಸೂಫಿಗಳೂ ಮುಸ್ಲಿಂ ಪ್ರಭುತ್ವಗಳೂ ಭಾರತದಲ್ಲಿ ನೆಲೆಯೂರುವ ಈ ಸಂಕ್ರಮಣ ಕಾಲದಲ್ಲಿ ಉರ್ದು ಭಾಷೆ ಕಣ್ಬಿಡತೊಡಗಿತು. ಇಸ್ಲಾಮಿ ಸನಾತನವಾದದ ಜೊತೆಗೆ ಗುದ್ದಾಡುತ್ತ, ಸ್ಥಳೀಯ ಜನತೆ, ಸಂಸ್ಕೃತಿ,ಪಂಥಗಳ ಜತೆ ಬೆರೆಯುತ್ತ, ಫಾರಸಿ ಅರಬ್ಬಿಗಳಲ್ಲದ ಮೂರನೇ ಭಾಷೆಯನ್ನು ಸೂಫಿಗಳು ಕಂಡುಕೊಂಡರು. ಅದರಲ್ಲಿ ಅನುಭಾವದ ಅಭಿವ್ಯಕ್ತಿಗೆ ಬೇಕಾದ ಪ್ರತಿಮಾತ್ಮಕತೆಯನ್ನು ರೂಢಿಸಿಕೊಂಡರು. ಇದರಿಂದ ಮತಧರ್ಮಗಳಾಚೆ ಹೋಗಿ ಮಾನವ ಐಕ್ಯತೆ ಪ್ರತಿಪಾದಿಸಲು ಸಾಧ್ಯವಾಯಿತು' ಎಂದು ರಹಮತ್ ತರೀಕೆರೆ ಉಲ್ಲೇಖಿಸುತ್ತಾರೆ.

## ದಖನಿ ಭಾಷೆಗಳ ಮೇಲೆ ಪಾರಸಿ ಪ್ರಭಾವ-

ಮುಸ್ಲಿಂ ಆಡಳಿತಗಾರರು ಮತ್ತು ಹಿಂದು ಪ್ರಜೆಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಪರ್ಕದಿಂದಾಗಿ ಮರಾಠಿ ಭಾಷೆಯ ಮೇಲೆ ಪಾರಸಿ ಪ್ರಭಾವ ದಟ್ಟವಾಗಿ ಮೂಡಿತು. ಈಗ ಮಹಾರಾಷ್ಟ್ರ ಆಗಿರುವ ಪ್ರದೇಶದಲ್ಲಿ ಮರಾಠಿ ಆಡುಮಾತು ಆಗಿದ್ದರೂ ಆಡಳಿತ ಭಾಷೆ ಫಾರಸಿ ಆಗಿತ್ತು. ಆಡಳಿತಗಾರರ ಭಾಷೆಯು ಪ್ರಜೆಗಳ ಭಾಷೆಯನ್ನು ಪ್ರಭಾವಿಸುವುದು ಸಾಮಾನ್ಯ ಸಂಗತಿ. ಫಾರಸಿ ಜೊತೆಗಿನ ಒಡನಾಟದಿಂದಾಗಿ ಮರಾಠಿಯು ಆಡಳಿತ ಭಾಷೆಯಾಗಿ ರೂಪುಗೊಳ್ಳುವುದಕ್ಕೆ ಸಾಧ್ಯವಾಯಿತು, ಕಾನೂನು, ಭೂಮಾಹಿತಿಗಳ ದಾಖಲೆ, ಸೈನಿಕ ಆಡಳಿತ ಹೀಗೆ ಮರಾಠಿ ತನ್ನದೇ ಭಾಷಾ ಪ್ರೌಢಿಮೆ ಬೆಳೆಸಿಕೊಳ್ಳಲು ಪಾರಸಿ ಅವಕಾಶ ಕಲ್ಪಿಸಿತು. ದಖನ್‌ನಲ್ಲಿ ಬಹಮನಿ ಅರಸರ ಕಾಲದಲ್ಲಿ ಫಾರಸಿ ಆಡಳಿತ ಭಾಷೆಯಾಗಿದ್ದರಿಂದ ಕನ್ನಡ, ತೆಲುಗು ಭಾಷೆಗಳ ಮೇಲೂ ಫಾರಸಿಯ ಪ್ರಭಾವ ಬೀರಿತು. ಹಲವು ಪಾರಸಿ ಪದಗಳು ಸೇರಿಕೊಂಡವು, ಮತ್ತು ಈಗಲೂ ಚಾಲ್ತಿಯಲ್ಲಿವೆ.

# 6. ಕಾವ್ಯರೂಪದಿ ಬಂದ ಇತಿಹಾಸ

ಬಹಮನಿ ಸಾಮ್ರಾಜ್ಯದ ಸ್ಥಾಪಕ ಅಲಾವುದ್ದೀನ್ ಹಸನ್‌ನು ನಿರಕ್ಷರಕುಕ್ಷಿಯಾಗಿದ್ದ. ಆದರೆ, ಅಕ್ಷರ ಮತ್ತು ಜ್ಞಾನದ ಮಹತ್ವ ಅರಿತಿದ್ದ ಅಲಾವುದ್ದೀನ್ ತನ್ನ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯುವಂತೆ ನೋಡಿಕೊಂಡ. ಬಹಮನಿ ಮನೆತನದ ನಾಲ್ಕನೇ ದೊರೆಯಾದ ಎರಡನೇ ಮುಹಮ್ಮದ್ ಕಾವ್ಯಪ್ರೇಮಿಯಾಗಿದ್ದ ಮಾತ್ರವಲ್ಲ, ಸ್ವತಃ ಕವಿಯಾಗಿದ್ದ. ಎರಡನೇ ಮುಹಮ್ಮದ್‌ನ ಪದ್ಯಗಳು ನಮ್ಮವರೆಗೂ ಉಳಿದು ಬಂದಿಲ್ಲ. ಆದರೆ, ಫೆರಿಸ್ತಾ ಉಲ್ಲೇಖಿಸಿದ ಮೂರು ಸಾಲುಗಳಲ್ಲಿನ ಲಾಲಿತ್ಯ, ವಿಷದ ಪಡಿಸುವ ರೀತಿ ಮುಹಮ್ಮದ್‌ನ ಕವಿತೆಯ ಸಾಹಿತ್ಯಕ ಮಹತ್ವವನ್ನು ಬಿಂಬಿಸುತ್ತವೆ.

ಶಿರಾಜ್‌ನ ಪ್ರಸಿದ್ಧ ಕವಿ ಹಫೀಜ್‌ನನ್ನು ಮುಹಮ್ಮದ್ ಶಹಾ ತನ್ನ ಆಸ್ಥಾನಕ್ಕೆ ಆಹ್ವಾನಿಸಿದ್ದ. ಹಫೀಜ್ ಕೂಡ ದಖನ್‌ಗೆ ಬರಲು ಮನಸ್ಸು ಮಾಡಿ ಸಿದ್ಧನಾಗಿದ್ದ. ಆದರೆ, ಹಡಗು ಏರುತ್ತಿದ್ದಂತೆಯೇ ಉಂಟಾದ ಹವಾಮಾನ ವೈಪರಿತ್ಯದಿಂದಾಗಿ ಪ್ರಯಾಣ ರದ್ದುಗೊಳಿಸಬೇಕಾಯಿತು. ಮುಹಮ್ಮದ್‌ನಿಗೆ ಅರ್ಪಿಸಲು ಹಫೀಜ್ ನೀಡಿದ ಸೊಗಸಾದ ಗಜಲ್ ಗಮನ ಸೆಳೆಯುತ್ತದೆ.

ಎರಡನೇ ಮುಹಮ್ಮದ್‌ನ ಗರಡಿಯಲ್ಲಿಯೇ ಪಳಗಿದ ತಾಜುದ್ದೀನ್ ಫಿರೋಜ್‌ನು ಸಾಹಿತ್ಯದಲ್ಲಿ ಆಸಕ್ತಿ ಉಳ್ಳವನಾಗಿದ್ದ. ಮುಹಮ್ಮದ್‌ನ ಮಗಳನ್ನು ಮದುವೆಯಾಗಿದ್ದ ಫಿರೋಜ್‌ನಿಗೆ ಹಫೀಜ್‌ನನ್ನು ಕರೆತರಲು ಶಿರಾಜ್‌ಗೆ ಹೋಗಿದ್ದ ಮುಲ್ಲಾ ಫಜ್ಲುಲ್ಲಾ ಇಂಜು ಮಾರ್ಗದರ್ಶಕನಾಗಿದ್ದ. ಫಿರೋಜ್‌ನು ಕಾವ್ಯ, ಭಾಷೆ ಮಹತ್ವ ಅರಿಯುವಂತೆ ಮಾಡಿದ್ದ ಇಂಜು ಸಾಹಿತ್ಯ ಮತ್ತು ಸಂಸ್ಕೃತಿಯ

ಬಗ್ಗೆ ಆಸಕ್ತಿ ತಳೆಯುವಂತೆ ನೋಡಿಕೊಂಡಿದ್ದ. ಇಂಜುವಿನ ಪ್ರೇರಣೆಯಿಂದ ಕಾವ್ಯಾರಾಧನೆ ಆರಂಭಿಸಿದ ಫಿರೋಜ್‌ನು 'ಉರುಜಿ' ಮತ್ತು 'ಫಿರೋಜಿ' ಎಂಬ ಕಾವ್ಯನಾಮ ಇಟ್ಟುಕೊಂಡು ಕವಿತೆ ರಚಿಸಿದ್ದ. ಫಿರೋಜ್‌ನ ಪೂರ್ಣ ಪ್ರಮಾಣದ ಕವಿತೆಗಳು ಲಭ್ಯವಿಲ್ಲವಾದರೂ ಫೆರಿಸ್ತಾ ಮತ್ತು ತಬಾತಬಾಯಿ ಅಲ್ಲಲ್ಲಿ ಕೆಲವು ಸಾಲುಗಳನ್ನು ಉಲ್ಲೇಖಿಸಿದ್ದಾರೆ.

ಫಿರೋಜ್‌ನ ನಂತರ ಅಧಿಕಾರಕ್ಕೆ ಬಂದ ಅವನ ಸಹೋದರ ಅಹ್ಮದ್ ಶಹಾನಿಗೂ ಇಂಜುವೇ ಮಾರ್ಗದರ್ಶಕನಾಗಿದ್ದ. ಅಹ್ಮದ್ ಸ್ವತಃ ಕವಿತೆ ಬರೆಯಲಿಲ್ಲವಾದರೂ ಕಾವ್ಯಾಸಕ್ತಿ ಇಟ್ಟುಕೊಂಡಿದ್ದ. ಅರಸನಾಗಿ ಅಧಿಕಾರ ಸ್ವೀಕರಿಸುವ ಮುನ್ನವೇ ಬಂದೇ ನವಾಜ್ ಎಂದೇ ಜನಪ್ರಿಯರಾಗಿರುವ ಸೂಫಿ ಸಂತ, ಕವಿ ಗೇಸು ದರಾಜ್ ಅವರೊಂದಿಗೆ ಒಡನಾಟ ಇಟ್ಟುಕೊಂಡಿದ್ದ. ಅಹ್ಮದ್ ತನ್ನ ಸಹೋದರನ ವಿರುದ್ಧ ಸಿಡಿದು ನಿಂತಾಗ ಗೇಸು ದರಾಜ್ ಅವನಿಗೆ ನೈತಿಕ ಬೆಂಬಲ ನೀಡಿದ್ದರು. ಅಹ್ಮದ್ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಗೇಸು ದರಾಜ್ ಅಸು ನೀಗಿದರು. ಅಹ್ಮದ್‌ನು ಸಂತನ ಗೌರವಾರ್ಥ ಬೃಹತ್ ಸಮಾಧಿ ನಿರ್ಮಿಸಿದ. ನಂತರದ ದಿನಗಳಲ್ಲಿ ಅಂದರೆ ಬೀದರ್‌ಗೆ ರಾಜಧಾನಿ ವರ್ಗಾಯಿಸಿದ ನಂತರದ ದಿನಗಳಲ್ಲಿ ತನ್ನ ಆಸ್ಥಾನಕ್ಕೆ ಆಗಮಿಸಿ ಆಶೀರ್ವಾದ ಮಾಡುವಂತೆ ಕೋರಿ ಕಿರ್ಮಾನ್‌ನ ಸೂಫಿ ಸಂತ, ಕವಿ ಶಹಾ ನಿಯಾಮತ್ ಅಲ್ಲಾನನ್ನು ಆಹ್ವಾನಿಸಿದ್ದ. ವಯಸ್ಸಿನ ಕಾರಣದಿಂದ ನಿಯಾಮತ್ ದಖನ್‌ಗೆ ಬರಲಿಲ್ಲ. ನಿಯಾಮತ್‌ನ ಸಾವಿನ ನಂತರ ಅವನ ಇಡೀ ಕುಟುಂಬ ಬೀದರ್‌ಗೆ ವಲಸೆ ಬಂತು. ಅಷ್ಟೂರಿನಲ್ಲಿ ಇರುವ ಅಹ್ಮದ್‌ನ ಸಮಾಧಿಯ ಒಳಗಡೆ ನಿಯಾಮತ್‌ನ ಪದ್ಯಗಳನ್ನು ಕ್ಯಾಲಿಗ್ರಫಿ ರೂಪದಲ್ಲಿ ರಚಿಸಲಾಗಿದೆ. ಇರಾನ್‌ನಲ್ಲಿ ತನ್ನ ಸಮಕಾಲೀನ ಕವಿಗಳ ಪೈಕಿ ಅತ್ಯಂತ ಜನಪ್ರಿಯನಾಗಿದ್ದ ನಿಯಾಮತ್‌ನ ಕವಿತೆಗಳು ಅನುಭಾವಿ ಪರಂಪರೆಗೆ ಸೇರಿದವು. ದಿವಾನ್ ಎಂದು ಕರೆಯಲಾಗುವ ಈ ಪದ್ಯಗಳು ತನ್ನ ಸಾಹಿತ್ಯಕ ಗುಣಗಳಿಂದ ಗಮನ ಸೆಳೆಯುತ್ತವೆ. ನಂತರದ ದಿನಗಳಲ್ಲಿ ನಿಯಾಮತ್‌ನ ಶಿಷ್ಯನಾಗಿದ್ದ ನಿಜಾಮಿ ಕೂಡ ಬೀದರಿಗೆ ಆಗಮಿಸಿ 'ಆಸ್ಥಾನ ಕವಿ'ಯಾಗಿದ್ದ.

ನಿಯಾಮತ್ ಪರಂಪರೆಯ ವ್ಯಕ್ತಿಯನ್ನು ಹುಡುಕಿ ಬೀದರ್‌ಗೆ ಬಂದು ನಂತರ ಪ್ರಧಾನಿಯಾದ ಗಾವಾನ್ ಸ್ವತಃ ಕವಿ, ಲೇಖಕನಾಗಿದ್ದ. ಹುಮಾಯೂನ್‌ನ ಅವಧಿಯಲ್ಲಿ ಪ್ರಧಾನಿಯಾಗಿ ಗಾವಾನ್ ಅಧಿಕಾರಕ್ಕೆ ಬಂದ. ಅವನ ಅಕಾಲಿಕ ನಿಧನದಿಂದಾಗಿ ಅವನ ಎಂಟು ವರ್ಷದ ನಿಜಾಮುದ್ದೀನ್ ಅಧಿಕಾರಕ್ಕೆ ಬಂದ. ಕೇವಲ ಮೂರು ವರ್ಷದ ನಂತರ ಮೃತಪಟ್ಟಾಗ ಹುಮಾಯೂನ್ ಎರಡನೇ

ಮಗ ಒಂಬತ್ತು ವರ್ಷ ವಯಸ್ಸಿನ ಶಂಸುದ್ದೀನ್ ಮುಹಮ್ಮದ್ ಸಿಂಹಾಸನ ಏರಿದ. ಶಂಸುದ್ದೀನ್ ಮುಹಮ್ಮದ್‌ನ ಕಲಿಕೆಯ ಹೊಣೆಯನ್ನು ನಿರ್ವಹಿಸಿದ ಗಾವಾನ್ ದೊರೆಗೆ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯುವಂತೆ ವ್ಯವಸ್ಥೆ ಕಲ್ಪಿಸಿದ. ಗಾವಾನ್ ಗರಡಿಯಲ್ಲಿ ಪಳಗಿದ ದೊರೆ ಮುಹಮ್ಮದ್ ಕಾವ್ಯದಲ್ಲಿ ಆಸಕ್ತಿ ಬೆಳೆಸಿಕೊಂಡ ಮಾತ್ರವಲ್ಲದೆ ತಾನೂ ಕವಿತೆ ಬರೆಯಲು ಆರಂಭಿಸಿದ ಮಾಹಿತಿ ದೊರೆಯುತ್ತದೆ. ಆದರೆ, ಅವನ ಕವಿತೆಗಳು ಲಭ್ಯವಾಗಿಲ್ಲ. ಕೆಲವು ಪ್ರಮುಖ ಫಾರಸಿ ಬರಹಗಾರರನ್ನು ಇಲ್ಲಿ ಚರ್ಚಿಸಲಾಗಿದೆ.

## ಖ್ವಾಜಾ ಅಬ್ದ್ ಮಲಿಕ್ ಇಸಾಮಿ
(1311–?)

ಬಹಮನಿ ಸಾಮ್ರಜ್ಯದ ಅವಧಿಯ ಮೊದಲ ಮಹತ್ವದ ಕವಿ ಖ್ವಾಜಾ ಅಬ್ದ್ ಮಲಿಕ್ ಇಸಾಮಿ. ಅವನು ರಚಿಸಿದ 'ಫುತೂಹ್-ಅಸ್-ಸಲಾತಿನ್' ಕೃತಿಯನ್ನು ಮಧ್ಯಕಾಲೀನ ಭಾರತದ 'ಶಹಾನಾಮ' ಎಂದೇ ಗುರುತಿಸಲಾಗುತ್ತದೆ. ಪರ್ಷಿಯಾದ ಕೆಲವು ಕವಿಗಳು ತಮ್ಮ ಮಿತಿಗಳಲ್ಲಿಯೇ ಫಿರ್ದೋಸಿಯ 'ಶಹಾನಾಮ'ದ ಅನುಕರಣೆಗೆ ಪ್ರಯತ್ನಿಸಿದ್ದರು. ಆದರೆ, ಭಾರತದಲ್ಲಿ ಇಸಾಮಿಗಿಂತ ಮೊದಲು ಯಾರೊಬ್ಬರೂ ಮಸ್ನವಿ ಕಾವ್ಯ ಪ್ರಕಾರದಲ್ಲಿ ಬರೆಯುವ ಸಾಹಸಕ್ಕೆ ಕೈ ಹಾಕಿರಲಿಲ್ಲ. ಭಾರತದಲ್ಲಿ ಇಸ್ಲಾಮ್ ಕಾಣಿಸಿಕೊಂಡ ಮೊದಲ ದಿನಗಳಿಂದ ಹಿಡಿದು ದಖನ್‌ನಲ್ಲಿ ಬಹಮನಿ ಸಾಮ್ರಾಜ್ಯ ಸ್ಥಾಪನೆಯ ವರೆಗಿನ ಬೆಳವಣಿಗೆಗಳನ್ನು ಕಾವ್ಯರೂಪದಲ್ಲಿ ಹಿಡಿದಿಟ್ಟ ಮೊದಲ ಇತಿಹಾಸ ಕುರಿತ ಗ್ರಂಥ ಎಂದು ಗುರುತಿಸಲಾಗುತ್ತದೆ. ಮೊಹಮ್ಮದ್ ಬಿನ್ ತುಘಲಕ್‌ನ ಎರಡನೇ ರಾಜಧಾನಿ ಆಗಿದ್ದ ದೌಲತಾಬಾದ್‌ನಲ್ಲಿ 'ಫುತೂಹ್-ಅಸ್-ಸಲಾತಿನ್' ರಚನೆ ಆರಂಭವಾಯಿತು. 1349ರ ಡಿಸೆಂಬರ್ 10ರಂದು ಕಾವ್ಯ ರಚನೆಗೆ ಆರಂಭಿಸಿದ ಇಸಾಮಿಯು ಅದನ್ನು 1350ರ ಮೇ 14ರಂದು ಪೂರ್ಣಗೊಳಿಸಿದ. 12ಸಾವಿರ ಪದ್ಯಗಳಿರುವ ಈ ಮಸ್ನವಿಯ ರಚನೆಗೆ ಇಸಾಮಿ ತೆಗೆದುಕೊಂಡ ಕಾಲ ಕೇವಲ ಐದು ತಿಂಗಳು ಒಂಬತ್ತು ದಿನಗಳು. ಪ್ರತಿದಿನ ಸರಾಸರಿ 80 ಪದ್ಯಗಳನ್ನು ಇಸಾಮಿ ರಚಿಸಿದ. ಅತಿಶೀಘ್ರವಾಗಿ ಕಾವ್ಯರೂಪ ನೀಡುವುದಕ್ಕೆ ಅಮೀರ್ ಖುಸ್ರೋ ಹೆಸರಾಗಿದ್ದ. ಅವನನ್ನು ಹೊರತು ಪಡಿಸಿದರೆ ಇಸಾಮಿಯಷ್ಟು ವೇಗವಾಗಿ ಕಾವ್ಯರಚಿಸಿದ ಮತ್ತೊಬ್ಬ ಕವಿಯ ಉದಾಹರಣೆ ನೋಡಲು ಸಿಗುವುದಿಲ್ಲ. ಮೊಗಲ್‌ರ ಕಾಲಕ್ಕಿಂತ ಮೊದಲಿನ ಅವಧಿಯ ಐತಿಹಾಸಿಕ ಘಟನೆಗಳನ್ನು

ಅಧಿಕೃತವಾಗಿ ದಾಖಲಿಸಿದ ಗ್ರಂಥ ಎಂಬ ಹೆಗ್ಗಳಿಕೆ 'ಫುತೂಹ್–ಅಸ್–ಸಲಾತಿನ್' ಗೆ ಸಲ್ಲುತ್ತದೆ. ಇದೇ ಕಾರಣಕ್ಕಾಗಿಯೇ ನಂತರ ಇತಿಹಾಸ ರಚಿಸಿದ ಫೆರಿಸ್ತಾ, ನಿಜಾಮುದ್ದೀನ್ ಅಹ್ಮದ್‌ರು ಈ ಕೃತಿಯನ್ನು ತಮ್ಮ ಆಕರ ಗ್ರಂಥ ಎಂದು ಪರಿಗಣಿಸಿದ್ದಾರೆ. ಅದೇನು ಕಾರಣದಿಂದಲೋ ನಂತರದ ದಿನಗಳಲ್ಲಿ ಈ ಗ್ರಂಥವು ಕಡೆಗಣನೆಗೆ ಒಳಗಾಯಿತು.

ಮದ್ರಾಸ್ ವಿಶ್ವವಿದ್ಯಾಲಯದ ಎ.ಎಸ್. ಉಷಾ ಅವರು ಬ್ರಿಟಿಷ್ ವಸ್ತುಸಂಗ್ರಹಾಲಯದಿಂದ ಹಸ್ತಪ್ರತಿ ಪಡೆದು ಅಧ್ಯಯನ ಆರಂಭಿಸುವ ವರೆಗೆ ಬಹುತೇಕ ಕಣ್ಮರೆಯಾಗಿತ್ತು. ಅಧ್ಯಯನ ಪೂರ್ಣಗೊಳ್ಳುವ ಮುನ್ನವೇ ಡಾ. ಆಘಾ ಮಹದಿ ಹುಸೇನ್ ಅವರು 'ಫುತೂಹ್–ಅಸ್–ಸಲಾತಿನ್' ದ ಲಿಥೋಮುದ್ರಣ ಪ್ರಕಟ ಆಗುವಂತೆ ನೋಡಿಕೊಂಡರು. ಉಷಾ ಅವರು ನಂತರದ ದಿನಗಳಲ್ಲಿ 'ಫುತೂಹ್–ಅಸ್–ಸಲಾತಿನ್' ಆಧರಿಸಿ ರಚಿಸಿದ ಇಸಾಮಿಯ ಬದುಕನ್ನು ಕುರಿತ ಕಾವ್ಯರೂಪದ ಪುಸ್ತಿಕೆ ಪ್ರಕಟಿಸಿದರು.

'ತಬಾಕತ್ ಎ ಅಕ್ಬರಿ' ಅಥವಾ 'ತಾರೀಕ್ ಎ ಫೆರಿಸ್ತಾ' ಗಿಂತ ಎರಡುವರೆ ಶತಮಾನ ಮುಂಚೆ ರಚಿತವಾದ ಮಧ್ಯಕಾಲೀನ ಭಾರತದ ಇತಿಹಾಸವನ್ನು ಸಮಗ್ರವಾಗಿ ಹಿಡಿದಿಟ್ಟ ಮೊದಲ ಗ್ರಂಥ 'ಫುತೂಹ್–ಅಸ್–ಸಲಾತಿನ್'. 'ಇಸಾಮಿಯು ಈ ಗ್ರಂಥ ರಚನೆಗೆ ಮುನ್ನ ನಡೆಸಿದ ಅಧ್ಯಯನದ ವಿವರ ಅಥವಾ ಪರಿಶೀಲಿಸಿದ ಗ್ರಂಥಗಳ ಮಾಹಿತಿ ನೀಡಿಲ್ಲ. ಆದರೆ, ಈ ಗ್ರಂಥವನ್ನು ಕೂಲಂಕಷವಾಗಿ ಗಮನಿಸಿದರೆ ಇಸಾಮಿಯು ಅಮೀರ್ ಖುಸ್ರೋನ 'ಮಿಫ್ತಾಹಿಲ್ ಫುತುಹ್', 'ಖಿರಾನುಸ್ ಸದೇ' ಮತ್ತು 'ಖಿಸರ್‌ಖಾನ್ ದವಾಲ್‌ರಾನಿ' ಗ್ರಂಥಗಳ ಸಹಾಯ ಪಡೆದದ್ದು ಗಮನಕ್ಕೆ ಬರುತ್ತದೆ' ಎಂದು ಟಿ.ಎನ್.ದೇವರೆ ಅಭಿಪ್ರಾಯಪಡುತ್ತಾರೆ.

ಮಧ್ಯಕಾಲೀನ ಭಾರತದ ಇತಿಹಾಸದ ಮೊದಲ ಸಂಗ್ರಹಿತ ಗ್ರಂಥ ಎನ್ನುವ ಕಾರಣಕ್ಕಾಗಿ ಇತಿಹಾಸಕಾರರಿಗೆ ಮಹತ್ವದ ಆಕರ ಆಗಿದೆ. ಮೊಹಮ್ಮದ್ ಬಿನ್ ತುಘಲಕ್‌ನನ್ನು ಕುರಿತ ಪುಸ್ತಕಕ್ಕಾಗಿ ಈ ಗ್ರಂಥದಲ್ಲಿನ ಮಾಹಿತಿಯನ್ನ ವ್ಯಾಪಕವಾಗಿ ಬಳಸಿಕೊಂಡಿದ್ದಾರೆ. 'ತಾರೀಕ್ ಎ ಫೆರಿಸ್ತಾ' ಗಿಂತ ಹೆಚ್ಚು ಕುತೂಹಲ ಮತ್ತು ಆಸಕ್ತಿದಾಯಕ ಗ್ರಂಥ. ದಿನಾಂಕಗಳನ್ನು ನೀಡುವಲ್ಲಿ ಹಾಗೂ ಯುದ್ಧದ ವಿವರಗಳನ್ನು ಒದಗಿಸುವಲ್ಲಿ ಇಸಾಮಿ ತೋರಿಸಿದ ಶ್ರದ್ಧೆ ಭಾರತೀಯ ಇತಿಹಾಸ ಕುರಿತ ಗ್ರಂಥಗಳಲ್ಲಿಯೇ ಅಪರೂಪದ ಸಂಗತಿ' ಎಂದು ಹುಸೇನ್ ವಿವರಿಸುತ್ತಾರೆ.

ಸಾಹಿತ್ಯ ಚರಿತ್ರೆ ರಚಿಸಿದ ಯಾವೊಬ್ಬ ಲೇಖಕರೂ ಇಸಾಮಿಯ ಕುರಿತು ಉಲ್ಲೇಖ ಕೂಡ ಮಾಡಿಲ್ಲ. 'ಮಜ್ಮಾ ಉಲ್ ಟಸ್ಕರ್' ಗ್ರಂಥದ ಲೇಖಕ

ಪ್ರಾಸಂಗಿಕವಾಗಿ 'ದೆಹಲಿಯ ಕವಿ ಇಸಾಮುದ್ದೀನ್' ಎಂದು ಉಲ್ಲೇಖಿಸುತ್ತಾನೆ. ಇಸಾಮಿ ಎಂಬುದು ಮನೆತನದ ಹೆಸರೇ ಹೊರತು ವ್ಯಕ್ತಿನಾಮ ಅಲ್ಲ. ಅರೇಬಿಯಾದ ಸುಲ್ತಾನ್‌ರ ಬಳಿ ಕೆಲಸ ಮಾಡುತ್ತಿದ್ದ ಪೂರ್ವಜರೊಬ್ಬರಿಂದ 'ಇಸಾಮಿ' ಎಂಬ ಹೆಸರು ತೆಗೆದುಕೊಳ್ಳಲಾಗಿದೆ ಎಂದು ತಿಳಿದು ಬರುತ್ತದೆ. ಸಾಹಿತ್ಯದ ಇತಿಹಾಸಕಾರರಿಂದ ಇಸಾಮಿ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. ಆದರೆ, ಇಸಾಮಿಯೇ ತನ್ನ ಬಗ್ಗೆ ಅಲ್ಲಲ್ಲಿ ವಿವರಗಳನ್ನು ನೀಡುವ ಮೂಲಕ ಕೊರತೆಯನ್ನು ನೀಗಿಸಿದ್ದಾರೆ.

ಖ್ವಾಜಾ ಅಬ್ದ್ ಮಲಿಕ್ ಇಸಾಮಿಯ ಪೂರ್ವಜ ಫಕ್ರ್ ಮಲಿಕ್ ಇಸಾಮಿಯು ಸುಲ್ತಾನ್ ಇಲ್ತಮಷ್‌ನ ಕಾಲದಲ್ಲಿ ಬಾಗ್ದಾದ್‌ನಿಂದ ಬಂದು ದೆಹಲಿಯಲ್ಲಿ ನೆಲೆಸಿದ್ದ. ಇಸಾಮಿ ಕುಟುಂಬದ ಸದಸ್ಯರು ನಂತರದ ದಿನಗಳಲ್ಲಿ ದೆಹಲಿ ಸುಲ್ತಾನ್‌ರ ಬಳಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ಖ್ವಾಜಾ ಅಬ್ದ್ ಮಲಿಕ್‌ನ ಅಜ್ಜ ಅಜೀಜುದ್ದೀನ್‌ನು ಸುಲ್ತಾನ್ ಬಲ್ಬನ್‌ನ ಆಸ್ಥಾನದಲ್ಲಿ ಬೇಟೆಗಾರರ ವಿಭಾಗದ ಮುಖ್ಯಸ್ಥನಾಗಿದ್ದನು.

1351ರಲ್ಲಿ ತನಗೆ '41 ವರ್ಷ' ವಯಸ್ಸು ಎಂದು ದಾಖಲಿಸಿರುವುದರಿಂದ ಇಸಾಮಿಯ ಜನ್ಮವರ್ಷ 1311 ಎಂದು ನಿರ್ಧರಿಸಬಹುದು. ಅದು ದೆಹಲಿಯಲ್ಲಿ. ಮೊಹಮ್ಮದ್ ಬಿನ್ ತುಘಲಕ್‌ನು 1327ರಲ್ಲಿ ರಾಜಧಾನಿಯನ್ನು ದೆಹಲಿಯಿಂದ ದೌಲತಾಬಾದ್‌ಗೆ ಸ್ಥಳಾಂತರಿಸಿದಾಗ ಅಜೀಜುದ್ದೀನ್ ಕೂಡ ಒತ್ತಾಯ ಪೂರ್ವಕವಾಗಿ ದೆಹಲಿ ತೊರೆಯಬೇಕಾಯಿತು. 90 ವರ್ಷ ವಯಸ್ಸಿನ ಅಜೀಜುದ್ದೀನ್‌ನ ಮಾರ್ಗಮಧ್ಯದಲ್ಲಿಯೇ ತಿಲಾಪತ್ ಎಂಬಲ್ಲಿ ಅಸು ನೀಗಿದ. ಆಗ ಇಸಾಮಿಗೆ 16ರ ಹರಯದ ವಯಸ್ಸು. ಅಜ್ಜನ ಜೊತೆ ಪ್ರಯಾಣ ಮಾಡುತ್ತಿದ್ದ ಖ್ವಾಜಾ ಅಬ್ದ್ ಮಲಿಕ್ ಇಸಾಮಿ ಕೂಡ ಮಾರ್ಗ ಮಧ್ಯದಲ್ಲಿ ಹಲವು ರೀತಿಯ ಸಂಕಷ್ಟಗಳಿಗೆ ಈಡಾಗಬೇಕಾಯಿತು.

ತುಘಲಕ್‌ನ ನಿರಂಕುಶ ಪ್ರಭುತ್ವಕ್ಕೆ ಬಲಿಯಾದವರ ಪೈಕಿ ಇಸಾಮಿ ಕೂಡ ಒಬ್ಬನಾಗಿದ್ದ. ಇಸಾಮಿಯು ತನ್ನ 40ನೇ ವಯಸ್ಸಿನವರೆಗೆ ದೌಲತಾಬಾದ್‌ನಲ್ಲಿಯೇ ವಾಸಿಸುತ್ತಿದ್ದ. ಆದರೆ, ಅವನಿಗೆ ಬದಲಾವಣೆಗೆ ಒಗ್ಗಿಕೊಳ್ಳುವುದು ಸಾಧ್ಯವಾಗಲಿಲ್ಲ. ಸದಾ ಶಾಂತವಾಗಿರುವ ಪರಿಸರದಲ್ಲಿ ವೈರಾಗಿಯಂತೆ ಇರುವ ಮನಸ್ಥಿತಿ ಬೆಳೆಸಿಕೊಂಡಿದ್ದ ಇಸಾಮಿಯು ಸಾಹಿತ್ಯದಲ್ಲಿ ಆಸಕ್ತಿಯುಳ್ಳವನಾಗಿದ್ದ. ಫಾರಸಿ ಶಾಸ್ತ್ರೀಯ ಗ್ರಂಥಗಳನ್ನು ಅಧ್ಯಯನ ನಡೆಸುವುದು ಇಸಾಮಿಗೆ ಪ್ರಿಯವಾದ ಹವ್ಯಾಸವಾಗಿತ್ತು. ಫಿರ್ದೋಸಿ, ನಿಜಾಮಿ, ಸಾದಿಯ ಬರಹಗಳನ್ನು ಬಹುವಾಗಿ

ಮೆಚ್ಚಿಕೊಂಡಿದ್ದ. ಸಾದಿಯ ಬದುಕಿನ ಬಗ್ಗೆ ಮಾರ್ಗದರ್ಶನ ಮಾಡುವ ಮಾದರಿಯ ಸಾಲುಗಳನ್ನು ಅಲ್ಲಲ್ಲಿ ಪ್ರಸ್ತಾಪಿಸಿದ್ದಾನೆ. ಹಾಗೆಯೇ ಬೆಳಗು ಮತ್ತು ಸಂಜೆಗಳನ್ನು ವರ್ಣಿಸುವ ನಿಜಾಮಿಯ 'ಸಿಕಂದರ್‌ನಾಮಾ' ಗ್ರಂಥದ ಸುಂದರ ಪದ್ಯಗಳನ್ನು ಉಲ್ಲೇಖಿಸಿದ್ದಾನೆ. ತನ್ನ ಸಾಹಿತ್ಯದ ಪ್ರೀತಿ–ಒಲವಿನಿಂದಾಗಿಯೇ ಇಸಾಮಿ ಹರಯದ ದಿನಗಳಲ್ಲಿ ಕೆಲವು ದಿವಾನ್‌ಗಳ ರಚನೆಗೆ ಕೈ ಹಾಕಿದ್ದ. ದುರ್ದೈವದಿಂದ ಅವೆಲ್ಲವೂ ದೆಹಲಿಯಿಂದ ದೌಲತಾಬಾದ್‌ಗೆ ಬರುವ ಮಾರ್ಗ ಮಧ್ಯದಲ್ಲಿ ಕಳೆದುಹೋದವು. ಜೀವಿತ ಅವಧಿಯ ಮಹತ್ವದ 'ಸಾಧನೆ' ಎಂದು ಭಾವಿಸಿದ್ದ ಕಳೆದದ್ದರಿಂದ ಇಸಾಮಿಯು ಸಹಜವಾಗಿಯೇ ಬೇಸರಿಸಿಕೊಂಡಿದ್ದ. ಅದೇ ದಿನಗಳಲ್ಲಿ ಭಾರತ ತೊರೆದು ಮೆಕ್ಕಾಗೆ ಯಾತ್ರೆ ಹೋಗಲು ಬಯಸಿದ. ಅದೇ ಹೊತ್ತಿಗೆ ದೌಲತಾಬಾದ್‌ನಲ್ಲಿ ಕಾಜಿ ಬುರ್ಹಾನುದ್ದೀನ್ ಎಂಬವರ ಒಡನಾಟ ದೊರೆಯಿತು. ಇಸಾಮಿಯ ಕಾವ್ಯಪ್ರೀತಿಯನ್ನು ಅರಿತ ಬುರ್ಹಾನುದ್ದೀನ್ ಅವನನ್ನು ಅಲಾವುದ್ದೀನ್‌ನ ಆಸ್ಥಾನಕ್ಕೆ ಕರೆದುಕೊಂಡು ಹೋದ. ಪ್ರಭುತ್ವದ ನಿಲುವುಗಳಿಂದಾಗಿ ಜೀವನವಿಡಿ ಸಂಕಷ್ಟಕ್ಕೆ ಒಳಗಾಗಿದ್ದ ಇಸಾಮಿಗೆ ಅಲಾವುದ್ದೀನ್ ಹಸನ್ ಗಂಗು ಆಶ್ರಯ ದೊರೆತದ್ದು ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಮಾಡಿತು. ಅಲಾವುದ್ದೀನ್‌ನು ಇಸಾಮಿಗೆ ಫಿರ್ದೋಸಿಯ ಶಹಾನಾಮಾ ಮಾದರಿಯಲ್ಲಿ ಭಾರತದಲ್ಲಿ ಮುಸ್ಲಿಮ್ ದೊರೆಗಳ ದಂಡಯಾತ್ರೆ, ಆಡಳಿತವನ್ನು ಕುರಿತ ಕಾವ್ಯ ರಚಿಸುವಂತೆ ಸೂಚಿಸಿದ. ಸುಲ್ತಾನ್‌ನ ಮೆಚ್ಚುಗೆಯ ಮಾತುಗಳಿಂದ ಪ್ರೇರಣೆ ಪಡೆದ ಇಸಾಮಿ ತಕ್ಷಣವೇ ಕಾವ್ಯ ರಚನೆ ಆರಂಭಿಸಿ ಕೆಲವೇ ದಿನಗಳಲ್ಲಿ ಪೂರ್ಣಗೊಳಿಸಿದ.

ಧಾರ್ಮಿಕ ಪ್ರಜ್ಞೆಯ ಉಲೇಮಾಗಳ ಸಾಲಿಗೆ ಸೇರುತ್ತಿದ್ದ ಇಸಾಮಿಯು ಶ್ರದ್ಧಾವಂತ ಮುಸ್ಲಿಮ್‌ನಾಗಿದ್ದ. ಇಸ್ಲಾಮಿನ ಧರ್ಮ ಸಾಮ್ರಾಜ್ಯವನ್ನು ಬಹುವಾಗಿ ಇಷ್ಟಪಡುತ್ತಿದ್ದ. ಆದ್ದರಿಂದ ಮೂರ್ತಿ ಪೂಜೆಯ ವಿರೋಧಿಯಾಗಿದ್ದ. ಭಾರತದಲ್ಲಿ ಇಸ್ಲಾಮ್ ಹರಡುವಂತೆ ಮಾಡುವುದು ಪ್ರತಿಯೊಬ್ಬ ದೊರೆಯ ಆದ್ಯ ಕರ್ತವ್ಯ ಎಂದು ನಂಬಿದ್ದ. ಧಾರ್ಮಿಕ ಶ್ರದ್ಧೆ ಮತ್ತು ನಂಬಿಕೆಗಳ ಕಾರಣದಿಂದ ಜೀವನವಿಡೀ ಮದುವೆಯಾಗದೆ ವೈರಾಗ್ಯದ ಜೀವನ ನಡೆಸಿದ. ದೌಲತಾಬಾದ್‌ನ ಬುರ್ಹಾನುದ್ದೀನ್ ಎ ಘರೀಬ್ ಎಂಬ ಸಂತನ ಶಿಷ್ಯ ಸೂಫಿ ಸಂತ ಖ್ವಾಜಾ ಜೈನುದ್ದೀನ್‌ನ ಬಳಿ ಶಿಷ್ಯನಾಗಿದ್ದ. ಅವನ ಪ್ರಬಲವಾದ ಧಾರ್ಮಿಕ ಪ್ರಜ್ಞೆಯು ಕಾವ್ಯದುದ್ದಕ್ಕೂ ದಾಖಲಾಗಿದೆ. ಮಧ್ಯಕಾಲೀನ ಸುಲ್ತಾನ್‌ರನ್ನು ಕುರಿತು ಇಸಾಮಿಯು ತೆಗೆದುಕೊಂಡ ನಿಲುವು, ನಿರ್ಧಾರದ ಹಿಂದೆ ರಾಜಕೀಯ ಕಾರಣಗಳಿಗಿಂತ ಧಾರ್ಮಿಕ ಮತ್ತು ನೈತಿಕ ಅಂಶಗಳಿಗೇ ಹೆಚ್ಚು ಆದ್ಯತೆ

ನೀಡಿರುವುದು ಸ್ಪಷ್ಟವಾಗಿದೆ. ಮೊಹಮ್ಮದ್ ಬಿನ್ ತುಘಲಕ್‌ನ ವಿರೋಧಾಭಾಸದ ನಿಲುವುಗಳನ್ನು ಕಟುವಾಗಿ ಟೀಕಿಸುವ ಇಸಾಮಿಯು ಮಹಮೂದ್ ಘಜನಿ ಮತ್ತು ಅಲಾವುದ್ದೀನ್ ಬಹಮನ್ ಶಹಾರನ್ನು ಮೆಚ್ಚಿಕೊಳ್ಳುವುದರ ಹಿಂದೆ ಧಾರ್ಮಿಕ ಕಾರಣಗಳೇ ಪ್ರಧಾನವಾಗಿವೆ. ಹಾಗಾಗಿಯೇ ಭಾರತದ ಮೇಲೆ ದಂಡಯಾತ್ರೆ ಮಾಡಿದವರೆಲ್ಲ ಇಸಾಮಿಗೆ ನಾಯಕರಂತೆ ಕಾಣಿಸುತ್ತಾರೆ, ತುಘಲಕ್‌ನನ್ನು ಹೊರತು ಪಡಿಸಿ.

'ಫುತೂಹ್-ಅಸ್-ಸಲಾತಿನ್' ಮಧ್ಯಕಾಲೀನ ಭಾರತದ ಅವಧಿಯ ಅಧಿಕೃತ ಗ್ರಂಥ. ಜನರ ನೈತಿಕತೆ ಮತ್ತು ಸಚ್ಚಾರಿತ್ರ್ಯವನ್ನು ಹೆಚ್ಚಿಸುವ ಕಾರಣಕ್ಕಾಗಿ ರಚನೆ ಆದದ್ದರಿಂದ ಬೋಧಕತೆಗೆ ಆದ್ಯತೆ ದೊರೆತು ಇತಿಹಾಸದ ಸಂಗತಿ ಹಿಂದಕ್ಕೆ ಸರಿದಿವೆ. ಸತ್ಯ, ಸರಳತೆ, ನ್ಯಾಯ-ನೀತಿ, ತ್ಯಾಗ ಕುರಿತ ಇಸಾಮಿಯ ಸಾಲುಗಳಲ್ಲಿ ಕಾವ್ಯಕ್ಕಿಂತ ಹೆಚ್ಚಾಗಿ ಬುದ್ಧಿಮಾತು ಹೇಳುವುದಕ್ಕೆ ಹೆಚ್ಚು ಮಹತ್ವ. ದುಷ್ಟತನ, ಕೆಟ್ಟ ನಡವಳಿಕೆಯ ಪರಿಣಾಮದಿಂದಲೇ ದೊರೆ ಅಧಿಕಾರ ಕಳೆದುಕೊಳ್ಳುತ್ತಾನೆ ಮತ್ತು ಸಾವಿಗೆ ಈಡಾಗುತ್ತಾನೆ ಎಂಬ ಅಂಶವನ್ನು ಇಸಾಮಿ ತನ್ನ ಗ್ರಂಥದಲ್ಲಿ ದಾಖಲಿಸಿದ್ದಾನೆ.

ಇಸಾಮಿಯು ಸೂಫಿ ಪರಂಪರೆಯನ್ನು ಬಹುವಾಗಿ ಮೆಚ್ಚಿಕೊಂಡಿದ್ದ. ಆದ್ದರಿಂದ ಅವನ 'ಫುತೂಹ್-ಅಸ್-ಸಲಾತಿನ್' ಗ್ರಂಥದಲ್ಲಿ ಆಧ್ಯಾತ್ಮಿಕ ಕಥೆಗಳಿಗೆ ಹೆಚ್ಚಿನ ಆದ್ಯತೆ ದೊರೆತಿದೆ. ಬಹಳಷ್ಟು ಕಡೆಗಳಲ್ಲಿ ಇಸಾಮಿ ಉಲ್ಲೇಖಿಸುವ ಕಥೆಗಳು, ಸಂಗತಿಗಳು ಅಪ್ರಾಸಂಗಿಕ ಅನ್ನಿಸುತ್ತವೆ. ಅಷ್ಟೇ ಅಲ್ಲ, ಅವನೇ ಹೇಳಲು ಹೊರಟ ಮೂಲಕಥೆಗೆ ಅಡ್ಡಿಯನ್ನುಂಟು ಮಾಡುತ್ತವೆ. ಇಂತಹುದೇ ಕಾರಣಗಳು 'ತಾರೀಕ್ ಎ ಫೆರಿಸ್ತಾ' ಅನುವಾದ ಮಾಡಿದ ಬ್ರಿಗ್ಸ್‌ನು 'ಫುತೂಹ್-ಅಸ್-ಸಲಾತಿನ್' ನ ಒಂದು ಇತಿಹಾಸಕ್ಕೆ ಸಂಬಂಧಿಸಿದ ರಮ್ಯಕಥನ ಮಾತ್ರ ಎಂದು ಐತಿಹಾಸಿಕ ಮಹತ್ವ ಅಲ್ಲಗಳೆಯುವುದಕ್ಕೆ ಪ್ರೇರಣೆ ನೀಡಿರಬಹುದು.

ಇಸಾಮಿಗೆ ಐತಿಹಾಸಿಕ ಘಟನೆಗಳ ಕುರಿತು ಖಚಿತವಾದ ಮಾಹಿತಿ ಇತ್ತು. ಹಾಗಾಗಿಯೇ ಅವುಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿದ್ದಾನೆ. ಒಂದರ ಮೇಲೆ ಮತ್ತೊಂದು ಘಟನೆ ಸೇರಿ ಆಭಾಸ ಉಂಟಾಗದಂತೆ ನೋಡಿಕೊಂಡಿದ್ದಾನೆ. ನಾಟಕೀಯ ಅಂಶಗಳನ್ನು ಸೇರಿಸಿಕೊಂಡಿರುವ ಇಸಾಮಿಯು ಓದುಗರಿಗೆ ಮಾಹಿತಿ ತಲುಪಿಸುವುದಕ್ಕಾಗಿ ಧೀರ್ಘ ಮತ್ತು ಆತ್ಮಕಥನಾತ್ಮಕ ಮಾದರಿ ಭಾಷಣಗಳನ್ನು ಅಳವಡಿಸಿಕೊಂಡಿದ್ದಾನೆ. ಮಹಾತ್ವಾಕಾಂಕ್ಷೆಯ ಕಾರಣಕ್ಕಾಗಿ ನಡೆಯುವ ತಿಕ್ಕಾಟಗಳನ್ನು ಘಟನೆಯಲ್ಲಿ ಭಾಗವಹಿಸಿದ ವ್ಯಕ್ತಿಯೇ ವಿವರಿಸುವ

ರೀತಿಯಲ್ಲಿ ಇರುವುದರಿಂದ ನೈಜತೆಗೆ ಮಹತ್ವ ದೊರೆತಿದೆ. ಲೇಖಕ ಎಲ್ಲ ಘಟನೆಗಳಿಗೆ ಸಾಕ್ಷಿಯಾಗಿ ನಿಂತು ನೋಡುವುದರಿಂದ ನಿರ್ಲಿಪ್ತತೆ ಉಳಿಸಿಕೊಳ್ಳುವುದು ಸಾಧ್ಯವಾಗಿದೆ. ಆದರೆ, ತುಘಲಕ್‌ನಿಗೆ ಸಂಬಂಧಿಸಿದಂತೆ ಮಾತ್ರ ವಸ್ತುನಿಷ್ಠವಾಗಿ ಯೋಚಿಸುವುದು ಕವಿಗೆ ಸಾಧ್ಯವಾಗಿಲ್ಲ. 'ಎಲ್ಲ ಯಶಸ್ಸಿನ ದಾರಿಗಳು ಕೊನೆಗೆ ಮುಗಿಯುವುದು ಸಮಾಧಿಯಲ್ಲಿಯೇ' ಎನ್ನುವ ಇಸಾಮಿಯ ಸಾಲು ಅವನ ಧೋರಣೆಯನ್ನು ಬಿಂಬಿಸುತ್ತದೆ. ಇಸಾಮಿಯು ಘಟನೆಗಳನ್ನು ಕಾವ್ಯ ಆಗಿಸುವಲ್ಲಿ ಯಶಸ್ವಿ ಆಗಿರಬಹುದು. ಆದರೆ, ಅವನೊಬ್ಬ ಸೃಜನಶೀಲ, ಕಲ್ಪನಾಲೋಕಕ್ಕೆ ಕರೆದೊಯ್ಯುವ ಕವಿಯಲ್ಲ. ಅವನ ಕಾವ್ಯದಲ್ಲಿ ಅಪರೂಪಕ್ಕೆ ಒಮ್ಮೊಮ್ಮೆ ಸ್ವಂತ ಉಪಮೆ, ರೂಪಕ ನೋಡಲು ಸಿಗುತ್ತವೆ. ಇಸಾಮಿಯ ಸರಳ, ನೇರವಾಗಿ ಇತಿಹಾಸದ ಘಟನೆಗಳನ್ನು ದಾಖಲಿಸುವ ರೀತಿ ನೈತಿಕತೆಯನ್ನು ಎತ್ತಿಹಿಡಿಯುವ ಮನೋಭಾವ ಹೊಂದಿರುವ 'ಫುತೂಹ್–ಅಸ್–ಸಲಾತಿನ್' ಗ್ರಂಥವು ಭಾರತೀಯ ಫಾರಸಿ ಸಾಹಿತ್ಯ ಅಧ್ಯಯನ ನಡೆಸಲು ಬಯಸುವವರಿಗೆ ಮಹತ್ವದ ಗ್ರಂಥ ಎಂಬುದರಲ್ಲಿ ಎರಡು ಮಾತಿಲ್ಲ.

## ಮಸ್ನವಿಯ ಸ್ವರೂಪ:

ಅಂತ್ಯಪ್ರಾಸಕ್ಕಿಂತ ಹಿಂದೆ ಇರುವ ಪದ ಹಾಗೂ ಒಳಪ್ರಾಸ ಇರುವ 'ಕಾಫಿಯಾ' ಎಂದು ಕರೆಯಲಾಗುತ್ತದೆ. ಸಾಮಾನ್ಯ ಅಂತ್ಯ ಇರುವ ಪದವನ್ನು 'ರದೀಫ್' ಎನ್ನಲಾಗುತ್ತದೆ. ಮತ್ಲಾಗಳಲ್ಲಿಯೇ ಇರುವ ಗಜಲ್. ಕವಿತೆಯ ಸಾಲಿನ ಕೊನೆಯಲ್ಲಿ ಬರುವ ಸಾಮಾನ್ಯ ಅಂತ್ಯಪದವನ್ನು ರದೀಫ್ ಎಂದು ಕರೆಯಲಾಗುತ್ತದೆ. ಇದು ಒಂದು ಪದವಿರಬಹುದು ಅಥವಾ ಹಲವು ಪದಗಳ ಸಮೂಹ ಆಗಿರಬಹುದು. ರದೀಫ್‌ಗಿಂತ ಮುಂಚಿನ ಸ್ಥಳದಲ್ಲಿ ಸ್ಥಿತಗೊಂಡಿರುವ ಪ್ರಾಸಪದವನ್ನು 'ಕಾಫಿಯಾ' ಎನ್ನಲಾಗುತ್ತದೆ. ಇದನ್ನು ಒಳಪ್ರಾಸ ಎಂದು ಗುರುತಿಸಬಹುದು. ಅಂತ್ಯಪ್ರಾಸಕ್ಕಿಂತ ಹಿಂದೆ ಇರುವ ಪದ. ಒಳಪ್ರಾಸಗಳ ದ್ವಿಪದಿಗಳಲ್ಲಿ ಸಾಲುಗಳ ಮಿತಿ ಇಲ್ಲದೆ ಕಥೆ ಹೇಳುವ ಕಾವ್ಯ ಪ್ರಕಾರವನ್ನು ಮಸ್ನವಿ ಎಂದು ಕರೆಯಲಾಗುತ್ತದೆ. ಧಾರ್ಮಿಕ, ನೀತಿ ಪಾಠ ಹೇಳುವ ಅಥವಾ ರಮ್ಯ ಕಥಾನಕಗಳಲ್ಲದೇ ಅರಸುಗಳ ಪರಾಕ್ರಮವನ್ನೂ ಮಸ್ನವಿ ಪ್ರಕಾರದಲ್ಲಿ ರಚನೆಯಾಗಿವೆ

## ಅಬ್ದುಲ್ ಮಲಿಕ್ ಅಜಾರಿ ಎ ತುಸಿ

ಅಜಾರಿಯ ತಂದೆಯು ಖುರಾಸಾನ್ ರಾಜ್ಯದ ಇಸ್ಫರಾಯಿನಿ ಪಟ್ಟಣದಲ್ಲಿ ಪ್ರಮುಖ ಆಡಳಿತ ಅಧಿಕಾರಿಯಾಗಿದ್ದ. ಮಾರ್ವ್‌ನಲ್ಲಿ ಹುಟ್ಟಿದ

ಅಜಾರಿಯ ಶಿಕ್ಷಣ ಇಸ್ಫರಾಯಿನಿಯಲ್ಲಿ ಆಯಿತು. ಹರೆಯದ ದಿನಗಳಲ್ಲಿ ಕಾವ್ಯದ ಗುಂಗು ಹಿಡಿಸಿಕೊಂಡಿದ್ದ ಅಜಾರಿಯು ಸ್ತುತಿ ಪದ್ಯ ರಚನೆಯಲ್ಲಿ ಹೆಸರುವಾಸಿಯಾಗಿದ್ದ. ಕವಿಯಾಗಿ ಜನಪ್ರಿಯನಾಗಿದ್ದ ಅಜಾರಿ ಯುವರಾಜ ಉಲುಗ್‌ಬೇಗ್‌ನ ಆಸ್ಥಾನ ಸೇರಿಕೊಂಡ. ಈ ಅವಧಿಯಲ್ಲಿ ಅಜಾರಿಯು ಗಣ್ಯರು, ಯುವರಾಜರು, ಅಧಿಕಾರಿಗಳನ್ನು ಹೊಗಳುವ ಸ್ತುತಿಪದ್ಯಗಳನ್ನು ರಚಿಸಿದ. ಸ್ತುತಿಪದ್ಯಗಳ ಪ್ರಕಾರದಲ್ಲಿಯೇ ಮಹತ್ವದ ಕಾವ್ಯ ಸಾಧನೆ ಮಾಡಿದ್ದ ಸಲ್ಮಾನ್–ಎ–ಸಾವಜಿಯ ಪದ್ಯಗಳು ಅಜಾರಿಗೆ ಮಾದರಿಯಾಗಿದ್ದವು. ಖುರಾಸಾನ್‌ನಲ್ಲಿ ಇದ್ದ ದಿನಗಳಲ್ಲಿಯೇ ಅಲಿ ಶಿಹಾಬ್–ಎ–ತುರ್‌ಶಿಜಿಯ ಜೊತೆಗೆ ಕಾವ್ಯಸ್ಪರ್ಧೆಗೆ ಇಳಿದಿದ್ದ. ದೌಲತ್‌ಶಹಾ ಎಂಬವನು ಇಬ್ಬರು ಕವಿಗಳ ತುಣುಕುಗಳನ್ನು ದಾಖಲಿಸಿಟ್ಟಿದ್ದಾನೆ. ಸ್ತುತಿಪದ್ಯಕಾರನಾಗಿ ಪಡೆದ ಜನಪ್ರಿಯತೆಯು ಅಜಾರಿಗೆ ಅರಸ ಶಾರುಕ್ ಮಿರ್ಜಾನ (ಕ್ರಿ.ಶ. 1404–1447) ಆಸ್ಥಾನದಲ್ಲಿ ಅವಕಾಶ ಕಲ್ಪಿಸಿತು. ಶಾರುಕ್ ಮಿರ್ಜಾನು ಅಜಾರಿಗೆ ಆಸ್ಥಾನ ಕವಿ (ರಾಷ್ಟ್ರಕವಿ) ಗೌರವ ನೀಡಿದ. ಅದಕ್ಕೆ ಪ್ರತಿಕ್ರಿಯೆಯಾಗಿ ಅಜಾರಿಯು ಶಾರುಕ್‌ನ ಸಾಧನೆಗಳನ್ನು ಹಾಡಿಹೊಗಳುವ ಪದ್ಯಗಳನ್ನು ರಚಿಸಿದ.

ಅರಸನ ಆಸ್ಥಾನದಲ್ಲಿ ಗೌರವ ದೊರೆತರೂ ಯುವರಾಜನಿಗೆ ಆತ್ಮೀಯನಾಗಿದ್ದರೂ ಅಜಾರಿಯ ಒಳಗಿನ ಧಾರ್ಮಿಕ ವಿಷಯಗಳ ಕಡೆಗಿನ ತುಡಿತ ಸುಮ್ಮನಿರಗೊಡಲಿಲ್ಲ. ದೈವಿಕ ಸಂಗತಿಗಳ ಕಡೆಗಿನ ಆಸಕ್ತಿಯು ಆಸ್ಥಾನಕವಿ ಹುದ್ದೆಯನ್ನು ತೊರೆಯುವಂತೆ ಮಾಡಿತು. ಶೇಕ್ ಮುಹಿಯಿದ್ದೀನ್–ಎ–ತುಸಿ ಅಲ್–ಘಜಾಲಿಯ ಬಳಿ ಶಿಷ್ಯತ್ವ ವಹಿಸಿದ. ಅವನಿಂದ ಪವಿತ್ರ ಗ್ರಂಥ ಕುರಾನ್‌ನ ವ್ಯಾಖ್ಯಾನದ ಪಾಠ ಕಲಿತ. ಹಾಗೆಯೇ ಮೆಕ್ಕಾಗೆ ಯಾತ್ರೆ ಹೋಗಿ ಬಂದ. ದೀರ್ಘಯಾತ್ರೆಯ ಸಂದರ್ಭದಲ್ಲಿ ಆತ್ಮತೃಪ್ತಿಗಾಗಿ ಔಲಿಯಾ ಮತ್ತು ಇತರ ಧಾರ್ಮಿಕರನ್ನು ಭೇಟಿ ಮಾಡಿ ಗೌರವ ಸಲ್ಲಿಸುವ ಪರಿಪಾಠ ಬೆಳೆಸಿಕೊಂಡ.

ಶಾರುಖ್ ಮಿರ್ಜಾನಿಂದ ಎಲ್ಲ ರೀತಿಯ ಗೌರವಗಳಿಗೆ ಪಾತ್ರನಾಗಿದ್ದ ಶಹಾ ನಿಯಾಮತ್ ಅಲ್ಲಾ ಕಿರ್ಮಾನಿಯು ಅಜಾರಿಯ ಮೇಲೆ ಅಗಾಧ ಪ್ರಭಾವ ಬೀರಿದ್ದ. ಕಿರ್ಮಾನಿಯ ಸಾವಿನ ನಂತರ ಹತಾಶನಾದ ಅಜಾರಿಯು ಕಾಲ್ನಡಿಗೆಯಲ್ಲಿಯೇ ಮೆಕ್ಕಾಗೆ ಯಾತ್ರೆ ಆರಂಭಿಸಿದ. ಎರಡು ವರ್ಷಗಳ ಕಾಲ ಮೆಕ್ಕಾದಲ್ಲಿಯೇ ಕಳೆದ ಅಜಾರಿಯು ಅಲ್ಲಿಂದ ಭಾರತದ ದಖನ್ ಕಡೆಗೆ ಪ್ರಯಾಣ ಬೆಳೆಸಿದ. ಅಷ್ಟೊತ್ತಿಗಾಗಲೇ ನಿಯಾಮತ್ ಅಲ್ಲಾ ಕಿರ್ಮಾನಿಯ ಪುತ್ರ ಖಲಿಲ್ ಅಲ್ಲಾ ಕಿರ್ಮಾನಿ ಬೀದರ್‌ಗೆ ಬಂದು ನೆಲೆಸಿದ್ದ.

ದಖನ್ ಕರಾವಳಿ ತಲುಪುವ ಮುನ್ನವೇ ಅಜಾರಿಯ ಕೀರ್ತಿಯು ಎಲ್ಲೆಡೆ ಪಸರಿಸಿತ್ತು. ಬಹಮನಿ ರಾಜಧಾನಿಯಲ್ಲಿ ಅಜಾರಿಯನ್ನು ವೈಭವಪೂರ್ಣವಾಗಿ ಸ್ವಾಗತಿಸಲಾಯಿತು. ಅರಸ ಉಡುಗೊರೆಯಾಗಿ ನೀಡಬಯಸಿದ ಸಾವಿರ ದಿನಾರುಗಳನ್ನು ಸ್ವೀಕರಿಸಲು ಅಜಾರಿ ನಮ್ರವಾಗಿಯೇ ನಿರಾಕರಿಸಿದ. ಅಜಾರಿಯ ಈ ನಡವಳಿಕೆಯು ದೊರೆ ಅಹಮದ್ ಶಹಾನಿಗೆ ಹಂಗಿಗೆ ಒಳಗಾಗದ ಮನೋಭಾವ ಅನ್ನಿಸಿ ಮೆಚ್ಚುಗೆಗೆ ಪಾತ್ರವಾಯಿತು.

ಫಿರ್ದೋಸಿಯ ಶಹಾನಾಮಾದ ಮಾದರಿಯಲ್ಲಿ ಕಾವ್ಯರೂಪದಲ್ಲಿ ಬಹಮನಿ ಇತಿಹಾಸ ರಚಿಸುವ ಕಾರ್ಯವನ್ನು ಅಹಮದ್ ಶಹಾ ಅಲಿಯು ಅಜಾರಿಗೆ ವಹಿಸಿದ. ಅತಿಯಾದ ಆತ್ಮವಿಶ್ವಾಸದಿಂದಲೇ ರಚನೆ ಆರಂಭಿಸಿದ ಅಜಾರಿಯು ಅತ್ಯಂತ ಕಡಿಮೆ ಅವಧಿಯಲ್ಲಿಯೇ ಬಹಮನಿ ಅರಸರ ಸಾಧನೆಗಳನ್ನು ಕಾವ್ಯಕ್ಕೆ ಅಳವಡಿಸಿದ. ಸಮಕಾಲೀನ ಅರಸರ ವರೆಗಿನ ಕಾವ್ಯ ರಚನೆ ಮಾಡಿದ ಅಜಾರಿಯು ಆಸ್ಥಾನದ ಬದುಕಿನಿಂದ ಬೇಸತ್ತು ಕಾವ್ಯ ರಚನೆಯನ್ನು ನಿಲ್ಲಿಸಿದ. ಸುತ್ತಲು ನೆರೆದ ಹೊಗಳುಭಟರ ಮುಖಸ್ತುತಿಯ ಮಾತುಗಳು ರೇಜಿಗೆ ಹುಟ್ಟಿಸಿದವು. ಅರಮನೆಯ ಹಂಗಿನಿಂದ ತಪ್ಪಿಸಿಕೊಂಡು ತನ್ನೂರಿಗೆ ಮರಳಲು ಬಯಸಿದ. ಪರವಾನಗಿ ನೀಡಲು ನಿರಾಕರಿಸಿದನಾದರೂ ಯುವರಾಜ ಅಲಾವುದ್ದೀನ್ ಮಧ್ಯಸ್ಥಿಕೆ ವಹಿಸಿದ್ದರಿಂದ ಅರಸ ಅನಿವಾರ್ಯವಾಗಿ ಒಪ್ಪಿಗೆ ಸೂಚಿಸಿದ. ಅದಕ್ಕಾಗಿ ಅಜಾರಿಯು ಬಹಮನ್‌ನಾಮಾದ ಸಾಲುಗಳನ್ನು ಇಸ್ಫರಾಯಿನ್‌ನಿಂದಲೇ ಬರೆದು ಕಳುಹಿಸುವ ಭರವಸೆ ನೀಡಬೇಕಾಯಿತು.

ಸ್ವಗ್ರಾಮಕ್ಕೆ ಮರಳಿದ ನಂತರವೂ ಕವಿ ತನ್ನ ಮಾತುಗಳನ್ನು ಉಳಿಸಿಕೊಂಡ ಅಲಾವುದ್ದೀನ್ ಆಡಳಿತದ ಅಂತ್ಯ ಮತ್ತು ಹುಮಾಯೂನ್‌ಶಹಾ ಆರಂಭದ ದಿನಗಳ ವರೆಗಿನ ಅವಧಿಯನ್ನು ಕಾವ್ಯಕ್ಕೆ ಅಳವಡಿಸಿದ. ಬಹಮನ್‌ನಾಮಾಕ್ಕಾಗಿ ಅಜಾರಿ 20 ಸಾವಿರಕ್ಕೂ ಹೆಚ್ಚು ಪದ್ಯ ರಚಿಸಿದ್ದ.

ಅಜಾರಿ 832ರಲ್ಲಿ ಇಸ್ಫರಾಯಿನ್‌ಗೆ ಮರಳಿದ ಅಜಾರಿ ಕಳೆದ 34 ವರ್ಷಗಳ ಅವಧಿಯಲ್ಲಿ ಲೌಕಿಕದ ಜಂಜಡದಿಂದ ದೂರವೇ ಉಳಿದಿದ್ದ. ಬೀದರ್‌ನಲ್ಲಿ ಅಹ್ಮದ್‌ನ ಆಸ್ಥಾನದಲ್ಲಿ ಇದ್ದ ಕಾಲದಲ್ಲಿ ಯುವರಾಜ ಅಲಾವುದ್ದೀನ್‌ಗೆ ಬೋಧಕನಾಗಿದ್ದ. ಚಾಕಣದಲ್ಲಿ ನಡೆದ ಅಫಾಕಿಗಳ ಮಾರಣಹೋಮದ ಮಾಹಿತಿ ದೊರೆತ ನಂತರ ತನ್ನ ಶಿಷ್ಯ ಅಲಾವುದ್ದೀನ್‌ಗೆ ಕಟುವಾದ ಶಬ್ದಗಳನ್ನು ಬಳಸಿ ಪತ್ರ ಬರೆದಿದ್ದ. ಅಫಾಕಿಗಳ ಅನ್ಯಾಯದ ಸಾವಿನ ಕುರಿತು ಸೂಕ್ತ ನಿಲುವು ಪ್ರಕಟಿಸಬೇಕು ಎಂದು ಕೋರಿದ್ದ. ತನ್ನ 82ನೇ ವಯಸ್ಸಿನಲ್ಲಿ 866ರಲ್ಲಿ ಅಸು ನೀಗಿದ. ತನ್ನ

ಜೀವಿತ ಅವಧಿಯಲ್ಲಿಯೇ ನಿರ್ಮಿಸಿದ್ದ ಗೋರಿಯಲ್ಲಿ ಅಜಾರಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ತನ್ನ ಗೋರಿಯ ಉಸ್ತುವಾರಿ ನೋಡಿಕೊಳ್ಳುವುದಕ್ಕಾಗಿ ನಿಧಿಯೊಂದನ್ನು ಸ್ಥಾಪಿಸಿಟ್ಟಿದ್ದ.

## ನಾಜಿರಿ

ಎರಡನೇ ಅಲಾವುದ್ದೀನ್ ಮತ್ತು ಹುಮಾಯೂನ್ ಶಹಾನ ಆಸ್ಥಾನದಲ್ಲಿ ಕವಿಯಾಗಿದ್ದ ನಾಜಿರಿಯ ಮೂಲ 'ತುಸಿ'. ಕಿರ್ಮಾನ್‌ದ ಸೂಫಿ ಸಂತ ಶಹಾ ನಿಯಾಮತ್ ಅಲ್ಲಾ ಕಿರ್ಮಾನಿಯ ಶಿಷ್ಯನಾಗಿದ್ದ ನಾಜಿರಿಯು ನಿಯಾಮತ್‌ನ ಕುಟುಂಬದ ಸದಸ್ಯರೊಂದಿಗೆ ಭಾರತಕ್ಕೆ ಆಗಮಿಸಿದ. ನಂತರ ಪ್ರಧಾನಿಯಾಗಿದ್ದ ಮಹಮೂದ್ ಗಾವಾನ್‌ನ ಆತ್ಮೀಯರಲ್ಲಿ ಒಬ್ಬನಾಗಿದ್ದ. ಗಾವಾನ್‌ನ ಒತ್ತಾಸೆಯಿಂದಾಗಿಯೇ ನಾಜಿರಿಗೆ ಆಸ್ಥಾನಕವಿಯ ಗೌರವ ಪ್ರಾಪ್ತವಾಗಿತ್ತು. ಹುಮಾಯೂನ್ ವಿರುದ್ಧ ಪಿತೂರಿ ಮಾಡಿದ ಆರೋಪದ ಮೇಲೆ ನಿಯಾಮತ್‌ನ ಮೊಮ್ಮಗ ಹಬೀಬ್ ಅಲ್ಲಾನ ಜೊತೆಗಿನ ಒಡನಾಟದ ಕಾರಣಕ್ಕಾಗಿ ನಾಜಿರಿ ಕೂಡ ಜೇಲು ವಾಸ ಅನುಭವಿಸಬೇಕಾಗಿತ್ತು.

ಆದರೆ, ಯೂಸುಫ್ ಟರ್ಕ್‌ನು ನಾಜಿರಿಯು ಜೈಲಿನಿಂದ ಬಿಡುಗಡೆ ಆಗುವಂತೆ ನೋಡಿಕೊಂಡ. ನಾಜಿರಿಯು ಹುಮಾಯೂನ್‌ನ ದುರಾಡಳಿತದ ಬಗ್ಗೆ ಎರಡು ಪದ್ಯ ಕೂಡ ರಚಿಸಿದ್ದಾನೆ. ನಾಜಿರಿಯು ತನ್ನ ಸ್ತುತಿಪದ್ಯಗಳ ಮೂಲಕ ಹೆಸರುವಾಸಿಯಾಗಿದ್ದ. ನಿಯಾಮತ್‌ನ ಪುತ್ರ ಖಲೀಲ್ ಅಲ್ಲಾ ಮತ್ತು ಅವನ ಮಕ್ಕಳ ಕುರಿತು ನಾಜಿರಿಯು ಹಲವು ಸ್ತುತಿಪದ್ಯ ರಚಿಸಿದ್ದಾನೆ. ಹಾಗೆಯೇ ಖಲೀಲ್ ಅಲ್ಲಾ ಮೃತಪಟ್ಟ ಸಂದರ್ಭದಲ್ಲಿ ನಾಜಿರಿಯು ವಿಲಾಪಗೀತೆ (ಎಲಿಜಿ) ರಚಿಸಿದ್ದ. ಧಾರ್ಮಿಕ ನಾಯಕರಾಗಿದ್ದ ಕಿರ್ಮಾನಿಯ ವಂಶಸ್ಥರ ಸನ್ನಡತೆ, ಮಾರ್ಗದರ್ಶನ ನೀಡುವ ಗುಣವನ್ನು ತನ್ನ ಪದ್ಯಗಳಲ್ಲಿ ಕೊಂಡಾಡಿದ್ದಾನೆ. ಅಜಾರಿ ಆರಂಭಿಸಿದ್ದ 'ಬಹಮನ್‌ನಾಮಾ'ವನ್ನು ಮುಂದುವರೆಸಿದ ಹಿರಿಮೆ ನಾಜಿರಿಗೆ ಸಲ್ಲುತ್ತದೆ.

ನಾಜರಿಯ ನಂತರ ಅವನ ಸಮಕಾಲೀನನಾಗಿದ್ದ ಸಮಿಯು 'ಬಹಮನ್‌ನಾಮಾ' ಪೂರ್ಣಗೊಳಿಸಿದ. ನಿಜಾಮಿ ರಚಿಸಿದ ಕಥನ ಕಾವ್ಯ 'ಕದಮರಾವ್ ಪದಮರಾವ್' (1421–34) ದಖನಿಯಲ್ಲಿ ರಚಿತವಾಗಿರುವ ಉರ್ದು ಭಾಷೆಯ ಅತ್ಯಂತ ಹಳೆಯ ಗ್ರಂಥ ಎಂದು ಗುರುತಿಸಲಾಗುತ್ತದೆ.

## ಖ್ವಾಜಾ ಇಮಾದುದ್ದೀನ್ ಮಹಮೂದ್ ಗಾವಾನ್
(1411– 5 ಏಪ್ರಿಲ್ 1481)

ಮೂವರು ಬಹಮನಿ ಅರಸರಿಗೆ ಪ್ರಧಾನಿಯಾಗಿದ್ದ ಖ್ವಾಜಾ ಮಹಮೂದ್ ಗಾವಾನ್‌ನು ತನ್ನ ಸಾಹಿತ್ಯ ಪ್ರೀತಿ, ಶಿಕ್ಷಣಪ್ರೇಮದಿಂದಾಗಿ ಹೆಸರುವಾಸಿಯಾಗಿದ್ದಾನೆ. ಉತ್ತರ ಇರಾನ್‌ನ ಗಿಲಾನ್ ಪ್ರಾಂತ್ಯದಿಂದ ವ್ಯಾಪಾರ ಮಾಡುವ ಉದ್ದೇಶದಿಂದ ಗಾವಾನ್ ಭಾರತಕ್ಕೆ ಬಂದ. ದೆಹಲಿಗೆ ಹೋಗಿ ಅಲ್ಲಿ ಕುದುರೆಗಳನ್ನು ಮಾರುವ ಉದ್ದೇಶ ಅವನದಾಗಿತ್ತು. ದಾಬೋಲ್ ಬಂದರಿನಲ್ಲಿ ಇಳಿದ ಸಂದರ್ಭದಲ್ಲಿ ನಡೆದ ಘಟನೆ ಅವನ ಯೋಜನೆ ಬದಲಿಸುವಂತೆ ಮಾಡಿತು. ದೆಹಲಿಗೆ ತೆರಳುವ ಮುನ್ನ ದಖನ್‌ನ ಬೀದರ್‌ಗೆ ಪ್ರಯಣಿಸಲು ನಿರ್ಧರಿಸಿದ. ಅದಕ್ಕೆ ಬೀದರ್‌ನಲ್ಲಿ ವಾಸಿಸುತ್ತಿದ್ದ ಖ್ಯಾತ ಸೂಫಿ ಸಂತ ನಿಯಾಮತ್ ಅಲ್ಲಾ ಕಿರ್ಮಾನಿಯ ಪುತ್ರ ಖಲೀಲ್ ಅಲ್ಲಾ ಕಿರ್ಮಾನಿಯನ್ನು ಭೇಟಿ ಮಾಡುವ ಉದ್ದೇಶ ಇತ್ತು. ಖಲೀಲ್ ಅಲ್ಲಾ ಕಿರ್ಮಾನಿ ಕಾಲಬಳಿ ಕುಳಿತು ಆಶೀರ್ವಾದ ಪಡೆಯುವ ಉದ್ದೇಶದಿಂದ ಗಾವಾನ್‌ನು ಬೀದರ್‌ಗೆ ಬಂದ. ರಾಜಪರಿವಾರಕ್ಕೆ ಹತ್ತಿರದವರಾಗಿದ್ದ ಖಲೀಲ್ ಅಲ್ಲಾನು ಮಧ್ಯಸ್ಥಿಕೆ ವಹಿಸಿ ಆಗಿನ ದೊರೆ ಎರಡನೇ ಅಲ್ಲಾವುದ್ದೀನ್‌ನಿಗೆ ಪರಿಚಯಿಸಿದ. ಅದು ಅವನ ಬದುಕಿನ ಗತಿ ಬದಲಿಸುವಂತೆ ಮಾಡಿತು. ಒಂದೊಂದೆ ಮೆಟ್ಟಿಲೇರುತ್ತ ಪ್ರಧಾನಿಯ ಹುದ್ದೆಯವರೆಗೂ ತಲುಪಿದ ಗಾವಾನ್‌ನು ತನಗೆ ಪ್ರಿಯವಾಗಿದ್ದ ಸಾಹಿತ್ಯ, ಸಂಸ್ಕೃತಿ ಕುರಿತಾದ ಪ್ರೀತಿಯನ್ನು ಬಿಟ್ಟುಕೊಡಲಿಲ್ಲ.

ಗದ್ಯ ಪದ್ಯಗಳೆರಡರ ರಚನೆಯಲ್ಲಿಯೂ ಗಾವಾನ್ ಸಿದ್ಧಹಸ್ತನಾಗಿದ್ದ. 'ಗಣಿತದಲ್ಲಿ ಗಾವಾನ್‌ನಿಗೆ ಸಮನಾರು ಇರಲಿಲ್ಲ' ಎಂದು ಫೆರಿಸ್ತಾ ಉಲ್ಲೇಖಿಸುತ್ತಾನೆ. ಅರಸ ಅಥವಾ ಗಣ್ಯವ್ಯಕ್ತಿಯ ಕುರಿತು ಶ್ಲಾಘನೆ ಇರುವ ವರ್ಣನಾತ್ಮಕ ಕಾವ್ಯ 'ಖಸಿದಾ'ಗಳನ್ನು ಕೂಡ ಗಾವಾನ್ ರಚಿಸಿದ್ದಾನೆ. ಗಾವಾನ್‌ನು 'ದಿವಾನ್ ಎ ಅರ್ಷ್' ಎಂಬ ಕವಿತೆಗಳ ಸಂಕಲನ ರಚಿಸಿದ್ದ ಎಂಬ ಮಾಹಿತಿ ದೊರೆಯುತ್ತದೆ. ಆದರೆ, ಆ ಗ್ರಂಥ ಲಭ್ಯವಾಗಿಲ್ಲ. ಲಭ್ಯವಿರುವ ಎರಡು ಗ್ರಂಥಗಳು ಅವನ ಸಾಹಿತ್ಯಕ ಸಾಧನೆಯನ್ನು ಸಾಬೀತು ಪಡಿಸುತ್ತವೆ. 'ಮನಾಜಿರುಲ್ ಇನ್‌ಶಾ' ಎನ್ನುವ ಸಾಹಿತ್ಯ ಮೀಮಾಂಸೆ ಹಾಗೂ ಪತ್ರಗಳ ಸಂಕಲನ 'ರಿಯಾಜುಲ್ ಇನ್‌ಶಾ'ಗಳು ಗಾವಾನ್‌ನ ಪ್ರೌಢಿಮೆ, ಪಾಂಡಿತ್ಯ ಅರಿಯುವಂತೆ ಮಾಡುತ್ತವೆ. ಸಮಕಾಲೀನನಾಗಿದ್ದ ಅಬ್ದುಲ್ ಕರೀಮ್ ಹಮದಾನಿಯು ಗಾವಾನ್‌ನ ಜೀವನ ಚರಿತ್ರೆಕಾರ ಕೂಡ ಆಗಿದ್ದ. ಹಮದಾನಿಯು ಗಾವಾನ್ ಕುರಿತು ರಚಿಸಿದ ಗ್ರಂಥವು ದುರದೃಷ್ಟವಶಾತ್ ಲಭ್ಯವಾಗಿಲ್ಲ. ಆದರೆ, ಫೆರಿಸ್ತಾನ ಗ್ರಂಥದಲ್ಲಿ ಉಲ್ಲೇಖವಾಗಿರುವ ಗಾವಾನ್ ಕುರಿತ ಬಹುತೇಕ ಮಾಹಿತಿ ಮತ್ತು ಸಂಗತಿಗಳು ಹಮದಾನಿ ಪುಸ್ತಕದ

ಅಧ್ಯಯನದಿಂದಾಗಿ ಸೇರಿಕೊಂಡವುಗಳು ಎಂದು ಅಬ್ದುಲ್ ಜಬ್ಬಾರ್ ಮಲ್ಕಾಪುರಿ ತಿಳಿಸುತ್ತಾರೆ. ಗಾವಾನ್‌ನ ಎರಡು ಗ್ರಂಥಗಳ ಕಿರುಪರಿಚಯ ಇಲ್ಲಿದೆ–

## ಮನಾಜಿರುಲ್ ಇನ್‌ಶಾ

'ಜ್ಞಾನಶಾಸ್ತ್ರದ ಗಣಿ' ಎಂದು ಗುರುತಿಸಲಾಗುವ ಈ ಗ್ರಂಥವು ಮಹಮೂದ್ ಗಾವಾನ್‌ನ ಪಾಂಡಿತ್ಯ, ಓದು, ಪ್ರೌಢಿಮೆ, ಸಂಶೋಧನಾ ಮನೋಭಾವಕ್ಕೆ ಕನ್ನಡಿಯಂತಿದೆ. ಲಲಿತ ಸಾಹಿತ್ಯ ಅದರಲ್ಲಿಯೂ ಪದ್ಯ, ಪ್ರಬಂಧ, ವಿಮರ್ಶೆಗಳನ್ನು ಒಳಗೊಂಡ ಶುದ್ಧಸಾಹಿತ್ಯದ ಕುರಿತಾದ ಮೀಮಾಂಸೆಯನ್ನು ನೀಡುತ್ತದೆ. ವಿಭಿನ್ನ ಹವ್ಯಾಸ ಇಟ್ಟುಕೊಂಡಿದ್ದ ಗಾವಾನ್ ಹಲಬಗೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಿದ್ದ. ಸದಾ ಬಿಡುವಿಲ್ಲದೆ ಕೆಲಸ ಮಾಡುತ್ತಿದ್ದ ಗಾವಾನ್‌ನಿಗೆ ಇಂತಹ ಗಂಭೀರವಾದ ಸಾಹಿತ್ಯ ಮೀಮಾಂಸೆಯ ಕೃತಿ ರಚಿಸಲು ಸಾಧ್ಯವಾದದ್ದು ಹೇಗೆ? ಎಂದು ಅಚ್ಚರಿ ಉಂಟಾಗದೆ ಇರದು.

ಈ ಗ್ರಂಥವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿದ್ವಾಂಸನೊಬ್ಬ ತೋರಿಸಿದ ಕಸುಬುಗಾರಿಕೆ ಗಮನಕ್ಕೆ ಬರುತ್ತದೆ. ಮನಾಜಿರುಲ್ ಇನ್ ಶಾ ಒಳಾರ್ಥಗಳನ್ನು ಇಟ್ಟು ಮಾತನಾಡುವ, ಶುಷ್ಕ ಪಾಂಡಿತ್ಯ ಪ್ರದರ್ಶನದ ಗ್ರಂಥವಲ್ಲ. ಸರಳ, ನೇರವಾದ ಸುಭಗ ಶೈಲಿಯಿಂದ ಸಾಮಾನ್ಯರಿಗೆ ಪ್ರಿಯವಾಗುವ ಈ ಗ್ರಂಥವು ವಿದ್ವತ್ತು ಮತ್ತು ಪ್ರಸ್ತುತಿಯ ಕಾರಣಕ್ಕಾಗಿ ಸಾಹಿತ್ಯಾಸಕ್ತರ ಮೆಚ್ಚುಗೆಗೂ ಪಾತ್ರವಾಗುತ್ತದೆ. 'ಅರ್ಥವಾಗದಂತೆ ನಿಗೂಢವಾಗಿ ಬರೆಯುವ ಅಬ್ಬರದ ಭಾಷೆಯ ಬಳಕೆಯು ಹೆಚ್ಚು ಚಾಲ್ತಿಗೆ ಬಂದಿದೆ. ಇದರಿಂದಾಗಿ ನೇರವಾದ, ತಿಳಿಯಾದ ಶೈಲಿಯಲ್ಲಿ ಬರೆಯುವುದು ಪಾಂಡಿತ್ಯದ ಕೊರತೆಯ ಕಾರಣದಿಂದ ಎಂಬ ಅಭಿಪ್ರಾಯಕ್ಕೆ ಬರಲಾಗುತ್ತಿದೆ. ಅದಕ್ಕೆ ಅಪವಾದ ಎನ್ನುವಂತೆ ಗಾವಾನ್‌ನು ಸರಳವಾದ ಶೈಲಿಯಲ್ಲಿಯೇ ಅಲಂಕಾರಶಾಸ್ತ್ರದ ಸಂಕೀರ್ಣ ಸಂಗತಿಗಳನ್ನು ವಿವರಣಾತ್ಮಕವಾಗಿ ಬರೆದಿರುವುದು ಗಮನಾರ್ಹ ಸಂಗತಿ' ಎಂದು ಟಿ.ಎನ್. ದೇವರೆ ಅಭಿಪ್ರಾಯಪಡುತ್ತಾರೆ.

ಸಾಹಿತ್ಯ ಮೀಮಾಂಸೆ ಇರುವ 'ಮನಾಜಿರುಲ್ ಇನ್‌ಶಾ' ಗ್ರಂಥದಲ್ಲಿ ಎಂಟು ಅಧ್ಯಾಯಗಳಿವೆ. ಅಲಂಕಾರಶಾಸ್ತ್ರ, ಸಾಹಿತ್ಯ ಕೃತಿಗಳ ರಚನೆ, ಪದಪ್ರಯೋಗದ ಸ್ವರೂಪ ಮತ್ತು ಅದರ ಹಿಂದಿರುವ ವೈಜ್ಞಾನಿಕ ಚಿಂತನೆ ಕುರಿತು ಈ ಗ್ರಂಥ ಚರ್ಚಿಸುತ್ತದೆ. ವಿವಿಧ ರೀತಿಯ ಗದ್ಯ ಮತ್ತು ಪದ್ಯದ ಸ್ವರೂಪ, ರಚನೆಗೆ

ಇಳಿಯುವ ಮುನ್ನ ಮಾಡಿಕೊಳ್ಳುವ ಪದಗಳ ಆಯ್ಕೆ, ವ್ಯಾಕರಣ, ಶೈಲಿ, ನಿರ್ವಹಣೆ ನಿಯಮಗಳು ಕುರಿತ ಚರ್ಚೆ ಮನಾಜಿರುಲ್ ಇನ್‌ಶಾದಲ್ಲಿದೆ. ಮಹಮೂದ್ ಗಾವಾನ್‌ನ ಈ ಗ್ರಂಥವು ಬಹಳಷ್ಟು ದಿನಗಳ ಕಾಲ ಹಸ್ತಪ್ರತಿ ರೂಪದಲ್ಲಿಯೇ ಇತ್ತು. 2002ರಲ್ಲಿ ಟೆಹ್ರಾನ್‌ನ ಫರ್ಹಾಂಗೆಸ್ತಾನ್ ಜಬಾನ್ ವ ಅದಾಬೆ ಫಾರಸಿ ಸಂಸ್ಥೆಯು ಮೊದಲ ಬಾರಿಗೆ ಪುಸ್ತಕರೂಪದಲ್ಲಿ ಪ್ರಕಟಿಸಿದೆ. ಇಂಗ್ಲಿಷ್ ಅನುವಾದ ಇಲ್ಲದೇ ಇರುವುದು ಮತ್ತು ಬಹಳಷ್ಟು ಜನ ವಿದ್ವಾಂಸರು 'ಇತಿಹಾಸದ ಆಕರ ಅಲ್ಲ' ಎಂದು ಕಡೆಗಣಿಸಿರುವುದರಿಂದ ಈ ಪುಸ್ತಕದ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. ವಿದ್ವತ್ ಜಗತ್ತಿನಲ್ಲಿ ಗಾವಾನ್‌ನಿಗೆ ದೊರೆಯುತ್ತಿದ್ದ ಸ್ಥಾನಮಾನ–ಗೌರವಗಳಿಗೆ ಸೂಕ್ತ ಸಮರ್ಥನೆಯನ್ನು ಈ ಪುಸ್ತಕ ಒದಗಿಸುತ್ತದೆ.

## ರಿಯಾಜುಲ್ ಇನ್‌ಶಾ

ಖ್ವಾಜಾ ಮಹಮೂದ್ ಗಾವಾನ್‌ನು ಪ್ರಧಾನಿಯಾಗಿ ತನ್ನ ಸಮಕಾಲೀನರಿಗೆ ಬರೆದ ಹಾಗೂ ಆಪ್ತರಿಗೆ ಬರೆದ ಖಾಸಗಿ ಪತ್ರಗಳ ಸಂಗ್ರಹ. ಗಾವಾನ್‌ನು ಭಾರತೀಯ ಮತ್ತು ಮಧ್ಯಾ ಏಷ್ಯಾದ ಸುಲ್ತಾನ್‌ರು, ಅಧಿಕಾರಿಗಳಿಗೆ ಬರೆದ ಅಧಿಕೃತ ವ್ಯವಹಾರದ ಪತ್ರಗಳ ಜೊತೆಗೆ ಮಹತ್ವದ ವ್ಯಕ್ತಿಗಳು, ವಿದ್ವಾಂಸರು, ಕವಿಗಳು, ಅನುಭಾವಿಗಳು, ವೇದಾಂತಿಗಳು, ತತ್ವಜ್ಞಾನಿಗಳು, ಸ್ನೇಹಿತರು, ಕುಟುಂಬದ ಸದಸ್ಯರಿಗೆ ಬರೆದ 154 ಪತ್ರಗಳನ್ನು ಒಳಗೊಂಡಿದೆ. ಗ್ರಂಥವನ್ನು ಪರಿಶೀಲಿಸದ ಫೆರಿಸ್ತಾ ಪುಸ್ತಕದ ಹೆಸರನ್ನು 'ರೌಜತ್‌ಉಲ್ ಇನ್‌ಶಾ' ಎಂದು ದಾಖಲಿಸಿದ್ದಾನೆ. ಆದರೆ, ಅವನ ಸಮಕಾಲೀನನಾದ ರಫಿಯುದ್ದೀನ್ ಏ ಶಿರಾಜಿಯು 'ಬಹಮನಿ ಮತ್ತು ಪರ್ಷಿಯಾದ ನಡುವೆ ಸಂಪರ್ಕ ಕಲ್ಪಿಸಲು ಗಾವಾನ್‌ನ ಪತ್ರಗಳು ಕೊಂಡಿಯಾಗಿದ್ದವು' ಎಂದು ಉಲ್ಲೇಖಿಸಿದ್ದಾನೆ. ಹಾಗೆಯೇ, ಗಾವಾನ್ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂದೇಶ ನೀಡುವ ಮಾದರಿಯ ಹಲವು ಕೃತಿಗಳನ್ನು ರಚಿಸಿದ್ದಾನೆ. ಸತತ ಪ್ರಯತ್ನದ ನಂತರವೂ ಹಸ್ತಪ್ರತಿಗಳು ಲಭ್ಯವಾಗಲಿಲ್ಲ ಎಂದು ರಫಿಯುದ್ದೀನ್ ವಿಷಾದಿಸುತ್ತಾನೆ.

'ಗಾವಾನ್ ಪದಪ್ರಯೋಗ, ಶೈಲಿ ಕುರಿತಾದ ಅಪರೂಪದ ಗ್ರಂಥದ ಲೇಖಕ' ಎಂದು ಕರೆಯುವ ನಿಹಾವಂಡಿ ಎಂಬ ಲೇಖಕನು ರಿಯಾಜುಲ್ ಇನ್‌ಶಾದ ಮಹತ್ವವನ್ನು ವಿವರಿಸಿದ್ದಾನೆ. ಈ ಪುಸ್ತಕದಲ್ಲಿ ಗಾವಾನ್ ಬರೆದ ಎಲ್ಲ ಪತ್ರಗಳನ್ನು ಸಂಕಲಿಸಲಾಗಿಲ್ಲ. ಇದು ಆಯ್ದ ಪತ್ರಗಳ ಸಂಕಲನ. ಕೆಲವು

ಪತ್ರಗಳು ಬಹಮನಿ ಸುಲ್ತಾನ್‌ನ ಪರವಾಗಿ ವಿವಿಧ ದೇಶಗಳ ದೊರೆಗಳಿಗೆ ಬರೆದವುಗಳು. ಆದರೆ, ಬಹುತೇಕ ಪತ್ರಗಳು ಖಾಸಗಿ ಸ್ವರೂಪದವುಗಳು. ಗಾವಾನ್‌ನ ಕುರಿತ ಅಪರೂಪದ ಮಾಹಿತಿಯನ್ನು ಒದಗಿಸುವ ಈ ಪತ್ರಗಳು ಆತ್ಮಕಥನಾತ್ಮಕ ಬರವಣಿಗೆಯಂತೆ ಗೋಚರವಾಗುತ್ತವೆ. ಒಮ್ಮೆಯೂ ದಖನ್ ಪ್ರದೇಶಕ್ಕೆ ಭೇಟಿ ನೀಡದ ವಿದೇಶಿಯರಿಗೆ ಗಾವಾನ್ ಪತ್ರಗಳನ್ನು ಬರೆಯುತ್ತಿದ್ದ. ಆದ್ದರಿಂದ ಪ್ರದೇಶದ ಉದ್ದಗಲ, ವಾತಾವರಣ, ಭೌಗೋಳಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ವಿವರವಾಗಿಯೇ ಒದಗಿಸಿದ್ದಾನೆ. ಮೌಲಾನಾ ಜಾಮಿ ಮತ್ತು ತತ್ವಶಾಸ್ತ್ರಜ್ಞ ದವಾನಿ ಅವರುಗಳಿಗೆ ಬರೆದ ಪತ್ರದಲ್ಲಿ ಬಹಮನಿ ಸಾಮ್ರಾಟರ ಆಸ್ಥಾನಕ್ಕೆ ಆಗಮಿಸುವಂತೆ ಕೋರಿದ್ದಾನೆ. ಪರ್ಷಿಯಾ ಸಾಹಿತ್ಯಲೋಕಕ್ಕೆ ಸೇರಿದ ವ್ಯಕ್ತಿಗಳಿಗೆ ಬರೆದ ಪತ್ರಗಳ ಸಂಖ್ಯೆಯೇ 34ರಷ್ಟಿದೆ. ಅವುಗಳಲ್ಲಿ ಮೌಲಾನಾ ಜಾಮಿಗೆ ಬರೆದ ಒಂಬತ್ತು ಮತ್ತು ಖ್ವಾಜಾ ಉಬೇದ್ ಅಲ್ಲಾ ಅಹ್ರಾರ್‌ಗೆ ಬರೆದ ಐದು ಪತ್ರಗಳು ಸೇರಿವೆ.

ಗಾವಾನ್ ಬರೆದ ಪತ್ರಕ್ಕೆ ಪ್ರತಿಕ್ರಿಯೆಯಾಗಿ ಮೌಲಾನಾ ಜಾಮಿಯು ದಖನ್‌ಗೆ ಬರಲಾಗದ್ದಕ್ಕೆ ವಿಷಾದ ಸೂಚಿಸಿದ್ದರು. ಜಾಮಿಯು ತನ್ನ ಪತ್ರವೊಂದರಲ್ಲಿ ಗಾವಾನ್‌ನ ಬಗ್ಗೆ ಸ್ತುತಿಪದ್ಯ ಬರೆದು ಕಳುಹಿಸಿದ್ದಾನೆ. ಕವಿಯೂ ಆಗಿದ್ದ ಗಾವಾನ್‌ನು ತನ್ನ ಹಿರಿಯ ಪುತ್ರ ಅಲಿ ಮಲಿಕ್ ತುಜಾರ್‌ನಿಗೆ ಬರೆದ ಪತ್ರದಲ್ಲಿ ಕವಿ ಅನ್ವರಿ ಹಾಗೂ ಕಮಾಲ್ ಇಸ್ಮಾಯಿಲ್‌ರ ಸ್ತುತಿಪದ್ಯದ ಮಾದರಿಯಲ್ಲಿಯೇ ಬರೆದ ಕವಿತೆಯೊಂದನ್ನು ಉಲ್ಲೇಖಿಸಿದ್ದಾನೆ. ಬಹಮನಿ ಸುಲ್ತಾನ್‌ರಾದ ಹುಮಾಯೂನ್ ಶಹಾ ಹಾಗೂ ಮೂರನೆ ಮುಹಮ್ಮದ್ ಕುರಿತು ರಚಿಸಿದ ಸ್ತುತಿಪದ್ಯಗಳು ಲಭ್ಯವಾಗಿವೆ.

ಪೂರ್ಣಪ್ರಮಾಣದ ಪದ್ಯಗಳು ಮಾತ್ರವಲ್ಲದೇ ಕವಿತೆಯ ಆಯ್ದ ಸಾಲುಗಳನ್ನು ಗಾವಾನ್ ತನ್ನ ಪತ್ರಗಳಲ್ಲಿ ಅಳವಡಿಸುವ ಪರಿಪಾಠ ಇಟ್ಟುಕೊಂಡಿದ್ದ. ಗಾವಾನ್‌ನು ತಾನು ರಚಿಸಿದ ಪದ್ಯಗಳನ್ನು ಮಾತ್ರವಲ್ಲದೆ ತನಗೆ ಇಷ್ಟವಾದ ಕವಿತೆಗಳ ಸಾಲುಗಳನ್ನೂ ಪತ್ರದಲ್ಲಿ ಉಲ್ಲೇಖಿಸುತ್ತಿದ್ದ. ರಿಯಾಜುಲ್ ಇನ್‌ಶಾದಲ್ಲಿ ಇರುವ ಪತ್ರಗಳಲ್ಲಿ ಕವಿತೆಯ ಉಲ್ಲೇಖ ಅಥವಾ ಪ್ರಸ್ತಾಪ ಇಲ್ಲದ ಒಂದೂ ಪತ್ರ ನೋಡಲು ಸಿಗುವುದಿಲ್ಲ.

ಶಾಸ್ತ್ರೀಯ ಗ್ರಂಥಗಳ ವ್ಯಾಪಕ ಅಧ್ಯಯನದಿಂದ ಗಾವಾನ್‌ನಿಗೆ ದೊರೆತ ಪಾಂಡಿತ್ಯ ಅವನು ಬರೆದ ಪತ್ರಗಳಲ್ಲಿಯೂ ವ್ಯಕ್ತವಾಗಿದೆ. ಪ್ರಮುಖ ಲೇಖಕ, ಕವಿಗಳ ಶೈಲಿ, ಬರವಣಿಗೆಗಳ ಕುರಿತ ಗಾವಾನ್ ತಿಳುವಳಿಕೆಯು

ಅಸಾಧಾರಣವಾದುದಾಗಿತ್ತು. ಕುರಾನ್‌ನ ಪ್ರಮುಖ ಸಾಲುಗಳು, ಅರಬ್ಬಿ ಗಾದೆ ಮಾತುಗಳು, ಫಾರಸಿ ಕವಿಗಳ ಕವಿತೆಯ ಸಾಲುಗಳು ಗಾವಾನ್ ಬರೆದ ಪತ್ರಗಳಲ್ಲಿ ಉಲ್ಲೇಖಗೊಂಡಿವೆ. ಬಹಳಷ್ಟು ದಿನಗಳ ಕಾಲ ರಿಯಾಜುಲ್ ಇನ್‌ಶಾ ಕೂಡ ಹಸ್ತಪ್ರತಿಯ ರೂಪದಲ್ಲಿಯೇ ಇತ್ತು. 1948ರಲ್ಲಿ ಗುಲಾಂ ಯಜ್ದಾನಿಯ ಅವರ ಸಲಹೆಯ ಮೇರೆಗೆ ಎಸ್. ಚಾಂದ್ ಅವರು ರಿಯಾಜುಲ್ ಇನ್‌ಶಾ ಗ್ರಂಥವನ್ನು ಸಂಪಾದಿಸಿ ಆಗಿನ ನಿಜಾಂ ಸರ್ಕಾರದ ಮೂಲಕ ಪ್ರಕಟಿಸಿದರು. ಅಲ್ಲಿಂದ ಈಚೆಗೆ ತನಗಿರುವ ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವದ ನಡುವೆಯೂ 'ರಿಯಾಜುಲ್ ಇನ್‌ಶಾ' ಗ್ರಂಥವು ಇಂಗ್ಲಿಷಿಗೆ ಅನುವಾದಗೊಂಡಿಲ್ಲ. ಈ ಗ್ರಂಥದಲ್ಲಿನ ಪತ್ರಗಳ ಬಗ್ಗೆ ಬಂದ ಬಿಡಿಲೇಖನಗಳೇ ಪುಸ್ತಕದ ಮಹತ್ವ ಅರಿಯುವಂತೆ ಮಾಡಿವೆ.

ಚರಿತ್ರೆಯ ಬರವಣಿಗೆ ಪರ್ಷಿಯಾ ಸಾಹಿತ್ಯದ ಪ್ರಮುಖ ಸಾಹಿತ್ಯ ಪ್ರಕಾರ. ಇಸ್ಲಾಂ ಪರ್ಷಿಯಾ ಪ್ರವೇಶಿಸಿದ ನಂತರವೂ ಘಟನೆಗಳು ದಾಖಲಿಸುವ ಚರಿತ್ರೆ ಬರೆಯುವ ಪರಿಪಾಠ ಮುಂದುವರೆಯಿತು. ಅರಸನ ಆಸ್ಥಾನದಲ್ಲಿಯೇ ಇತಿಹಾಸ ರಚಿಸುವ ವ್ಯಕ್ತಿಗಳಿಗೆ ಆಶ್ರಯ ನೀಡಲಾಗುತ್ತಿತ್ತು. ಉತ್ತರದ ದೆಹಲಿಯಲ್ಲಿ ಇಂತಹ ಇತಿಹಾಸಕ್ಕೆ ಸಂಬಂಧಿಸಿದ ಬರವಣಿಗೆ ಗ್ರಂಥಗಳ ಸಂಖ್ಯೆ ಸಾಕಷ್ಟಿದೆ. ಬಹಮನಿ ಅರಸರ ಕಾಲದಲ್ಲಿ ಇಂತಹ ಇತಿಹಾಸ ರಚಿಸುವ ಪರಿಪಾಠ ಆರಂಭವಾಯಿತು. ಮುಲ್ಲಾ ಮುಹಮ್ಮದ್ ಲಾರಿ ರಚಿಸಿದ ಸಿರಾಜುತ್ ತವಾರಿಖ್ ಹಾಗೂ ಮುಲ್ಲಾ ದಾವುದ್ ಬಿದರಿ ರಚಿಸಿದ 'ತುಹ್‌ಫತುಸ್ ಸಲಾತಿನ್' ಗ್ರಂಥಗಳು ಬಹಮನಿ ಸಾಮ್ರಾಜ್ಯದ ಆಡಳಿತದ ಅವಧಿಗೆ ಸೇರಿದವುಗಳು.

ಅವೆರಡೂ ಗ್ರಂಥಗಳು ಲಭ್ಯವಿಲ್ಲ. ಆದರೆ, ನಂತರದ ಇತಿಹಾಸಕಾರರು ಈ ಎರಡು ಗ್ರಂಥಗಳನ್ನು ಪರಿಶೀಲಿಸಿ ಬರೆದಿರುವಾಗಿ ತಿಳಿಸಿದ್ದಾರೆ. ಬಹಮನಿ ಅರಸರ ಕಾಲದಲ್ಲಿ ಆರಂಭವಾದ ಆಸ್ಥಾನ ಇತಿಹಾಸಕಾರರ ಪರಂಪರೆ ಬಹಮನಿ ನಂತರ ಆದಿಲ್‌ಷಾಹಿ, ನಿಜಾಮ್‌ಷಾಹಿ ಹಾಗೂ ಕುತುಬ್‌ಷಾಹಿ ಅರಸರ ಕಾಲದಲ್ಲಿಯೂ ಮುಂದುವರೆಯಿತು. ಮತ್ತು ಹೆಚ್ಚು ಪ್ರಫುಲ್ಲವಾಗಿ ಬೆಳೆಯಿತು. ಆದಿಲ್‌ಷಾಹಿ ಅರಸರ ಕಾಲದಲ್ಲಿ ರಚಿತವಾದ ಫೆರಿಸ್ತಾನ 'ಗುಲ್ಶನ್ ಎ ಇಬ್ರಾಹಿಂ' ಅಥವಾ 'ತಾರೀಖ್ ಎ ಫೆರಿಸ್ತಾ' ಹಾಗೂ ನಿಜಾಮ್ ಷಾಹಿ ಅರಸರ ಅವಧಿಯಲ್ಲಿ ಸೈಯದ್ ಅಲಿ ತಬಾತಬಾಯಿ ರಚಿಸಿದ 'ಬುರ್ಹಾನ್ ಎ ಮಾಸಿರ್' ಗ್ರಂಥಗಳು ಪ್ರಮುಖವಾದವುಗಳು. ಇತಿಹಾಸ ರಚನೆಗೆ ಪ್ರೋತ್ಸಾಹ ನೀಡುವ ಮೂಲಕ ಪರ್ಷಿಯಾ ಮಾದರಿಯನ್ನು ಅಳವಡಿಸಿಕೊಂಡ ಬಹಮನಿ ಸುಲ್ತಾನ್‌ರು ನಂತರದ ದಿನಗಳಲ್ಲಿ ಚರಿತ್ರೆಯ ಬರವಣಿಗೆ ಹೆಚ್ಚು ಶ್ರೀಮಂತವಾಗಿ ಬೆಳೆಯುವುದಕ್ಕೆ ಕಾರಣರಾದರು.

## ಮಲಿಕ್ ಸೈಫುದ್ದೀನ್ ಘೋರಿ

ಮೊದಲ ಬಹಮನಿ ದೊರೆ ಅಲಾವುದ್ದೀನ್ ಬಹಮನ್ ಶಹಾ ಅಧಿಕಾರಕ್ಕೆ ಬರುವುದಕ್ಕೆ ಹೆಗಲೆಣೆಯಾಗಿ ನಿಂತವನು ಮಲಿಕ್ ಸೈಫುದ್ದೀನ್ ಘೋರಿ. ತುಘಲಕ್ ವಿರುದ್ಧದ ಬಂಡಾಯದ ಸಂದರ್ಭದಲ್ಲಿ ಅಮೀರ್‌ನಾಗಿದ್ದ ಘೋರಿ ಸಕ್ರಿಯವಾದ ಪಾತ್ರ ನಿರ್ವಹಿಸಿದ್ದ. ಮೊದಲ ದೊರೆ ಇಸ್ಮಾಯಿಲ್ ಅಧಿಕಾರ ತ್ಯಜಿಸಿದ ನಂತರ ಅಲಾವುದ್ದೀನ್ ದೊರೆಯಾಗಿ ಸಿಂಹಾಸನ ಏರಿದ. ನಿರಕ್ಷರನಾಗಿದ್ದರೂ ರಾಜನೀತಿಯಲ್ಲಿ ಚತುರನಾಗಿದ್ದ ಅಲಾವುದ್ದೀನ್‌ನು ಅಮೀರ್ ಪೈಕಿ ಪ್ರಮುಖನಾಗಿದ್ದ ಘೋರಿಯು ಪ್ರಭುತ್ವದ ವಿರುದ್ಧ ಬಂಡಾಯ ಏಳದಂತಹ ಹಲವು ನಿರ್ಧಾರ ತೆಗೆದುಕೊಂಡ. ಘೋರಿಯನ್ನು ಬಹಮನಿ ಸಾಮ್ರಾಜ್ಯದ ಮೊದಲ ಪ್ರಧಾನಿಯಾಗಿ ಘೋಷಿಸಿದ ಅಲಾವುದ್ದೀನ್‌ನು ಅವನ ಮಗಳ ಮದುವೆಯನ್ನು ತನ್ನ ಮಗ ಮೊದಲನೇ ಮುಹಮ್ಮದ್‌ನ ಜೊತೆ ನಡೆಯುವಂತೆ ನೋಡಿಕೊಂಡ. ಮೊದಲ ಐವರು ಬಹಮನಿ ದೊರೆಗಳಿಗೆ ಪ್ರಧಾನಿಯಾಗಿದ್ದ ಮಲಿಕ್ ಸೈಫುದ್ದೀನ್ ಘೋರಿಯು ಸಾಮ್ರಾಜ್ಯದ ಆಡಳಿತ ವ್ಯವಸ್ಥೆಗೆ ಅಸ್ಥಿಭಾರ ಹಾಕಿದ ಪ್ರಮುಖ. ಅಮೀರ್‌ನಾಗಿದ್ದ ಅವಧಿಯಲ್ಲಿ ಮತ್ತು ಪ್ರಧಾನಿಯಾದ ನಂತರವೂ ಸೈನಿಕ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದ್ದ ಘೋರಿಯು ಸೈನ್ಯ ಮತ್ತು ಆಡಳಿತಾತ್ಮಕ ವ್ಯವಹಾರಗಳ ನಿರ್ವಹಣೆಯಲ್ಲಿ ಪರಿಣಿತನಾಗಿದ್ದ. ಘೋರಿ ತಳೆದ ನಿಲುವುಗಳು ಬಹಮನಿ ರಾಜನೀತಿ ರೂಪಿಸುವುದಕ್ಕೆ ಕಾರಣವಾದವು. ಅಲಾವುದ್ದೀನ್‌ನು ಇಡೀ ಭಾರತದ ಸಾಮ್ರಾಟನಾಗುವ ಕನಸು ಕಂಡಿದ್ದ. ಅವನ ಆಸೆಗೆ ಕಡಿವಾಣ ಹಾಕುವಂತೆ ವಾಸ್ತವ ಚಿತ್ರಣ ನೀಡಿದ ಘೋರಿಯು ದಖನ್ ಪ್ರದೇಶವನ್ನು ಸಂಪೂರ್ಣವಾಗಿ ವಶಕ್ಕೆ ತೆಗೆದುಕೊಂಡ ನಂತರ ಮಾಳ್ವ, ಗುಜರಾತಗಳ ಮಾರ್ಗವಾಗಿ ದೆಹಲಿಯತ್ತ ಹೋಗಬಹುದು ಎಂದು ಸೂಚಿಸಿದ. ಘೋರಿಯ ಸಲಹೆಯು ಬಹಮನಿ ಸಾಮ್ರಾಜ್ಯದ ಆರಂಭದ ದಿನಗಳಲ್ಲಿ ಮಹತ್ವದ ನಿರ್ಧಾರ ತಳೆಯುವುದಕ್ಕೆ ಕಾರಣವಾಯಿತು.

ಘೋರಿ ಸಿದ್ಧಪಡಿಸಿ ನೀಡಿದ ಸಂವಿಧಾನವು ಬಹಮನಿ ಸಾಮ್ರಾಜ್ಯ ಪತನ ಕಾಣುವವರೆಗೂ ಚಾಲ್ತಿಯಲ್ಲಿತ್ತು. ದಖನ್ ಪ್ರದೇಶಕ್ಕೆ ಅನುಗುಣವಾಗಿ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳು ಎಂಬ ಪರಿಕಲ್ಪನೆಯ ಆಧರಿಸಿ ಸಂವಿಧಾನ ನಿರ್ಧರಿಸಲಾಗಿತ್ತು. ಘೋರಿ ರಚಿಸಿದ 'ನಸತ್ ಉಲ್ ಮುಲ್ಕ್' ಗ್ರಂಥವು ದಖನ್‌ನ ಆಡಳಿತಕ್ಕೆ ಸಂಬಂಧಿಸಿದಂತಹ ಮಹತ್ವದ ಗ್ರಂಥ.

ಮಲಿಕ್ ಸೈಫುದ್ದೀನ್ ಘೋರಿಯ ಕೌಟುಂಬಿಕ ಹಿನ್ನೆಲೆ ಮತ್ತು ಆರಂಭಿಕ ಜೀವನದ ಬಗ್ಗೆ ಹೆಚ್ಚಿನ ಮಾಹಿತಿಗಳು ಲಭ್ಯವಿಲ್ಲ. ಯಾವಾಗ ಭಾರತಕ್ಕೆ ಅದರಲ್ಲೂ

ದಖನ್‌ಗೆ ವಲಸೆ ಬಂದ ಎಂಬ ಬಗ್ಗೆಯೂ ಖಚಿತ ಮಾಹಿತಿಗಳಿಲ್ಲ. ಫೆರಿಸ್ತಾ ಮತ್ತು ಇತರ ಚರಿತ್ರೆಕಾರರು ಘೋರಿಯ ಪೂರ್ವಜರ ಬಗ್ಗೆ ಪ್ರಸ್ತಾಪಿಸಿಲ್ಲ. ಅದಕ್ಕಿಂತ ಹೆಚ್ಚು ಆಶ್ಚರ್ಯ ಹುಟ್ಟಿಸುವ ಸಂಗತಿ ಎಂದರೆ ಬಹಮನಿ ಇತಿಹಾಸಕ್ಕೆ ಸಂಬಂಧಿಸಿದಂತೆ ಮಹತ್ವದ ಆಕರಗಳಾದ ಇಸಾಮಿಯ ಫುತೂಹ್ ಅಸ್ ಸಲಾತಿನ್ ಹಾಗೂ ಸೈಯದ್ ಅಲಿ ತಬಾತಬಾಯಿಯ 'ಬುರ್ಹಾನ್ ಎ ಮಾಸಿರ್' ಗ್ರಂಥಗಳು ಘೋರಿಯ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ಮೌನವಾಗಿವೆ. ಘೋರ್ ಪ್ರಾಂತ್ಯಕ್ಕೆ ಸೇರಿದ ಸೈಫುದ್ದೀನ್ ಒಬ್ಬ ಪಠಾಣ ಎಂಬುದು ನಿರ್ವಿವಾದ. ಭಾರತದ ಮೇಲೆ ದಾಳಿ ನಡೆಸಿದ ಶಹಾಬುದ್ದೀನ್ ಮಹಮ್ಮದ್ ಘೋರಿಯ ಸೈನ್ಯದ ಜೊತೆಗೆ ಸೈಫುದ್ದೀನ್ ಪೂರ್ವಜರು ಭಾರತಕ್ಕೆ ಬಂದಿರಬಹುದು ಎಂದು ಅಂದಾಜಿಸಲಾಗಿದೆ. ಘೋರಿಯು ಕಲೆ ಮತ್ತು ಸಂಸ್ಕೃತಿಯಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ ಮತ್ತು ಶಿಕ್ಷಣ ಪಡೆದ ವ್ಯಕ್ತಿಯಾಗಿದ್ದ. ಮಹಮ್ಮದ್ ಬಿನ್ ತುಘಲಕ್ ಆರಂಭಿಸಿದ ಅಮೀರ್‌ರಿಗೆ ಅಧಿಕಾರ ವಹಿಸುವ ನೀತಿಯಿಂದಾಗಿ ಘೋರಿ ದಖನ್ ಪ್ರಾಂತ್ಯಕ್ಕೆ ಬರಬೇಕಾಯಿತು. 'ದೂರದೃಷ್ಟಿ ಇದ್ದ, ಉದಾತ್ತ ಗುಣಗಳಿಂದ ಕೂಡಿದ, ವ್ಯಕ್ತಿಗಳ ಗುಣ-ದೋಷ ನಿರ್ಧರಿಸುವ ಕೌಶಲ್ಯ ಇರುವ ವ್ಯಕ್ತಿ' ಎಂದು ಘೋರಿಯ ವ್ಯಕ್ತಿತ್ವವನ್ನು ಫೆರಿಸ್ತಾ ದಾಖಲಿಸಿದ್ದಾನೆ. ಘೋರಿಯ ವ್ಯಕ್ತಿತ್ವವೇ ಅವನನ್ನು ಇತಿಹಾಸದ ಪುಟಗಳಲ್ಲಿ ಉಳಿಯುವಂತೆ ಮಾಡಿದೆ.

ಘೋರಿಯು ಸಿದ್ಧಪಡಿಸಿ ನೀಡಿದ ಸಂವಿಧಾನವು ಕೇವಲ ಬಹಮನಿ ಸಾಮ್ರಾಜ್ಯಕ್ಕೆ ಮಾತ್ರ ಸೀಮಿತವಾಗಿರದೆ ನಂತರದ ದಿನಗಳಲ್ಲಿ ದಖನ್ ಪ್ರಾಂತ್ಯವನ್ನು ಆಳಿದ ರಾಜಮನೆಗಳಿಗೂ ಮಾಗದರ್ಶಿಯಾಗಿತ್ತು. ಮರಾಠ ದೊರೆಗಳೂ ಘೋರಿ ರೂಪಿಸಿದ ಆಡಳಿತ ವ್ಯವಸ್ಥೆಯನ್ನೇ ಮುಂದುವರೆಸಿದರು. ಕೇಂದ್ರ ಸರ್ಕಾರ ಮತ್ತು ಪ್ರಾಂತ್ಯದ ಆಡಳಿತ ಎಂಬ ಎರಡು ವರ್ಗೀಕರಣವನ್ನು ಘೋರಿ ಮಾಡಿದ್ದ. ಕೇಂದ್ರ ಸರ್ಕಾರದಲ್ಲಿ ರಾಜನ ನೇತೃತ್ವದ ಎಂಟು ಜನರ ಮಂತ್ರಿಮಂಡಲ ಅಧಿಕಾರ ನಡೆಸಬೇಕು. ರಾಜನು ತನಗೆ ಬೇಕಾದಾಗ ಅಥವಾ ಮಂತ್ರಿಗಳೇ ರಾಜ್ಯದ ಹಿತದ ದೃಷ್ಟಿಯಿಂದ ಸಲಹೆ-ಸೂಚನೆ ನೀಡಬಹುದು ಎಂಬ ಅಂಶವನ್ನು ಘೋರಿ ಪ್ರತಿಪಾದಿಸಿದ. ಪ್ರಾಂತ್ಯಗಳನ್ನು 'ತರಫ್' ಎಂದು ಕರೆಯಲಾಗುತ್ತಿತ್ತು. ಅವುಗಳ ಆಡಳಿತ ನಿರ್ವಹಣೆಯನ್ನು ಅದರ ರಾಜ್ಯಪಾಲ ಅಥವಾ 'ತರಫ್‌ದಾರ್' ನೋಡಿಕೊಳ್ಳಬೇಕು ಎಂಬ ಅಂಶಗಳನ್ನು ಸಂವಿಧಾನದಲ್ಲಿ ಘೋರಿ ಪ್ರಸ್ತಾಪಿಸಿದ್ದ. ದುರ್ದೈವದಿಂದ ಘೋರಿಯ 'ದೊರೆಗಳ ಕೈಪಿಡಿ' ನಸತ್ ಉಲ್ ಮುಲ್ಕ್ ಗ್ರಂಥವು ಉಳಿದು ಬಂದಿಲ್ಲ. ಆದರೆ, ಅದರ ಬಹುತೇಕ ಭಾಗಗಳು ಇತಿಹಾಸಕಾರರ ಗ್ರಂಥಗಳಲ್ಲಿ ದಾಖಲಾಗಿವೆ.

# 7. ಬಾಗುವ, ಬಳಕುವ ಅಕ್ಷರಗಳು; ಲೋಹದ ಮೇಲಿನ ಆಕೃತಿಗಳು

ಬಹಮನಿ ದೊರೆಗಳು ಪರ್ಷಿಯಾ ಮತ್ತು ಮಧ್ಯ ಏಷ್ಯಾದ ದೇಶದಗಳೊಂದಿಗೆ ರಾಜಕೀಯ ಸಂಬಂಧ ಇಟ್ಟುಕೊಂಡಿದ್ದರು. ಆ ಸಂಬಂಧ ಸಾಹಿತ್ಯ, ಕಲೆ, ವಾಸ್ತುಶಿಲ್ಪಗಳ ಮೇಲೆಯೂ ಪ್ರಭಾವ, ಪರಿಣಾಮ ಬೀರುವುದಕ್ಕೆ ಕಾರಣವಾಯಿತು. ಬಹಮನಿ ದೊರೆಗಳ ಅವಧಿಯಲ್ಲಿನ ಕಲೆಯ ಮೇಲೆ ಪರ್ಷಿಯಾದ ಕಲೆಯ ಪ್ರಭಾವ ಬೀರಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಅವು ಇಸ್ಲಾಮಿಕ್ ಕಲೆಯ ಆರಂಭದ ದಿನಗಳಾದ್ದರಿಂದ ಪ್ರೇರಣೆಗಾಗಿ ಸಾಂಸ್ಕೃತಿಕವಾಗಿ ಪ್ರಮುಖವಾಗಿದ್ದ ಪರ್ಷಿಯಾದತ್ತ ಮುಖ ಮಾಡುವುದು ಅನಿವಾರ್ಯ ಆಗಿತ್ತು. ಭಾರತದ ಇಸ್ಲಾಮಿಕ್ ಕಲೆಯು ಪರ್ಷಿಯಾದ ಕಲೆ, ಕಲಾವಿದರ ಅನುಕರಣೆಯಿಂದ ಆರಂಭವಾಯಿತು.

ದಖನಿ ಚಿತ್ರಕಲೆಯ ಕುರಿತು ಅಧ್ಯಯನ ನಡೆಸಿ ಕೃತಿ ರಚಿಸಿರುವ ಶಿವಶರಣ ಅರುಣಿ ಅವರು ಬಹಮನಿ ಚಿತ್ರಕಲೆಯ ಬಗ್ಗೆ ಹೀಗೆ ಬರೆಯುತ್ತಾರೆ–

‘ಬಹಮನಿ ಕಾಲದ ಚಿಕಣಿ ಚಿತ್ರಕಲೆಯ ಬಗ್ಗೆ ಹೆಚ್ಚಿನ ಮಾಹಿತಿ ನಮಗೆ ಲಭ್ಯವಿಲ್ಲದಿದ್ದರೂ, ಅವರ ಕಾಲದ ಭಿತ್ತಿಚಿತ್ರದ ಬಗ್ಗೆ ಸಾಕಷ್ಟು ಮಾಹಿತಿ ಕಂಡು ಬರುತ್ತದೆ. ಬಹಮನಿ ಕಾಲದ ಕಟ್ಟಡಗಳಲ್ಲಿ ಗಾರೆಯಲ್ಲಿ ಮಾಡಿದ ವಿನ್ಯಾಸಗಳಿಗೆ ವಿವಿಧ ವರ್ಣಗಳಿಂದ ಅಂದಗೊಳಿಸಿರುವುದನ್ನು ಗುಲ್ಬರ್ಗ, ಸಗರ, ಫಿರೋಜಾಬಾದ್, ಬೀದರ್‌ಗಳಲ್ಲಿನ ಬಹಮನಿ ಕಟ್ಟಡಗಳನ್ನು ನೋಡಬಹುದು. ಗುಲ್ಬರ್ಗ ಫಿರೋಜ್ ಶಹಾ ಗೋರಿಯ ಒಳಗೋಡೆಯ ಮೇಲಿರುವ ಗಾರೆಯ ವಿನ್ಯಾಸಗಳಿಗೆ ನೀಲಿ, ಕೆಂಪು, ಹಸಿರು, ಹಳದಿ ವರ್ಣಗಳಿಂದ ಅಂದಗೊಳಿಸಲಾಗಿದೆ’

ಗುಲ್ಬರ್ಗದ ಗುಬ್ಬಿ ಕಾಲೋನಿ ಮತ್ತು ಅಳಂದ ರಸ್ತೆಯ ಎಡಭಾಗಕ್ಕೆ ಇರುವ ಚಜ್ಜಾಬೀ ಗೋರಿಗಳ ಗಾರೆಗಳ ಮೇಲೂ ವರ್ಣಗಳಿಂದ ಅಂದಗೊಳಿಸಲಾಗಿದೆ.'

ಬಹಮನಿಯ ಎಂಟನೇ ಅರಸ ಫಿರೋಜ್‌ನ ಸಮಾಧಿ ಕಟ್ಟಡದಲ್ಲಿ ಕಾಣಿಸಿಕೊಂಡ ಗಾರೆಯ ವಿನ್ಯಾಸಗಳ ನಡುವೆ ಬಣ್ಣ ತುಂಬಿ ಅಂದಗೊಳಿಸುವ ಪರಿಪಾಠವು ನಂತರದ ಅರಸರ ಸಮಾಧಿಗಳಲ್ಲಿ ಸುಧಾರಿತ ರೂಪದಲ್ಲಿ ಮುಂದುವರೆಯಿತು. ಫಿರೋಜ್‌ನ ನಂತರ ಅಧಿಕಾರಕ್ಕೆ ಬಂದ ಅವನ ಸಹೋದರ ಅಹ್ಮದ್ ರಾಜಧಾನಿಯನ್ನು ಬೀದರ್‌ಗೆ ವರ್ಗಾಯಿಸಿದ ನಂತರ ಕ್ರಾಂತಿಕಾರಕ ಬದಲಾವಣೆಗಳಾದವು. ಎರಡು ವಿಭಿನ್ನ ಸಾಂಸ್ಕೃತಿಕ ಧಾರೆಗಳು ಪರಸ್ಪರ ಮುಖಾಮುಖಿಯಾದಾಗ ಹುಟ್ಟಿಕೊಂಡ ಕಲಾಪರಂಪರೆಯ ಆರಂಭಿಕ ಹಂತವನ್ನು ಅಷ್ಟೂರಿನಲ್ಲಿ ಇರುವ ಅಹ್ಮದ್ ಶಹಾ ಅಲಿಯ ಸಮಾಧಿ ಕಟ್ಟಡದಲ್ಲಿ ನೋಡುತ್ತೇವೆ. ಭಾರತದಲ್ಲಿ ಇಸ್ಲಾಮಿಕ್ ಪೇಂಟಿಂಗ್ ಆರಂಭಗೊಂಡ ಮೊದಲ ದಿನಗಳ ಮಾದರಿ ಅಷ್ಟೂರಿನಲ್ಲಿ ನೋಡಲು ಸಿಗುತ್ತದೆ. ಚಿತ್ರ ಬಿಡಿಸುವುದಕ್ಕೆ ಇದ್ದ ಇಸ್ಲಾಂನ 'ನಿಷೇಧ' ಮೀರುವ ಪ್ರಯತ್ನ ಪರ್ಷಿಯಾದಲ್ಲಿ ಆರಂಭವಾಗಿತ್ತು. ಭಾರತದಲ್ಲಿ ಅಷ್ಟೂರು ಭಿತ್ತಿಚಿತ್ರಗಳು ಅಂತಹುದೇ ಪ್ರಯತ್ನದ ಫಲ. ಕಣ್ಣಿಗೆ ಗೋಚರವಾಗುವ ಆಕೃತಿಗಳ ಮೂಲಕ ಸಂದೇಶವನ್ನು ರವಾನಿಸುವ ಕಲೆಯ ಮಹತ್ವ ಮತ್ತು ಧರ್ಮ ವಿಧಿಸಿದ್ದ ನಿಷೇಧದ ಒತ್ತಡಗಳೆರಡೂ ಪರಸ್ಪರ ಸಂಧಿಸಿದಾಗ ಹೊಸ ದಾರಿ ಹುಟ್ಟಿಕೊಂಡಿತು. ಹೀಗೆ ಕಾಣಿಸಿಕೊಂಡ ದಾರಿ ಹೆದ್ದಾರಿಯಾಗಿರಲಿಲ್ಲ. ಹಾಗೆ, ಹೆದ್ದಾರಿಗಳು ಹುಟ್ಟುವುದಿಲ್ಲ ಕೂಡ. ಕಾಲ್ದಾರಿಗಳೇ ಬೆಳೆದು ಹೆದ್ದಾರಿಗಳಾಗಿ ಪರಿಣಮಿಸುತ್ತವೆ.

ಮಾನವ ಅಥವಾ ಜೀವ ಇರುವ ಪ್ರಾಣಿಯ ಚಿತ್ರ ಬಿಡಿಸುವುದಕ್ಕೆ ಇದ್ದ ಧಾರ್ಮಿಕ ವಿಧಿ ನಿಷೇಧ ಮೀರುವ ಪ್ರಯತ್ನವಾಗಿ ಆರಂಭಿಕ ಹಂತದಲ್ಲಿ ಮೂರು ರೂಪಗಳಲ್ಲಿ ಚಿತ್ರ–ಆಕಾರ ಕಾಣಿಸಿಕೊಂಡವು. ಅಕ್ಷರಗಳನ್ನು ಆಕರ್ಷಕವಾಗಿ, ಕಲಾತ್ಮಕವಾಗಿ, ಗಮನ ಸೆಳೆಯುವ ಹಾಗೆ ಬರೆಯುವ ಕ್ಯಾಲಿಗ್ರಫಿ. ಅಕ್ಷರಗಳೇ ಕಲಾಕೃತಿಗಳಾಗಿ ಬಿಡುವ ಪವಾಡ ಅದು. ಅದೇ ಹೊತ್ತಿಗೆ ಗಣಿತದ ಅದರಲ್ಲೂ ರೇಖಾಗಣಿತದ ಒಡನಾಟದ ಫಲವಾಗಿ ಹುಟ್ಟಿಕೊಂಡ ಕಲಾತ್ಮಕ ಆಕೃತಿಗಳು, ಹೊಸ ವಿನ್ಯಾಸ–ಡಿಸೈನ್ ಕಾಣಿಸಿಕೊಳ್ಳಲು ಕಾರಣವಾದವು. ಕ್ಯಾಲಿಗ್ರಫಿಯ ಪದಗಳ ಅಂದ ಮತ್ತು ರೇಖಾಗಣಿತದ ವಿನ್ಯಾಸಗಳನ್ನು ಬೆರೆಸಿದ ಮತ್ತೊಂದು ರೂಪ ಅರಾಬಸ್ಕ್‌ಗಳು ಕಾಣಿಸಿಕೊಂಡವು. ಅರಾಬಸ್ಕ್ ಎಂದರೆ 'ಎಲೆಯಾಕಾರದ ಪುಷ್ಪಾಲಂಕೃತ ಹೆಣಿಗೆ ಇರುವ ರೇಖಾಗಣಿತ ಮಾದರಿಯ ಸಂಕೀರ್ಣವಾದ ವಿನ್ಯಾಸ ಇರುವ ಚಿತ್ರ'. ಗಣಿತದಂತೆ ಸಂಕ್ಷಿಪ್ತವಾಗಿರುವ, ಸೌಂದರ್ಯಾತ್ಮಕ

ಕಾರಣಗಳಿಗಾಗಿ ಪ್ರಿಯವಾಗುವ ಹಾಗೂ ಸಾಂಕೇತಿಕವಾಗಿ ಇರುವ ಕಲಾಕೃತಿ ಅರಾಬಸ್ಕ್. ಇದನ್ನು ಕಲೆ–ವಿಜ್ಞಾನಗಳೆರಡರ ಸಮ್ಮಿಶ್ರಣ ಎಂದು ಗುರುತಿಸಬಹುದು.

ಹೀಗೆ ಹೊಸ ದಾರಿ ಕಂಡುಕೊಂಡಾಗಿತ್ತು. ಹೊಸದಾರಿಗುಂಟ ಹೊರಟ ಕಲಾವಿದರು ಅದ್ಭುತವನ್ನೇ ಸೃಷ್ಟಿಸಲು ಆರಂಭಿಸಿದರು. ಮಾನವ ಪ್ರಯತ್ನದ ಫಲವಾಗಿ ಆಕೃತಿಗಳು ತಳೆಯುತ್ತ ಹೋದ, ಬೆಳೆಯುತ್ತ ಹೋದ ರೂಪ ಬೆರಗುಗೊಳಿಸುತ್ತದೆ. ಹೀಗೆ ಕ್ಯಾಲಿಗ್ರಫಿ, ರೇಖಾಗಣಿತದ ಮಾದರಿ, ಅರಾಬಸ್ಕ್‌ಗಳು ಮೂಲಕ ತೆರೆದುಕೊಂಡ ಇಸ್ಲಾಮಿಕ್ ಕಲೆಯು ಅಲ್ಲಿಗೇ ನಿಲ್ಲಲಿಲ್ಲ. ಯಾವೊಂದು ಜೀವಂತ ಕಲೆಯೂ ಹಾಗೆ ನಿಲ್ಲುವುದಿಲ್ಲ. ತನ್ನೊಳಗೆ ಒಳಸುಳಿಗಳನ್ನು ಇಟ್ಟುಕೊಂಡು ಒಳದಾರಿಗಳನ್ನು ಕಂಡುಕೊಂಡಿರುತ್ತದೆ. ಆಕೃತಿಗಳಲ್ಲಿ ಅದರಲ್ಲೂ ವಿಶೇಷವಾಗಿ ದಾರಿ ಕಲ್ಪಿಸಿದ ಕ್ಯಾಲಿಗ್ರಫಿಯಲ್ಲಿಯೇ ಪ್ರಾಣಿಗಳ, ಪಕ್ಷಿಗಳ, ಫಲ–ಪುಷ್ಪಗಳ ಸೃಷ್ಟಿ ಆರಂಭವಾಯಿತು. ಕ್ಯಾಲಿಗ್ರಫಿ ಸೃಷ್ಟಿಸಿದ ಅದ್ಭುತ– ವಿಶಿಷ್ಟ ಲೋಕ ಎಂತಹವರನ್ನೂ ಬೆರಗುಗೊಳಿಸುತ್ತದೆ. ಕ್ಯಾಲಿಗ್ರಫಿಯಲ್ಲಿ ನುಸುಳಿದ ಪ್ರಾಣಿಗಳು ನಂತರ ಬಣ್ಣಗಳಲ್ಲಿ ಕಾಣಿಸಿಕೊಂಡವು. ಅವು ನಂತರದ ದಿನಗಳಲ್ಲಿ ಮಿನಿಯೇಚರ್, ವ್ಯಕ್ತಿಚಿತ್ರ, ಭಾವಚಿತ್ರಗಳಾಗಿ ಬೆಳೆದದ್ದು ಬೇರೆಯದೇ ಇತಿಹಾಸ.

ಹೊಸ ಇತಿಹಾಸದ ಸೃಷ್ಟಿಗೆ ಕಾರಣವಾದ ಕ್ಯಾಲಿಗ್ರಫಿ, ರೇಖಾಗಣಿತದ ಚಿತ್ರಗಳು ಹಾಗೂ ಅರಾಬಸ್ಕ್‌ಗಳ ಭಾರತದ ಆರಂಭದ ರೂಪ ಅಷ್ಟೂರಿನ ಅಹ್ಮದ್ ಶಹಾ ಗುಂಬಜ್‌ನಲ್ಲಿ ನೋಡಲು ಸಿಗುತ್ತವೆ. ಸುಂದರ ವಿನ್ಯಾಸಗಳಲ್ಲಿ ಅಕ್ಷರಗಳನ್ನು ರೂಪಿಸುವುದಕ್ಕೆ ಇದ್ದ ಸೂಫಿ– ಧಾರ್ಮಿಕ ಪ್ರೇರಣೆಯ ಬಗ್ಗೆ ಪ್ರತ್ಯೇಕ ಅಧ್ಯಯನಗಳೇ ನಡೆದಿವೆ. ಅರೇಬಿಯಾದ ಲಿಪಿ ಅರಬ್ಬಿ. ಇಸ್ಲಾಂ ಧರ್ಮ ಹರಡಿದ ಕಡೆಗಳೆಲ್ಲ ಪವಿತ್ರ ಕುರಾನ್ ಮೂಲಕ ಅರಬ್ಬಿ ಲಿಪಿಯೂ ಹೋಯಿತು. ಪರ್ಷಿಯಾದಲ್ಲಿ ಇಸ್ಲಾಂ ಬಂದ ನಂತರ ಫಾರಸಿ ಭಾಷೆಯು ತಾನು ಬಳಸುತ್ತಿದ್ದ ಪಹಲ್ವಿ ಲಿಪಿಯನ್ನು ಬಿಟ್ಟು ಅರಬ್ಬಿ ಲಿಪಿಯನ್ನು ಒಪ್ಪಿಕೊಂಡಿತು. ಅರಬ್ಬಿ ಲಿಪಿಯಲ್ಲಿನ ಕಲಾತ್ಮಕ ಬರವಣಿಗೆ ಅರೇಬಿಯಾದಲ್ಲಿಯೇ ಆರಂಭವಾಯಿತು. ಪವಿತ್ರ ಕುರಾನ್ ಗ್ರಂಥಕ್ಕೆ ಅಕ್ಷರ ರೂಪ ನೀಡುವ ಸಂದರ್ಭದಲ್ಲಿಯೇ 'ಕ್ಯಾಲಿಗ್ರಫಿ'ಯ ಆರಂಭ ಕೂಡ ಆಯಿತು. ಮೊದಲ ಮಾದರಿಯ ಕ್ಯಾಲಿಗ್ರಫಿಯ ಬರಣಿಗೆಯ ರೂಪವನ್ನು 'ಕುಫಿಕ್ ಶೈಲಿ' ಎಂದು ಗುರುತಿಸಲಾಗುತ್ತದೆ. ಕ್ಯಾಲಿಗ್ರಫಿಯು ಅರೇಬಿಯಾದಲ್ಲಿ ಬೆಳೆದದ್ದು ಹಲವು ಬಗೆ ಕುಫಿಕ್ ಶೈಲಿಯಲ್ಲಿ. ಕುಫಿಕ್ ಎನ್ನುವ ಹೆಸರು ಬಂದದ್ದು ಇರಾಕ್‌ನ ಕುಫಾ ಎಂಬ ನಗರದಿಂದಾಗಿ. ಕುಫಾ ನಗರ ಹುಟ್ಟುವ ಮುನ್ನ ಈ ಪ್ರದೇಶವನ್ನು ಮೆಸಪಟೋಮಿಯಾ ಎಂದು ಕರೆಯಲಾಗುತ್ತಿತ್ತು. ಇಸ್ಲಾಂ ಧರ್ಮವು ಆರಂಭವಾಗುವ ವೇಳೆಗಾಗಲೇ ಈ ಲಿಪಿಯು ಅರೇಬಿಯಾದಲ್ಲಿ

ಬಳಕೆಯಲ್ಲಿತ್ತು. ಭಾರತದಲ್ಲಿ ದೊರೆತ ಏಕೈಕ ಕುಫಿಕ್ ಕ್ಯಾಲಿಗ್ರಫಿಯ ಮಾದರಿ ಅಷ್ಟೂರು ಅಹ್ಮದ್ ಸಮಾಧಿಯಲ್ಲಿದೆ. ಅಷ್ಟೂರು ಹೊರತು ಪಡೆಸಿ ಭಾರತದ ಬೇರಾವ ಭಾಗದಲ್ಲಿಯೂ ಕುಫಿಕ್ ಕ್ಯಾಲಿಗ್ರಫಿ ಬಳಕೆಯಾಗಿಲ್ಲ.

ಪರ್ಷಿಯಾದ ಒಡನಾಟದಿಂದಾಗಿ ಹೊಸಬಗೆಯ ಕ್ಯಾಲಿಗ್ರಫಿಯ ಮಾದರಿಗಳು ಹುಟ್ಟಿಕೊಂಡವು. ಅದಕ್ಕೆ ಸೂಫಿ–ಧಾರ್ಮಿಕ ಪ್ರೇರಣೆಗಳು ಇದ್ದವು. ಥುಲುತ್, ನಸ್ಖ್, ನಸ್ತಾಲಿಕ್, ಕ್ಯಾಲಿಗ್ರಫಿಗಳು ಪ್ರಮುಖವಾದವುಗಳು.

ಥುಲುತ್– ಪರ್ಷಿಯಾದ ಕ್ಯಾಲಿಗ್ರಾಫರ್ ಇಬ್ನ್ ಮುಕ್ಲಾಹ್ ಶಿರಾಜಿಯ ಶೋಧವಾದ ಥುಲುತ್ ಮಾದರಿಯ ಕ್ಯಾಲಿಗ್ರಫಿಯು ಮೊದಲ ಬಾರಿಗೆ ಕಾಣಿಸಿಕೊಂಡದ್ದು 11ನೇ ಶತಮಾನದಲ್ಲಿ. ನೇರವಾದ ಕೋನಗಳಲ್ಲಿ ಬಳಕೆಯಾಗುತ್ತಿದ್ದ ಕುಫಿಕ್ ಶೈಲಿಯ ಕ್ಯಾಲಿಗ್ರಫಿಯ ಬದಲಿಗೆ ಬಾಗುವ, ಡೊಂಕಾದ, ಓರೆಯಾಗಿ ಬರೆಯುವ ಥುಲುತ್ ಮಾದರಿ ಚಾಲ್ತಿಗೆ ಬಂತು. ಥುಲತ್‌ನಲ್ಲಿ ಪದದ ಮೂರನೇ ಒಂದಂಶದಷ್ಟು ಭಾಗವು ವಾಲಿರುತ್ತದೆ. ಆದ್ದರಿಂದಲೇ ಅದಕ್ಕೆ ಥುಲುತ್ ಎಂಬ ಹೆಸರು ಬಂದಿದೆ. ಗಾತ್ರದಲ್ಲಿ ದೊಡ್ಡದಾಗಿರುವ ಮತ್ತು ಸುಲಲಿತವಾದ, ಸುಂದರವಾದ ಬಾಗಿದ ಲಿಪಿ. ಮಧ್ಯಕಾಲೀನ ಮಸೀದಿಗಳಲ್ಲಿ ಇದನ್ನು ವ್ಯಾಪಕವಾಗಿ ಬಳಸಲಾಯಿತು. ಥುಲತ್ ಶೈಲಿಯು ನಂತರದ ದಿನಗಳಲ್ಲಿ ವೈವಿಧ್ಯಮಯ ಹೊಸ ಕ್ಯಾಲಿಗ್ರಫಿಯ ಶೈಲಿಗಳಿಗೆ ದಾರಿ ಮಾಡಿಕೊಟ್ಟಿತು.

ನಸ್ಖ್ ಎಂದೇ ಪ್ರಚಲಿತದಲ್ಲಿ ಇರುವ ಈ ಪರ್ಷಿಯನ್ ಮಾದರಿಯ ಕ್ಯಾಲಿಗ್ರಫಿಯನ್ನು 'ನಕ್ಷಿ' ಎಂದೂ ಕರೆಯಲಾಗುತ್ತದೆ. ಅರಬ್ಬಿ ಭಾಷೆಯ 'ನಸಾಹಾ'ದಿಂದ ಬಂದದ್ದು ನಸ್ಖ್. ಪದದ ಮೂಲ ಟರ್ಕಿಯ 'ನೇಸಿಯಾ' (ನಕಲಿಸು). ಇರಾನಿಯನ್ ಕ್ಯಾಲಿಗ್ರಾಫರ್ ಇಬ್ನ್ ಮುಕ್ಲಾ ಶಿರಾಜಿಯ ಶೋಧವಾದ ನಸ್ಖ್ ಕ್ಯಾಲಿಗ್ರಫಿಗೆ ಹಿಂದಿನ 'ಕುಫಿಕ್ ಶೈಲಿ'ಯು ಸ್ಥಾನಬಿಟ್ಟುಕೊಡಬೇಕಾಯಿತು. ನಸ್ಖ್ ಚಾಲ್ತಿಗೆ ಬಂದ ಮೇಲೆ ಅದೇ ಮಾದರಿಗೆ ಹೆಚ್ಚು ಮನ್ನಣೆ ದೊರೆಯಿತು. ಪಠ್ಯವನ್ನು ವೇಗವಾಗಿ ನಕಲಿಸಲು ಅವಕಾಶ ಇರುವುದರಿಂದ ಮಾದರಿಗೆ ನಸ್ಖ್ ಕ್ಯಾಲಿಗ್ರಫಿ ಎಂಬ ಹೆಸರು ಬಂದಿರಬಹುದು. ಥುಲುತ್‌ನ ಸುಧಾರಿತ ರೂಪವಾದ ನಸ್ಖ್‌ನಲ್ಲಿ ಹೆಚ್ಚು ಸೂಕ್ಷ್ಮ ಕುಸುರಿಗಾರಿಕೆಗೆ ಅವಕಾಶ ಇದೆ. ಸಣ್ಣಗಾತ್ರದಲ್ಲಿ ಪೆನ್ನು ಬಳಸಿ ಬರೆಯುವ ನಸ್ಖ್ ಲಿಪಿಯು ಪುಸ್ತಕ ತಯಾರಿಕೆಯಲ್ಲಿ ಹೆಚ್ಚು ಬಳಕೆಯಲ್ಲಿತ್ತು. ಕುರಾನ್, ಹದೀಸ್ ಪ್ರತಿ ಮಾಡುವುದಕ್ಕಾಗಿ ನಕ್ಷಿ ಬಳಸಲಾಗುತ್ತಿತ್ತು. ಕವಿತೆಯ ರಚನೆಯಲ್ಲಿಯೂ ವ್ಯಾಪಕವಾಗಿ ಬಳಕೆಯಲ್ಲಿದೆ.

ನಸ್ತಾಲಿಕ್– ಇದು ಅರಬ್ಬಿ–ಪರ್ಷಿಯನ್ ಲಿಪಿಯ ಬಳಕೆಗೆ ಹೆಚ್ಚು ಚಾಲ್ತಿಯಲ್ಲಿರುವ ಮಾದರಿ ಕ್ಯಾಲಿಗ್ರಫಿ. ಈ ಮಾದರಿಯಲ್ಲಿ ಪರ್ಷಿಯನ್

ಕ್ಯಾಲಿಗ್ರಫಿಗೆ ಹೆಚ್ಚು ಆದ್ಯತೆ. ಎಂಟು ಮತ್ತು ಒಂಬತ್ತನೇ ಶತಮಾನದಲ್ಲಿ ಇರಾನ್‌ನಲ್ಲಿ ಹುಟ್ಟಿಕೊಂಡ ಈ ಮಾದರಿಯು ಹೆಚ್ಚು ಜನಪ್ರಿಯವಾದದ್ದು. ಫಾರಸಿ ಮಾತ್ರವಲ್ಲದೆ ಪರ್ಷಿಯಾದ ಸಂಸ್ಕೃತಿ ಹರಡಿರುವ ಕಡೆಗಳಲ್ಲೆಲ್ಲ ನಸ್ತಾಲಿಕ್ ಜನಪ್ರಿಯಗೊಂಡಿದೆ. ಉರ್ದು, ಪಂಜಾಬಿ, ಕಾಶ್ಮೀರಿ, ರೇಖ್ತಾ ಭಾಷೆಯು ನಸ್ತಾಲಿಕ್ ಕ್ಯಾಲಿಗ್ರಫಿಯನ್ನೇ ಆಧರಿಸಿವೆ.

ಈ ಎಲ್ಲ ಮಾದರಿಯ ಕ್ಯಾಲಿಗ್ರಫಿಯ ಬರವಣಿಗೆಯು ಬೀದರ್‌ನ ಸ್ಮಾರಕಗಳಲ್ಲಿ ದಾಖಲಾಗಿದೆ. ಅದಕ್ಕೆ ಪರ್ಷಿಯಾದ ಕಲಾವಿದರು ಬಹಮನಿ ಅವಧಿಯಲ್ಲಿ ಬಂದು ನೆಲೆಸಿದ್ದೇ ಕಾರಣ. ಅಹ್ಮದ್ ಶಹಾ ಅಲಿಯ ಸಮಾಧಿಯಲ್ಲಿ ಪವಿತ್ರ ಕುರಾನ್‌ನ ಶ್ಲೋಕಗಳ ಜೊತೆಗೆ ಕಿರ್ಮಾನ್‌ದ ಕವಿ, ಸೂಫಿ ಸಂತ ಶಹಾ ನಿಯಾಮತ್ ಅಲ್ಲಾನ ದಿವಾನ್‌ಗಳನ್ನು ಸೊಗಸಾದ ರೀತಿಯಲ್ಲಿ ಕ್ಯಾಲಿಗ್ರಫಿಯಲ್ಲಿ ಬರೆಯಲಾಗಿದೆ. ಕುಫಿಕ್, ಥುಲತ್, ನಸ್ಖ್ ಮತ್ತು ನಸ್ತಾಲಿಕ್ ಮಾದರಿಯ ಕ್ಯಾಲಿಗ್ರಫಿ ಈ ಸ್ಮಾರಕದಲ್ಲಿ ನೋಡಲು ದೊರೆಯುತ್ತವೆ.

ಗುಂಬಜ್‌ದ ಒಳಭಾಗದಲ್ಲಿ ಮೇಲ್ಭಾಗದಲ್ಲಿ ವರ್ತುಲದ ಆಕಾರದಲ್ಲಿ ಹಸಿರು, ಕೆಂಪು ಮತ್ತು ಬಿಳಿ ಬಣ್ಣಗಳನ್ನು ಬಳಸಿ ಮಾಡಿದ ಸುಂದರ ರೇಖಾಗಣಿತ ಆಧರಿಸಿದ ಚಿತ್ರಗಳು, ವರ್ಣರಂಜಿತ ಅರಾಬಸ್ಕ್‌ಗಳು ತಮ್ಮ ಕಲಾತ್ಮಕ ಗುಣಮಟ್ಟದಿಂದಾಗಿ ಗಮನ ಸೆಳೆಯುತ್ತವೆ. ಅರುಣಿ ಹೀಗೆ ವಿವರಿಸುತ್ತಾರೆ 'ಗುಮ್ಮಟದ ಒಳಗೋಡೆಯ ಮೇಲೆ ವರ್ತುಲ ಆಕಾರದ ವಿನ್ಯಾಸದ ಚಿತ್ರಗಳಿವೆ. ಮಧ್ಯದ ವರ್ತುಲದಲ್ಲಿ ಮಂಡಲ ಅಥವಾ ರಂಗೋಲಿಯ ಆಕಾರದ ವಿನ್ಯಾಸವಿದೆ. ಇದರಲ್ಲಿ 'ಅಲ್ಲಾಹ್' ಎಂದು ಬರೆಯಲಾಗಿದೆ. ಮಧ್ಯ ವರ್ತುಲದ ಎರಡನೇ ಮತ್ತು ಮೂರನೇ ವರ್ತುಲಗಳಲ್ಲಿ ಕ್ಯಾಲಿಗ್ರಫಿ ಮತ್ತು ಬಾದಾಮಿಯಾಕಾರದ ವಿನ್ಯಾಸಗಳಿಂದ ಕೂಡಿದೆ. ಐದನೆಯದು ಅತ್ಯಂತ ದೊಡ್ಡದಾಗಿದ್ದು ಇದರಲ್ಲಿ ಹೂ-ದಳಗಳಂತೆ ಕಾಣುವ ರಂಗೋಲಿ ಆಕಾರದ ವಿನ್ಯಾಸಗಳ ಸಾಲುಗಳನ್ನು ಮತ್ತು ಚಿತ್ರಿಸಲಾಗಿದೆ. ಇಲ್ಲಿ ಬಳಸಿದ ವರ್ಣಗಳೆಂದರೆ ಶ್ವೇತ, ಕೆಂಪು, ಕಂದು, ಹಳದಿ, ಹಸಿರು ಮತ್ತು ಚಿನ್ನದ ಹೊಳಪಿನ ವರ್ಣಗಳು. ಈ ಗೋರಿಯ ಭಿತ್ತಿ ಚಿತ್ರಗಳ ಕುರಿತು ಅಧ್ಯಯನ ಮಾಡಿದ ಫಿಲೋನ್ ಅವರ ಪ್ರಕಾರ ಇಲ್ಲಿ ಕಂಡು ಬರುವ ವಿನ್ಯಾಸಗಳು ಪರ್ಷಿಯಾದ ಒಟ್ಟೋಮನ್ ಅರಸರ ಕಾಲದ ಕಲೆ ಮತ್ತು ದಖನ್‌ನ ಸಾಂಪ್ರದಾಯಕ ಕಲೆ ಮಿಶ್ರಣಗಳೆಂದು ಅಭಿಪ್ರಾಯಪಟ್ಟಿದ್ದಾರೆ'.

ಅಷ್ಟೂರು ಮಾರ್ಗದಲ್ಲಿ ಬರುವ ಚೌಕಂಡಿ ಭಾರತದ ಕ್ಯಾಲಿಗ್ರಫಿಯನ್ನು ವಿದ್ವಾಂಸರು 'ಮಾಸ್ಟರ್ ಪೀಸ್' ಎಂದು ಗುರುತಿಸಿದ್ದಾರೆ. ನಿಯಾಮತ್ ಅಲ್ಲಾ

ಕಿರ್ಮಾನಿಯ ಪುತ್ರ ಹಬೀಬ್ ಅಲ್ಲಾ ಕಿರ್ಮಾನಿಯ ಸಮಾಧಿಯ ಪ್ರವೇಶ ದ್ವಾರದ ಮೇಲ್ಭಾಗದಲ್ಲಿ ಕಲ್ಲುಗಳಲ್ಲಿ ಕೆತ್ತಿ ಜೋಡಿಸಿದ ಕ್ಯಾಲಿಗ್ರಫಿಯು ಕಣ್ಮನಗಳನ್ನು ತಣಿಸುವಂತಿದೆ. ಕಲಾವಿದನ ಕುಸುರಿತನ, ಜಾಣ್ಮೆಗಳೆರಡೂ ಗಮನ ಸೆಳೆಯದೇ ಇರಲಾರವು. ಹಾಗೆಯೇ ಮಹಮೂದ್ ಗಾವಾನ್ ಮದರಸಾದ ಮುಂಭಾಗದಲ್ಲಿ ನೀಲಿ, ಬಿಳಿ ಬಣ್ಣದ ಟೈಲುಗಳಲ್ಲಿನ ಸುಂದರ ಕ್ಯಾಲಿಗ್ರಫಿ ಗಮನ ಸೆಳೆಯುತ್ತದೆ.

ನಿಯಾಮತ್ ಕಿರ್ಮಾನಿಯ ಮೊಮ್ಮಗ ಕುಳಿತು ಬಂದರೆಂದು ಹೇಳಲಾದ ಮಂಚ ಇರುವ 'ತಖ್ತ್ ಎ ಕಿರ್ಮಾನಿ' ಸ್ಮಾರಕವು ಮದರಸಾ ಮತ್ತು ಕೋಟೆಯ ನಡುವಿನ ರಸ್ತೆಯಲ್ಲಿ ಬರುತ್ತದೆ. ತಖ್ತ್ ಎ ಕಿರ್ಮಾನಿಯ ಮುಂಭಾಗದಲ್ಲಿ ಅಪ್ಪಟ ಪರ್ಷಿಯಾದ ಕಲೆಯನ್ನು ನೋಡಬಹುದು. ತಖ್ತ್ ಎ ಕಿರ್ಮಾನಿಯ ಸ್ಮಾರಕದಲ್ಲಿ ಗಾರೆ ಚಿತ್ರಗಳು ನೇರವಾಗಿ ಪರ್ಷಿಯಾದಿಂದ ತಂದು ಇರಿಸಿದಂತೆ ಭಾಸವಾಗುತ್ತವೆ.

ಸ್ವತಃ ಕವಿಯಾಗಿದ್ದ ಫಿರೋಜ್ ದಖನ್‌ನಲ್ಲಿ ಸಾಹಿತ್ಯ-ಸಂಸ್ಕೃತಿಯ ಬೆಳವಣಿಗೆಗೆ ಕಾರಣನಾದನು. ಫಿರೋಜ್‌ನು ಕ್ಯಾಲಿಗ್ರಫಿ (ಸುಂದರ ಅಕ್ಷರ ವಿನ್ಯಾಸ) ಬರವಣಿಗೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದ. ಪ್ರತಿ ನಾಲ್ಕು ದಿನಗಳಿಗೆ ಒಮ್ಮೆ ಪವಿತ್ರ ಕುರಾನ್‌ನ 16 ಪುಟಗಳನ್ನು ಕ್ಯಾಲಿಗ್ರಫಿಯಲ್ಲಿ ಬರೆಯುತ್ತಿದ್ದ ಎಂದು ಫೆರಿಸ್ತಾ ದಾಖಲಿಸುತ್ತಾನೆ.

ಮಧ್ಯಕಾಲೀನ ಇತಿಹಾಸದ ಕಾಲಘಟ್ಟಕ್ಕೆ ಸೇರಿದ ಹಸ್ತಪ್ರತಿಗಳನ್ನು ಪರಿಶೀಲಿಸುವಾಗ ಜರ್ಮನಿಯ ಕಲಾವಿಮರ್ಶಕ, ವಿದ್ವಾಂಸ ಹರ್ಮನ್ ಗೋಯೆಟ್ಸ್ ಅವರಿಗೆ ಎರಡು ಕಿರುಚಿತ್ರಗಳು ದೊರೆತವು. ಅವು ಪ್ರೇಮಕಥಾನಕಗಳಾದ 'ಲೈಲಾ ಮಜ್ನು' ಮತ್ತು 'ಶಿರಿನ್-ಪರ್ವಿನ್'ಗಳನ್ನು ಕುರಿತವುಗಳಾಗಿದ್ದವು. ಆ ಎರಡೂ ಚಿತ್ರಗಳಲ್ಲಿನ ಆಕೃತಿಯ ಲಕ್ಷಣ ಮತ್ತು ವಸ್ತು, ನಿರ್ವಹಣೆಗಳನ್ನು ಗಮನಿಸಿದ ಗೋಯೆಟ್ಸ್ ಅವರು ಪರ್ಷಿಯಾ ಶೈಲಿಗೆ ಸೇರಿದವು ಎಂಬ ತೀರ್ಮಾನಕ್ಕೆ ಬಂದರು.

ಆ ಎರಡು ಕಲಾಕೃತಿಗಳ ರಚನೆಯಲ್ಲಿ ಬಳಸಿದ ಬಣ್ಣಗಳು, ಹಿನ್ನೆಲೆಯಲ್ಲಿ ಚಿತ್ರಿತವಾಗಿರುವ ಪರಿಸರ ದಖನಿ ಶೈಲಿಯ ಸ್ಪರ್ಶ ಇರುವುದನ್ನು ಸೂಚಿಸುತ್ತವೆ. ಎರಡೂ ಕಲಾಕೃತಿಗಳ ಕಾಲ ನಿರ್ಧರಿಸುವುದು ಸಾಧ್ಯವಾಗಿಲ್ಲ. ಈ ಎರಡೂ ಕಲಾಕೃತಿಗಳು ಬಹಮನಿ ಅರಸರ ಕೊನೆಯ ಅವಧಿಯಲ್ಲಿ ಆಗಿರಬಹುದು ಎಂಬ ಅಭಿಪ್ರಾಯ ಗೋಯೆಟ್ಸ್ ಅವರದು.

## ಅನನ್ಯ ಬಿದರಿ ಕಲೆ:

ಬೀದರ್‌ನ ಅನನ್ಯ ಕಲೆ ಬಿದರಿ. ಸತು ಮತ್ತು ತಾಮ್ರ ಮಿಶ್ರಿತ ಲೋಹದ ವಸ್ತುವಿನ ಮೇಲೆ ಡಿಸೈನ್ ಕೊರೆಯಲಾಗುತ್ತದೆ. ಹಾಗೆ ಕೊರೆದ ಪ್ರತಿಭಾಗದಲ್ಲಿಯೂ ಬೆಳ್ಳಿಯ ತಂತಿ ಕೂಡಿಸಲಾಗುತ್ತದೆ. ಅಪಾರ ಏಕಾಗ್ರತೆ, ಕುಸುರಿತನ ಬಯಸುವ ಬಿದರಿ ಕಲೆ ಅತ್ಯಂತ ಶ್ರಮದಾಯಕ ಕಲಾ ಪ್ರಕಾರ. ಬೆಳ್ಳಿ ಕೂಡಿಸಿದ ಕಡೆ ಮಾತ್ರ ಹೊಳೆಯುವಂತೆ ಮಾಡಿ ಇಡೀ ಲೋಹವನ್ನು ಕಪ್ಪಾಗಿಸುವ ಸಾಧ್ಯತೆ ಇರುವುದು ಬೀದರ್‌ನ ಕೋಟೆಯ ಆವರಣದಲ್ಲಿ ಇರುವ ಮಣ್ಣಿಗೆ ಮಾತ್ರ. ಇದೇ ಕಾರಣಕ್ಕಾಗಿ ದೇಶದ ಬೇರಾವುದೇ ಭಾಗದಲ್ಲಿ ಬಿದರಿ ಕಲಾಕೃತಿ ಮಾಡಲು ಸಾಧ್ಯವಿಲ್ಲ. ಹಾಗೆ ಮಾಡುವುದಾದರೆ ಬೀದರ್‌ನ ಮಣ್ಣನ್ನೇ ತೆಗೆದುಕೊಂಡು ಹೋಗಬೇಕು. ಆದ್ದರಿಂದಲೇ ಬಿದರಿ ಕಲೆಗೆ ಪ್ರಾದೇಶಿಕ ಪೇಟೆಂಟ್ ಕೂಡ ಲಭ್ಯವಾಗಿದೆ.

ಹನ್ನೆರಡನೇ ಶತಮಾನದ ಮಧ್ಯಭಾಗಕ್ಕಿಂತ ಮುಂಚೆ ಲೋಹದ ಮೇಲ್ಭಾಗವನ್ನು ಕೊರೆದು ಅದರಲ್ಲಿ ಮತ್ತೊಂದು ಲೋಹ ಕೂಡಿಸುವ ವಿಧಾನ ಚಾಲ್ತಿಯಲ್ಲಿ ಇರಲಿಲ್ಲ. ಹೀಗೆ ಲೋಹ ಕೂಡಿಸುವ ವಿಧಾನ ಜಾರಿಗೆ ಬಂದ ಮೊದಲ ದಿನಗಳಲ್ಲಿ ಉಪಯೋಗಿಸಿದ ಲೋಹ ಬೆಳ್ಳಿಯಾಗಿತ್ತು ಮತ್ತು ತಾಮ್ರ. ನಂತರದ ದಿನಗಳಲ್ಲಿ ಚಿನ್ನ ಕೂಡಿಸುವ ಪರಿಪಾಠವೂ ಸೇರಿಕೊಂಡಿತು.

ಲೋಹವನ್ನು ಕೊರೆಯುವ ವಿಧಾನವು ಖಚಿತವಾಗಿ ಪರ್ಷಿಯಾದಲ್ಲಿಯೇ ಆರಂಭವಾದದ್ದು. 9ರಿಂದ 12ನೇ ಶತಮಾನದ ನಡುವಿನ ಅವಧಿಯಲ್ಲಿ ಆರಂಭವಾದ ಈ ವಿಧಾನವನ್ನು ಗಾತ್ರದಲ್ಲಿ ದೊಡ್ಡದಾದ, ಅಗಲವಾದ ಲೋಹದ ಹೊರಮೈ ಇರುವ ಪಾತ್ರೆಗಳಲ್ಲಿ ಮಾತ್ರ ಬಳಸಲಾಗುತ್ತಿತ್ತು. ಈ ಕಾಲಘಟ್ಟದಲ್ಲಿ ತಯಾರಿಸಲಾದ ಹಿತ್ತಾಳೆಯ ಪಾತ್ರೆಗಳು ಖುರಾಸಾನ, ರೇಗಿ, ಹಮದಾನ್ ಮತ್ತು ಸಮರಖಂಡ ಪ್ರದೇಶದಲ್ಲಿ ನೋಡಲು ಸಿಗುತ್ತವೆ. ಪ್ರಾಣಿಗಳ ಮೈಮೇಲೆ ಹಾಕಲಾಗುವ ವಸ್ತುಗಳ ಮೇಲೆ ಅರಬ್ಬೀ ಪ್ರಭಾವ ದಟ್ಟವಾಗಿರುವ ಹಾಗೂ ತೆಳುವಾಗಿ ಕುಫಿಕ್ ಶೈಲಿಯಲ್ಲಿ ಕ್ಯಾಲಿಗ್ರಫಿ ಮಾಡಿರುವುದನ್ನು ನೋಡಬಹುದು.

ಕಪ್ಪು ಕ್ಯಾನ್ವಾಸ್‌ನಲ್ಲಿ ಬೆಳ್ಳಿಗೆರೆಗಳ ಮೂಲಕ ಮಿಂಚುವ. ಹೊಳೆಯುವ ಬಿದರಿ ಅದ್ಭುತ ಕಲೆ. ಪ್ರತಿಯೊಂದು ಎಳೆಯನ್ನೂ ಕೊರೆದು ಅದರಲ್ಲಿ ಬೆಳ್ಳಿ ತುಂಬುವ ಕಲಾವಿದನ ಶ್ರಮ ಶ್ಲಾಘನೀಯ. ಆಧುನಿಕ ತಂತ್ರಜ್ಞಾನದ ಫಲವಾಗಿ ಏಕಕಾಲಕ್ಕೆ ಹತ್ತಾರು, ನೂರಾರು ಪ್ರತಿಗಳನ್ನು ತಯಾರಿಸುವ ದಿನಗಳಲ್ಲಿ 'ಒಂದು ಕಲಾಕೃತಿ'ಗಾಗಿ ವಾರಗಟ್ಟಲೇ ಕೆಲಸ ಮಾಡಬೇಕಾಗುತ್ತದೆ. ಬಿದರಿ ಕಲಾವಿದರು ಸೊಗಸಾಗಿ, ಕುಸುರಿತನದಿಂದ ಕೆಲಸ ಮಾಡುತ್ತಾರೆ.

ಇರಾನ್–ಇರಾಕ್ ಮೂಲದ ಈ ಕಲೆಯು ಸೂಫಿ ಸಂತ ಖ್ವಾಜಾ ಮೊಹಿನ್ನುದ್ದೀನ್ ಚಿಸ್ತಿಯ ಮೂಲಕ ರಾಜಸ್ಥಾನದ ಅಜ್ಮೀರ್‌ಗೆ ಬಂತು. 'ಬಿದರಿ' ಎಂದು ಈಗ ಕರೆಯಲಾಗುವ ಕಲೆಯ ಮರ್ಮ ಅರಿತ್ತಿದ ಅಬ್ದುಲ್ಲಾ ಬಿನ್ ಕೈಸರ್ ಎಂಬ ಕುಶಲಕರ್ಮಿಯು ಅಜ್ಮೀರ್‌ನಿಂದ ವಿಜಾಪುರಕ್ಕೆ ವಲಸೆ ಬಂದ. ಕೈಸರ್ ಜೊತೆ ಬೆಳೆದ ಒಡನಾಟದಿಂದ ವಿಜಾಪುರದ ಚಿನ್ನದ ಕೆಲಸ ಮಾಡುವ ಶಿವಣ್ಣ ಈ ಕಲೆಯ ಒಳಗುಟ್ಟುಗಳನ್ನು ಕಲಿತ. ಬಹಳಷ್ಟು ದಿನಗಳ ಕಾಲ ಈ ಕಲೆಯು ಕೇವಲ ಶಿವಣ್ಣನ ಕುಟುಂಬ ವರ್ಗದವರಿಗೆ ಮಾತ್ರ ಸೀಮಿತವಾಗಿತ್ತು.

ಬಹಮನಿ ಅರಸ 2ನೇ ಅಲ್ಲಾವುದ್ದೀನ್ (1443) ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಬಂದ ಉಡುಗೊರೆಗಳ ಪೈಕಿ ಇದ್ದ ಆಕರ್ಷಕ ಮತ್ತು ಕಲಾತ್ಮಕ ವಸ್ತುಗಳು ಅರಸನ ಗಮನ ಸೆಳೆದವು. ಕಲೆಯ ಮಾಹಿತಿ ಪಡೆದ ಸುಲ್ತಾನ್ ವಿಜಾಪುರದಿಂದ ಕುಶಲಕರ್ಮಿಗಳನ್ನು ಕರೆಸಿ ಅವರಿಗೆ ರಾಜಾಶ್ರಯ ನೀಡಿದ.

ನಂತರ ಸುಲ್ತಾನ್‌ನ ಜನ್ಮದಿನದಂದು 'ಬಿದರಿ' ಎಂದು ನಾಮಕರಣ ಮಾಡಲಾಯಿತು. ಪ್ರಧಾನಿ ಮಹಮೂದ್ ಗಾವಾನ್ ತೋರಿಸಿದ ಆಸಕ್ತಿಯ ಫಲವಾಗಿ ಬಿದರಿ ಕಲೆಯು ಬೀದರ್‌ನಲ್ಲಿ ನೆಲೆಯೂರಿತು. ಬರೀದ್‌ಷಾಹಿ ಅರಸರ ಕಾಲದಲ್ಲಿ ರೂಪುಗೊಂಡ ವಿಶಿಷ್ಟ ಮಾದರಿಯ ಕಲಾಕೃತಿಗಳು ಜಗತ್ತಿನಾದ್ಯಂತ ಗಮನ ಸೆಳೆದವು.

ಬೀದರ್‌ನಲ್ಲಿ ಸಿದ್ಧವಾಗುವ ಬಿದರಿ ಕಲಾಕೃತಿಗಳಲ್ಲಿ ಮೂರು ಬಗೆಯಲ್ಲಿ ಬೆಳ್ಳಿ ಕೂಡಿಸಲಾಗುತ್ತದೆ. ಅವುಗಳನ್ನು ತಾರ್, ಶೀಟ್, ಫೂಲ್‌ಝುಡಿ ಎಂದು ಕರೆಯಲಾಗುತ್ತದೆ. ಕೊರೆದ ಸ್ಥಳದಲ್ಲಿ ತಂತಿಯನ್ನು ಕೂಡಿಸಿ ತಯಾರಿಸಿದ ಕಲಾಕೃತಿಗಳು ತಾರ್ ಬಿದರಿ ಕಲಾಕೃತಿಗಳು ಎಂದು ಕರೆಯಲಾಗುತ್ತದೆ. ಹಾಗೆಯೇ ಕೊರೆದು ತೆರವುಗೊಳಿಸಿದ ಪ್ರದೇಶದಲ್ಲಿ ಬೆಳ್ಳಿಯ ಹಾಳೆಯನ್ನು ಬಡಿದು ಕೂಡಿಸಿ ಮಾಡುವ ವಿಧಾನಕ್ಕೆ ಶೀಟ್ ಬಿದರಿ ಕಲಾಕೃತಿ ಎನ್ನುತ್ತಾರೆ. ಎರಡರ ಮಿಶ್ರಣ ಅಥವಾ ಹೂವಿನಂತೆ ಕಾಣುವ ಕಲಾಕೃತಿಗಳು ಫೂಲ್‌ಝುಡಿ. ಬಿದರಿ ಕಲಾಕೃತಿಗಳಲ್ಲಿ ಬಳಸಲಾಗುವ ವಿನ್ಯಾಸಗಳು ಬಹುತೇಕ ರೇಖಾಗಣಿತದಿಂದ ಪಡೆದ ಸುಂದರ ಆಕೃತಿಗಳು.

ಹಿಂದೆ ಕ್ಯಾಲಿಗ್ರಫಿಯನ್ನು ಅಳವಡಿಸಿ ಬಿದರಿ ಕಲಾಕೃತಿಗಳನ್ನು ರೂಪಿಸುತ್ತಿದ್ದರು ಇತ್ತೀಚಿನ ದಿನಗಳಲ್ಲಿ ಕ್ಯಾಲಿಗ್ರಫಿಯ ಬಳಕೆ ಬಿದರಿಯಲ್ಲಿ ಕಡಿಮೆಯಾಗಿದೆ. ಮಹಿಳೆಯರು ತಮ್ಮ ಜೀವನ ನಡೆಸುವುದಕ್ಕಾಗಿ ಬಿದರಿ

ಕಲಾಕೃತಿ ತಯಾರಿಸುವುದರಲ್ಲಿ ನಿರತರಾಗುತ್ತಿರುವುದು ಹೊಸ ಬೆಳವಣಿಗೆ. ಸದ್ಯ ಹೆಚ್ಚುತ್ತಿರುವ ಚಿನ್ನ ಬೆಳ್ಳಿಯ ಬೆಲೆ ಹಾಗೂ ಮಾರುಕಟ್ಟೆಯಿಲ್ಲ ಅದಕ್ಕೆ ಅನುಗುಣವಾಗಿ ಬೆಲೆ ಸಿಗದೇ ಇರುವ ಕಾರಣದಿಂದ ಬಿದರಿ ವಿನಾಶದ ಅಂಚಿಗೆ ಬಂದು ತಲುಪಿದೆ. ಪರ್ಷಿಯಾದಿಂದ ಬಂದ ಈ ಕಲೆಯು ದೇಸಿ ಸ್ಪರ್ಶದೊಂದಿಗೆ ಬೆಳೆದು ನಿಂತ ಪರಿ ಗಮನಾರ್ಹ.

# 8 ಜ್ಞಾನದ ಆಳ, ಕಲಿಕೆಯ ಎತ್ತರ

ಬಹಮನಿ ಸಾಮ್ರಾಜ್ಯದ ಮೊದಲ ದೊರೆ ಅಲಾವುದ್ದೀನ್ ಹಸನ್ ಬಹಮನ್ ಶಹಾ ಸ್ವತಃ ಕಲಿತವನಾಗಿರಲಿಲ್ಲ. ಆದರೆ ಅವನು ಫಾರಸಿ ಭಾಷೆಯಲ್ಲಿ ವ್ಯವಹರಿಸಬಲ್ಲವನಾಗಿದ್ದ. ಅಲಾವುದ್ದೀನ್‌ನು ತನ್ನ ಪುತ್ರರಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಕೊಡಿಸಿದ್ದ. ಅಲಾವುದ್ದೀನ್‌ನ ಪುತ್ರ ಮುಹಮ್ಮದ್ ಅರಬ್ಬಿ, ಪರ್ಷಿಯನ್, ಟರ್ಕಿ ಭಾಷೆಗಳಲ್ಲಿ ಪರಿಣಿತನಾಗಿದ್ದ. ರಾಜಕುಮಾರರ ಪಠ್ಯಪುಸ್ತಕಗಳಲ್ಲಿ ಸಾದಿಯ 'ಬುಸ್ತಾನ್' ಗ್ರಂಥವು ಸೇರಿತ್ತು. ಅಲಾವುದ್ದೀನ್ ಹಸನ್‌ನು ಗುಲ್ಬರ್ಗ, ಎಲಿಚಿಪುರ ಮತ್ತು ದೌಲತಾಬಾದ್‌ಗಳಲ್ಲಿ ಆರಂಭಿಸಿದ ಶಿಕ್ಷಣ ಕೇಂದ್ರಗಳು ಪರ್ಷಿಯಾದ 'ಮಖ್ತಾಬ್' ಮಾದರಿಯವುಗಳಾಗಿದ್ದವು. ಅವುಗಳಲ್ಲಿ ನೀಡಲಾಗುತ್ತಿದ್ದ ಶಿಕ್ಷಣ ಕೂಡ ಪರ್ಷಿಯಾ ಮಾದರಿಯದಾಗಿತ್ತು. ಈ ಅವಧಿಯಲ್ಲಿಯೇ ಹಲವು ಪ್ರಮುಖ ಉಲೇಮಾ ಮತ್ತು ಸೂಫಿಗಳು ದಖನ್‌ಗೆ ಬಂದರು. ಶೇಕ್ ಐನುದ್ದೀನ್, ಮುಲ್ಲಾ ಮೊಯಿನುದ್ದೀನ್ ಹರವಿ, ಮೀರ್ ಮುಹಮ್ಮದ್ ಬದಕ್ಷಾನಿ, ಹಕೀಮ್ ಅಲ್ಲಾವುದ್ದೀನ್ ತಬ್ರಿಜಿ, ಹಕೀಮ್ ನಸೀರುದ್ದೀನ್ ಶಿರಾಜಿ, ಲುಫ್ತುಲ್ಲಾ ಸಬ್ಜವೇರಿ, ಶರೀಫ್ ಸೈಫುದ್ದೀನ್ ಘೋರಿ ಪ್ರಮುಖರಾದವರು.

ಫಾರಸಿ ಮತ್ತು ಅರಬ್ಬಿ ಭಾಷೆಗಳಲ್ಲಿ ನಿಷ್ಣಾತನಾಗಿದ್ದ ಮೊದಲನೇ ಮುಹಮ್ಮದ್ ಶಹಾನು ಸ್ವತಃ ಕವಿಯಾಗಿದ್ದ. ಅರೇಬಿಯಾ ಮತ್ತು ಪರ್ಷಿಯಾದಿಂದ ಬಂದ ಹಲವು ಕವಿಗಳಿಗೆ ಆಶ್ರಯದಾತನಾಗಿದ್ದ. ಅವನ ಕಾಲದಲ್ಲಿ ಪರ್ಷಿಯಾ ಮತ್ತು ನೆರೆಯ ದೇಶಗಳಿಂದ ಕವಿಗಳು, ವಿದ್ವಾಂಸರನ್ನು ಆಹ್ವಾನಿಸುವ ಪರಿಪಾಠ ಆರಂಭವಾಯಿತು. ಸುಲ್ತಾನ್‌ನು 1378ರಲ್ಲಿ ದಖನ್ ಪ್ರಾಂತ್ಯದಲ್ಲಿ ಅನಾಥರು, ತಬ್ಬಲಿಗಳಿಗಾಗಿ ಮದರಸಾ ಆರಂಭಿಸಿದ. ಸರ್ಕಾರದ ವೆಚ್ಚದಲ್ಲಿ ಉಚಿತ ವಸತಿ

ಮತ್ತು ಶಿಕ್ಷಣದ ವ್ಯವಸ್ಥೆ ಕಲ್ಪಿಸಲಾಗಿತ್ತು. ಪರಿಣಿತ ವಿದ್ವಾಂಸರು ಮಕ್ಕಳಿಗೆ ಪಾಠ ಹೇಳುತ್ತಿದ್ದರು.

ತನ್ನ ದಕ್ಷ ಮತ್ತು ಬುದ್ಧಿವಂತಿಕೆಯಿಂದ ಕೂಡಿದ ಆಡಳಿತಕ್ಕಾಗಿ 'ದಖನ್‌ನ ಅರಿಸ್ಟಾಟಲ್' ಎಂಬ ಅಭಿದಾನಕ್ಕೆ ಪಾತ್ರನಾಗಿದ್ದ ಎರಡನೇ ಮುಹಮ್ಮದ್ ಶಹಾನು ಬಡವರು ಹಾಗೂ ದೀನರಿಗೆ ಸಹಾಯ ಹಸ್ತ ಚಾಚುವುದಕ್ಕಾಗಿ ಹೆಸರಾಗಿದ್ದನು. ತನ್ನ ಸಾಮ್ರಾಜ್ಯದ ಹಲವು ಕಡೆಗಳಲ್ಲಿ ಬಡವರಿಗಾಗಿ ಶಾಲೆಗಳನ್ನು ಆರಂಭಿಸಿದನು. ಗುಲ್ಬರ್ಗ, ಬೀದರ್, ಕಂದಾರ್, ಎಲಿಚಿಪುರ, ದೌಲತಾಬಾದ್, ಚೌಲ್, ದಾಬೋಲ್‌ಗಳಲ್ಲಿ ಶಾಲೆ ಆರಂಭಿಸಿ ಅವುಗಳಿಗೆ ಹಣ ಬಿಡುಗಡೆ ಮಾಡಿದ್ದನು. ನಿಯಮಿತ ನಿರ್ವಹಣೆಗಾಗಿ ಹಳ್ಳಿಗಳನ್ನು ದತ್ತಿ ನೀಡಿದ್ದನು. ಗಣ್ಯರ ಮಕ್ಕಳಿಗಾಗಿ ಸೈನ್ಯದ ಶಿಕ್ಷಣ ನೀಡುವ ಶಾಲೆಯನ್ನು ಕೂಡ ಆರಂಭಿಸಿದ್ದನು.

ಅಹ್ಮದ್ ಶಹಾ ಅಲಿಯು ಗುಲ್ಬರ್ಗದಿಂದ ಬೀದರ್‌ಗೆ ರಾಜಧಾನಿಯ ವರ್ಗಾಯಿಸುವ ಕೆಲವು ದಿನಗಳ ಮುನ್ನ ಅಂದರೆ ಅವನ ಸಹೋದರ ಫಿರೋಜ್ ಶಹಾನ ಅವಧಿಯಲ್ಲಿ ಸೂಫಿ ಸಂತ ಗೇಸು ದರಾಜ್ ಅವರು ಖಾನ್‌ಕಾ ಆರಂಭಿಸಿದ್ದರು. ನಂತರದ ದಿನಗಳಲ್ಲಿ ಅದು 'ಮದರಸಾ' ಕೂಡ ಆಗಿ ಬದಲಾವಣೆ ಆಯಿತು ಎಂದು ಗುಲಾಂ ಯಜ್ದಾನಿ ತಿಳಿಸುತ್ತಾರೆ.

## ಖಾನ್‌ಕಾಗಳು

ಆರಂಭಿಕ ಪ್ರಾಥಮಿಕ ಶಿಕ್ಷಣ ನೀಡುವ ಕೇಂದ್ರಗಳನ್ನು 'ಮಖ್ತಾಬ್' ಎಂದೂ ನಂತರ ಎಂದರೆ ಉನ್ನತ ಶಿಕ್ಷಣವನ್ನು 'ಮದರಸಾ'ಗಳಲ್ಲಿಯೂ ನೀಡಲಾಗುತ್ತಿತ್ತು. ಸೂಫಿಸಂತರು 'ಮಖ್ತಾಬ್'ಗಳ ನಂತರದ ಶಿಕ್ಷಣ ನೀಡುವ ಉದ್ದೇಶದಿಂದ ಖಾನ್‌ಕಾಗಳನ್ನು ಆರಂಭಿಸಿದರು. ಬಹಮನಿ ಅರಸರ ಕಾಲದಲ್ಲಿ ಬೀದರ್‌ನಲ್ಲಿ ಇಂತಹ ಖಾನ್‌ಕಾಗಳ ದೊಡ್ಡ ಪರಂಪರೆಯೇ ಹುಟ್ಟಿಕೊಂಡಿತು. ಖಾನ್‌ಕಾಗಳು ಧಾರ್ಮಿಕ ಶಿಕ್ಷಣ ನೀಡುವ ಕೇಂದ್ರಗಳಾಗಿದ್ದವು. ಬೀದರ್‌ನಲ್ಲಿ ಎಂಟು ಪ್ರಮುಖ ಖಾನ್‌ಕಾಗಳು ಇದ್ದ ಬಗ್ಗೆ ಮಾಹಿತಿ ದೊರೆಯುತ್ತದೆ. ಅವುಗಳ ಪಟ್ಟಿ ಇಂತಿದೆ–

1) ಹಜರತ್ ನೂರ್ ಸಮ್ನಾನಿ ಖಾನ್‌ಕಾ, 2) ಹಜರತ್ ಶಹಾ ಅಬುಲ್ ಫಯಾಜ್ ಖಾನ್‌ಕಾ, 3) ಹಜರತ್ ಶಹಾ ವಲಿಯುಲ್ಲಾ ಅಲ್ ಹುಸೇನಿ ಖಾನ್‌ಕಾ, 4)ಶಹಾ ಅಲಿ ಹುಸೇನಿ ಕುತುಬ್ ಖಾನ್‌ಕಾ 5) ಮಹಬೂಬ್ ಸುಭಾನಿ ಬಡಿ ಖಾನ್‌ಕಾ 6), ಮಹಬೂಬ್ ಸುಭಾನಿ ಚೋಟಿ ಖಾನ್‌ಕಾ, 7) ಮಕ್ದುಮ್ ಖಾದರಿ ಖಾನ್‌ಕಾ, 8) ಮಿನ್ನತ್ ಉಲ್ಲಾಹ್ ಬಿ ಸಾಹಿಬಾ ಖಾನ್‌ಕಾ

### 1) ಹಜರತ್ ನೂರ್ ಸಮ್ನಾನಿ ಖಾನ್‌ಕಾ

ಬಹಮನಿ ಅರಸರ ಕಾಲಕ್ಕೆ ಪರ್ಷಿಯಾದ ಸಮ್ನಾನ್ ಪ್ರದೇಶದಿಂದ ಆಗಮಿಸಿದ್ದ ಹಜರತ್ ನೂರ್ ಸಮ್ನಾನಿ ಅವರು ಆರಂಭಿಸಿದ ಖಾನ್‌ಕಾ. ಬಹಮನಿ ಅರಸರು ಬಹುವಾಗಿ ಗೌರವಿಸುತ್ತಿದ್ದ ನೂರ್‌ಸಮ್ನಾನಿ ಅವರು ಧಾರ್ಮಿಕ ಉಪನ್ಯಾಸ, ಪ್ರವಚನ ನೀಡುತ್ತಿದ್ದರು. ಸಿದ್ಧಿಕ್ ತಾಲೀಮ್ ಸಮೀಪದಲ್ಲಿ ಇರುವ ಖಾನ್‌ಕಾದ ಕಟ್ಟಡವು ಬಹಮನಿ ವಾಸ್ತುಶಿಲ್ಪ ಪರಂಪರೆಗೆ ಸೇರಿದ್ದಾಗಿದೆ.

### 2) ಹಜರತ್ ಶಹಾ ಅಬುಲ್ ಫಯಾಜ್ ಖಾನ್‌ಕಾ

ಬಹಮನಿ ದೊರೆ ಅಹಮದ್ ಶಹಾ ಅಲಿ ಸಮಕಾಲೀನರಾಗಿದ್ದ ಅಬುಲ್ ಫಯಾಜ್‌ರು ಗುಲ್ಬರ್ಗದ ಸಂತ ಖ್ವಾಜಾ ಬಂದೇ ನವಾಜ್ ಅವರ ಮೊಮ್ಮಗ. ಅಬುಲ್ ಫಯಾಜ್‌ರಿಗೆ ಮಹಮೂದ್ ಗಾವಾನ್ ತನ್ನ ಮಗಳು ನಿಯಾಮತ್ ಬೀಬಿಯನ್ನು ಕೊಟ್ಟು ಮದುವೆ ಮಾಡಿದ್ದ ಎಂಬ ನಂಬಿಕೆ ಇದೆ. ನಿಯಾಮತ್ ಬೀಬಿ ಮಕ್ಕಳಾಗದೇ ಮೃತಪಟ್ಟಳು, ಅವಳ ಸಮಾಧಿ ಅಬುಲ್ ಫಯಾಜ್ ದರ್ಗಾದಲ್ಲಿ ಇದೆ ಎಂದು ಹರೂನ್‌ಖಾನ್ ಶೇರ್ವಾನಿ ವಿವರಿಸಿದ್ದಾರೆ. ಚೌಬಾರಾದಿಂದ ಮಂಗಲ್‌ಪೇಟೆ ದರ್ವಾಜ ಮಾರ್ಗದಲ್ಲಿ ಬರುವ ಈ ಖಾನ್‌ಕಾದ ಕಟ್ಟಡ ಬಹಮನಿ ಅರಸರ ಕಾಲದಲ್ಲಿ ನಿರ್ಮಾಣ ಆದದ್ದು. ಈ ಖಾನ್‌ಕಾದ ಒಳಗಡೆಯಲ್ಲಿ ಹಜರತ್ ಫರಿದುದ್ದೀನ್ ಶಕಾರಗಂಜ್ ಅವರ ಪೋಷಾಕು, ಖ್ವಾಜಾ ಬಂದೇ ನವಾಜ್ ಧರಿಸುತ್ತಿದ್ದ ಟೋಪಿ ಸಂರಕ್ಷಿಸಿ ಇಡಲಾಗಿದೆ.

### 3) ಹಜರತ್ ಶಹಾ ವಲಿಯುಲ್ಲಾ ಅಲ್ ಹುಸೇನಿ ಖಾನ್‌ಕಾ

ಅಬುಲ್ ಫಯಾಜ್ ಖಾನ್‌ಕಾ ಎದುರುಗಡೆಯಿದೆ. ಪ್ರವಾದಿ ಮಹ್ಮದ್‌ರ ಅಳಿಯ ಹಜರತ್ ಅವರ ಹಸ್ತಾಕ್ಷರ ಎಂದು ನಂಬಲಾಗಿರುವ ಕುರಾನ್‌ನ ಹಸ್ತಪ್ರತಿ ಈ ಖಾನ್‌ಕಾದಲ್ಲಿದೆ.

### 4) ಶಹಾ ಅಲಿ ಹುಸೇನಿ ಕುತುಬ್ ಖಾನ್‌ಕಾ

ಶಹಾ ವಲಿಯುಲ್ಲಾ ಅಲ್ ಹುಸೇನಿ ಖಾನ್‌ಕಾದ ಸಮೀಪದಲ್ಲಿದೆ. ಬಹಮನಿ ಅರಸರ ಕಾಲಕ್ಕೆ ಪ್ರಮುಖ ಕಲಿಕಾ ಕೇಂದ್ರ ಆಗಿದ್ದ ಈ ಕಟ್ಟಡ ಸದ್ಯ ನಿರ್ವಹಣೆ ಇಲ್ಲದೇ ದುಸ್ಥಿತಿಯಲ್ಲಿದೆ. ಬಹಮನಿ-ಬರೀದ್ ಅರಸರ ವಾಸ್ತುಶೈಲಿ ಗಮನ ಸೆಳೆಯುತ್ತದೆ.

### 5) ಮಹಬೂಬ್ ಸುಭಾನಿ ಬಡಿ ಖಾನ್‌ಕಾ

ಮಹಮೂದ್ ಗಾವಾನ್ ಮದರಸಾದಿಂದ ಚೌಬಾರ ಕಡೆಗೆ ಹೋಗುವಾಗ ಬಲಭಾಗದಲ್ಲಿ ಇರುವ ಈ ಖಾನ್‌ಕಾದ ಕಟ್ಟಡದಲ್ಲಿ ಮಸೀದಿಇದೆ. ಖಾದರಿಯಾ ಸೂಫಿ ಪರಂಪರೆಗೆ ಸೇರಿದ ಈ ಖಾನ್‌ಕಾವು ಬಹಮನಿ ಅರಸರ ಕಾಲದಲ್ಲಿ ಧಾರ್ಮಿಕ ಶಿಕ್ಷಣ ನೀಡುವ ಕೇಂದ್ರ ಆಗಿತ್ತು.

### 6) ಮಹಬೂಬ್ ಸುಭಾನಿ ಚೋಟಿ ಖಾನ್‌ಕಾ

ಬಡೀ ಖಾನ್‌ಕಾದ ಹತ್ತಿರವೇ ಇರುವ ಈ ಖಾನ್‌ಕಾದ ಪ್ರವೇಶದಲ್ಲಿರುವ ಶಾಸನದಲ್ಲಿ ಸ್ಥಾಪಕ ಫಿರೋಜ್‌ಖಾನ್‌ನ ಹೆಸರು ಉಲ್ಲೇಖಗೊಂಡಿದೆ. ಅಲ್ಲಿಯ ಮಸೀದಿಯಲ್ಲಿ ಇರುವ ಮತ್ತೊಂದು ಶಾಸನದಲ್ಲಿ ಅಹ್ಮದ್‌ಖಾನ್ ಕ್ಷೇಗಿ ಹೆಸರು ದಾಖಲಾಗಿದೆ.

### 7) ಮಕ್ದುಮ್ ಖಾದರಿ ಖಾನ್‌ಕಾ

ಮದರಸಾ ಮತ್ತು ದಲ್ಬನ್ ದರ್ವಾಜ ರಸ್ತೆಯಲ್ಲಿದೆ. ಐದು ಕಮಾನುಗಳ ಪ್ರವೇಶ ಇರುವ ಈ ಖಾನ್‌ಕಾ ಮುಲ್ತಾನಿ ಬಾದಶಹಾನ ಪುತ್ರನಿಗೆ ಸೇರಿದ್ದು. ಖಾದರಿಯಾ ಪರಂಪರೆಗೆ ಸೇರಿದ ಕಲಿಕಾ ಕೇಂದ್ರ ಆಗಿತ್ತು.

### 8) ಮಿನ್ನತ್ ಉಲ್ಲಾಹ್ ಬಿ ಸಾಹಿಬಾ ಖಾನ್‌ಕಾ

ಅಲಾವುದ್ದೀನ್ ಬಹಮನ್‌ಶಹಾನ ಕಾಲದಲ್ಲಿ ದೊರೆಗೆ ಮಾರ್ಗದರ್ಶಕನಾಗಿದ್ದ ಯಾದುಲ್ಲಾ ಶಹಾ ಆರಂಭಿಸಿದ ಖಾನ್‌ಕಾ. ದಲ್ಬನ್ ದರ್ವಾಜ ಸಮೀಪದಲ್ಲಿ ಇದೆ. ಈ ಖಾನ್‌ಕಾವನ್ನು ಮೀನುಲ್ಲಾ ನವೀಕರಿಸಿದ್ದರಿಂದ ಖಾನ್‌ಕಾಗೆ ಅವರ ಹೆಸರೇ ಬಂದಿದೆ. ಹಜರತ್ ಅಬುಲ್ ಫಯಾಜ್‌ರ ಸಹೋದರಿಯಾಗಿದ್ದ ಮಿನ್ನತ್‌ಉಲ್ಲಾಹ್ ಬೀಬಿಯು ಧಾರ್ಮಿಕ ಕಲಿಕೆಯಲ್ಲಿ ಆಸಕ್ತಿ ತೋರಿಸಿ ಮಹಿಳೆಯರಿಗೆ ಕಲಿಸುವ ಪರಿಪಾಠ ಆರಂಭಿಸಿದ್ದರು.

ಬಹಮನಿ ಅರಸರ ಕಾಲದಲ್ಲಿ ಸೂಫಿ ಪರಂಪರೆಯ ಸಂತರೇ ಶಿಕ್ಷಣ ಅದರಲ್ಲೂ ವಿಶೇಷವಾಗಿ ಧಾರ್ಮಿಕ ಮತ್ತು ಸಾಮಾಜಿಕ ಶಿಕ್ಷಣ ನೀಡುವ ಹೊಣೆಗಾರಿಕೆಯನ್ನು ನಿಭಾಯಿಸುತ್ತಿದ್ದರು. ಈ ಕೇಂದ್ರಗಳಲ್ಲಿ ಇಸ್ಲಾಂ ಧರ್ಮ ಕುರಿತ ಪರಿಕಲ್ಪನೆ ನೀಡಲಾಗುತ್ತಿತ್ತು. ಹಾಗೆಯೇ ಪ್ರಾರ್ಥನೆ ಸಲ್ಲಿಸುವ ವಿಧಿವಿಧಾನಗಳನ್ನೂ ಪರಿಚಯಿಸಲಾಗುತ್ತಿತ್ತು. ನಂತರದ ದಿನಗಳಲ್ಲಿ ಖಾನ್‌ಕಾದಲ್ಲಿ

ನೀಡಲಾಗುವ ಶಿಕ್ಷಣ ಕೇವಲ ಧಾರ್ಮಿಕ ವಿಷಯಗಳಿಗೆ ಮಾತ್ರ ಸೀಮಿತವಾಗಿ ಉಳಿಯಲಿಲ್ಲ.

ಖಾನ್‌ಕಾ (ಧರ್ಮಶಾಲೆ)ಗಳು ಸೂಫಿ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ಆರಂಭದ ದಿನಗಳಲ್ಲಿ ಕೇವಲ ಇಸ್ಲಾಂ ಧರ್ಮದ ಬಗ್ಗೆ ಅರಿವು ಮೂಡಿಸುವುದು ಅವುಗಳ ಪ್ರಮುಖ ಉದ್ದೇಶ ಆಗಿತ್ತು. ನಂತರದ ದಿನಗಳಲ್ಲಿ ಅಂದರೆ ಕ್ರಿಶ್ಚಿಯನ್, ಬೌದ್ಧ ಧರ್ಮೀಯರ, ಜೈನರ ಶಿಕ್ಷಣ ಕೇಂದ್ರಗಳ ಪರಿಕಲ್ಪನೆಗಳ ಜೊತೆಗಿನ ಒಡನಾಟದಿಂದಾಗಿ ಖಾನ್‌ಕಾದಲ್ಲಿನ ಶಿಕ್ಷಣ ‘ಅನುಭಾವ’ ಮತ್ತು ‘ಆಧ್ಯಾತ್ಮಿಕ’ ಸಂಗತಿಗಳ ಕಡೆಗೆ ತಿರುಗಿತು. ಮುಸ್ಲಿಂ ದೊರೆಗಳು ಖಾನ್‌ಕಾಗಳಿಗೆ ಸಹಾಯ ಹಸ್ತ ಚಾಚಲು ಆರಂಭಿಸಿದ್ದರಿಂದ ಪ್ರಮುಖ ಕಲಿಕಾ ಕೇಂದ್ರಗಳಾಗಿ ಬದಲಾದವು ( ಎ ಕಲ್ಚರಲ್ ಹಿಸ್ಟರಿ ಆಫ್ ಇಂಡಿಯಾ, ನ್ಯೂ ದೆಹಲಿ, 1991)

ಬೀದರ್‌ನಲ್ಲಿ ಪ್ರಮುಖವಾಗಿ ಚಿಸ್ತಿಯಾ, ಖಾದರಿಯಾ ಮತ್ತು ಸತಾರಿ ಸೂಫಿ ಪರಂಪರೆಗಳು ಚಾಲ್ತಿಯಲ್ಲಿದ್ದವು. ಖಾನ್‌ಕಾಗಳನ್ನು ಆರಂಭಿಸಿದ ದಿನಗಳಲ್ಲಿ ಅಲ್ಲಿ ಶೇಖ್, ಮೌಲ್ವಿ, ಪೀರ್, ಅಮೀರ್‌ರು, ದೊರೆಗಳು ಧಾರ್ಮಿಕ ವಿಚಾರ ವಿನಿಮಯ ಮಾಡುತ್ತಿದ್ದರು. ನಂತರ ಮಕ್ಕಳಿಗಾಗಿ ಕುರಾನ್‌ನ ಪಠಣ ಮತ್ತು ವಿವರಣೆಯನ್ನು ಖಾನ್‌ಕಾಗಳಲ್ಲಿ ಆರಂಭಿಸಲಾಯಿತು. ಆಗ ಅರಬ್ಬಿ ಭಾಷೆ ಅಕ್ಷರ, ಪದಗಳನ್ನು ಕಲಿಸುವುದು ಅನಿವಾರ್ಯ ಆಯಿತು. ಓದುವ, ಬರೆಯುವ ಮತ್ತು ನೆನಪಿನಲ್ಲಿ ಇಡುವ ಮೂರು ರೀತಿಯ ಶಿಕ್ಷಣ ಕ್ರಮ ಚಾಲ್ತಿಗೆ ಬಂತು. ವಿದ್ಯಾರ್ಥಿಗಳಿಗೆ ಪಠ್ಯವನ್ನು ಸಾಮಾನ್ಯವಾಗಿ ಮೌಖಿಕವಾಗಿ ಹೇಳಿಕೊಡಲಾಗುತ್ತಿತ್ತು. ಆ ನಂತರ ಪರ್ಷಿಯಾ ಭಾಷೆಯ ಆಯ್ದ ಪಠ್ಯಗಳನ್ನು ಕಲಿಸಲಾಗುತ್ತಿತ್ತು. ಖಾನ್‌ಕಾಗಳಲ್ಲಿ ಕಲಿಸುತ್ತಿದ್ದ ಗುರುವಿಗೆ ತೃಪ್ತಿಯಾಗುವ ವರೆಗೆ ಅಂದರೆ ವಿದ್ಯಾರ್ಥಿಗೆ ಪೂರ್ಣಪ್ರಮಾಣದ ಶಿಕ್ಷಣ ದೊರೆತಿದೆ ಎಂದು ಗುರುವಿಗೆ ಖಚಿತವಾಗಿ ಅನ್ನಿಸುವ ವರೆಗೆ ಶಿಕ್ಷಣ ಮುಂದುವರೆಸಲಾಗುತ್ತಿತ್ತು. ನಂತರ ಅವಧಿಯನ್ನು ನಾಲ್ಕು ವರ್ಷ, ನಾಲ್ಕು ತಿಂಗಳು ಮತ್ತು ನಾಲ್ಕು ದಿನಗಳಿಗೆ ಮಿತಿಗೊಳಿಸಲಾಯಿತು.

ಬಹುತೇಕ ಖಾನ್‌ಕಾಗಳು ಬಹಮನಿ ದೊರೆಗಳು, ಶ್ರೀಮಂತ ವ್ಯಾಪಾರಿಗಳು, ಪ್ರವಾಸಿಗಳು ನೀಡುತ್ತಿದ್ದ ಅನುದಾನದಿಂದ ನಡೆಯುತ್ತಿದ್ದವು. ಎರಡನೇ ಅಲಾವುದ್ದೀನ್ ಶಹಾ (1436–58)ನ ಧಾರ್ಮಿಕ ಸಂಗತಿಗಳಿಗೆ ಗುರುವಾಗಿದ್ದ ಯಾದುಲ್ಲಾ ಶಹಾ ಅವರಿಗೆ ಹಜರತ್ ಬೀಬಿ ಉಲ್ಲಾಹ ಖಾನ್‌ಕಾದ ನಿರ್ವಹಣೆಗಾಗಿ ಭೂಮಿಯನ್ನು ನೀಡಿದ್ದ. ಸುಲ್ತಾನ್‌ನ ಮನವಿಯ

ಮೇರೆಗೆ ಗುಲ್ಬರ್ಗದಿಂದ ಬೀದರ್‌ಗೆ ಆಗಮಿಸಿದ್ದ ಯಾದುಲ್ಲಾ ಶಹಾ ಅವರಿಗೆ ಸುಲ್ತಾನ್‌ನಿಂದ ಉತ್ತಮ ರೀತಿಯ ಪ್ರೋತ್ಸಾಹ ದೊರೆಯಿತು. ಹಾಗೆಯೇ ಹಜರತ್ ಶಹಾ ಅಲ್ ವಲಿ ಅವರ ಖಾನ್‌ಕಾಗೆ ನಿಜಾಮ್ ಶಹಾ (1461–1463) ಭೂಮಿ ನೀಡಿದ್ದ ಎಂಬ ಮಾಹಿತಿ ದೊರೆಯುತ್ತದೆ. ಈ ಖಾನ್‌ಕಾದಲ್ಲಿ ಇರುವ ಸನದ್ ಅದನ್ನು ಸ್ಪಷ್ಟಪಡಿಸುತ್ತದೆ. ಕೆಲವು ಖಾನ್‌ಕಾಗಳಿಗೆ ದೊರೆಗಳು ಉದಾರವಾಗಿ ದೇಣಿಗೆ ನೀಡಿದ್ದರಿಂದ, ಜಮೀನನ್ನು ಇನಾಮ್ ಆಗಿ ಕೊಟ್ಟದ್ದರಿಂದ, ವಿಶೇಷ ಸಂದರ್ಭಗಳಲ್ಲಿ ಉಡುಗೊರೆ, ಕೊಡುಗೆ ನೀಡಿದ್ದರಿಂದ ಖಾನ್‌ಕಾಗಳನ್ನು ನಡೆಸುವುದು ಸಂತರಿಗೆ ಹೊರೆಯಾಗಿರಲಿಲ್ಲ. ಮಹಿಳೆಯರಿಗೆ ಶಿಕ್ಷಣ ನೀಡುವುದಕ್ಕಾಗಿ ಒಂದು ಖಾನ್‌ಕಾ ಬೀದರ್‌ನಲ್ಲಿ ಇದ್ದ ಬಗ್ಗೆ ಉಲ್ಲೇಖಗಳಿವೆ. ಸೂಫಿ ಸಂತ ಖ್ವಾಜಾ ಬಂದೇ ನವಾಜ್ ಅವರ ಮೊಮ್ಮಗ ಹಜರತ್ ಅಬುಲ್ ಫಯಾಜ್ ಅವರ ಸಹೋದರಿ ಹಜರತ್ ಬೀಬಿ ಉಲ್ಲಾ ಸಾಹಿಬಾ ಅವರು ಮಹಿಳೆಯರಿಗೆ ಧಾರ್ಮಿಕ ಶಿಕ್ಷಣ ನೀಡುವುದಕ್ಕಾಗಿ ಖಾನ್‌ಕಾ ಆರಂಭಿಸಿದ್ದರು. ಅಲ್ಲಿಗೆ ಆಗಮಿಸುತ್ತಿದ್ದ ಮಹಿಳೆಯರ ಸಂಖ್ಯೆ ಬೆರಳೆಣಿಕೆಯಷ್ಟಿತ್ತು.

## ಮಹಮೂದ್ ಗಾವಾನ್ ಮದರಸಾ

ಪ್ರಧಾನಿ ಮಹಮೂದ್ ಗಾವಾನ್ ದಖಿನ್ ಪ್ರಾಂತ್ಯಕ್ಕೆ ಆಗಮಿಸಿದ (1453) ನಂತರ ಶಿಕ್ಷಣ ಕ್ಷೇತ್ರಕ್ಕೆ ಹಿಂದೆಂದಿಗಿಂತ ಹೆಚ್ಚು ಮಹತ್ವ ಬಂತು. ವೃತ್ತಿಯಿಂದ ವ್ಯಾಪಾರಿಯಾಗಿದ್ದ ಗಾವಾನ್ ಫಾರಸಿ ಭಾಷೆಯಲ್ಲಿ ನಿಷ್ಣಾತನಾಗಿದ್ದ. ಗಣಿತದಲ್ಲಿ ಗಾವಾನ್‌ನಿಗೆ ಅಪಾರ ಜ್ಞಾನ ಇತ್ತು. ಭಾರತಕ್ಕೆ ಬರುವ ಮುನ್ನವೇ ಮಧ್ಯ ಏಷ್ಯಾದ ದೇಶಗಳ ವಿದ್ವಾಂಸರ ನಡುವೆ ಗಾವಾನ್ ಪರಿಚಿತನಾಗಿದ್ದ. ಪ್ರಾಮಾಣಿಕತೆ, ಸರಳ ಮತ್ತು ಶಿಕ್ಷಣ ಪ್ರೇಮದಿಂದಾಗಿ ಬಹಮನಿ ಸಾಮ್ರಾಜ್ಯದಲ್ಲಿ ಅಪಾರ ಮನ್ನಣೆಗೆ ಪಾತ್ರನಾದ. ಮೂವರು ಬಹಮನಿ ಅರಸರಿಗೆ ಪ್ರಧಾನಿಯಾಗಿದ್ದ ಗಾವಾನ್‌ನ ಗರಡಿಯಲ್ಲಿಯೇ ಮೂರನೇ ಮಹಮೂದ್ ಶಹಾ ಪಳಗಿದ್ದ. ಮೂರು ದಶಕಗಳ ಕಾಲ ಪ್ರಧಾನಿಯಾಗಿದ್ದ ಗಾವಾನ್ ಬಾಲಕನಾಗಿದ್ದ ದೊರೆಗೆ ಉತ್ತಮ ಗುಣಮಟ್ಟದ ಶಿಕ್ಷಣ ಕೊಡಿಸುವ ವ್ಯವಸ್ಥೆ ಮಾಡಿದ್ದ. ಇಸ್ಲಾಮಿಕ್ ಕಾನೂನಿಗೆ ಸಂಬಂಧಿಸಿದಂತೆ ಅಪರಿಮಿತ ಜ್ಞಾನವುಳ್ಳ ಶೇಕ್ ಇಬ್ರಾಹಿಂ ಮುಲ್ತಾನಿಯು ಯುವದೊರೆಗೆ ಕಾನೂನಿನ ಪಾಠ ಹೇಳಿಕೊಡುತ್ತಿದ್ದರು.

ಅಂತರರಾಷ್ಟ್ರೀಯ ವ್ಯಾಪಾರ ವಹಿವಾಟಿನಲ್ಲಿ ಗಾವಾನ್ ತೋರಿಸುತ್ತಿದ್ದ ಚಾಕಚಕ್ಯತೆಯಿಂದಾಗಿ ಅಪಾರ ಪ್ರಮಾಣದ ಹಣ ದೊರೆತು ಅವನನ್ನು

ಸಿರಿವಂತನನ್ನಾಗಿ ಮಾಡಿತ್ತು. ತನ್ನ ಆದಾಯದ ಬಹುತೇಕ ಎಲ್ಲ ಹಣವನ್ನು ಶಿಕ್ಷಣ ಕ್ಷೇತ್ರದ ಉನ್ನತಿಗಾಗಿ ವ್ಯಯಿಸಿದ. ಬೀದರ್‌ನಲ್ಲಿ ಗಾವಾನ್ ಕಟ್ಟಿಸಿದ ಮದರಸಾ ಮಧ್ಯಕಾಲೀನ ಭಾರತದ ಪ್ರಮುಖ ವಿದ್ಯಾಕೇಂದ್ರ ಆಗಿ ಪರಿಣಮಿಸಿತ್ತು. ಮಹಮೂದ್ ಗಾವಾನ್‌ನಿಗೆ ಮಧ್ಯ ಏಷ್ಯಾದ ಸಮರ್‌ಖಂಡ್, ಖುರಾಸಾನ್‌ನ ಮದರಸಾಗಳ ಜೊತೆಗೆ ಒಳ್ಳೆಯ ಒಡನಾಟ ಇತ್ತು. ಬೀದರ್‌ನ ಮದರಸಾ ನಿರ್ಮಾಣದ ಹಿಂದೆ ಮಧ್ಯ ಏಷ್ಯಾದ ಮದರಸಾಗಳ ವಾಸ್ತುಶಿಲ್ಪದ ಪ್ರಭಾವ ದಟ್ಟವಾಗಿ ಕಾಣಿಸುತ್ತದೆ. ಪರ್ಷಿಯಾ ಮತ್ತು ಪಶ್ಚಿಮ ಏಷ್ಯಾದ ವಿದ್ವಾಂಸರನ್ನು, ಕವಿಗಳನ್ನು ಮದರಸಾಕ್ಕೆ ಆಗಮಿಸುವಂತೆ ಕೋರಿ ಗಾವಾನ್ ಆಮಂತ್ರಣ ನೀಡಿದ್ದ. ದೀರ್ಘಕಾಲದ ಪ್ರಯಾಣ, ಅನಾರೋಗ್ಯದ ಕಾರಣಗಳಿಂದ ಬಹಳಷ್ಟು ಜನ ಬೀದರ್‌ಗೆ ಆಗಮಿಸಲಿಲ್ಲ.

ಮದರಸಾದ ಆವರಣದಲ್ಲಿಯೇ ವಿದ್ಯಾರ್ಥಿಗಳಿಗೆ ಊಟ ಮತ್ತು ಉಪಹಾರದ ವ್ಯವಸ್ಥೆ ಕಲ್ಪಿಸುವುದಕ್ಕಾಗಿ ಕ್ಯಾಂಟಿನ್ ವ್ಯವಸ್ಥೆ ಇತ್ತು. ಅದಕ್ಕೆ 'ದಾರುಲ್ ಖಾಮಾ' ಎಂದು ಕರೆಯಲಾಗುತ್ತಿತ್ತು. ವಿದ್ಯಾರ್ಥಿಗಳಿಗೆ ತಂಗುವುದಕ್ಕಾಗಿ ಕೊಠಡಿಗಳ ವ್ಯವಸ್ಥೆ ಕಲ್ಪಿಸಲಾಗಿತ್ತು. ವಿದ್ಯಾರ್ಥಿಗಳ ವಸತಿ ಇದ್ದ ಪ್ರದೇಶವನ್ನು 'ತಮ್ತಿಯಾ' ಎಂದು ಗುರುತಿಸಲಾಗುತ್ತಿತುತ. ಊಟ ವಸತಿ ಸೇರಿದಂತೆ ಎಲ್ಲ ರೀತಿಯ ಖರ್ಚು ವೆಚ್ಚಗಳನ್ನು ಮದರಸಾ ಭರಿಸುತ್ತಿತ್ತು. ಮಧ್ಯ ಏಷ್ಯಾದ ಸಮರ್‌ಖಂಡ್, ಮೊರಕ್ಕೋದ ಫೆಜ್ ಮದರಸಾಗಳ ಕಟ್ಟಡಗಳ ಯೋಜನೆಯನ್ನು ಹೋಲುವ ಬೀದರ್‌ನ ಮದರಸಾ ಮಧ್ಯಕಾಲೀನ ಭಾರತದಲ್ಲಿ ಒಂದು ಮಹತ್ವದ ಶೈಕ್ಷಣಿಕ ಕೇಂದ್ರ ಆಗಿತ್ತು.

ಮದರಸಾದಲ್ಲಿ ಉನ್ನತ ಶಿಕ್ಷಣ ನೀಡಲಾಗುತ್ತಿತ್ತು. ಖಾನ್‌ಕಾಗಳಲ್ಲಿ ಪ್ರಾರಂಭಿಕ ಅಕ್ಷರಾಭ್ಯಾಸ ಮಾಡಿದ ನಂತರ ಪಠ್ಯಗಳ ಅಧ್ಯಯನ ಮತ್ತು ಆ ಕುರಿತ ಜಿಜ್ಞಾಸೆ, ಚರ್ಚೆಗಳಿಗೆ ಮದರಸಾದಲ್ಲಿ ಅವಕಾಶ ಕಲ್ಪಿಸಲಾಗುತ್ತಿತ್ತು. ಮೇಲಿನ ತರಗತಿಗಳ ವಿದ್ಯಾರ್ಥಿಗಳು ತಮಗಿಂತ ಕಡಿಮೆ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವ ಪರಿಪಾಠ ಇತ್ತು. ಇದನ್ನು 'ಮೋಹಿತ್' ಎಂದು ಕರೆಯಲಾಗುತ್ತದೆ. ವಿದ್ಯಾರ್ಥಿಗಳು ಕಲಿಯುತ್ತಿರುವಾಗಲೇ ಬೇರೆಯವರಿಗೆ ಕಲಿಸುವ ಅವಕಾಶವನ್ನು ಕಲ್ಪಿಸುತ್ತಿತ್ತು. ಶಿಕ್ಷಕರಾಗುವ ತರಬೇತಿಯು ಕಲಿಕೆಯ ಹಂತರದಲ್ಲಿಯೇ ವಿದ್ಯಾರ್ಥಿಗಳಿಗೆ ದೊರೆಯುತ್ತಿತ್ತು. ಮದರಸಾದಲ್ಲಿನ ಪ್ರವೇಶ ಕೇವಲ ಮುಸ್ಲಿಂ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಮುಸ್ಲಿಮೇತರ ಅನ್ಯ ಧರ್ಮೀಯರಿಗೂ ಕಲಿಯಲು ಅವಕಾಶ ಇತ್ತು.

ಮದರಸಾದಲ್ಲಿ ಎರಡು ಹಂತದ ಶಿಕ್ಷಣ ನೀಡಲಾಗುತ್ತಿತ್ತು. ಮೊದಲನೆಯದು ಮುಲಾಜಿಮ್ (ಉತ್ತಮ ಗುಣಮಟ್ಟದ- ಸರ್ಕಾರಿ ಸೇವೆ, ಹುದ್ದೆಗೆ ಅನುಕೂಲ ಆಗುವಂತಹ ಶಿಕ್ಷಣ) ಮತ್ತೊಂದು ಮುದಾರಿಸ್ (ಕೆಳಹಂತದ ಶಿಕ್ಷಣ).

ಮುಜಾಲಿಮ್- ಸರ್ಕಾರಿ ಸೇವೆ, ಕೆಲಸ ಮತ್ತು ಹುದ್ದೆಗಳಿಗೆ ಸೇರಬಯಸುವ ಉನ್ನತ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿತ್ತು. ಅದನ್ನು ಮುಲಾ ಕಾ ದರ್ಜಾ (ಉನ್ನತ ದರ್ಜೆ) ಎಂದು ಕರೆಯಲಾಗುತ್ತಿತ್ತು. ಈ ಹಂತದ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಕಲಿಕೆಯ ನಂತರ ಪರೀಕ್ಷೆಗಳನ್ನು ಬರೆದು ಅದರಲ್ಲಿ ಉತ್ತೀರ್ಣರಾಗಬೇಕಾಗುತ್ತಿತ್ತು. ಪರೀಕ್ಷೆಯಲ್ಲಿ ಯಶಸ್ವಿಯಾದವರ ಹೆಸರುಗಳನ್ನು ದಾಖಲೆ ಪುಸ್ತಕದಲ್ಲಿ ದಾಖಲಿಸಲಾಗುತ್ತಿತ್ತು. ಅದನ್ನು ರೋಜ್ ನಾಮ್ಚಾ-ಹುಮಾಯೂನ್ ಎಂದು ಕರೆಯುತ್ತಿದ್ದರು. ದಾಖಲೆ ಪುಸ್ತಕದಲ್ಲಿ ಹೆಸರು ಸೇರ್ಪಡೆ ಆದವರಿಗೆ ಮದರಸಾದ ಮುಖ್ಯಸ್ಥರು ಪ್ರಶಸ್ತಿ ಪತ್ರ ವಿತರಿಸುತ್ತಿದ್ದರು. ಶಿಕ್ಷಣ ಪೂರೈಸಿದವರಿಗೆ ಸರ್ಕಾರದ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿತ್ತು. ವಜೀರ್, ಖಾದಿರ್, ಸದರ್, ಕಾದಿ-ಅಲ್-ಕಾಜತ್, ಕಾಜಿ ಹುದ್ದೆಗಳನ್ನು ನೀಡಲಾಗುತ್ತಿತ್ತು.

ಮುದಾರಿಸ್- ಶಿಕ್ಷಣವು ಬಹತೇಕ ಧಾರ್ಮಿಕ ವಿಷಯಗಳಿಗೆ ಸೀಮಿತ ಆಗಿರುತ್ತಿತ್ತು. ಇದು ಗುಣಮಟ್ಟದಲ್ಲಿ ಮುಜಾಲಿಮ್‌ಗಿಂತ ಕಡಿಮೆ ಆಗಿರುತ್ತಿತ್ತು. ಈ ಪದ್ಧತಿಯಲ್ಲಿ ಮಸೀದಿಯಲ್ಲಿ ಪ್ರಾರ್ಥನೆ ಮಾಡುವ ವಿಧಿ ವಿಧಾನ ಕಲಿಸಲಾಗುತ್ತಿತ್ತು. ಕುರಾನ್‌ನ ಶ್ಲೋಕಗಳನ್ನು ಕುರಿತು ಅಧ್ಯಯನ ನಡೆಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿತ್ತು. ಮೌಲ್ವಿಗಳು ಶಿಕ್ಷಕರಾಗಿರುತ್ತಿದ್ದರು. ಈ ಶಿಕ್ಷಣ ವಿಧಾನದಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವ ಅಗತ್ಯವಿರಲಿಲ್ಲ. ಈ ಹಂತದ ಶಿಕ್ಷಣ ಪೂರೈಸಿದವರಿಗೆ ಮೌಲ್ವಿ, ಮುಲ್ಲಾ, ಉಲೇಮಾ, ಮುರ್ಷಿದ್ ಆಗುವ ಅವಕಾಶ ಇರುತ್ತಿತ್ತು.

**ಮದರಸಾದಲ್ಲಿ ಕಲಿಸುತ್ತಿದ್ದ ವಿಷಯಗಳು ಇಂತಿವೆ-**

1) ಅರಬ್ಬಿ ಭಾಷೆಯ ಪರಿಚಯ, ಪಠ್ಯಗಳ ಕಲಿಕೆ 2) ನಾಹು (ವ್ಯಾಕರಣ), 3) ಟಿಬ್ (ವೈದ್ಯಕೀಯ), 4) ರಿಯಾಜಿ (ಗಣಿತ), 5) ಅದಾಬ್ (ಸಾಹಿತ್ಯ), 6) ಫಿಕ್ (ಇಸ್ಲಾಮಿಕ್ ಕಾನೂನು), 7) ಹದೀಸ್ (ಪ್ರವಾದಿ ಮಹಮ್ಮದ್‌ರ ಜೀವನ ವಿಧಾನ ಆಧರಿಸಿದ ವಿಚಾರಗಳ ಚಿಂತನೆ), 8) ಮಂತಿಕ್ (ತರ್ಕಶಾಸ್ತ್ರ), 9) ಫಾಲ್ಸಾಫ್ (ತತ್ವಶಾಸ್ತ್ರ), 10) ತಫ್ಸಿಯಾ (ಪ್ರವಚನ-ವ್ಯಾಖ್ಯಾನ), 11) ಕಲಮ್ (ಭಾಷ್ಯ) 12) ನಜುಮಿ (ಖಗೋಳಶಾಸ್ತ್ರ)

ಮದರಸಾದ ಗ್ರಂಥಾಲಯ– ಮಹಮೂದ್ ಗಾವಾನ್ ಮದರಸಾದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಬೃಹತ್ ಪ್ರಮಾಣದ ಗ್ರಂಥಾಲಯ ಇತ್ತು. ಅದನ್ನು 'ಕುತುಬ್‌ಖಾನಾ' ಎಂದು ಕರೆಯಲಾಗುತ್ತಿತ್ತು. ಮಧ್ಯಕಾಲೀನ ಭಾರತದ ಅತಿದೊಡ್ಡ ಮತ್ತು ಮಹತ್ವದ ಗ್ರಂಥಾಲಯ ಅದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಗ್ರಂಥಾಲಯದಲ್ಲಿ ಕುರಾನ್‌ನ ವಿವಿಧ ಹಸ್ತಪ್ರತಿಗಳು, ಹದೀಸ್‌ಗೆ ಸಂಬಂಧಿಸಿದ ಪುಸ್ತಕಗಳು ಇರುತ್ತಿದ್ದವು. ಫಾರಸಿ ಭಾಷೆಯಲ್ಲಿದ್ದ ಇಸ್ಲಾಮಿಕ್ ಕಾನೂನು, ತತ್ವಜ್ಞಾನ, ಗಣಿತ, ಖಗೋಳಶಾಸ್ತ್ರ, ಸಾಹಿತ್ಯ ಮತ್ತಿತರ ವಿಷಯಗಳಿಗೆ ಸೇರಿದ ಮೂರು ಸಾವಿರಕ್ಕೂ ಹೆಚ್ಚು ಹಸ್ತಪ್ರತಿಗಳು ಈ ಗ್ರಂಥಾಲಯದಲ್ಲಿ ಇದ್ದವು. ಅವುಗಳನ್ನು ವಿದ್ಯಾರ್ಥಿಗಳು, ವಿದ್ವಾಂಸರು ತಮ್ಮ ಅಧ್ಯಯನಕ್ಕಾಗಿ ಬಳಸಬಹುದಿತ್ತು. ಮದರಸಾ ಕಟ್ಟಡದ ಮೇಲೆ ಸಿಡಿಲು ಬಿದ್ದು ಹಾಳಾದ ಸಂದರ್ಭದಲ್ಲಿ ಮತ್ತು ಅದಕ್ಕಿಂತ ಮುಂಚೆಯೇ ಹಲವು ಹಸ್ತಪ್ರತಿಗಳು ನಾಶವಾದವು. ಕೆಲವು ಅಮೂಲ್ಯ ಮತ್ತು ಮಹತ್ವದ ಹಸ್ತಪ್ರತಿಗಳನ್ನು ಮೊಗಲ್ ಯುವರಾಜನಾಗಿದ್ದ ಔರಂಗಜೇಬ್ ತನ್ನ ಜೊತೆಗೆ ತೆಗೆದುಕೊಂಡು ಹೋಗಿದ್ದ. ದೆಹಲಿಯ ಗ್ರಂಥಾಲಯದಲ್ಲಿ ಇದ್ದ ಆ ಹಸ್ತಪ್ರತಿಗಳು ಬ್ರಿಟಿಷ್‌ರ ಕಾಲದಲ್ಲಿ ಕೊಲ್ಕತ್ತಾ ರಾಜಧಾನಿ ಆದಾಗ ಅವುಗಳನ್ನು ಅಲ್ಲಿಗೆ ಸಾಗಿಸಲಾಗಿತ್ತು. ನಂತರ ಮತ್ತೆ ಅವುಗಳನ್ನು ದೆಹಲಿಗೆ ಮರಳಿ ತರಲಾಯಿತು ಎಂಬ ಮಾಹಿತಿ ಲಭ್ಯವಾಗುತ್ತದೆ. ಗಾವಾನ್ ಮದರಸಾದ ಗ್ರಂಥಾಲಯದಲ್ಲಿ ಇದ್ದ ಹಲವು ಹಸ್ತಪ್ರತಿಗಳು ವಿವಿಧ ಭಾರತೀಯ ಗ್ರಂಥಾಲಯಗಳಲ್ಲಿಯೇ ಹರಡಿ ಹೋಗಿವೆ. ಕೆಲವು ಗ್ರಂಥಗಳನ್ನು ಹೈದರಾಬಾದ್‌ನ ಮಹಮೂಬ್‌ನಗರ ಗ್ರಂಥಾಲಯಕ್ಕೆ ಸಾಗಿಸಲಾಗಿತ್ತು ಎಂದು ತಿಳಿದು ಬರುತ್ತದೆ.

ಭಾರತದ ಸ್ವಾತಂತ್ರ್ಯ ಪೂರ್ವ ದಿನಗಳಲ್ಲಿ ಬೀದರ್‌ನ ಖಾನ್‌ಕಾ ಒಂದರಲ್ಲಿ ಶಿಕ್ಷಕರಾಗಿದ್ದ ಸೈಯದ್ ಮಹಮೂದ್ ಬಿದ್ರಿ ಅವರು ಮಹಮೂದ್ ಗಾವಾನ್ ಮದರಸಾಕ್ಕೆ ಸಂಬಂಧಿಸಿದ ಮಹತ್ವದ ದಾಖಲೆಗಳನ್ನು ಸಂಗ್ರಹಿಸಿ ಇಟ್ಟಿದ್ದರು. ದೇಶ ವಿಭಜನೆಯ ನಂತರ ಕರಾಚಿಗೆ ಹೋದ ಅವರು ತಮ್ಮ ಕೊನೆಯ ದಿನಗಳನ್ನು ಅಲ್ಲಿಯೇ ಕಳೆದರು. ಸೈಯದ್ ಮಹಮೂದ್ ಬಿದ್ರಿ ಅವರು 'ಮದರಸಾ ಎ ಮಹಮೂದ್ ಗಾವಾನ್' ಎಂಬ ಗ್ರಂಥ ರಚಿಸಿದ್ದರು ಎಂಬ ಮಾಹಿತಿಯಿದೆ. ಆ ಗ್ರಂಥದಲ್ಲಿ ಮದರಸಾದಲ್ಲಿನ ಶಿಕ್ಷಣ ವ್ಯವಸ್ಥೆ, ಮದರಸಾದಲ್ಲಿ ಉಪನ್ಯಾಸ ನೀಡುತ್ತಿದ್ದವರ ಪಟ್ಟಿ ಮತ್ತಿತರ ವಿವರಗಳು ದಾಖಲಾಗಿವೆ. ಆ ಪಟ್ಟಿ ಇಂತಿದೆ–

1) ಮೌಲಾನಾ ಅಬ್ದುರ್‌ರಹಮಾನ್ ಜಾಮಿ (ಮಹಮೂದ್ ಗಾವಾನ್

ಜೊತೆ ನೇರ ಸಂಪರ್ಕದಲ್ಲಿ ಇದ್ದ ಮಹತ್ವದ ಫಾರಸಿ ಕವಿ, ಸಂತ. ಗಾವಾನ್ ಬಗ್ಗೆ ಸ್ತುತಿಪದ್ಯ ರಚಿಸಿರುವ ಜಾಮಿಯು ಗಾವಾನ್‌ಗೆ ಬರೆದ ತನ್ನ ಪತ್ರವೊಂದರಲ್ಲಿ 'ದಖನ್‌ನ್ನು ರೋಮ್ ಹೊಟ್ಟೆಕಿಚ್ಚು ಪಡುವ ಹಾಗೆ' ಮಾಡಿದ್ದೀಯಾ ಎಂದು ತಿಳಿಸಿದ್ದ. ಗಾವಾನ್‌ನ ಪತ್ರಗಳ ಸಂಕಲನ ರಿಯಾಜುಲ್ ಇನ್‌ಶಾದಲ್ಲಿ ಜಾಮಿಗೆ ಬರೆದ 9 ಪತ್ರಗಳಿವೆ. ಜಾಮಿಯ ಪತ್ರಗಳ ಸಂಕಲನದಲ್ಲಿಯೂ ಗಾವಾನ್‌ಗೆ ಬರೆದ ಪತ್ರಗಳು ಸೇರಿವೆ. ಗಾವಾನ್ ಜೊತೆಗೆ ನೇರ ಒಡನಾಟ ಇದ್ದರೂ ಜಾಮಿ ಬೀದರ್‌ಗೆ ಬಂದಿರಲಿಲ್ಲ. ಆದರೆ, ಅದ್ಹೇಗೋ ಪಟ್ಟಿಯಲ್ಲಿ ಹೆಸರು ಸೇರಿಕೊಂಡಿದೆ.)

2) ಮೌಲಾನಾ ನೂರುದ್ದೀನ್ ಸಮಿ

3) ಮೌಲಾನಾ ಶೇಖ್ ಇಬ್ರಾಹಿಂ ಸರ್‌ಹಿಂಡಿ

4) ಮೌಲಾನಾ ಮುಜುದುದ್ದೀನ್ ಫಿರೋಜಾಬಾದಿ

5) ಸೈಯದ್ ಉಲೇಮಾ ಸಲ್ವಾತ್ ಉಲ್ ವಾಹ್ದಿ

6) ಮಂತಿಯಾ ಹಫೀಸ್ ಅಬ್ದುಲ್ ಅಜೀಜ್ ಖಾದಿರ್

7) ಮೌಲಾನಾ ಕಾಲುದ್ದೀನ್ ಖುದುಸ್ ಸಹ್ರಾಲ್ ಅಜಿಜ್

8) ಉಲೇಮಾ ಸಯ್ಯದ್ ಅಬ್ದು ಖಾದಿರ್ ಹುಸೇನ್ ಸಖರ್ ಸಹ್ವಾಲ್ ಅಜೀಜ್

9) ಇಮಾಮ್ ಉಲ್ ಮುರಾಸಲಿನ್ ಅಮೀನುದ್ದೀನ್

10) ಮುಲ್ಲಾ ದಾವುದ್ ಬಿದ್ರಿ

11) ಮಾಖುಮ್ ಉಲ್‌ಖಾಸಿನ್‌ಖುದ್ ಬೆ ಆಸ್ರಾ ಮೌಲಾನಾ ಸೈಯದ್ ಶಹಾ

12) ಇಬ್ರಾಹಿಂ ಶರೀಫ್ ಉಲ್ ಖಾದ್ರಿ ಅಲ್‌ಮುಲ್ತಾನಿ

13) ಮುಲ್ಲಾ ನಜೀಮುದ್ದೀನ್ ಸೆರಾಜಿ ಮುಲ್ತಾನಿ

14) ಹಫೀಜ್ ಸಾದುರುದ್ದೀನ್ ಮುಸ್ತೈದಿ

15) ಮಿಯಾಜಿ ಸೈಯದ್ ಅಬ್ದುಲ್ ರಹಮಾನ್

16) ಮೌಲಾ ಶಹಾ ಖುದಾಗರ್ ಬೇಷಾ ಆಲಿಮ್ ಖಾದರಿ

17) ಮುಲ್ಲಾ ಅನುದುದ್ದೀನ್ ಸಬಾಜ್ವಾರಿ

18) ಸಯ್ಯದ್ ಮುಹಮ್ಮದ್ ಸದರ್ ಅಬ್ದುಲ್ ರಸೀಮ್ ಜರ್ಜಾನಿ

19) ಇಮಾಮುಲ್ ಮುದರ್‌ಸಿನ್ ಹಜರತ್ ಮೌಲಾನಾ ಸೈಯದ್ ಹುಸೇನ್ ಜಾಫ್ರಿ ಅಲ್ ಹುಸೇನಿ ಬಿಜಾಪುರಿ ಆಲಂಗೀರಿ ಖುದುಸ್ ಸಹ್ರು ಅಜೀಜ್

ಎಲ್ಲ ಶಿಕ್ಷಕರೂ ಎಲ್ಲ ವಿಷಯಗಳಲ್ಲಿ ಪಾಠ ಮಾಡಬೇಕಾಗುತ್ತಿತ್ತು. ಒಂದೊಂದು ಪಠ್ಯಕ್ಕೆ ಅಥವಾ ಒಬ್ಬರು ವಿಶೇಷ ಪರಿಣಿತ ಶಿಕ್ಷಕರು ಎನ್ನುವ ವಿಷಯ ಆಗ ಜಾರಿಯಲ್ಲಿ ಇರಲಿಲ್ಲ.

1460ರಲ್ಲಿ ನಿರ್ಮಿಸಲು ಆರಂಭವಾದ ಈ ಕಟ್ಟಡ 1472ರಲ್ಲಿ ಕೊನೆಗೊಂಡಿತು. ಆಗ ಪ್ರಧಾನಿಯಾಗಿದ್ದ ಮಹಮೂದ್ ಗಾವಾನ್ ತನ್ನ ಸ್ವಂತ ವೆಚ್ಚದಲ್ಲಿ ಈ ಕಟ್ಟಡವನ್ನು ನಿರ್ಮಿಸಿ ಉತ್ತಮ ಗುಣಮಟ್ಟದ ಶಿಕ್ಷಣ ಉಚಿತವಾಗಿ ದೊರೆಯುವಂತೆ ನೋಡಿಕೊಂಡಿದ್ದರು. ಶಂಸುದ್ದೀನ್ ಮಹಮೂದ್ ಶಹಾನ ಅವಧಿಯಲ್ಲಿ (1463–82)ರ ಅವಧಿಯಲ್ಲಿ ಮದರಸಾ ತನ್ನ ಅತ್ಯುತ್ತಮ ದಿನಗಳನ್ನು ಕಂಡಿತ್ತು. 1481 ಏಪ್ರಿಲ್ 5ರಂದು ಮದರಸಾದ ಸ್ಥಾಪಕ ಮಹಮೂದ್ ಗಾವಾನ್ ರಾಜಕೀಯ ಪಿತೂರಿಗೆ ಬಲಿಯಾಗಿ ಮೃತಪಟ್ಟ ನಂತರದ ದಿನಗಳಲ್ಲಿ ಮದರಸಾದ ಮಹತ್ವ ಕಡಿಮೆ ಆಗಲಾರಂಭಿಸಿತು. ಬಹಮನಿ ಅರಸರ ಕೊನೆಯ ದೊರೆ ಕಲೀಮುಲ್ಲಾ ಶಹಾ (1526–38)ರ ವರೆಗೆ ನಿಯಮಿತವಾಗಿ ಶಿಕ್ಷಣ ನೀಡುವ ವ್ಯವಸ್ಥೆ ಜಾರಿಯಲ್ಲಿತ್ತು. ಬಹಮನಿ ಸಾಮ್ರಜ್ಯದ ಪತನದೊಂದಿಗೆ ಪರ್ಷಿಯಾದ ಜೊತೆಗಿನ ಬೀದರ್ ಸಂಪರ್ಕ ಕಡಿತಗೊಂಡಿತು. ಬಿಜಾಪುರ– ಅಹ್ಮದ್‌ನಗರ–ಗೋಲ್ಕಂಡಗಳು ದಖನ್‌ನಲ್ಲಿ ಪ್ರಮುಖ ಪಾತ್ರ ನಿರ್ವಹಿಸತೊಡಗಿದವು. ಬರೀದ್‌ಷಾಹಿ ಅರಸರು ಮದರಸಾ ಸಬಲಗೊಳಿಸಲು ಪ್ರಯತ್ನಿಸಿದರಾದರೂ ಸಾಧ್ಯವಾಗಲಿಲ್ಲ.

ಔರಂಗಜೇಬ್ ರಾಜಕುಮಾರ್‌ನಾಗಿದ್ದ ಸಂದರ್ಭದಲ್ಲಿ 1656ರಲ್ಲಿ ಬೀದರ್ ನಗರವನ್ನು ವಶಕ್ಕೆ ತೆಗೆದುಕೊಂಡ. ಬೃಹತ್ ಮದರಸಾ ಕಟ್ಟಡದ ಕೆಲ ಭಾಗವನ್ನು ಸೈನಿಕರ ವಾಸಕ್ಕೆ ಮತ್ತು ಮದ್ದುಗುಂಡುಗಳ ಸಂಗ್ರಹಕ್ಕೆ ಬಳಸತೊಡಗಿದೆ. ನಂತರದ ದಿನಗಳಲ್ಲಿ 1683ರಿಂದ ಮತ್ತೆ ಶಿಕ್ಷಣ ವ್ಯವಸ್ಥೆ ಆರಂಭವಾಗುವಂತೆ ನೋಡಿಕೊಂಡ. ಬಿಜಾಪುರದ ಸೈಯದ್ ಹುಸೇನ್ ಜಾಫ್ರಿ ಅವರನ್ನು ಕರೆಸಿ ಇಮಾಮುಲ್ ಮುದರಸಿನ್ (ಪ್ರಾಂಶುಪಾಲ–ಮುಖ್ಯಸ್ಥ) ಎಂದು ನಿಯಮಿಸಿದ.

1688ರ ವರೆಗೂ ಶಿಕ್ಷಣ ವ್ಯವಸ್ಥೆ ಜಾರಿಯಲ್ಲಿತ್ತು. ನಂತರ ಸೈನಿಕರ ಚಟುವಟಿಕೆಗಳ ಕೇಂದ್ರವಾಗಿ ಪರಿಣಮಿಸಿತು. ಸಿಡಿಲಿನ ಪರಿಣಾಮದಿಂದ ಮದರಸಾದ ಒಂದು ಮಿನಾರು ಮತ್ತು ಅರ್ಧಭಾಗ ಕುಸಿದು ಹೋಯಿತು. ಒಂದು ಕಾಲದಲ್ಲಿ ಶೈಕ್ಷಣಿಕ ಕೇಂದ್ರವಾಗಿ ವೈಭವದಿಂದ ಮೆರೆದ ಮದರಸಾ ಇತಿಹಾಸದ ಪುಟ ಸೇರಿತು.

## ದೈಹಿಕ ತರಬೇತಿ ಕೇಂದ್ರಗಳು:

ಬೀದರ್ ನಗರದ ನಾಲ್ಕು ಕಡೆಗಳಲ್ಲಿ ದೈಹಿಕ ಪರಿಶ್ರಮ ನಡೆಸುವ ಮತ್ತು ಸೈನ್ಯದ ತರಬೇತಿ ನೀಡಲಾಗುತ್ತಿತ್ತು. ನಗರದ ನಾಲ್ಕು ಪ್ರಮುಖ ಭಾಗಗಳನ್ನು ಆಯಾ ಸೈನಿಕ/ವ್ಯಾಯಾಮ ಶಾಲೆ ಆರಂಭಿಸಿದವರ ಹೆಸರಿನಿಂದಲೇ ಗುರುತಿಸಲಾಗುತ್ತಿದೆ. ಬೀದರ್ ನಗರಕ್ಕೆ ರಾಜಧಾನಿ ಸ್ಥಳಾಂತರ ಮಾಡಿದ ಅಹ್ಮದ್ ಶಹಾ ಅಲಿಯ ಕಾಲದಲ್ಲಿಯೇ ಈ ಸೈನಿಕ, ವ್ಯಾಯಾಮ ಶಾಲೆಗಳು ಆರಂಭವಾದವು. ಈ ಶಾಲೆಗಳಲ್ಲಿ ಸೈನಿಕ ತರಬೇತಿ ನೀಡಲಾಗುತ್ತಿತ್ತು. ಬಹಮನಿ ದೊರೆಗಳಿಗೆ ಪರ್ಷಿಯಾದ ಜೊತೆ ನೇರ ಸಂಬಂಧ ಮತ್ತು ಸಂಪರ್ಕ ಇದ್ದುದರಿಂದ ಬೃಹತ್ ಪ್ರಮಾಣದಲ್ಲಿ ಪರ್ಷಿಯಾದ ಸೈನಿಕರು, ಯುದ್ಧನಿಪುಣರು, ತರಬೇತುದಾರರು ಬೀದರ್‌ಗೆ ವಲಸೆ ಬಂದರು. ಬಹಮನಿಯ ಉಚ್ಛ್ರಾಯದ ದಿನಗಳಲ್ಲಿ ಪರ್ಷಿಯಾ ಮತ್ತು ಮಧ್ಯ ಏಷ್ಯಾದ ಜನರಿಗೆ ದಖನ್ ಒಳ್ಳೆಯ ಉದ್ಯೋಗಾವಕಾಶ ಕಲ್ಪಿಸುವ ಆಕರ್ಷಣೆಯ ಕೇಂದ್ರವಾಗಿ ಪರಿಣಮಿಸಿತ್ತು. ಪರ್ಷಿಯಾದಿಂದ ಜನ ಬೀದರ್‌ಗೆ ಬಂದು ನೆಲೆಸಲು ಇಷ್ಟಪಡುತ್ತಿದ್ದರು. ಪರ್ಷಿಯಾದಿಂದ ಬಂದವರಿಗೆ ಭಾರತೀಯ ಸ್ಥಿತಿಗತಿ, ವಾತಾವರಣದ ಹಿನ್ನೆಲೆಯಲ್ಲಿ ಹೊಸದಾದ ತರಬೇತಿಯ ಅಗತ್ಯ ಇದ್ದುದನ್ನು ಮನಗಂಡು ತರಬೇತಿ ಶಾಲೆಗಳನ್ನು ಆರಂಭಿಸಲಾಯಿತು. ಸಮರ ಕಾಲದಲ್ಲಿ ನಡೆದುಕೊಳ್ಳಬೇಕಾದ ರೀತಿಯ ಬಗ್ಗೆ ಮಾತ್ರವಲ್ಲದೆ ಶಾಂತಿ ಕಾಲದಲ್ಲಿಯೂ ಸನ್ನದ್ಧವಾಗಿರುವ, ಚರ್ಚೆ–ಮಾತುಕತೆ ನಡೆಸುವ ಅವಕಾಶಗಳನ್ನು ಈ ಶಾಲೆಗಳು ಕಲ್ಪಿಸಿದ್ದವು. ಈ ಬೀದರ್‌ನ ತರಬೇತಿ ಕೇಂದ್ರಗಳ ಹೆಸರು ಇಂತಿವೆ–

1) ನೂರ್‌ಖಾನ್ ತಾಲೀಮ್
2) ಮನಿಯಾರ್ ತಾಲೀಮ್
3) ಸಿದ್ದಿಕ್ ಶಹಾ ತಾಲೀಮ್
4) ಅಬ್ಬಾಸ್ ಪನ್ಸಾಲ್ ತಾಲೀಮ್

ನೂರ್‌ಖಾನ್ ತಾಲೀಮ್ (ದೈಹಿಕ ತರಬೇತಿ ನೀಡುವ ಕೇಂದ್ರ)– ಬೀದರ್ ನಗರದ ಪೂರ್ವಭಾಗದಲ್ಲಿ ಇರುವ ಮಂಗಲ್‌ಪೇಟೆ ದರ್ವಾಜದ ಬಳಿ ನೂರ್‌ಖಾನ್ ತಾಲೀಮ್ ಇತ್ತು. ಅಶೂರ್‌ಖಾನಾದ ಮುಂಭಾಗದ ಬಯಲಿನಲ್ಲಿ ತರಬೇತಿ ನೀಡಲಾಗುತ್ತಿತ್ತು.

ಮನಿಯಾರ್ ತಾಲೀಮ್ (ಬಳೆ ಮಾರಾಟ ಮಾಡುವವರ ತರಬೇತಿ ಕೇಂದ್ರ)– ಬೀದರ್ ನಗರದ ಉತ್ತರ ಭಾಗದಲ್ಲಿ ಸರ್ಕಾರಿ ಆಸ್ಪತ್ರೆಯ ಸಮೀಪ ಇತ್ತು. ಈ ತಾಲೀಮ್ ಇದ್ದ ಅಶೂರ್‌ಖಾನಾದಲ್ಲಿ ಬೇರೆ ಕಡೆಯಿಂದ ತಂದು ನಿಲ್ಲಿಸಿದ ಸುಂದರ ಕಂಬ ಇದೆ. ಅದು ಬೇರೆಯ ಹಳೆ ಕಟ್ಟಡದಿಂದ ತಂದು ನಿಲ್ಲಿಸಿರಬಹುದು ಎಂದು ಯಜ್ದಾನಿ ಅಭಿಪ್ರಾಯಪಡುತ್ತಾರೆ.

ಸಿದ್ದಿಕ್ ಶಹಾ ತಾಲೀಮ್ (ದೈಹಿಕ ತರಬೇತಿ ಕೇಂದ್ರ)– ನಗರದ ಪಶ್ಚಿಮದಲ್ಲಿ ಇರುವ ಈ ಕೇಂದ್ರವು ಖಾಸ್ ಮಹಲ್ ಪಕ್ಕದಲ್ಲಿದೆ. ಅಲ್ಲಿಯೇ ತರಬೇತಿ ಕೇಂದ್ರದ ಸ್ಥಾಪಕ ಸಿದ್ಧಿಕ್‌ಶಹಾನ ಸಮಾಧಿ ಇದೆ. ಅಶೂರ್‌ಖಾನಾದ ಮುಂಭಾಗದಲ್ಲಿ 'ಅಲಾವ' ಇದೆ. ಬೆಂಕಿ, ಉರಿಯುವ ಕೊಳ್ಳಿ, ಕಟ್ಟಿಗೆ ಹಾಕಲು ಮಾಡಿದಂತಹದ್ದು. ಅಲಾವ್' ಎಂದರೆ ಬೆಂಕಿ ಎಂದರ್ಥ. ಇರಾನ್‌ನ ಅಗ್ನಿ ದೇವಾಲಯಗಳ ಮುಂಭಾಗದಲ್ಲಿ ಉರಿಸಲಾಗುತ್ತಿದ್ದ ಬೆಂಕಿ ಇರುವ ಪರಿಪಾಠ ಇಲ್ಲಿಯೂ ಮುಂದುವರೆದಿದೆ.

ಅಬ್ಬಾಸ್ ಪನ್ನಾಲ್ ತಾಲೀಮ್ (ದೈಹಿಕ ತರಬೇತಿ ಕೇಂದ್ರ)– ನಗರದ ದಕ್ಷಿಣ ಭಾಗದಲ್ಲಿ ಇರುವ ಫತೇ ದರ್ವಾಜ ಹತ್ತಿರ ಇತ್ತು. ಅಲ್ಲಿ ಅಶೂರ್‌ಖಾನಾ, ಮಸೀದಿ ಹಾಗೂ ತಾಲೀಮ್‌ನ ಉಸ್ತಾದ್ ಆಗಿದ್ದ ಯಾರ್ ಮೊಹಮ್ಮದ್‌ನ ಸಮಾಧಿ ಇದೆ.

ಈ ತರಬೇತಿ ಕೇಂದ್ರಗಳಲ್ಲಿ ದೈಹಿಕ ವ್ಯಾಯಾಮ ಮಾತ್ರ ವಲ್ಲದೆ ಕುಸ್ತಿ, ಕತ್ತಿವರಸೆ, ಕುದುರೆ ಸವಾರಿ, ಬಿಲ್ಲು–ಬಾಣಗಳ ಬಳಕೆ, ಇತ್ಯಾದಿ ಸಂಗತಿಗಳ ಬಗ್ಗೆ ತರಬೇತಿ ನೀಡಲಾಗುತ್ತಿತ್ತು. ಬಹಮನಿ ಸರ್ಕಾರವು ಈ ತರಬೇತಿ ಶಾಲೆಗಳ ಉಸ್ತುವಾರಿ ನೋಡಿಕೊಳ್ಳುತ್ತಿತ್ತು.

ಕರಕುಶಲ ತರಬೇತಿ ಕೇಂದ್ರ– ದೈಹಿಕ ಸೈನಿಕ ತರಬೇತಿ ಮಾತ್ರವಲ್ಲದೆ ಕರಕುಶಲ ಕಲೆಗಳನ್ನು ಕಲಿಸುವ ಶಾಲೆಯೊಂದು ಬಹಮನಿ ಅರಸರ ಕಾಲದಲ್ಲಿ ಇತ್ತು. ಬಹಮನಿ ಅರಸರ ಕಾಲದಲ್ಲಿ ಇದ್ದ ಕರಕುಶಲ ತರಬೇತಿ ಕೇಂದ್ರದ ಕಾರಣದಿಂದಲೇ ಬಿದರಿ ಕಲೆಗೆ ಪ್ರೋತ್ಸಾಹ ದೊರೆಯಿತು. ಬಿದರಿ ತರಬೇತಿ ಎಲ್ಲಿ

ನೀಡಲಾಗುತ್ತಿತ್ತು ಎನ್ನುವ ಬಗ್ಗೆ ಖಚಿತ ಮಾಹಿತಿಗಳಿಲ್ಲ. ಬೀದರ್ ಗ್ಯಾಜೆಟಿಯರ್‌ನಲ್ಲಿ ಗಾವಾನ್ ಮದರಸಾದಲ್ಲಿಯೇ ಇಂತಹ ತರಬೇತಿ ನೀಡಲಾಗುತ್ತಿತ್ತು ಎಂದು ಉಲ್ಲೇಖಿಸಲಾಗಿದೆ. ಆದರೆ, ಯಜ್ದಾನಿಯವರು ಈ ಬಗ್ಗೆ ಯಾವುದೇ ರೀತಿಯ ಸುಳಿವು ನೀಡಿಲ್ಲ. ಚೀತಾಖಾನಾ ಮತ್ತು ಖಾಸ್‌ಮಹಲ್ ಬಳಿ ಬಿದರಿ ಕರಕುಶಲ ತರಬೇತಿ ನೀಡಲಾಗುತ್ತಿತ್ತು ಎಂದು ಯಜ್ದಾನಿ ತಿಳಿಸುತ್ತಾರೆ.

ಬಹಮನಿ ಸಾಮ್ರಾಜ್ಯದ ಕುಸಿತದೊಂದಿಗೆ ರಾಜಧಾನಿ ಬೀದರ್ ಬರೀದ್‌ಷಾಹಿ ಅರಸುಮನೆತನದ ಆಡಳಿತಕ್ಕೆ ಸೇರಿತು. ದಖನ್‌ನಲ್ಲಿ ಬಿಜಾಪುರದ ಆದಿಲ್‌ಷಾಹಿ, ಅಹ್ಮದ್‌ನಗರದ ನಿಜಾಂಷಾಹಿ, ಗೋಲ್ಕೊಂಡಾದ ಕುತುಬ್‌ಷಾಹಿ ಸಾಮ್ರಾಜ್ಯಗಳ ಪ್ರಾಬಲ್ಯ ಹೆಚ್ಚಾಯಿತು. ರಾಜಕೀಯ ಪ್ರಾಬಲ್ಯದ ಜೊತೆಗೆ ಸಾಂಸ್ಕೃತಿಕ, ಸಾಹಿತ್ಯಕ ಕೇಂದ್ರಗಳೂ ಬದಲಾದವು.

## ೯. ಖಗೋಳ ವೀಕ್ಷಣಾಲಯ; ಕಸಿ ಮಾಡಿದ ಮಾವು

ಬಹಮನಿ ಅರಸರ ಪೈಕಿ ಅತ್ಯಂತ ವಿದ್ವಾಂಸ ಮತ್ತು ಪಾಂಡಿತ್ಯದಲ್ಲಿ ಮಹ್ಮದ್ ತುಘಲಕ್‌ನ ಜೊತೆಗೆ ಹೋಲಿಸಬಹುದಾದ ವ್ಯಕ್ತಿ ಎಂದು ಹೆಸರಾಗಿರುವ ಫಿರೋಜ್ ಶಹಾ ಬಹಮನಿಗೆ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಮಾತ್ರವಲ್ಲದೆ ಸಸ್ಯಶಾಸ್ತ್ರ ಮತ್ತು ಖಗೋಳ ವಿಜ್ಞಾನದಲ್ಲಿಯೂ ವಿಶೇಷ ಆಸಕ್ತಿ ಇತ್ತು. ಅದಕ್ಕಾಗಿಯೇ ಖಗೋಳ ವಿಜ್ಞಾನದ ಬೆಳವಣಿಗೆಗೆ ಉತ್ತೇಜನ ನೀಡಿದ ಫಿರೋಜ್ ದೌಲತಾಬಾದ್ ಬಳಿಯಲ್ಲಿ ಅವನೊಂದು ವೀಕ್ಷಣಾಲಯ ಕಟ್ಟಿಸಲು ಆರಂಭಿಸಿದ. ಬಹಮನಿ ಅರಸರ ಕಾಲದಲ್ಲಿ ನಿರ್ಮಾಣವಾದ ಎರಡು ಮಿನಾರುಗಳ ಪೈಕಿ ದೌಲತಾಬಾದ್‌ನ ಚಾಂದ್ ಮಿನಾರ್ ಪ್ರಮುಖವಾದದ್ದು. ಖಗೋಳಶಾಸ್ತ್ರದ ಅಧ್ಯಯನದ ಉದ್ದೇಶದಿಂದ ನಿರ್ಮಿಸಲು ಆರಂಭವಾದ ಚಾಂದ್ ಮಿನಾರ್ ದುರ್ದೈವದಿಂದ ವಾಸ್ತುಶಿಲ್ಪಿಯ ಅಕಾಲ ನಿಧನದಿಂದಾಗಿ ಅಪೂರ್ಣಗೊಂಡಿತು.

ರೇಖಾಗಣಿತ, ಖಗೋಳ ವಿಜ್ಞಾನದ ಮಾದರಿಗಳನ್ನು ಇಟ್ಟುಕೊಂಡು ಭೀಮಾನದಿಯ ತಟದಲ್ಲಿ ಫಿರೋಜಾಬಾದ್ ಎಂಬ ನಗರ ನಿರ್ಮಿಸಲಾಯಿತು. ಫತೇಪುರ ಸಿಕ್ರಿಯಲ್ಲಿ ಇಂತಹ ಪ್ರಯತ್ನ ನಡೆಯುವ 150 ವರ್ಷಗಳ ಮುಂಚೆಯೇ ಫಿರೋಜಾಬಾದ್ ಅಂತಹ ಪ್ರಯೋಗಕ್ಕೆ ಅವಕಾಶ ಕಲ್ಪಿಸಿತ್ತು.

ಸದ್ಯ ಉಜ್ಬೇಕಿಸ್ತಾನ್‌ದಲ್ಲಿ ಇರುವ ಸಮರ್‌ಖಂಡ್ ಮದರಸಾ (ವಿಶ್ವವಿದ್ಯಾಲಯ) ಆರಂಭಿಸಿದ್ದು ಖಗೋಳಶಾಸ್ತ್ರ ಮತ್ತು ಗಣಿತದಲ್ಲಿ ಅನನ್ಯ ಕೆಲಸ ಮಾಡಿದ ಉಲುಗ್‌ಬೇಗ್. ಮಂಗೋಲದ ದೊರೆ ತೈಮೂರ್‌ನ ಮೊಮ್ಮಗನಾದ ಉಲುಗ್‌ಬೇಗ್ ದೆಹಲಿಯಲ್ಲಿ ಮೊಗಲ್ ಸಾಮ್ರಾಜ್ಯ ಸ್ಥಾಪಿಸಿದ ಬಾಬರ್‌ನ ಅಜ್ಜ. ಉಲುಗ್‌ಬೇಗ್‌ನು ತಾರೆಗಳ ಅಧ್ಯಯನ ನಡೆಸುವುದಕ್ಕಾಗಿ ನಕ್ಷತ್ರಶಾಲೆ ಅಥವಾ

ಸಮೀಕ್ಷಾ ಮಂದಿರ ಆರಂಭಿಸಿದ್ದ. ಟೈಕೋ ಬ್ರಾಹೆ ನಂತರ ಕೋಪರ್ನಿಕಸ್‌ನಿಗಿಂತ ಮೊದಲು ಖಗೋಳಶಾಸ್ತ್ರದಲ್ಲಿ ಪ್ರಮುಖ ಕೆಲಸ ಮಾಡಿದವ. ತಾರೆಗಳನ್ನು ಗುರುತಿಸಿ ಅವುಗಳನ್ನು ಕುರಿತು ಖಚಿತ ಮಾಹಿತಿ ಕಲೆ ಹಾಕುವಲ್ಲಿ ಉಲುಗ್‌ಬೇಗ್ ಮಾಡಿದ ಸಾಧನೆ ಅನನ್ಯವಾದದ್ದು. 120ಕ್ಕೂ ಹೆಚ್ಚು ನಕ್ಷತ್ರಗಳ ಬಗ್ಗೆ ವಿವರವಾದ ಕ್ಯಾಟಲಾಗ್ ತಯಾರಿಸಿಕೊಟ್ಟಿರುವ ಉಲುಗ್‌ಬೇಗ್‌ನ ಮದರಸಾ ಜೊತೆಗೆ ಬೀದರ್‌ನಲ್ಲಿ ಪ್ರಧಾನಿಯಾಗಿದ್ದ ಮಹಮೂದ್ ಗಾವಾನ್‌ನಿಗೆ ನೇರ ಸಂಬಂಧ ಇತ್ತು. ಸಮರ್‌ಖಂಡ್ ಮದರಸಾದ ಜೊತೆ ಒಡನಾಟ ಇಟ್ಟುಕೊಂಡಿದ್ದ ಮಹಮೂದ್ ಗಾವಾನ್‌ನು ಪ್ರತಿವರ್ಷ ಅಲ್ಲಿನ ವಿದ್ವಾಂಸರಿಗೆ ಉಡುಗೊರೆ ಕಳುಹಿಸುತ್ತಿದಶ್ದ. ಗಾವಾನ್‌ನಿಗೆ ಪ್ರಿಯ ಮಿತ್ರನಾಗಿದ್ದ ಕವಿ, ವಿದ್ವಾಂಸ ಮೌಲಾನಾ ಜಾಮಿ ಬಹುಶಃ ಸಮರ್‌ಖಂಡ್ ಮದರಸಾದಲ್ಲಿ ಇಬ್ಬರೂ ಪರಸ್ಪರ ಭೇಟಿ ಆಗಿರಬಹುದು ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಬೀದರ್‌ನಲ್ಲಿ ನಿರ್ಮಿಸಲಾದ ಗಾವಾನ್ ಮದರಸಾವು ವಿನ್ಯಾಸ ಮತ್ತು ನಿರ್ಮಾಣದ ಶೈಲಿಯಲ್ಲಿ ಸಮರ್‌ಖಂಡ್ ಮದರಸಾ ಹೋಲುತ್ತದೆ. ಮಧ್ಯಏಷ್ಯಾ ಮತ್ತು ಪರ್ಷಿಯಾದ ಸಾಂಸ್ಕೃತಿಕ ಜಗತ್ತಿನ ಜೊತೆಗೆ ಸಂಪರ್ಕ ಹೊಂದಿದ್ದ ಗಾವಾನ್‌ನು ಕಾವ್ಯ, ಮೀಮಾಂಸೆ, ಖಗೋಳಶಾಸ್ತ್ರದಲ್ಲಿ ಆಸಕ್ತನಾಗಿದ್ದ. ತನ್ನ ಗುರು ಉಲುಗ್‌ಬೇಗ್ (ಬಾಬರ್‌ನ ಅಜ್ಜ)ನ ಪ್ರೇರಣೆಯಿಂದ ಖಗೋಳಕ್ಕೆ ಸಂಬಂಧಿಸಿದ ಶೋಧ, ಚಿಂತನೆಗೆ ನೆಲೆ ಒದಗಿಸಿದ. ಬೀದರ್ ಮದರಸಾದಲ್ಲಿ ಇರುವ ಖಗೋಳಶಾಸ್ತ್ರ ಕಲಿಸುತ್ತಿದ್ದ ಪ್ರಾಯೋಗಿಕ ಕೊಠಡಿ, ಖಗೋಳಕ್ಕೆ ಸಂಬಂಧಿಸಿದಂತಹ ಬರಹಗಳು ಹೊಸಲೋಕವನ್ನು ತೆರೆದಿಡುತ್ತವೆ

## ಕಸಿ ಮಾಡಿದ ಮಾವು

ಇರಾನ್‌ನಲ್ಲಿ ಚಾಲ್ತಿಯಲ್ಲಿದ್ದ ಕಸಿ ಮಾಡುವ ತಂತ್ರಜ್ಞಾನ ಭಾರತಕ್ಕೆ ಬಂದದ್ದು ಹದಿನೈದನೇ ಶತಮಾನದ ಉತ್ತರಾರ್ಧದಲ್ಲಿ. ತೋಟಗಾರಿಕೆಗೆ ಆದ್ಯತೆ ನೀಡಿದ ಮಹಮೂದ್ ಗಾವಾನ್ ಕಸಿ ಮಾಡುವ ತಂತ್ರಜ್ಞಾನವನ್ನು ಆಮದು ಮಾಡಿಕೊಂಡ. ಕಸಿ ಮಾಡಿದ ಮಾವಿನ ಹಣ್ಣು ಪೋರ್ಚುಗಿಸರ ಮೂಲಕ ಭಾರತವನ್ನು ಪ್ರವೇಶಿಸಿತು ಎಂಬ ನಂಬಿಕೆ ಇತ್ತು. ಅದಕ್ಕಿಂತ ಮುಂಚೆಯೇ ಮೊಗಲ್‌ರ ಕಾಲದಲ್ಲಿಯೇ ಕಸಿಮಾಡಿದ ಮಾವು ಬಂದಿತ್ತು ಎಂದು ಸಂಶೋಧನೆಗಳು ದೃಢಪಡಿಸಿವೆ. ಮೊಗಲ್‌ರು ಭಾರತಕ್ಕೆ ಬರುವ ಮುನ್ನವೇ ಕಸಿ ಮಾಡುವ ಪದ್ಧತಿ ಬಹಮನಿಗಳ ಕಾಲದಲ್ಲಿ ಬಂದಿತ್ತು.

ಮಾವು ಊರುಮಾವಾಗಿ ಪರಿವರ್ತನೆಗೊಂಡ ಕಾಲವನ್ನು ಗೊತ್ತು ಮಾಡುವುದು ಕಷ್ಟದ ಕೆಲಸ. ಕ್ರಿ.ಶ. 600 ಸುಮಾರಿನಲ್ಲಿ ಜನಿಸಿತೆಂದು ಹೇಳಲಾಗುವ ಬೃಹತ್ ಸಂಹಿತೆಯಲ್ಲೂ, ಬಹುಶಃ ಅದಕ್ಕಿಂತಲೂ ಹಿಂದಿನದೆಂದು ಹೇಳಲಾಗುವ 'ಅರ್ಥಶಾಸ್ತ್ರ'ದಲ್ಲಿಯೂ ಊರುಮಾವಿನ ಸೂಚನೆಗಳು ಕಂಡು ಬರುತ್ತವೆ. ಊರಿಗೆ ಬಂದು ನೆಲೆಸಿದ ಮಾವು ಕೆಲವು ಅಂಶಗಳಲ್ಲಿ ತನ್ನ ಘನತೆಯನ್ನು ಕಳೆದುಕೊಂಡಿತಾದರೂ ಅಡಗಿಸಿಟ್ಟುಕೊಂಡಿದ್ದ ಕೆಲವು ಸದ್ಗುಣಗಳನ್ನು ದಾತೃವಿನ ಆರೈಕೆಯ ಪರಿಣಾಮವಾಗಿ ಹೊರಹೊಮ್ಮಿಸಿತು. ನಿಲುವು ಮೊಟಕಾಯಿತು. ನೆಲಮಟ್ಟದಿಂದ ಹತ್ತು ಹದಿನೈದು ಅಡಿಗಳ ಎತ್ತರದಿಂದಲೇ ಕಾಂಡ ಕವಲೊಡೆದು ರೆಂಬೆಕೊಂಬೆಗಳಿಗೆ ಎಡೆಗೊಟ್ಟಿತು. ಹಣ್ಣಿನ ಗಾತ್ರ ಕ್ರಮೇಣ ಸ್ವಲ್ಪ ಹಿರಿದಾಯಿತು. ನಾರಿನ ಭಾಗ ಕಡಿಮೆಯಾಗಿ ತಿನ್ನುವ ಭಾಗ ಹೆಚ್ಚಾಯಿತು. ಹುಳಿ ತಗ್ಗಿ, ಸಿಹಿ ಇಮ್ಮಾವಾಯಿತು.

'ಪಶ್ಚಿಮದಿಂದ ಪೋರ್ಚುಗೀಸರೂ ವಾಯುವ್ಯದಿಂದ ಮೊಗಲರೂ ಭಾರತಕ್ಕೆ ಬಂದು ನೆಲೆಸಿದ ತರುವಾಯವೇ ಮಾವಿನ ಹಣ್ಣಿಗೆ ರಾಷ್ಟ್ರೀಯ ಪ್ರಶಸ್ತಿಯೂ ಅಂತರರಾಷ್ಟ್ರೀಯ ಪ್ರಶಸ್ತಿಯೂ ದೊರಕಿತೆಂದು ನನ್ನ ಭಾವನೆ' ಎಂದು ಬಿಜಿಎಲ್ ಸ್ವಾಮಿ ಅಭಿಪ್ರಾಯಪಡುತ್ತಾರೆ.

'ಕಸಿ ವಿಧಾನದಿಂದ ಗಿಡದಲ್ಲಿ ಅಡಗಿರುವ ಸುಗುಣಗಳನ್ನು ಹೊರಗೆಡವಬಹುದೆಂಬ ತತ್ವದ ಪ್ರಯೋಗದಲ್ಲಿ ಅವರು ಪಾರಂಗತರು. ಈ ತತ್ವವನ್ನು ಮಾವಿಗೆ ಅನ್ವಯಿಸಿದರು. ಗೋವೆಯಿಂದ ಹದಿನಾರನೇ ಶತಮಾನದ ಕೊನೆಗೆ ಅಲ್ಫಾನ್ಸೋ (ಬಾದಾಮಿ), ಫರ್ನಾಂಡಿಸ್, ಮನ್‌ಕುರಾದ್, ಮಲ್ಗೋವಾ ಮೊದಲಾದ ಜಾತಿಗಳು ಪೋರ್ಚುಗೀಸರ ಕೈಚಳಕದಿಂದಲೂ, ಹಿಮಾಯುದ್ದೀನ್, ಗುಲಾಬ್‌ಖಸ್, ಲಾಂಗ್ರ, ಸಲೇಭಾಯ್‌ಆಮ್‌ದಿ, ಖಂದೇಶ್, ಜಾಹಾಂಗೀರ್, ಫಜ್ರಿಜಫ್ರಾನಿ, ದಾಡಿಮ್ ಪಸಂದ್, ದಿಲ್‌ಪಸಂದ್ ಮೊದಲಾದ ಬಗೆಗಳು ಮೊಗಲರ ಚಾತುರ್ಯದಿಂದಲೂ ಸೃಜಗೊಂಡು ಅಭಿವೃದ್ಧಿ ಪಡೆದವು' ಎಂದು ಬಿಜಿಎಲ್ ಸ್ವಾಮಿ ತಮ್ಮ ಹಸಿರು ಹೊನ್ನು ಪುಸ್ತಕದಲ್ಲಿ ವಿವರಿಸುತ್ತಾರೆ.

ಈ ಬಗ್ಗೆ ಚರ್ಚಿಸುವ ಸ್ವಾಮಿ ಅವರು 'ಕ್ರಿ.ಶ. 1500ಕ್ಕೆ ಹಿಂದೆ ಭಾರತದಲ್ಲಿ ಗಿಡಗಳನ್ನು ಕಸಿ ಮಾಡುವ ಪದ್ಧತಿ ಇರಲಿಲ್ಲವೇ? ಎಂಬ ಪ್ರಶ್ನೆಯೂ ಸ್ವಾಭಾವಿಕವಾಗಿಯೇ ಎದುರಾಗುತ್ತದೆ. ದಿವಂಗತ ಡಾ. ಗೋಡೆಯವರ ಸಂಶೋಧನೆಗಳ ಪ್ರಕಾರ ಬೃಹತ್‌ಸಂಹಿತೆಯಲ್ಲಿ ಉಕ್ತವಾಗಿರುವ ಒಂದು ವಾಕ್ಯವನ್ನು ಬಿಟ್ಟರೆ ಬೇರೆ ಆಕರಗಳಾವುವೂ ದೊರಕವು. ಈ ಆಕರವನ್ನು

ಒಪ್ಪಿಕೊಂಡರೆ 5–6ನೇ ಶತಮಾನಗಳಲ್ಲಿ ಬಳಕೆಯಲ್ಲಿರಬಹುದಾದ ಕಸಿವಿದ್ಯೆ 16ನೇ ಶತಮಾನದವರೆಗೂ ಎಲ್ಲಿ ಹೋಗಿಬಿಟ್ಟಿತ್ತು?' ಎಂದು ಪ್ರಶ್ನಿಸುತ್ತಾರೆ.

"ಕಸಿ' ಮಾವು ದಕ್ಷಿಣ ಭಾರತದ ಒಳನಾಡುಗಳಿಗೆ ಪ್ರವೇಶ ಮಾಡಿದ್ದು 18ನೇ ಶತಮಾನದಲ್ಲಿ, ಅರ್ಕಾಟ್ ನವಾಬರ ಕಾಲದಲ್ಲಿ; ಬಂಗನ್‌ಪಲ್ಲಿ, ನೀಲಮ್, ಸಿಂಧೂರ್ ಜಾತಿಗಳು ಉದ್ಭವವಾದದ್ದು ಈ ನವಾಬರ ಆಶ್ರಯದಿಂದ' ಎಂಬ ನಿಲುವು ಅವರದು. (ಹಸುರು ಹೊನ್ನು–ಬಿಜಿಎಲ್ ಸ್ವಾಮಿ, ಕಾವ್ಯಾಲಯ, ಜಯನಗರ, ಮೈಸೂರು 1976)

ಆದರೆ, ಮಹಮೂದ್ ಗಾವಾನ್‌ನ ಕಾಲದಲ್ಲಿಯೇ ಕಸಿ ಮಾಡಿದ ಮಾವು ಬೀದರ್ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಕಾಣಿಸಿಕೊಂಡಿತು ಎಂಬುದಕ್ಕೆ ಸಾಕಷ್ಟು ದಾಖಲೆಗಳಿವೆ. 'ಬೀದರ್ ಕಾ ಆಮ್, ಕೊಹಿರ್ ಕಾ ಜಾಮ್' ಎಂಬ ಮಾತು ಚಾಲ್ತಿಯಲ್ಲಿದೆ. ಹಾಗೆಯೇ ಬೀದರ್ ಸುತ್ತಲಿನ ಪ್ರದೇಶವನ್ನು 'ಮಾವಿನ ಕಣಜ' ಎಂದು ಕರೆಯಲಾಗುತ್ತದೆ. ಈಗಿನ ಭಾಲ್ಕಿ ತಾಲ್ಲೂಕಿನ ಭಾತಂಬ್ರಾದಿಂದ ಬೀದರ್–ಹೈದರಾಬಾದ್ ಹೆದ್ದಾರಿಯಲ್ಲಿ ಬರುವ ಸದಾಶಿವಪೇಟೆಯವರೆಗಿನ ಪ್ರದೇಶದಲ್ಲಿ ಹಲವಾರು ನೆಡುಮಾವಿನ ತೋಪುಗಳಿವೆ.

ಮುಲ್ಲಾ ದಾವುದ್ ಬಿದರಿಯ ಇತಿಹಾಸದ ಪುಸ್ತಕದಲ್ಲಿ 'ಮಹಮೂದ್ ಗಾವಾನ್‌ನು ಬೀದರ್‌ನಲ್ಲಿ ನೆಡುಮಾವಿನ ತೋಪುಗಳನ್ನು ನೆಡಸಿದನು' ಎಂಬ ಉಲ್ಲೇಖ ಬರುತ್ತದೆ. ಹಾಗೆಯೇ ತೋಟಗಾರಿಕೆ ಬೆಳೆಗೆ ಬೀದರ್‌ನ ವಾತಾವರಣ ಪೂರಕವಾಗಿರುವದನ್ನು ಅರಿತ ಗಾವಾನ್‌ನು ಗೋಡಂಬಿ, ಕೇಸರಿ ಬೆಳೆಯುವುದಕ್ಕೆ ಅನುಕೂಲ ಕಲ್ಪಿಸಿದನು ಎಂಬ ಅಂಶವನ್ನು ಬಿದರಿ ಪ್ರಸ್ತಾಪಿಸುತ್ತಾರೆ. 1905ರಲ್ಲಿ ಹೈದರಾಬಾದ್‌ನಲ್ಲಿ ಸಂಭವಿಸಿದ ಮೂಸಿ ಪ್ರವಾಹದಲ್ಲಿ ಕೊಚ್ಚಿ ಹೋದ ಸಾವಿರಾರು ಹಸ್ತಪ್ರತಿ, ಗ್ರಂಥಗಳಲ್ಲಿ ಬಿದರಿಯ ಪುಸ್ತಕವೂ ಹಾಳಾಯಿತು. ಈ ಪುಸ್ತಕವನ್ನು ಓದಿರುವುದಾಗಿ ತಿಳಿಸುವ ಅಬ್ದುಲ್ ಜಬ್ಬಾರ್ ಮಲ್ಕಾಪುರಿ ಅವರು ಅದರ ಆಯ್ದ ಭಾಗಗಳನ್ನು ಅವರು ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ.

ಸಾಮಾನ್ಯರ ನೆನಪುಗಳಲ್ಲಿಯೂ ಇತಿಹಾಸದ ಪುಟ ದಾಖಲಾಗಿರುತ್ತವೆ. ಅಥವಾ ಜನ ಸಾಮಾನ್ಯರು ತಮ್ಮದೇ ಆದ ರೀತಿಯಲ್ಲಿ ಇತಿಹಾಸವನ್ನು ದಾಖಲಿಸುತ್ತಾರೆ. ಸೋಲಪುರ ಗ್ರಾಮದಲ್ಲಿ ದೊರಕಿದ ಮೋಡಿ ಲಿಪಿಯಲ್ಲಿ ಇರುವ ಮರಾಠಿ ಹಸ್ತಪ್ರತಿ ಸುಲ್ತಾನ್ ಸುರಳಿಯಲ್ಲಿ ಮಾವಿನ ಹಣ್ಣಿನ ಉಲ್ಲೇಖ ಬರುತ್ತದೆ.

## ನೀರು ಮತ್ತು ನಿರ್ವಹಣೆ

ನೀರಿನ ಬಳಕೆ ಮತ್ತು ಅದರ ನಿರ್ವಹಣೆಗೆ ಸಂಬಂಧಿಸಿದಂತೆ ಅದ್ಭುತವಾದ ವೈಜ್ಞಾನಿಕ ದೃಷ್ಟಿಕೋನವನ್ನು ಪರ್ಷಿಯಾದ ಜನ ಹೊಂದಿದ್ದರು. ಬಾವಿಯಿಂದ ನೀರು ಎತ್ತಿ ಸುರಿಯುವುದಕ್ಕಾಗಿ ಇದ್ದ ಪರ್ಷಿಯನ್‌ನ ಚಕ್ರಗಳು ಭಾರತದ ತುಂಬ ಜಾರಿಗೆ ಬಂದವು. ಹೀಗೆ ಪರ್ಷಿಯನ್ ಚಕ್ರಗಳು ಮೊದಲು ಕಾಣಿಸಿಕೊಂಡದ್ದು ದಖನ್ ಪ್ರದೇಶದಲ್ಲಿ.

ಬೀದರ್–ಗುಲ್ಬರ್ಗ ಉಷ್ಣ ವಲಯದಲ್ಲಿ ಇದ್ದುದರಿಂದ ನೀರು ಆವಿಯಾಗಿ ಹೋಗದಂತೆ ನೆಲದಿಂದ ಕೆಳಗೆ ಕಾಲುವೆಗಳನ್ನು ನಿರ್ಮಿಸಲಾಗುತ್ತಿತ್ತು. ಅಲ್ಲಲ್ಲಿ ಭಾವಿಗಳನ್ನು ನಿರ್ಮಿಸಿ ಆ ಮೂಲಕ ನೀರು ಮೇಲೆತ್ತಲಾಗುತ್ತಿತ್ತು. ಪರ್ಷಿಯಾದಲ್ಲಿ ಖನ್ನತ್ ಎಂದು ಕರೆಯಲಾಗುವ ಈ ವಿಧಾನವನ್ನು ಬೀದರ್ ಕೋಟೆಯ ಒಳಗಡೆ ಬಳಸಲಾಗಿದೆ. ಪರ್ಷಿಯಾದ ಜಲತಂತ್ರಜ್ಞಾನ ಎಷ್ಟು ಉನ್ನತ ಮಟ್ಟದ್ದಾಗಿತ್ತು ಎನ್ನುವುದನ್ನು ಈ ನೀರ ಕಾಲುವೆಗಳು ವ್ಯಕ್ತಪಡಿಸುತ್ತವೆ.

ಇದೇ ಮಾದರಿಯಲ್ಲಿ ಬೀದರ್ ನಗರದ ಹೊರವಲಯದಲ್ಲಿ ನಿರ್ಮಿಸಲಾದ ಅಲಿಯಾಬಾದ್ ಕಾರೇಜ್ ಈಗಲೂ ಇದೆ. ನೆಲದೊಳಗೆ ನೀರಿನ ಕಾಲುವೆ ನಿರ್ಮಿಸಲಾಗಿದೆ. ಇದು ಸುಮಾರು ಎರಡು ಕಿ.ಮೀ.ಗಳಷ್ಟು ಉದ್ದವಾಗಿದೆ. ಮೇಲ್ಭಾಗದಲ್ಲಿ ಗಾಳಿ, ಬೆಳಕಿನ ವ್ಯವಸ್ಥೆಗಾಗಿ ಮ್ಯಾನ್‌ಹೋಲ್‌ಗಳನ್ನು ನಿರ್ಮಿಸಲಾಗಿದೆ. ಅಲಿಯಾಬಾದ್‌ನ ನೆಲದೊಳಗಿನ ನೀರ ಕಾಲುವೆಗಳು ತಂತ್ರಜ್ಞಾನದ ಅತ್ಯುತ್ತಮ ಕೊಡುಗೆ ಎಂದು ಕರೆಯಲಾಗುತ್ತದೆ. ಸುರಂಗದ ಹೊರಮುಖದಿಂದ 20–30 ಅಡಿಗಳಷ್ಟು ದೂರದಲ್ಲಿ ನೀರಿನ ಚಿಲುಮೆ ಕಾಣಿಸಿಕೊಂಡು ಸ್ಫಟಿಕದಂತಹ ಶುದ್ಧಜಲ ಹರಿದು ಬರುತ್ತದೆ. ನೀರು ಹರಿದು ಹೊರಬರುವ ಸ್ಥಳದ ಹಿಂದೆ ನೆಲಮಟ್ಟದಲ್ಲಿ ಸಣ್ಣ ಟ್ಯಾಂಕ್ ನಿರ್ಮಿಸಲಾಗಿದೆ. ಅದು ಭರ್ತಿಯಾದ ನಂತರ ಹೆಚ್ಚುವರಿ ನೀರು ಕೆಳಭಾಗದಲ್ಲಿ ಹರಿದು ಹೊರಬರುತ್ತದೆ. ಎಂತಹ ಬೇಸಿಗೆಯಲ್ಲಿಯೂ ನೀರು ಬತ್ತುವುದಿಲ್ಲ. ಅಲಿಯಾಬಾದ್ ಗ್ರಾಮಸ್ಥರು ಈಗ ಈ ನೀರನ್ನು ಉಪಯೋಗಿಸುತ್ತಾರೆ. ಬಹಮನಿಗಳ ಕಾಲದಲ್ಲಿ ಕೃಷಿ ನೀರಾವರಿಗಾಗಿ ಬಳಸುತ್ತಿದ್ದರು ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಬಹಮನಿ ಅರಸ ಕಾಲದಲ್ಲಿ ಕೋಟೆಯ ಒಳಗಡೆ ನಿರ್ಮಾಣಗೊಂಡ ಕಮಾನುಬಾವಿಗಳು ವಿಶಿಷ್ಟವಾಗಿವೆ. ಇದೇ ಕಾಲದಲ್ಲಿ ವಿಜಯನಗರದ ದೊರೆಗಳು ಮೆಟ್ಟಿಲು ಬಾವಿಗಳನ್ನು ಕಟ್ಟುತ್ತಿದ್ದರು. ಅಂತಹ ಬಾವಿಗಳನ್ನು ಕೂಡ ಕೋಟೆಯ ಆವರಣದಲ್ಲಿ ನಿರ್ಮಿಸಲಾಗಿದೆ. ಆದರೆ, ಬಹುಮಹಡಿಯ

ಸುಂದರ ಆಕೃತಿಗಳಾಗಿರುವ ಕಮಾನು ಬಾವಿಗಳ ಉಲ್ಲೇಖ ಹೆಚ್ಚು ಚಾಲ್ತಿಯಲ್ಲಿಲ್ಲ. ಕೋಟೆಯ ಹಿಂಭಾಗದಲ್ಲಿ ಇರುವ ಒಳಕೋಟೆಯಲ್ಲಿ 3-4 ಅಷ್ಟಕೋನಾಕೃತಿಯ ಕಮಾನುಬಾವಿಗಳಿವೆ. ಒಳಕೋಟೆಯಲ್ಲಿ 8-10 ಎಕರೆ ಪ್ರದೇಶಕ್ಕೆ ಈ ಸರ್ವಋತು ಬಾವಿಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಸಮೃದ್ಧವಾದ ಜಲರಾಶಿಯು ಈ ಬಾವಿಗಳನ್ನು ಸರ್ವಋತು ಬಾವಿಗಳನ್ನಾಗಿ ಮಾಡಿದೆ. ಒಳಕೋಟೆಯಲ್ಲಿನ ಈ ಕಮಾನು ಬಾವಿಗಳನ್ನು ಹೊರತುಪಡಿಸಿದರೆ ಕೋಟೆಯ ಬೇರೆ ಕಡೆಗಳಲ್ಲಿ ಇಂತಹ ಬಾವಿಗಳು ಅಪರೂಪ.

ಕೋಟೆಯೊಳಗಿನ ನೀರೆತ್ತುವ ವ್ಯವಸ್ಥೆ ಬಹಮನಿಗಳ ಮುಂದುವರೆದ ಜಲತಂತ್ರಜ್ಞಾನ ಮತ್ತು ನಿರ್ವಹಣೆಯ ಕುಶಲತೆಗೆ ಸಾಕ್ಷಿಯಾಗಿವೆ. ಕಲ್ಲಿನ ಎತ್ತರವಾದ ಗೋಡೆಗಳ ಮೇಲೆ ಕಾಲುವೆ, ಪೈಪುಗಳ ಮೂಲಕ ನೀರು ಹರಿಸುವ ಜಾಣ್ಮೆ ಅವರಲ್ಲಿತ್ತು. ನೀರು ಹಾಯಿಸುವ ವಿಧಾನಗಳು ಉತ್ತಮ ಗುಣಮಟ್ಟದ ತಂತ್ರಜ್ಞಾನಕ್ಕೆ ನಿದರ್ಶನಗಳಾಗಿವೆ. ಭೂಮಟ್ಟಶಾಸ್ತ್ರ ಬಗ್ಗೆ ಹೊಂದಿದ್ದ ಜ್ಞಾನಕ್ಕೂ ಇವು ಸಾಕ್ಷಿ. ಭೂಮಿಯ ಗುರುತ್ವಾಕರ್ಷಣೆ ಮತ್ತು ಏರುಪೇರುಗಳನ್ನು ಕರಾರುವಾಕ್ಕಾಗಿ ಅರಿತುಕೊಂಡದ್ದರಿಂದಲೇ ಇಂತಹ ವಿಧಾನ ಅಳವಡಿಸಿಕೊಳ್ಳುವುದು ಸಾಧ್ಯವಾಯಿತು. ನೀರು ಹಾಯಿಸಲು ಸುಟ್ಟ ಮಣ್ಣಿನ ಕೊಳವೆಗಳನ್ನು ಉಪಯೋಗಿಸಲಾಗಿದೆ. ನೀರಿನ ಹಂಚಿಕೆಯನ್ನು ಸಮರ್ಥ ರೀತಿಯಲ್ಲಿ ನಡೆಸುತ್ತಿದ್ದ ನಿದರ್ಶನ ಕಾಣಬಹುದು. ಸುಟ್ಟ ಮಣ್ಣಿನ ಪೈಪುಗಳನ್ನು ಸುಣ್ಣದ ಕಲ್ಲಿನ ಕಾಂಕ್ರಿಟ್ ಮಧ್ಯೆ ಭದ್ರಗೊಳಿಸಿ ತಮಗೆ ಬೇಕಾದ ಕಡೆಗೆ ನೀರು ಹರಿಸುತ್ತಿದ್ದರು. ಕೆಲವು ಕಡೆಗಳಲ್ಲಿ ಒಂದಕ್ಕಿಂತ ಹೆಚ್ಚು ಪೈಪ್‌ಗಳನ್ನು ಬಳಸಲಾಗುತ್ತಿತ್ತು. ಬಿಸಿ ನೀರು ಮತ್ತು ಹಬೆ ಸಾಗಿಸುವ ವ್ಯವಸ್ಥೆಯನ್ನೂ ಕೋಟೆಯಲ್ಲಿ ಮಾಡಲಾಗಿತ್ತು. ಕೋಟೆಯ ತಖ್ತ್ ಮಹಲ್ ಹಿಂಭಾಗದಲ್ಲಿ ಇರುವ ಬಿಸಿನೀರಿನ ಈಜುಕೊಳ ಹಾಗೂ ಹಬೆಸ್ನಾನದ ಕೊಠಡಿಗಳು ಪರ್ಷಿಯಾದ ತಂತ್ರಜ್ಞಾನ ಸಾಕ್ಷಾತ್ಕಾರಗೊಂಡದ್ದನ್ನು ಸೂಚಿಸುತ್ತವೆ.

# 10. ಸಮಾರೋಪ

'ಪರ್ಷಿಯಾ' ಎನ್ನುವುದು ಸದ್ಯ ಭೌತಿಕವಾಗಿ ಅಸ್ತಿತ್ವದಲ್ಲಿ ಇಲ್ಲದ ಒಂದು ಪ್ರದೇಶದ ಹೆಸರು. ಸದ್ಯ 'ಇರಾನ್' ಎಂದು ಕರೆಯುವ ಭೂಭಾಗವೇ ಹಿಂದಿನ 'ಪರ್ಷಿಯಾ' ಆಗಿತ್ತು. ಆದರೆ, ಅಷ್ಟು ಮಾತ್ರ ಅಲ್ಲ. ಅದಕ್ಕಿಂತ ಹೆಚ್ಚು ವಿಸ್ತಾರವಾದ ಪ್ರದೇಶವನ್ನು ಪರ್ಷಿಯಾ ಒಳಗೊಂಡಿತ್ತು. ಪ್ರಾದೇಶಿಕ ಹೆಸರಿಗಿಂತ ಪರ್ಷಿಯಾದ ಸಂಸ್ಕೃತಿ ಮತ್ತು ಅದು ಹುಟ್ಟು ಹಾಕಿದ ನಾಗರೀಕತೆ ವಿಶಿಷ್ಟವಾದದ್ದು ಮತ್ತು ವಿಭಿನ್ನವಾದದ್ದು.

ಭಾಷಾವಾರು ಪ್ರಾಂತ್ಯಗಳ ರಚನೆಯೊಂದಿಗೆ 'ದಖನ್' ಎಂಬ ಭೌಗೋಳಿಕ ಪ್ರದೇಶ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ವಿಂಧ್ಯಪರ್ವತದಿಂದ ಕೆಳಗೆ ತುಂಗಭದ್ರಾ ನದಿಯಿಂದ ಮೇಲ್ಭಾಗದಲ್ಲಿ ಹಾಗೂ ಪೂರ್ವ ಮತ್ತು ಪಶ್ಚಿಮ ಕರಾವಳಿಯ ನಡುವಿನ ಪ್ರಸ್ಥಭೂಮಿಯನ್ನು ದಖನ್ ಎಂದು ಕರೆಯಲಾಗುತ್ತಿತ್ತು. ಕನ್ನಡ, ಮರಾಠಿ ಮತ್ತು ತೆಲುಗು ಭಾಷಿಕರು ಈ ಪ್ರದೇಶದ ನಿವಾಸಿಗಳಾಗಿದ್ದರು. ಬಹುತೇಕ ಅವಧಿ ಭಾರತದ ರಾಜಧಾನಿಯಾಗಿದ್ದ ದೆಹಲಿ ಮತ್ತು ದಕ್ಷಿಣ ಭಾರತದ ನಡುವಿನ ಈ ಪ್ರದೇಶವು ಅಭೇದ್ಯವಾಗಿತ್ತು. ದೆಹಲಿ ರಾಜಧಾನಿಯಾಗಿ ಮಾಡಿಕೊಂಡು ಆಡಳಿತ ನಡೆಸಿದ ಮಧ್ಯಕಾಲೀನ ಸಾಮ್ರಾಟರಿಗೆ, ಸುಲ್ತಾನ್‌ರಿಗೆ 'ದಖನ್' ತನ್ನ ವ್ಯಾಪ್ತಿಗೆ ಬಾರದ ಸುಂದರ ಕನಸಾಗಿತ್ತು.

ಭಾರತದಲ್ಲಿ ಮುಸ್ಲಿಂ ದೊರೆಗಳ ಸಾಮ್ರಾಜ್ಯ ಸ್ಥಾಪನೆಗೆ 'ಪರ್ಶಿಯಾ'ದ್ದು ಪ್ರಮುಖ ಪಾತ್ರ. ಮಹಮದ್ ಘಜ್ನಿ, ಶಿಹಾಬುದ್ದೀನ್ ಘೋರಿ ಮತ್ತು ಅವರ ಸೇನೆಯ ಮುಖ್ಯಸ್ಥರು, ಖಿಲ್ಜಿ, ತುಘಲಕ್, ಮೊಗಲ್, ಹಾಗೆಯೇ ದಖನ್‌ನಲ್ಲಿ ಆದಿಲ್‌ಶಾಹಿ, ಕುತುಬ್‌ಶಾಹಿ ಸಾಮ್ರಾಜ್ಯ ಸ್ಥಾಪಿಸಿದವರಲ್ಲಿ ಎಲ್ಲರೂ ತುರ್ಕಿ

ಅಥವಾ ಮಂಗೋಲ್ ಮೂಲದವರು. ಆದರೆ, ಅವರು ಬರುವ ಮುನ್ನವೇ ಭಾರತದಲ್ಲಿ ಪರ್ಶಿಯಾ ಸಂಸ್ಕೃತಿಯ ಪ್ರಭಾವ ಕಾಣಿಸಿಕೊಂಡಿತ್ತು. ಅದನ್ನು 'ವಿದೇಶಿ' ಆಡಳಿತಗಾರರು ವ್ಯವಸ್ಥೆ ಕಟ್ಟುವುದಕ್ಕಾಗಿ ಬಳಸಿಕೊಂಡರು. ಎಲ್ಲರು ಅಲ್ಲದಿದ್ದರೂ ಬಹುತೇಕ ಅರಸರು ಪಾರಸಿಯನ್ನು ಆಡಳಿತ ಭಾಷೆಯಾಗಿ ಒಪ್ಪಿಕೊಂಡಿದ್ದರು. ಹಾಗೆಯೇ ಪರ್ಷಿಯಾದ ಸಂಸ್ಕೃತಿ, ಜೀವನ ವಿಧಾನಗಳನ್ನು ಅಳವಡಿಸಿಕೊಂಡಿದ್ದರು. ರಾಜ ದರ್ಬಾರಿನಲ್ಲಿ ಆಡಳಿತಕ್ಕೆ ಸಂಬಂಧಿಸಿದಂತೆ ನಡೆಯುತ್ತಿದ್ದ ವಿವಿಧ ಚಟುವಟಿಕೆಗಳು ಮತ್ತು ನ್ಯಾಯಾಂಗದ ಆಡಳಿತದಲ್ಲಿ ಪ್ರಾಚೀನ ಪರ್ಶಿಯಾದ ಶೈಲಿಯನ್ನೇ ಅಳವಡಿಸಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ದಾಳಿ ನಡೆಸುತ್ತ, ಸಾಮ್ರಾಜ್ಯ ವಿಸ್ತರಿಸುತ್ತ ನಡೆದ ಸಾಹಸಿಗಳು ತುರ್ಕಿ ಅಥವಾ ಮಂಗೋಲ್‌ರಾಗಿದ್ದರೂ ಸಂಸ್ಕೃತಿ ಮಾತ್ರ ಪರ್ಷಿಯಾದ್ದಾಗಿತ್ತು. ಪರ್ಷಿಯಾ ಸಂಸ್ಕೃತಿಯ ಪ್ರಭಾವ ಈ ಅರಸರ ವಾರಸುದಾರರ ಮೇಲೆ ಎಷ್ಟಾಗಿತ್ತೆಂದರೆ ಅವರಲ್ಲಿ ಬಹುತೇಕರಿಗೆ ತಮ್ಮ ಪೂರ್ವಜರ ಮೂಲ ಭಾಷೆ ಆಡುವುದೇ ಮರೆತು ಹೋಗಿತ್ತು.

ಈಗಿನ ಮಧ್ಯಪ್ರಾಚ್ಯದ ಇರಾನ್ ದೇಶ ಹಿಂದೆ ಪರ್ಷಿಯಾ ಆಗಿತ್ತು. ಜಗತ್ತಿನ ಸಾಂಸ್ಕೃತಿಕ ನಕಾಶೆಯಲ್ಲಿ ಪರ್ಷಿಯಾಕ್ಕೆ ಮಹತ್ವದ ಸ್ಥಾನವಿದೆ. 'ಪಾರಸಿ' ಪರ್ಷಿಯಾದ ಭಾಷೆ. ಪಾರಸಿ ಕಾವ್ಯ– ಸಾಹಿತ್ಯವು ಜಗತ್ತಿನ ಹಲವಾರು ಭಾಷೆಗಳನ್ನು ಪ್ರಭಾವಿಸಿದೆ. ಕನ್ನಡ ಭಾಷೆಯು ಕೂಡ ಪಾರಸಿಯ ಕೊಡುಕೊಳುವಿಕೆಯಿಂದ ಬೆಳೆದು ಬಂದಿದೆ. ಕನ್ನಡ ಸಾಹಿತ್ಯವು ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಪಾರಸಿಯ ಪ್ರಭಾವ– ಪ್ರೇರಣೆಗೆ ಒಳಗಾಗಿದೆ. ಗುಲ್ಬರ್ಗ– ಬೀದರ್ ನಗರಗಳನ್ನು ರಾಜಧಾನಿ ಆಗಿಸಿಕೊಂಡು ಆಡಳಿತ ನಡೆಸಿದ ಬಹಮನಿ ಅರಸರ ಕಾಲದಲ್ಲಿ ಪಾರಸಿ ಭಾಷೆಯನ್ನು ಮಾತನಾಡುವ ಜನ ಕನ್ನಡ ನಾಡನ್ನು ಪ್ರವೇಶಿಸಿದರು. ಇದು ಮೊಗಲ್‌ರು (ಬಾಬರ್) ಭಾರತಕ್ಕೆ ಬರುವುದಕ್ಕೆ ಬಹಳಷ್ಟು ಮುಂಚೆಯೇ ನಡೆದ ವಿದ್ಯಮಾನ. ಈಗಿನ ಕರ್ನಾಟಕದ ಈಶಾನ್ಯ ಭಾಗವು ಸೇರಿದಂತೆ ಮಹಾರಾಷ್ಟ್ರ– ಆಂಧ್ರಪ್ರದೇಶ ರಾಜ್ಯವೂ ಸೇರಿದಂತೆ 'ದಖನ್' ಎಂದು ಗುರುತಿಸಲಾಗುವ ಪ್ರದೇಶದಲ್ಲಿ ನೆಲೆ ನಿಂತ ಬಹಮನಿ ಸಾಮ್ರಾಜ್ಯವು ದೆಹಲಿಗಿಂತ ಭಿನ್ನವಾದ 'ವ್ಯವಸ್ಥೆ'ಯನ್ನು ಕಲ್ಪಿಸಿತು. ಪರ್ಷಿಯಾದ ಜೊತೆ ನೇರ ವಹಿವಾಟು– ಸಾಂಸ್ಕೃತಿಕ ಸಂಬಂಧ ಬೆಳೆಸಿದ ಬಹಮನಿ ಅರಸರು ಹೊಸ ಸಂಸ್ಕೃತಿಯೊಂದು ರೂಪು ತಳೆಯುವುದಕ್ಕೆ ಕಾರಣರಾದರು.

ವಿಜಯನಗರದ ಅರಸು ಪ್ರೌಢದೇವರಾಯನ ಮಗಳನ್ನು ಮದುವೆಯಾಗಿದ್ದ ಬಹಮನಿ ಅರಸು ಫಿರೋಜ್‌ಶಹಾನ ಹಲವು ಹವ್ಯಾಸಗಳ ಪೈಕಿ ಹಲವು

ಭಾಷೆಗಳನ್ನು ಕಲಿಯುವುದು ಕೂಡ ಒಂದಾಗಿತ್ತು. ಮಧ್ಯಪ್ರಾಚ್ಯದ ದೇಶಗಳಿಂದ ಕವಿಗಳು– ವಿದ್ವಾಂಸರನ್ನು ಆಹ್ವಾನಿಸುವ ಪರಿಪಾಠ ಆರಂಭವಾದದ್ದು ಅವನ ಕಾಲದಲ್ಲಿಯೇ. ಫಿರೋಜ್‌ನಿಗಿಂತ ಮುಂಚೆಯೇ ಸೂಫಿ ಸಂತರು ಕರ್ನಾಟಕವನ್ನು ಪ್ರವೇಶಿಸಿದ್ದರಾದರೂ ಹೆಚ್ಚು ಚಾಲ್ತಿ, ಪ್ರಚಾರಕ್ಕೆ ಬಂದದ್ದು ಅವನ ಕಾಲದಲ್ಲಿಯೇ. ಉರ್ದು ಭಾಷೆಯ ಮೊದಲ ಗದ್ಯ ಲೇಖಕ ಸೂಫಿ ಸಂತ ಖ್ವಾಜಾ ಬಂದೇ ನವಾಜ್‌ರು ಗುಲ್ಬರ್ಗಕ್ಕೆ ಬಂದು ನೆಲೆ ನಿಂತರು. ಫಿರೋಜ್‌ನ ಸಹೋದರ ಅಹಮದ್ ಶಹಾ ಅಲಿ ಕೂಡ ಅಣ್ಣ ಆರಂಭಿಸಿದ ಪರಂಪರೆಯನ್ನು ಮುಂದುವರೆಸಿದ. ಸೂಫಿ ಕವಿಯನ್ನು ಹುಡುಕುತ್ತ ಬೀದರಿಗೆ ಬಂದವನು ವ್ಯಾಪಾರಿ 'ಇಮಾದುದ್ದೀನ್ ಗಿಲಾನಿ'. ಅವನೇ ಇತಿಹಾಸದ ಪುಟಗಳಲ್ಲಿ 'ಮಹಮೂದ್ ಗಾವಾನ್' ಎಂದು ದಾಖಲಾದ ಮಹಾನ್ ಚೇತನ.

ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಮಹಮೂದ್ ಗಾವಾನ್‌ನದು ಬಲುದೊಡ್ಡ ಹೆಸರು. ಬಹಮನಿ ಅರಸರ ಕಾಲದಲ್ಲಿ ಪ್ರಧಾನಿಯಾಗಿದ್ದ ಮಹಮೂದ್ ಗಾವಾನ್‌ನು ಸಂಸ್ಕೃತಿ ಮತ್ತು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ, ಅಪೂರ್ವ. ಅವನು ನಡೆಸಿದ ಆಡಳಿತಾತ್ಮಕ ಸುಧಾರಣೆಗಳು 'ಮಾದರಿ' ಎನಿಸಿವೆ. ಭೂಮಿ ಅಳೆಯುವ ಮತ್ತು ಕಂದಾಯ ನಿಗದಿಪಡಿಸುವುದಕ್ಕಾಗಿ ಗಾವಾನ್ ಕೈಗೊಂಡ ಕ್ರಮಗಳು ಇಂದಿಗೂ ಚಾಲ್ತಿಯಲ್ಲಿವೆ. ಅದಾಗಿ 150 ವರ್ಷಗಳ ನಂತರ ದೆಹಲಿಯಲ್ಲಿ ರಾಜಾ ತೋಡರ್‌ಮಲ್ ಗಾವಾನ್ ಆರಂಭಿಸಿದ ಕೆಲಸವನ್ನು ಮುಂದುವರೆಸಿದ. ಸ್ಪೇನ್‌ನಿಂದ ತಂತ್ರಜ್ಞಾನ ತರಿಸಿ ಮೊದಲ ಬಾರಿಗೆ ಮದ್ದುಗುಂಡುಗಳನ್ನು ಬಳಸಿದ ಹೆಗ್ಗಳಿಕೆಯೂ ಗಾವಾನ್‌ನದು. ತೋಟಗಾರಿಕೆ, ಕೃಷಿ, ವ್ಯಾಪಾರ ವಹಿವಾಟು ಕ್ಷೇತ್ರಗಳಲ್ಲಿಯೂ ಆಸಕ್ತಿ ಹೊಂದಿದ್ದ ಗಾವಾನ್ ಅಲ್ಲಿಯೂ ತನ್ನದೇ ಛಾಪು ಮೂಡಿಸಿದ.

ಮಧ್ಯಕಾಲೀನ ಭಾರತದಲ್ಲಿ ಗಾವಾನ್ ಮದರಸಾದಷ್ಟು ಪ್ರಮುಖವಾದ ಇನ್ನೊಂದು ಸಂಸ್ಥೆ ಇರಲಿಲ್ಲ. ವಾಸ್ತುಶಿಲ್ಪ ಮತ್ತು ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿಯೂ ಮದರಸಾ ಅನನ್ಯ. ಗಾವಾನ್ ಮದರಸಾದಲ್ಲಿ ಇದ್ದ 3000 ಗ್ರಂಥಗಳಿಂದಾಗಿ ದೇಶದ ಅತಿದೊಡ್ಡ 'ಗ್ರಂಥಾಲಯ' ಎಂಬ ಹೆಗ್ಗಳಿಕೆ ಪಾತ್ರವಾಗಿತ್ತು. ಬಿದರಿ ಕಲೆಯ ಬೆಳವಣಿಗೆಗೆ ಗಾವಾನ್ ನೀಡಿದ ಕೊಡುಗೆ ಗಮನಾರ್ಹ.

ಗಾವಾನ್‌ನ ಹತ್ಯೆಯ ನಂತರ ಬಹಮನಿ ಸಾಮ್ರಾಜ್ಯವು ಐದು ಭಾಗಗಳಲ್ಲಿ ಹಂಚಿಹೋಯಿತು. ಬೀದರ್‌ನ ಜೊತೆಗೆ ಬಿಜಾಪುರ, ಗೊಲ್ಕೊಂಡ, ಅಹಮದ್‌ನಗರ, ಬೆರಾರ್‌ಗಳು ನೂತನ ಶಕ್ತಿ ಕೇಂದ್ರಗಳಾದವು. ಐದು ಅರಸು

ಮನೆತನಗಳು ಸಾಹಿತ್ಯ- ವಾಸ್ತುಶಿಲ್ಪ- ಕಲೆ ಮತ್ತು ಸಂಸ್ಕೃತಿಗೆ ನೀಡಿದ ಕೊಡುಗೆ ಅನನ್ಯ. ಅವುಗಳಿಗೆ ಮೂಲ ನೆಲೆ ಒದಗಿಸಿದ್ದು ಬಹಮನಿ ಸಾಮ್ರಾಜ್ಯ.

ದೆಹಲಿಯಲ್ಲಿ 1206ರಲ್ಲಿ ಆರಂಭವಾದ ಮುಸ್ಲಿಮ್ ಅರಸರ ಆಡಳಿತದಿಂದ ಹಿಡಿದು 1857ರಲ್ಲಿ ಮೊಗಲ್ ದೊರೆಗಳ ಆಡಳಿತ ಕೊನೆಗೊಳ್ಳುವವರೆಗೂ ಫಾರಸಿ ಭಾಷೆಯು ಭಾರತದ ಆಡಳಿತ ಭಾಷೆಯಾಗಿತ್ತು. ಅದಾದ ನಂತರ ಅಂದರೆ ಬ್ರಿಟಿಷ್ ಆಡಳಿತದ ಸಮಯದಲ್ಲಿಯೂ ವ್ಹಿಲಿಯಂ ಬೆಂಟಿಂಕ್ ಆಡಳಿತದ ಅವಧಿಯವರೆಗೂ ಪಾರಸಿ ಆಡಳಿತ ಭಾಷೆಯಾಗಿ ಮುಂದುವರೆಯಿತು. ಈ ಅವಧಿಯಲ್ಲಿ ಭಾರತವು ಪಾರಸಿ ಭಾಷೆ, ಸಾಹಿತ್ಯ, ಸಂಸ್ಕೃತಿ, ನಾಗರಿಕತೆ, ಕಲೆ-ವಾಸ್ತುಶಿಲ್ಪಗಳು ಸಮೃದ್ಧವಾಗಿ ಬೆಳೆಯುವುದಕ್ಕೆ ಅವಕಾಶ ಕಲ್ಪಿಸಿತು. ಪಾರಸಿಯ ಕಾರಣದಿಂದಾಗಿ ಭಾರತದಲ್ಲಿ ಬಹುಮುಖಿ ಸಂಸ್ಕೃತಿಗೆ ಹೆಚ್ಚಿನ ಆದ್ಯತೆ ದೊರೆಯಿತು. ಈಗಿನ ಈರಾನ್ ಪ್ರದೇಶದಲ್ಲಿ ವಾಸಿಸುತ್ತಿದ್ದ ಪಾರ್ಸಾ ಬುಡಕಟ್ಟು ಸಮುದಾಯ ಬಳಸುತ್ತಿದ್ದರಿಂದ ಈ ಭಾಷೆಯನ್ನು 'ಪಾರಸಿ' ಎಂದು ಕರೆಯಲಾಗುತ್ತದೆ. ಇಸ್ಲಾಮ್ ಧರ್ಮ ಆರಂಭವಾದ ನಂತರ ಅರಬ್ಬರು ಇರಾನ್‌ಅನ್ನು ವಶಪಡಿಸಿಕೊಂಡರು. ಆಗ ಅದು 'ಪಾರಸಿ' ಎಂದಾಯಿತು. ಇಂಗ್ಲಿಷಿನಲ್ಲಿ 'ಪರ್ಷಿಯನ್' ಎಂದು ಗುರುತಿಸಲಾಗುತ್ತದೆ.

ಹದಿಮೂರನೇ ಶತಮಾನದಲ್ಲಿ ಮುಸ್ಲಿಮ್ ದೊರೆಗಳು ಭಾರತಕ್ಕೆ ಬರುವ ಬಹಳ ಮೊದಲೇ ಇರಾನ್ ಜೊತೆಗೆ ಭಾರತದ ಸಾಂಸ್ಕೃತಿಕ, ವ್ಯಾಪಾರ-ವಹಿವಾಟಿನ ಸಂಬಂಧ ವ್ಯಾಪಕವಾಗಿತ್ತು. ದೆಹಲಿಯಲ್ಲಿ ಆಡಳಿತ ಆರಂಭವಾದ ನಂತರ ಅದು ತೀವ್ರವಾಯಿತು. ದೆಹಲಿ ಪಾರಸಿ ಭಾಷೆಗೆ ನೆಲೆ ಒದಗಿಸಿದ ನಂತರವೂ ಫಾರಸಿ ಸಂಸ್ಕೃತಿ ಭಾರತದಲ್ಲಿ ಖಚಿತವಾಗಿ ಹೆಜ್ಜೆ ಊರಲು ಆರಂಭವಾದದ್ದು ದಖನ್ನಿನಲ್ಲಿ. ಅದರಲ್ಲೂ ವಿಶೇಷವಾಗಿ ಕರ್ನಾಟಕದ ಈಶಾನ್ಯ ಭಾಗದಲ್ಲಿ ಇರುವ ನಗರಗಳಾದ ಗುಲ್ಬರ್ಗ- ಬೀದರ್‌ಗಳಲ್ಲಿ. ಬಹಮನಿ ಅರಸರ ಆಡಳಿತದ ದಿನಗಳಲ್ಲಿ ಪರ್ಷಿಯಾದ ಜೊತೆಗೆ ನೇರ ಸಂಪರ್ಕ ಉಂಟಾಯಿತು. ವಾಸ್ತುಶಿಲ್ಪ, ಸಾಹಿತ್ಯ ಕ್ಷೇತ್ರಗಳಲ್ಲಿ ಇದು ಢಾಳಾಗಿ ಎದ್ದುಕಾಣುವಂತಹ ಬದಲಾವಣೆಗೆ ಕಾರಣವಾಯಿತು. ಉಳಿದ ಕ್ಷೇತ್ರಗಳೂ ಪರಸ್ಪರ ಪ್ರಭಾವ ಪ್ರೇರಣೆಯಿಂದ ಹೊರತಾಗಲಿಲ್ಲ. ದೆಹಲಿಯಲ್ಲಿ ಮೊಗಲ್‌ರ ಕಾಲದಲ್ಲಿ ಪರ್ಷಿಯಾದ ವಾಸ್ತುಶಿಲ್ಪ ಪ್ರಫುಲ್ಲವಾಗಿ ಅರಳುವ ಬಹಳಷ್ಟು ಮುಂಚೆಯೇ ಗುಲ್ಬರ್ಗ-ಬೀದರ್‌ನಲ್ಲಿ ಕಾಣಿಸಿಕೊಂಡಿತ್ತು.

**ಗ್ರಂಥಸೂಚಿ-**

*ಎಸ್.ಕೆ. ಅರುಣಿ, ದಖನಿ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, 2001

## Bibliography

* Devare T.N., A short History of Persian literature at the Bahmani, The Adilshahi and The Qutubshahi Courts-Deccan, Poona, 1961

* Sherwani Haroon Khan, The Bahmanis of the Deccan, Munshiram Manoharlal Publishers Pvt Ltd, Delhi, 1985

* Yazdani Ghulam, Bidar Its History and Monuments, Motilal Banarasidas Publishers Pvt Ltd, Delhi, 1995

* Mate M.S., Islamic Architecture of the Deccan, Bulletin of the Deccan College Research, Vol XXII, 1961-62

* George Michell and Richard Eaton, Firuzabad: Palace city of the Deccan, Oxford University Press, 1922

* Merklinger Elizabeth Schotten, Sultanate Architecture of Pre-Mughal India, Munshiram Manoharlal Publishers Pvt Ltd, Delhi, 2005

* Helen Philon, Silent Splendor Palaces of the Deccan, 14-19th centuries, Marg Publications, Mumbai, 2010

* Narendranath Law, Promotion of Learning in India (During Muhammadan Rule), Longmans, Green and Co, London, 1916

* Vinaykumar Verma, Education in Bidar- A study, Department of History Directorate of Distance Education, Madurai Kamaraj University, Madurai, 2006

* Sherwani Haroon Khan, Mahmud Gawan: The Great Wazir of Bahmani, Allahabad, 1942

* Roy Choudhary, Social, cultural and Economic History of India, New Delhi, 2000

* Hussaini S.A.Q, Bahman Shah (The Founder of Bahmani Kingdom), Firma K.L. Mukhopadhyay, Calcutta, 1960

* Ferishta M.K., History of Rise of Muhammadan Power in India (Translation-Briggs), Calcutta, 1958

* King J.S., History of Bahmani Dynasty, London, 1900

* Sherwani Haroon Khan, Mahmud Gawan: The Great Wazir of Bahmani, Allahabad, 1942

* Taylor Meadows, A Student Manual of the History of India, 1896

* Haig Wolseley, The Cambridge History of India, Vol III, Turks and Afghans, 1928

* Gribble J.D.B, History of the Deccan, 1924 -Rupa and co, New Delhi 2002

* Majumdar R.C., History and Culture of the Indian People- The Delhi Sultanate Vol VI, Bharatiya Vidya Bhavan, Mumbai, 2006